ಹುಬ್ಬಳ್ಳಿ
ಶನಿವಾರ, 18 ಏಪ್ರಿಲ್ 2026
ಸಂಪುಟ 16, ಸಂಚಿಕೆ 24, ಪುಟಗಳು 14
ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ವಿದ್ಯುತ್ ದರ ಏರಿಕೆ: ಗ್ರಾಹಕರಿಗೆ ಬರೆ
• ಪುಟ ೨

ಕೃಷ್ಣನ ಮುಂದೆ ಮಾಂಸಾಹಾರ; ಉದ್ಧಟತನ | 0೨

ವಿಶ್ವದಲ್ಲೇ ಅತಿ ಬಿಸಿ ದೇಶ ಭಾರತ? | 0೨

ನಾರೀಶಕ್ತಿಗೆ ಸೋಲು

ಹೊಸದಿಲ್ಲಿ: ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ.33 ಮೀಸಲು ಒದಗಿಸುವ ಉದ್ದೇಶದ ಸಂವಿಧಾನ(131ನೇ ತಿದ್ದುಪಡಿ) ಮಸೂದೆ ಲೋಕಸಭೆಯಲ್ಲಿ ಶುಕ್ರವಾರ ಐತಿಹಾಸಿಕ ಸೋಲು ಕಂಡಿದೆ. ಅಗತ್ಯವಾದ ಮೂರನೇ ಎರಡರಷ್ಟು ಬಹುಮತವನ್ನು ಪಡೆಯಲು ವಿಫಲವಾದ ಹಿನ್ನೆಲೆಯಲ್ಲಿ ಮಸೂದೆ ಅಂಗೀಕಾರವಾಗದೆ ಕುಸಿದಿದ್ದು, ಮಹಿಳೆಯರ ಸಬಲೀಕರಣ ದಶಕಗಳ ಕನಸಿಗೆ ಮತ್ತೊಮ್ಮೆ ಬ್ರೇಕ್ ಬಿದ್ದಂತಾಗಿದೆ. • ವಿವರ ಪುಟ ೨



ವಿನಯ್ ಸೇರಿ 16 ಮಂದಿಗೆ ಜೀವಾವಧಿ



ಬೆಂಗಳೂರು: ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಅಪರಾಧಿಗಳಿಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಜೀವಾವಧಿ ಜೈಲು ಶಿಕ್ಷೆ ವಿಧಿಸಿ ಶುಕ್ರವಾರ ಮಹತ್ವದ ತೀರ್ಪು ಪ್ರಕಟಿಸಿದೆ. ಇದರಿಂದ ವಿನಯ್ ಕುಲಕರ್ಣಿ ಶಾಸಕ ಸ್ಥಾನಕ್ಕೆ ಕುತ್ತು ಎದುರಾಗಿದೆ. ಅಂತೆಯೇ ಯೋಗೀಶ್ ಗೌಡ ಅವರ ಮಕ್ಕಳಿಗೆ 16 ಲಕ್ಷ ರೂ.ಗಳನ್ನು ಪರಿಹಾರವಾಗಿ ನೀಡಲು ನ್ಯಾಯಾಲಯ ಸೂಚನೆ ನೀಡಿದೆ. • ವಿವರ ಪುಟ ೨

9 ಮಂದಿ ಸಜೀವ ದಹನ, ಓರ್ವ ಪಾರು

ಯಾದಗಿರಿ: ಖಾಸಗಿ ಬಸ್ ಹಾಗೂ ಕಾರಿನ ನಡುವೆ ನಡೆದ ಭೀಕರ ಅಪಘಾತದಲ್ಲಿ ಕಾರಿನಲ್ಲಿದ್ದ 9 ಮಂದಿ ಸಜೀವ ದಹನವಾದ ಹೃದಯ ವಿದ್ರಾವಕ ಘಟನೆ ಜಿಲ್ಲೆಯ ಸುರಪುರ ತಾಲೂಕಿನ ಶಾಂತಪುರ ಕ್ರಾಸ್ ಬಳಿಯ ಬೀದರ್ -ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯಲ್ಲಿ ಶುಕ್ರವಾರ ನಡೆದಿದೆ. • ವಿವರ ಪುಟ ೨

ಕಿರುಸುದ್ದಿ

ಪ್ರಾಣ ಪ್ರತಿಷ್ಠಾಪನೆ ಇಂದು

ಉಪ್ಪಿನಬೆಟಗೇರಿ: ಸಮೀಪದ ಹನುಮನಹಾಳ ಗ್ರಾಮದ ಮೇಳವ್ವ ದೇವಿ ಮೂರ್ತಿ ಪ್ರಾಣ ಪ್ರತಿಷ್ಠಾಪನಾ ಸಮಾರಂಭ ಏ.18 ರಿಂದ 21ರ ವರೆಗೆ ವಿಜೃಂಭಣೆಯಿಂದ ಜರುಗಲಿದೆ. ಕಾರ್ಯಕ್ರಮದಲ್ಲಿ ಮೂರುಸಾವಿರ ವಿರಕ್ತಮಠದ ವಿರೂಪಾಕ್ಷ ಸ್ವಾಮೀಜಿ, ಅಮ್ಮಿನಬಾವಿ ಪಂಚಗೃಹ ಹಿರೇಮಠದ ಅಭಿನವ ಶಾಂತಲಿಂಗ ಶಿವಾಚಾರ್ಯರು, ಇನಾಮಹೊಂಗಲ ವಿರಕ್ತಮಠದ ಸಿದ್ದಲಿಂಗೇಶ್ವರ ಸ್ವಾಮೀಜಿ, ನರೇಂದ್ರ, ಮೇಳಪ್ಪಜ್ಜನ ಮಠದ ಸಂಗಮೇಶ್ವರ ಸ್ವಾಮೀಜಿ, ದೊಡವಾಡ ಹಿರೇಮಠದ ಜಡಿ ಸಿದ್ದೇಶ್ವರ ಶಿವಾಚಾರ್ಯರು ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಮೇಳವ್ವ ದೇವಿ ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಲಿಗೆ ಯಂತ್ರ ವಿತರಣೆ

ಹುಬ್ಬಳ್ಳಿ: ನಗರದ ಮಜೇಥಿಯಾ ಫೌಂಡೇಶನ್ ಹಾಗೂ ಲೋಕಹಿತ ಟ್ರಸ್ಟ್ ಸಹಯೋಗದಲ್ಲಿ ಏ. 18 ರಂದು ಸಂಜೆ 4 ಗಂಟೆಗೆ ಮಹಿಳಾ ಸಬಲೀಕರಣ ಉಪಕ್ರಮವಾಗಿ ಹೊಲಿಗೆ ಯಂತ್ರಗಳ ವಿತರಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಹೆಗ್ಗೇರಿ ರಸ್ತೆಯಲ್ಲಿರುವ ಕೋಟಿಲಿಂಗ ಕೇಶವಕುಂಜದಲ್ಲಿ ಸಮಾರಂಭ ನಡೆಯಲಿದೆ. ಮುಖ್ಯ ಅತಿಥಿಯಾಗಿ ನಿಡವಣಿ ಫೌಂಡೇಶನ್ ಸಿಇಒ ಪ್ರಭಾ ನಿಡವಣಿ, ಕೆಯುಡಿ ಸಮಾಜ ವಿಜ್ಞಾನ ವಿಭಾಗದ ಮುಖ್ಯಸ್ಥೆ ಸಂಗೀತಾ ಮಾನೆ, ಅಧ್ಯಕ್ಷತೆ ಮಜೇಥಿಯಾ ಫೌಂಡೇಶನ್ ಅಧ್ಯಕ್ಷ ನಂದಿನಿ ಕಶ್ಯಪ್ ಮಜೇಥಿಯಾ ವಹಿಸುವರು ಎಂದು ಗೌರವ ಕಾರ್ಯದರ್ಶಿ ಅಮರೇಶ ಹಿಪ್ಪರಗಿ ಹಾಗೂ ಸಿಇಒ ಡಾ. ಸುನೀಲಕುಮಾರ ತಿಳಿಸಿದರು.

ನಾಳೆ ವಿದ್ಯುತ್ ವ್ಯತ್ಯಯ

ಕುಂದಗೋಳ: ಪಟ್ಟಣದ ಹೆಸ್ಕಾಂ ಉಪವಿಭಾಗ ವ್ಯಾಪ್ತಿಯಲ್ಲಿ ಏ.19ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳುವ ಹಿನ್ನೆಲೆಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕುಂದಗೋಳ ಹಾಗೂ ಸಂಶಿ 33/11 ಕೆವಿ ವಿದ್ಯುತ್ ವಿತರಣಾ ಕೇಂದ್ರಗಳಿಂದ ಹೊರಡುವ 11 ಕೆವಿ ಮಾರ್ಗಗಳಲ್ಲಿ ಕೆಲಸ ನಡೆಯಲಿದ್ದು, ಕುಂದಗೋಳ ಪಟ್ಟಣ, ಯರಗುಪ್ಪಿ, ಮುಳ್ಳೊಳ್ಳಿ, ಚಿಕ್ಕನರ್ತಿ, ಹಿರೇನರ್ತಿ, ಬಸಾಪೂರ, ಬೆನಕನಹಳ್ಳಿ, ಚಾಕಲಬ್ಬಿ, ಕೊಂಕಣಕುರಹಟ್ಟಿ, ಅಲ್ಲಾಪೂರ, ಕಡಪಟ್ಟಿ, ಗುಡೇನಕಟ್ಟಿ, ಯಲಿನಾರಾಯಣಪೂರ, ರೊಟ್ಟಿಗವಾಡ, ಎಪಿಎಂಸಿ ಯಾರ್ಡ್, ದೇವನೂರು, ಬೆಟ್ಟದೂರ, ಹಂಚಿನಾಳ, ಕುಬಿಹಾಳ, ಯಲಿವಾಳ, ಇನಾಮಹೊಳ್ಳಿ, ಬೆಟದೂರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಂಶಿ ವಿತರಣಾ ಕೇಂದ್ರ ವ್ಯಾಪ್ತಿಯ ಹೊಸ್ಳಿ, ಭರದ್ವಾಡ, ಕೊಡ್ಲಿವಾಡ, ಗುರುವಿನಹಳ್ಳಿ, ಹಿರೇಗುಂಜಳ, ಚಿಕ್ಕಗುಂಜಳ, ಗಂಜಿಗಟ್ಟಿ, ಭಾಗವಾಡ, ಚಿಕ್ಕಹರಕುಣಿ, ಹಿರೇಹರಕುಣಿ, ಭರತೂರ, ಭಡಭಟ್ಟಿ, ಭಕ್ತಿಪುರ, ನೆಲಗುಡ್ಡ, ಇಂಗಳಗಿ, ಹಿರೇಬೂದಿಹಾಳ, ಮತ್ತಿಗಟ್ಟಿ, ಹನುಮನಾಳ, ರಾಮಾಪೂರ, ಸಂಶಿ, ಶಿರೂರ, ಕಮಡೊಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಳ್ಳಲಿದೆ ಎಂದು ತಿಳಿಸಲಾಗಿದೆ.

ಪುಸ್ತಕ ಲೋಕಾರ್ಪಣೆ

ಹುಬ್ಬಳ್ಳಿ: ಲೋಕಹಿತ ಟ್ರಸ್ಟ್ ಹಾಗೂ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಏ.21ರಂದು ಸಂಜೆ 6 ಗಂಟೆಗೆ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವನದಲ್ಲಿ ನಾನು ಕಾಶ್ಮೀರ ಪುಸ್ತಕ ಲೋಕಾರ್ಪಣೆ ಸಮಾರಂಭ ನಡೆಯಲಿದೆ. ಚಿತ್ರದುರ್ಗದ ಶಿವಶರಣರ ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯ ಭಾಷಣ ಖ್ಯಾತ ಚಿಂತಕ ಚಕ್ರವರ್ತಿ ಸೂಲಿಬೆಲೆ, ಪುಸ್ತಕದ ಲೇಖಕಿ ಡಾ.ಸುಧಾರಾ ಹೊಸಳ್ಳಿ ಭಾಗವಹಿಸುವರು.

ನಿಧನ ಸುದ್ದಿ

ತಾರಾಮತಿ ರಾಯನಾಳ



ಹುಬ್ಬಳ್ಳಿ: ಇಲ್ಲಿನ ಹಳೇ ಹುಬ್ಬಳ್ಳಿ ಜಂಗ್ಲಿಪೇಟೆ ನಿವಾಸಿ ತಾರಾಮತಿ ಬೂದಪ್ಪ ರಾಯನಾಳ (68) ಶುಕ್ರವಾರ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.

ಶಂಕರಗೌಡ ಭರಮಗೌಡ್ರ



ಹುಬ್ಬಳ್ಳಿ: ಅದರಗುಂಚಿ ಗ್ರಾಮದ ನಿವಾಸಿ ಮಾಜಿ ಗ್ರಾ.ಪಂ ಅಧ್ಯಕ್ಷ ಶಂಕರಗೌಡ ದೊಡ್ಡನಗೌಡ ಭರಮಗೌಡ್ರ (80) ಇವರು ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಇವರು ಮಾಜಿ ಶಾಸಕ ಎಸ್. ಐ. ಚಿಕ್ಕನಗೌಡ್ರ ಅವರ ಹಿರಿಯ ಸಹೋದರ.



ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ ಹಮ್ಮಿಕೊಂಡ ಅಂತರ್ ಕಾಲೇಜುಗಳ ಪುರುಷರ ಪ್ರಥಮ ವಲಯ ವಾಲಿಬಾಲ್ ಪಂದ್ಯಾವಳಿಯಲ್ಲಿ ಜನತಾ ಶಿಕ್ಷಣ ಸಮಿತಿಯ ಶ್ರೀ ಮಂಜುನಾಥೇಶ್ವರ ಸ್ನಾತಕ-ಸ್ನಾತಕೋತ್ತರ ಅಧ್ಯಯನ ಕೇಂದ್ರ ತೃತೀಯ ಸ್ಥಾನ ಪಡೆದಿದೆ. ಕ್ರೀಡಾಪಟುಗಳ ಸಾಧನೆಗೆ ಕಾರ್ಯದರ್ಶಿ ಡಾ. ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಉಪಪ್ರಾಚಾರ್ಯ ಡಾ.ಸೂರಜ್ ಜೈನ್, ಮಹಾವೀರ ಉಪಾಧ್ಯೆ, ಡಾ.ಜಿನ್ನಪ್ಪ ಕುಂದಗೋಳ, ದೈಹಿಕ ನಿರ್ದೇಶಕ ಶ್ರವಣಕುಮಾರ ಯೋಗಿ, ಅರುಣ ಸವಣೂರ ಹರ್ಷವ್ಯಕ್ತಪಡಿಸಿದ್ದಾರೆ.

ಪ್ರಾಣಿ, ಪಕ್ಷಿಗಳ ರಕ್ಷಣೆ ಅವಶ್ಯ: ವಸಂತರೆಡ್ಡಿ

ಧಾರವಾಡ: ಆಧುನಿಕ ತಂತ್ರಜ್ಞಾನ ಪ್ರಭಾವದಿಂದ ನಶಿಸುತ್ತಿರುವ ಕಾಡುಗಳು ಜೊತೆ ಪ್ರಾಣಿ, ಪಕ್ಷಿಗಳು ಅವಸಾನದ ಹಂತ ತಲುಪಿವೆ. ಹೀಗಾಗಿ ಅವುಗಳನ್ನು ರಕ್ಷಣೆ ಮಾಡಬೇಕು ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕೆ.ವಿ ವಸಂತರೆಡ್ಡಿ ಹೇಳಿದರು.

ಸಾಮಾಜಿಕ ಅರಣ್ಯ ಇಲಾಖೆ ಹಾಗೂ ರಂಗಾಯಣ ಸಹಯೋಗದಲ್ಲಿ ನಗರದ ರಂಗಾಯಣದ ಸುವರ್ಣ ಸಾಂಸ್ಕೃತಿಕ ಭವನದಲ್ಲಿ ನಡೆದ ತಿಂಗಳ ಹಕ್ಕಿ ಹಬ್ಬ ಉದ್ಘಾಟಿಸಿದ ಅವರು, ಪರಿಸರ ಸಮತೋಲನದಲ್ಲಿ ಪ್ರಾಣಿ-ಪಕ್ಷಿಗಳ ಮಹತ್ವದ್ದಾಗಿ ಎಂದರು.

ಇಂದು ವಿದ್ಯುತ್ ತಂತಿ, ಮೊಬೈಲ್ ಟವರ್, ಪರಿಸರ ಮಾಲಿನ್ಯ ಮತ್ತು ಕಾಡಿನ ನಾಶದಿಂದ ಪಕ್ಷಿಗಳ ಜೀವನಕ್ಕೆ ಕುತ್ತು ಒದಗಿದೆ. ಪಕ್ಷಿಗಳಿಗೂ ಜೀವಿಸುವ ಹಕ್ಕಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ರಂಗಾಯಣ ಆಡಳಿತಾಧಿಕಾರಿ ಶಶಿಕಲಾ ಹುಡೇದ ಮಾತನಾಡಿ, ನಮ್ಮಲ್ಲಿ ಪರಸ್ಪರ ಜೀವ ವೈವಿಧ್ಯತೆಯಲ್ಲಿ ಸರಪಳಿ ಹೊಂದಿದ ಪರಿಸರ ವ್ಯವಸ್ಥೆಯಿದೆ. ಈ ಕಾರಣಕ್ಕಾಗಿ ಮನುಷ್ಯ ಸ್ವಾರ್ಥ ಬದಿಗಿಟ್ಟು ಕಾಡು ನಾಶ ಮಾಡಬಾರದು ಎಂದರು.

ಪಕ್ಷಿಗಳಿಗೆ ಸಿಗಬೇಕಾದ ಮೂಲಭೂತ ಆಹಾರ, ನೀರು ಹಾಗೂ ಪ್ರೀತಿ ನೀಡಿದರೆ ಅವುಗಳು ನಮಗೆ ಪ್ರತಿನಿತ್ಯ ಕೃತಜ್ಞತೆ ಸಲ್ಲಿಸುತ್ತವೆ. ಇದರಿಂದ ಪಕ್ಷಿಪ್ರಿಯರಾಗಿ ಪರಿಸರ ಉಳಿಸುವ ಬೆಳೆಸುವ ಜವಾಬ್ದಾರಿಯೂ ನಮ್ಮ ಮಕ್ಕಳ ಮೇಲಿದೆ ಎಂದರು.

ಪಕ್ಷಿ ಪ್ರೇಮಿ ಪ್ರಕಾಶ ಗೌಡರ ಉಪನ್ಯಾಸ ನೀಡಿದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿವಕುಮಾರ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಹೇಶ ಹಿರೇಮಠ, ವಲಯ ಅರಣ್ಯಾಧಿಕಾರಿ ಸ್ನೇಹಾ ಕಂಬಳಿ, ಅರುಣಕುಮಾರ ಮೇದಾರ ಇತರರಿದ್ದರು.



ಹುಬ್ಬಳ್ಳಿ: ನೈರುತ್ಯ ರೈಲ್ವೆ ಹುಬ್ಬಳ್ಳಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಬೇಲಾ ಮೀನಾ ಅವರು ಶುಕ್ರವರ ವಿಭಾಗೀಯ ಕಚೇರಿಯಲ್ಲಿ ಪರಿಷ್ಕೃತ ವಿಪತ್ತು ನಿರ್ವಹಣಾ ಮಾರ್ಗಸೂಚಿಯಾದ ವಿಪತ್ತು ನಿರ್ವಹಣಾ ಯೋಜನೆ-2026 ಅನ್ನು ಅಧಿಕೃತವಾಗಿ ಬಿಡುಗಡೆ ಮಾಡಿದರು.

ಧಾರವಾಡದಲ್ಲಿ ಸಂವಾದಗೋಷ್ಠಿ | ಆಯುಕ್ತ ಡಾ.ರುದ್ರೇಶ ಘಾಳಿ ಭರವಸೆ

ನೀರಿನ ಸಮಸ್ಯೆಗೆ ಶೀಘ್ರ ಮುಕ್ತಿ

ಧಾರವಾಡ: ಮಲಪ್ರಭಾದಿಂದ ನೀರು ತರುವ ಹಾಗೂ ನಿರಂತರ ನೀರು ಪೂರೈಕೆ ಕಾಮಗಾರಿ ವೇಗವಾಗಿ ನಡೆಯುತ್ತಿದ್ದು, ವರ್ಷದೊಳಗೆ ಅವಳಿನಗರಕ್ಕೆ ಸಮರ್ಪಕ ನೀರು ಪೂರೈಸುವುದಾಗಿ ಎಂದು ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಜರ್ನಲಿಸ್ಟ್ ಗಿಲ್ಡ್‌ನಲ್ಲಿ ಶುಕ್ರವಾರ ನಡೆದ ಸಂವಾದಗೋಷ್ಠಿಯಲ್ಲಿ ನೀರಿನ ಅವ್ಯವಸ್ಥೆ ಕುರಿತು ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಅವಳಿ-ನಗರದ ದಶಕಗಳ ಕುಡಿಯುವ ನೀರಿನ ಸಮಸ್ಯೆಗೆ ಶೀಘ್ರವೇ ಮುಕ್ತಿ ನೀಡುವುದಾಗಿಯೂ ಹೇಳಿದರು. ಅವಳಿನಗರದ ನೀರಿನ ಬೇಡಿಕೆ ಪೂರೈಕೆಗೆ ಮಲಪ್ರಭಾ ಯೋಜನೆ 5ನೇ ಹಂತದ ಕಾಮಗಾರಿ ಅತ್ಯಂತ ನಿರ್ಣಾಯಕವಾಗಿದೆ. ಪೈಪ್‌ಲೈನ್ ಅಳವಡಿಕೆ, ಪಂಪಿಂಗ್ ಸ್ಟೇಷನ್ ಆಧುನೀಕರಣದಿಂದ ಹೆಚ್ಚಿನ ನೀರು ನಗರಕ್ಕೆ ತರಲು ಕ್ರಮ ಕೈಗೊಂಡಿದೆ ಎಂದರು. ಪ್ರಸ್ತುತ ಮಲಪ್ರಭಾದಿಂದ ಹುಬ್ಬಳ್ಳಿಗೆ 120 ಎಂಎಲ್‌ಡಿ ಮತ್ತು ಧಾರವಾಡಕ್ಕೆ 80 ಎಂಎಲ್‌ಡಿ, ಆಲ್ ಆ್ಯಂಡ್ ಟಿಯಿಂದ 63 ಎಂ.ಎಲ್‌ಡಿ ಹಾಗೂ ನೀರಸಾಗರ ಕೆರೆಯಿಂದಲೂ 20 ಎಂ.ಎಲ್.ಡಿ ಕುಡಿಯುವ ನೀರು ಪೂರೈಸುತ್ತಿರುವುದಾಗಿ ಹೇಳಿದರು. ಈಗಾಗಲೇ ಕೆಲವು ವಾರ್ಡ್‌ಗಳಲ್ಲಿ ಯಶಸ್ವಿಯಾದ ನಿರಂತರ ನೀರು ಪೂರೈಕೆ ಯೋಜನೆ ನಗರದ ಎಲ್ಲ ವಾರ್ಡ್‌ಗಳಿಗೂ ವಿಸ್ತರಿಸಲಿದೆ. ರೂ.1700 ಕೋಟಿ ಎಲ್ ಆಂಡ್ ಟಿಯ ಕಾಮಗಾರಿಗಳ ವಿಳಂಬ ತಪ್ಪಿಸಲು ಸೂಚನೆ ನೀಡಿದ್ದಾಗಿ ತಿಳಿಸಿದರು. ಹಳೆಯ ಪೈಪ್‌ಲೈನ್‌ಗಳ ಸೋರಿಕೆ ಮತ್ತು ತಾಂತ್ರಿಕ ದೋಷಗಳಿಂದಾಗಿ ಪ್ರಸ್ತುತ ಶೇ.30ರಷ್ಟು ನೀರು ಪೋಲಾಗುತ್ತಿದೆ. ಇವುಗಳನ್ನು ಗುರುತಿಸಿ ದುರಸ್ತಿ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಇದು ಪೂರ್ಣಗೊಂಡರೆ, ನೀರು ಅಭಾವ ಉಂಟಾಗಲ್ಲ ಎಂದರು. ನಿಗದಿತ ವೇಳೆಗೆ ಕಾಮಗಾರಿ ಮುಗಿದರೆ, ನೀರಸಾಗರ ಕೆರೆಯಿಂದ ಲಭಿಸುವ 20 ಎಂಎಲ್‌ಡಿ ನೀರು ಸುತಗಟ್ಟಿ, ಇಟ್ಟಿಗಟ್ಟಿ, ಜೋಗಯಲ್ಲಾಪೂರ, ಗಾಮನಗಟ್ಟಿ ಸುತ್ತಲಿನ ಹಳ್ಳಿಗಳಿಗೆ ಪೂರೈಕೆಗೆ ಯೋಜನೆಯೂ ಹಾಕಿಕೊಂಡಿದೆ ಎಂದರು.

- ಮುಂದಿನ ಒಂದು ವರ್ಷದ ಅವಧಿಯಲ್ಲಿ ನಗರದ ಯಾವುದೇ ಭಾಗದಲ್ಲಿ ನೀರಿನ ಕೊರತೆ ಉಂಟಾಗದಂತೆ ಯೋಜಿತವಾಗಿ ನೀರು ಹಂಚಿಕೆ
- ನೀರಿನ ಅಭಾವ ತಲೆದೋರದಂತೆ ಮಲಪ್ರಭಾ ಮತ್ತು ನೀರಸಾಗರ ಜಲಾಶಯಗಳ ನೀರಿನ ಲಭ್ಯತೆ ಪರಿಶೀಲಿಸಿ, ಪರ್ಯಾಯ ವ್ಯವಸ್ಥೆ
- ನೀರು ಪೂರೈಕೆಯ ಲೋಪದೋಷಗಳ ಬಗ್ಗೆ ಸಾರ್ವಜನಿಕರು ನೀಡುವ ದೂರುಗಳಿಗೆ ತಕ್ಷಣ ಸ್ಪಂದಿಸಲು ಪ್ರತ್ಯೇಕ ಸಹಾಯವಾಣಿ ಮತ್ತು ತಾಂತ್ರಿಕ ತಂಡ ಬಲಪಡಿಸಲಾಗುವುದು ಎಂದು ಹೇಳಿದ ಡಾ.ರುದ್ರೇಶ ಘಾಳಿ

ಅಭಿವೃದ್ಧಿಗೆ ಸಹಕಾರ ಅಗತ್ಯ



ಧಾರವಾಡ: ಅವಳಿನಗರದ ಸರ್ವಾಂಗೀಣ ಅಭಿವೃದ್ಧಿ ಕೇವಲ ಪಾಲಿಕೆಯಿಂದ ಮಾತ್ರ ಸಾಧ್ಯವಿಲ್ಲ, ಇದಕ್ಕೆ ನಾಗರಿಕರ ಸಕ್ರಿಯ ಪಾಲ್ಗೊಳ್ಳುವಿಕೆ ಮತ್ತು ಸಹಕಾರ ಅತ್ಯಗತ್ಯ ಎಂದು ಹು-ಧಾ ಮಹಾನಗರ ಪಾಲಿಕೆ ಆಯುಕ್ತ ಡಾ.ರುದ್ರೇಶ ಘಾಳಿ ಹೇಳಿದರು.

ನಗರದ ಜರ್ನಲಿಸ್ಟ್ ಗಿಲ್ಡ್‌ನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಾಧ್ಯಮ ಸಂವಾದ ಗೋಷ್ಠಿಯಲ್ಲಿ ಮಾತನಾಡಿದ ಅವರು, ಮನೆ ಮನೆಗಳಿಂದ ಕಸ ಸಂಗ್ರಹಿಸುವ ಪ್ರಕ್ರಿಯೆ ಇನ್ನಷ್ಟು ಬಲಪಡಿಸಿದೆ. ಹಸಿ ಮತ್ತು ಒಣ ಕಸ ವಿಂಗಡಿಸಿ ನೀಡುವ ಮೂಲಕ ಜನತೆ ಪಾಲಿಕೆಯೊಂದಿಗೆ ಕೈಜೋಡಿಸಬೇಕು. ಪಾಲಿಕೆಯ ಆದಾಯ ಹೆಚ್ಚಿಸಲು ಬಾಕಿ ಇರುವ ಆಸ್ತಿ ತೆರಿಗೆ ವಸೂಲಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ಓಟಿಎಸ್‌ಗೂ ಅವಕಾಶ ಅವಕಾಶ ಕಲ್ಪಿಸಿದೆ. ತೆರಿಗೆ ಪಾವತಿ ಪ್ರಕ್ರಿಯೆ ಸಂಪೂರ್ಣ ಸರಳೀಕರಣ, ಡಿಜಿಟಲ್ ವ್ಯವಸ್ಥೆಗೆ ಒತ್ತು ನೀಡಲಾಗಿದೆ. ಮಳೆಗಾಲದ ನಂತರ ಹದಗೆಟ್ಟಿರುವ ರಸ್ತೆಗಳ ದುರಸ್ತಿ ಕಾರ್ಯಕ್ಕೆ ಕೂಡ ಚಾಲನೆ ನೀಡಲಾಗಿದೆ. ಸ್ಮಾರ್ಟ್‌ಸಿಟಿ ಯೋಜನೆಯಡಿ ಬಾಕಿ ಇರುವ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ತಿಳಿಸಿದರು. ಆಡಳಿತ ಮತ್ತು ಸಾರ್ವಜನಿಕರ ನಡುವೆ ಮಾಧ್ಯಮಗಳು ಕೊಂಡಿಯಾಗಿ ಕೆಲಸ ಮಾಡುತ್ತಿವೆ. ನಗರದ ಸಮಸ್ಯೆಗಳನ್ನು ಪಾಲಿಕೆ ಗಮನಕ್ಕೆ ತರುವಲ್ಲಿ ಪತ್ರಕರ್ತರ ಪಾತ್ರ ದೊಡ್ಡದಿದೆ. ಗಿಲ್ಡ್ ಮೂಲಕ ಇಂತಹ ಸಂವಾದ ಏರ್ಪಡಿಸಿ ಆಡಳಿತಕ್ಕೂ ಪೂರಕವಾದ ಸಲಹೆಗಳನ್ನು ಪಡೆಯಲು ಸಹಕಾರಿ ಎಂದರು.

ಸಂವಾದ ಗೋಷ್ಠಿಯಲ್ಲಿ ಗಿಲ್ಡ್‌ನ ಅಧ್ಯಕ್ಷ ಡಾ.ಬಸವರಾಜ ಹೊಂಗಲ, ಗೌರವ ಕಾರ್ಯದರ್ಶಿ ನಿಜಗುಣಿ ದಿಂಡಲಕೊಪ್ಪ ಹಾಗೂ ಪದಾಧಿಕಾರಿಗಳು, ಹಿರಿಯ ಮತ್ತು ಕಿರಿಯ ಪತ್ರಕರ್ತರು ಇದ್ದರು.

ಏ.20ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ

ಹುಬ್ಬಳ್ಳಿ: ತಾಲೂಕಿನ ಕುಸುಗಲ್ಲ ಗ್ರಾಮದಲ್ಲಿ ದ್ಯಾಮವ್ವ-ದುರ್ಗವ್ವ ದೇವಿ ಮೂರ್ತಿಗಳ ಮರು ಪ್ರತಿಷ್ಠಾಪನೆ ಅಂಗವಾಗಿ ಏ.20ರಿಂದ 28ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗ್ರಾಮದ ಹಿರಿಯ ವಿ.ಎಸ್. ಕೆಂಚನಗೌಡ್ರ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮುಕ್ತಿಮಂದಿರದ ವಿರಮುಕ್ತಿಮುನಿ ಶಿವಾಚಾರ್ಯರು, ಸುಳ್ಳ ಪಂಚಗೃಹ ಹಿರೇಮಠದ ಶಿವಸಿದ್ಧರಾಮೇಶ್ವರ ಶಿವಾಚಾರ್ಯರಿಂದ ದೇವಸ್ಥಾನದಲ್ಲಿ ಗ್ರಾಮದೇವತೆಯರ ಮೂರ್ತಿ ಪ್ರತಿಷ್ಠಾಪನೆ ಏ. 20ರಂದು ಬೆಳಗ್ಗೆ 6 ಗಂಟೆಗೆ ನೆರವೇರಲಿದೆ ಎಂದರು. ಮೂರು ಸಾವಿರ ಮಠ ಗುರುಸಿದ್ಧಾರಾಜಯೋಗೀಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಸಂಜೆ 6ಕ್ಕೆ ಧರ್ಮ ಸಭೆ ಶಿವನಗೌಡ ಕೆಂಚನಗೌಡ್ರ ಅವರ ಹೊಲದಲ್ಲಿ ಜರುಗಲಿದೆ. ಶಾಸಕ ಎನ್.ಎಚ್. ಕೋನರಡ್ಡಿ ಅಧ್ಯಕ್ಷತೆ ವಹಿಸುವರು. ಮಾಜಿ ಸಚಿವ ಶಂಕರಪಾಟೀಲ ಮುನೇನಕೊಪ್ಪ ಸಮಾರಂಭ ಉದ್ಘಾಟಿಸುವರು ಎಂದರು. 21ರಂದು ಬೆಳಗ್ಗೆ 6 ಗಂಟೆಗೆ ಗ್ರಾಮದೇವಿ ದೇವಸ್ಥಾನದಲ್ಲಿ ಅವರಿಂದ ಹೋಮ, ಹವನ ನಡೆಯಲಿದೆ. ಬೆಳಗ್ಗೆ 9 ಗಂಟೆಗೆ ಗ್ರಾಮದೇವಿಯರಿಗೆ ಉಡಿ ತುಂಬುವ ಕಾರ್ಯಕ್ರಮ, ಸಂಜೆ 6ಕ್ಕೆ ನಡೆಯುವ ಧರ್ಮಸಭೆಯಲ್ಲಿ ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಆಶೀರ್ವಚನ ನೀಡುವರು. 22ರಂದು ಸಂಜೆ 6ಕ್ಕೆ ಶಿರಹಟ್ಟಿ ಸಂಸ್ಥಾನಮಠದ ಕೀರ ಸಿದ್ಧರಾಮ ಸ್ವಾಮೀಜಿ, ಕುಂದಗೋಳ ಕಲ್ಯಾಣಪುರದ ಬಸವಣ್ಣಜ್ಜನವರು ಆಶೀರ್ವಚನ ನೀಡುವರು. ಸಭಾಪತಿ ಬಸವರಾಜ ಹೊರಟ್ಟಿ ಪಾಲ್ಗೊಳ್ಳುವರು. 23ರಂದು ಸಂಜೆ 6ಕ್ಕೆ ಮಣಕವಾಡದ ಅಭಿನವ ಮೃತ್ಯುಂಜಯ ಸ್ವಾಮೀಜಿ, ಡಾ. ಎ.ಸಿ. ವಾಲಿ ಗುರೂಜಿಯಿಂದ ಆಶೀರ್ವಚನ. 24ರಂದು ಸಂಜೆ 6ಕ್ಕೆ ಅಮ್ಮಿನಭಾವಿ ಪಂಚಗೃಹ ಹಿರೇಮಠದ ಅಭಿನವ ಶಾಂತಲಿಂಗ ಸ್ವಾಮೀಜಿ, ಬ್ಯಾಹಟ್ಟಿ ಹಿರೇಮಠದ ಮರುಳಸಿದ್ಧ ಶಿವಾಚಾರ್ಯರರಿಂದ ಆಶೀರ್ವಚನ, ಸಂಸದ ಬಸವರಾಜ ಬೊಮ್ಮಾಯಿ ಉಪಸ್ಥಿತರಿರುವರು ಎಂದು ತಿಳಿಸಿದರು.

25ರಂದು ಸಂಜೆ 6ಕ್ಕೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಡಾ. ಬಸವರಾಜ ಸಾದರ, ಡಾ. ಶಿವಲೀಲಾ ವೈಜಿನಾಥ ಪಾಲ್ಗೊಳ್ಳುವರು. 26ರಂದು ಸಂಜೆ 6ಕ್ಕೆ ಜುಕ್ತಿ ಹಿರೇಮಠದ ಗುರುಕೊಟ್ಟೂರು ಬಸವೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡುವರು. ಸಂಸದ ಜಗದೀಶ ಶೆಟ್ಟರ್, 27ರಂದು ಸಂಜೆ 6ಕ್ಕೆ ಹಾಲಕೇರಿ ಅನ್ನದಾನೇಶ್ವರಮಠದ ಮುಪ್ಪಿನಬಸವಲಿಂಗ ಸ್ವಾಮೀಜಿ ಆಶೀರ್ವಚನ ನೀಡುವರು. ವಿನೋದ ಅಸೂಟಿ, ಡಾ. ರಾಮು ಮೂಲಗಿ ಪಾಲ್ಗೊಳ್ಳುವರು ಎಂದರು. 28ರಂದು ಬೆಳಗ್ಗೆ 7ಕ್ಕೆ ಸಕಲ ವಾದ್ಯ ಮೇಳದೊಂದಿಗೆ ಗ್ರಾಮದೇವಿಯರ ಭಾವಚಿತ್ರ ಮೆರವಣಿಗೆ, ಪಲ್ಲಕ್ಕಿ ಉತ್ಸವ ನಡೆಯಲಿದೆ. ಬೆಳಗ್ಗೆ 11ಕ್ಕೆ ಕನ್ನೇರಿಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರಿಂದ ರೈತ ಜಾಗೃತಿ ಕಾರ್ಯಕ್ರಮ, ನಿತ್ಯ ಪ್ರವಚನ ನಡೆಯಲಿದೆ ಎಂದರು.

ಶೇಖಪ್ಪ ಕರೆಣ್ಣವರ, ಸಕ್ರಪ್ಪ ಕಮ್ಮಾರ, ಚನ್ನಯ್ಯ ಮರಯ್ಯನವರಮಠ, ಪ್ರಕಾಶಗೌಡ ಕೆಂಚನಗೌಡ್ರ, ಹನುಮಂತಪ್ಪ ಶಿವಳ್ಳಿ ಇದ್ದರು.



ಶ್ರೀ ಶಾರದಾ ಶಾಲೆಯ ವಿದ್ಯಾರ್ಥಿಗಳ ಸಾಧನೆ

ಅಣ್ಣಿಗೇರಿ: 2016ರಲ್ಲಿ ಅಣ್ಣಿಗೇರಿಯಲ್ಲಿ ಗ್ರಾಮೀಣ ಭಾಗದ ಅತಿದೊಡ್ಡ ಶೈಕ್ಷಣಿಕ ಸಂಸ್ಥೆಯೊಂದನ್ನು ಕಟ್ಟಿ ಬೆಳೆಸುವ ವಿಶೇಷ ಸಂಕಲ್ಪದೊಂದಿಗೆ ಮಹತ್ತರ ಗುರಿಯೊಂದಿಗೆ ಶ್ರೀ ಶಾರದಾ ಪಬ್ಲಿಕ್ ಶಾಲೆಯನ್ನು ಆರಂಭಿಸಲಾಯಿತು. ದಶಕಗಳ ಕಾಲ ಶಾಲೆ ನಿರಂತರ ಪರಿಶ್ರಮದೊಂದಿಗೆ ಹಲವಾರು ಶಿಕ್ಷಕರ ಹಾಗೂ ಶಿಕ್ಷಕೇತರ ಸಿಬ್ಬಂದಿ ಶ್ರಮದಿಂದ ಶಾಲೆ 50ಕ್ಕೂ ಹೆಚ್ಚು ಸಿಬ್ಬಂದಿ ವರ್ಗ ಹಾಗೂ 600 ವಿದ್ಯಾರ್ಥಿಗಳನ್ನು ಹೊಂದಿದ ವಿಶಿಷ್ಟವಾದ ಶಾಲೆಯಾಗಿ ಹೊರಹೊಮ್ಮಿದೆ. ಅದರಲ್ಲೂ ಶೈಕ್ಷಣಿಕ ವರ್ಷ 2025-26 ಶ್ರೀ ಶಾರದಾ ಪಬ್ಲಿಕ್ ಶಾಲೆಯ ಪಾಲಿಗೆ ವಿಶೇಷವಾದ ಮೈಲುಗಲ್ಲನ್ನು ಯಶಸ್ವಿಯಾಗಿ ಸಾಧಿಸಿದ ವರ್ಷವಾಗಿದೆ ಎಂದು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸಂಜೀವರೆಡ್ಡಿ ಅಮೂಡ್ಲ ಮತ್ತು ಸದಸ್ಯ ಮಹಾಬಲೇಶ್ವರ ಹೇಬಸೂರು ತಿಳಿಸಿದರು.

ಅವರು ಈ ಕುರಿತು ಪ್ರಕಟಣೆ ನೀಡಿ, ಇತ್ತೀಚಿಗೆ ನಡೆದ ಸಿಬಿಎಸ್‌ಇ 10ನೇ ತರಗತಿಯ ಪರೀಕ್ಷೆಯಲ್ಲಿ ನಗರದ ಶ್ರೀ ಶಾರದಾ ಶಾಲೆಯ 100ಕ್ಕೆ 100 ಪ್ರತಿಶತ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಮಲ್ಲಿಕಾರ್ಜುನ ಯಲಿಗಾರ ಶೇ.91.2, ನಿಶ್ಚಲ ಜಾಧವ ಶೇ.89.8, ಶಿಖಾ ನರಗುಂದ ಶೇ.88.2ರಷ್ಟು ಅಂಕ ಗಳಿಸಿದ್ದಾರೆ. ಈ ಮೂವರು ವಿದ್ಯಾರ್ಥಿಗಳು ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ. ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ 25 ಇದ್ದು, 10 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 8 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ,7 ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ. ಇದಕ್ಕೆ ಕಾರಣಿಭೂತರಾಗಿರುವ ಶಾಲೆಯ ಎಲ್ಲ ಶಿಕ್ಷಕ ಹಾಗೂ ಶಿಕ್ಷಕೇತರ ಬಳಗದವರಿಗೂ, ವಾಹನ ಚಾಲಕರಿಗೂ ಹಾಗೂ ವಿಶೇಷವಾಗಿ ಪ್ರಾಂಶುಪಾಲ ಸುಧರ್ಮ ಬಸಾಪುರ ಇವರಿಗೂ ಕೃತಜ್ಞತೆ ಅರ್ಪಿಸುತ್ತೇವೆ ಎಂದರು.





> ಗ್ರಾಮೀಣ ಭಾಗದ ಸಿಬಿಎಸ್‌ಇ ಅತಿದೊಡ್ಡ ಶೈಕ್ಷಣಿಕ ಸಂಸ್ಥೆಯ ಶಾಲೆ ಇನ್ನಷ್ಟು ವಿದ್ಯಾರ್ಥಿಗಳ ಜೀವನಕ್ಕೆ ದಾರಿದೀಪವಾಗಲಿ, ಇನ್ನಷ್ಟು ಕೀರ್ತಿ ಸಂಪಾದಿಸಲಿ, ಇನ್ನಷ್ಟು ಎತ್ತರಕ್ಕೆ ಬೆಳೆಯಲಿ.
> ■ ಮಹಾಬಲೇಶ್ವರ ಹೆಬಸೂರ್, ಶಿಕ್ಷಣ ಸಂಸ್ಥೆಯ ಸದಸ್ಯ

ಅಳ್ನಾವರ: ಪ.ಪಂ ಆವರಣದಲ್ಲಿ ತಾಲೂಕಾಡಳಿತದಿಂದ ಅಂಬೇಡ್ಕರ್ ಜಯಂತಿ ನಡೆಯಿತು. ತಾ.ಪಂ ಇಒ ಪ್ರಶಾಂತ ತುರಕಾಣಿ, ಮುಖ್ಯಾಧಿಕಾರಿ ಪ್ರಕಾಶ ಮಗದುಮ್, ಸಮಾಜ ಕಲ್ಯಾಣ ಇಲಾಖೆಯ ಗೀತಾ ಕೆಂಚನೂರ, ಪಿಎಸ್‌ಐ ಬಸವರಾಜ ಯದ್ದಲಗುಡ್ಡ, ಪಶು ವೈದ್ಯಾಧಿಕಾರಿ ಸುನೀಲ ಬನ್ನಿಗೋಳ ಇತರರಿದ್ದರು.



ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ ಇಂದು



ಹುಬ್ಬಳ್ಳಿ: ಹಳೇಹುಬ್ಬಳ್ಳಿಯ ಅಕ್ಕಿಪೇಟೆಯಲ್ಲಿರುವ ಪುರಾತನ 1008 ಪಾರ್ಶ್ವನಾಥ ದಿಗಂಬರ ಜೈನ ಬಸದಿಯಲ್ಲಿ ಮೂಲನಾಯಕ ಪಾರ್ಶ್ವನಾಥ ತೀರ್ಥಂಕರರ ನೂತನ ಜಿನಬಿಂಬವು ಪ್ರತಿಷ್ಠಾಪನೆಗೊಳ್ಳಲಿದೆ. ಈ ಹಿನ್ನೆಲೆ ಏ.18ರಿಂದ ಮೂರು ದಿನಗಳವರೆಗೆ ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವ ಏರ್ಪಡಿಸಲಾಗಿದೆ ಎಂದು ಮಹೋತ್ಸವ ಸಮಿತಿ ಉಪಾಧ್ಯಕ್ಷ ವಿಮಲ ತಾಳಿಕೋಟಿ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿನಮಂದಿರ, ವೈಷ್ಣವಿ ಕನ್ವೆನ್ಷನ್ ಹಾಲ್‌ನ ಸಿದ್ಧಾಂತಕೀರ್ತಿ ಸಭಾ ಮಂಟಪದಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಏ. 18ರಂದು ಬೆಳಗ್ಗೆ 5ಕ್ಕೆ ಮಂಗಳ ವಾದ್ಯಗಳೊಂದಿಗೆ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುವುದು. ಬೆಳಗ್ಗೆ 9ಕ್ಕೆ ಸಭಾ ಕಾರ್ಯಕ್ರಮವನ್ನು ಎಸ್‌ಡಿಎಂ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ನಿರಂಜನಕುಮಾರ, ಪದ್ಮಲತಾ ದಂಪತಿ ಉದ್ಘಾಟಿಸುವರು. ಏ.19ರಂದು ನಿತ್ಯವಿಧಿ, ಅಗ್ರೋಧಕ ಮೆರವಣಿಗೆ, ಜನ್ಮಕಲ್ಯಾಣ ಮಹೋತ್ಸವ, ಭವ್ಯ ಮೆರವಣಿಗೆ, ಪಾಂಡುಕಶಿಲೆಯ ಮೇಲೆ ಅಭಿಷೇಕ, ಭಕ್ತಾಮರ ಆರಾಧನೆ, ನಾಮಕರಣ, ರಾಜ್ಯಾಭಿಷೇಕ, ದಿಕಲ್ಯಾಣ, ಧರ್ಮಸಭೆ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಏ. 20ರಂದು ಕೇವಲಜ್ಞಾನ ಕಲ್ಯಾಣ ಮಂತ್ರನ್ಯಾಸವಿಧಿ, ಜಿನಬಿಂಬ ಪ್ರತಿಷ್ಠಾಪನೆ, ಮೋಕ್ಷಕಲ್ಯಾಣ ಪೂಜೆ, ಬಸದಿಗೆ ನೂತನ ರಜತ ಪಲ್ಲಕ್ಕಿ ಅರ್ಪಣೆ, ಧರ್ಮದೇವತೆಗಳ ಶೋಡಷ ಉಪಚಾರ ಪೂಜೆ, ಗುರುಪೂಜೆಗಳು ನಡೆಯಲಿವೆ. ಆಚಾರ್ಯ ಪುಣ್ಯಸಾಗರ ಮಹಾರಾಜರು ಸಾನ್ನಿಧ್ಯ ವಹಿಸುವರು. ಹೊಂಬುಜ ಮಠದ ಸ್ವಸ್ತಿಶ್ರೀ ಡಾ. ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿ ನೇತೃತ್ವ ವಹಿಸುವರು. ನವಗ್ರಹ ತೀರ್ಥ ಕ್ಷೇತ್ರದ ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕರು, ಸೋಂದಾ ಮಠದ ಸ್ವಸ್ತಿಶ್ರೀ ಭಟ್ಟಾಕಲಂಕ ಭಟ್ಟಾರಕರು, ನರಸಿಂಹರಾಜಪುರದ ಸ್ವಸ್ತಿಶ್ರೀ ಲಕ್ಷ್ಮೀ ಸೇನ ಭಟ್ಟಾರಕರು ಸಾನ್ನಿಧ್ಯ ವಹಿಸುವರು ಎಂದರು.

ಸಮಿತಿ ಅಧ್ಯಕ್ಷ ಉದಯ ಧಡೋತಿ, ಜಿನಮಂದಿರ ಟ್ರಸ್ಟ್ ಕಮಿಟಿ ಅಧ್ಯಕ್ಷ ತವನಪ್ಪ ಶಿರಗುಪ್ಪಿ, ಶಾಂತಿನಾಥ ಹೋತಪೇಟಿ, ಸಂತೋಷ ಹೋತಪೇಟಿ, ರಾಜೇಂದ್ರ ದಿನಕರ, ಆರ್.ಟಿ. ತವನಪ್ಪನವರ ಇದ್ದರು.

ಅಗ್ನಿಶಾಮಕ ಠಾಣೆ ಮಂಜೂರಿಗೆ ಆಗ್ರಹ

ನವಲಗುಂದ: ಅತೀ ದೊಡ್ಡ ಪಟ್ಟಣ ಮತ್ತು ತಾಲೂಕು ಕೇಂದ್ರವಾಗಿರುವ ನವಲಗುಂದದಲ್ಲಿ ಈವರೆಗೂ ಸ್ವತಂತ್ರ ಅಗ್ನಿಶಾಮಕ ಠಾಣೆ ಇಲ್ಲದಿರುವುದು ವಿಷಾದನೀಯ ಸಂಗತಿಯಾಗಿದ್ದು, ಸರ್ಕಾರ ಕೂಡಲೇ ಇಲ್ಲಿಗೆ ನೂತನ ಅಗ್ನಿಶಾಮಕ ಕೇಂದ್ರವನ್ನು ಮಂಜೂರು ಮಾಡಬೇಕೆಂದು ಮಾಬುಸಾಬ ಯರಗುಪ್ಪಿ ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಉತ್ತರ ಕರ್ನಾಟಕ ಪರಿವರ್ತನ ಸಮುದಾಯದಿಂದ ತಹಶೀಲ್ದಾರ್ ಸುಧೀರ ಸಾಹುಕಾರ ಅವರ ಮೂಲಕ ಮುಖ್ಯಮಂತ್ರಿ ಹಾಗೂ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ನೀಡಿ ಮಾತನಾಡಿದ ಅವರು, ನವಲಗುಂದ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಗ್ನಿ ಅವಘಡಗಳು ಸಂಭವಿಸಿದಾಗ ನಾವು ಅಣ್ಣಿಗೇರಿ ಅಥವಾ ನರಗುಂದದಿಂದ ಬರುವ ಅಗ್ನಿಶಾಮಕ ದಳದ ಮೇಲೆ ಅವಲಂಬಿತರಾಗಬೇಕಿದೆ. ಅಣ್ಣಿಗೇರಿಯಿಂದ ವಾಹನಗಳು ಸುಮಾರು 20 ರಿಂದ 30 ಕಿ.ಮೀ ದೂರ ಕ್ರಮಿಸಿ ಬರುವಷ್ಟರಲ್ಲಿ ಬೆಂಕಿ ವ್ಯಾಪಕವಾಗಿಹರಡಿ, ರೈತರಬಣವೆಗಳು, ಮನೆಗಳು ಹಾಗೂ ಅಂಗಡಿ ಮುಂಗಟ್ಟುಗಳು ಭಸ್ಮವಾಗಿ ಲಕ್ಷಾಂತರ ರೂಪಾಯಿ ಹಾನಿಯಾಗುತ್ತಿವೆ ಎಂದರು.

ಮಲ್ಲಿಕಾರ್ಜುನಸ್ವಾಮಿ ಮಠಪತಿ ಮಾತನಾಡಿ, ನವಲಗುಂದ ನೀಲಮ್ಮನ ಕೆರೆಯ ದಂಡೆಯ ಮೇಲಿರುವ ಬಣವೆಗಳಿಗೆ ಬೆಂಕಿ ತಗುಲಿ ಹಾನಿಯಾಗಿತ್ತು. ಇತ್ತೀಚೆಗೆ ಪಟ್ಟಣದ ಮೆಹಬೂಬ ನಗರದಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ರೈತರ ಲಕ್ಷಾಂತರ ರೂಪಾಯಿ ಮೌಲ್ಯದ ಮೇವು ಹಾಗೂ ಹೊಟ್ಟಿನ ಬಣವೆಗಳು ಸುಟ್ಟು ಕರಕಲಾಗಿವೆ. ಒಂದು ವೇಳೆ ನವಲಗುಂದದಲ್ಲೇ ಅಗ್ನಿಶಾಮಕ ಠಾಣೆ ಇದ್ದಿದ್ದರೆ ಈ ಪ್ರಮಾಣದ ನಷ್ಟವನ್ನು ತಪ್ಪಿಸಬಹುದಿತ್ತು ಎಂದರು.

ಎಸ್.ಎಸ್ ಕಂಬಳಿ ಮಾತನಾಡಿದರು. ಮೆಹಬೂಬಸಾಬ ಅಸಗಿ, ಮಹಮ್ಮದಲಿ ಮಿರ್ಜಿ, ಶಿವಲಿಂಗಯ್ಯ ಹಿರೇಮಠ, ಇಮ್ತಿಯಾಜ್ ಖತಿಬ್, ಶರೀಫ್ ಹುಡೇದ, ಮುಜೀಬ್ ಬಳ್ಳಾರಿ, ಬಸವರಾಜ ಮಲ್ಲದಾಸರ, ಸದ್ದಾಂಹುಸೇನ್ ಯರಗುಪ್ಪಿ, ಮಾಬುಲಿ ಮುಲ್ಲಾ, ಮಾಬುಸಾಬ ಕೆರೂರ ಸೇರಿದಂತೆ ಇನ್ನಿತರರಿದ್ದರು.



ಪ್ರಮುಖ ರಸ್ತೆ ಅಭಿವೃದ್ಧಿಗೆ ಶ್ರಮ



ಕುಂದಗೋಳ: ತಾಲೂಕಿನ ಸಾರಿಗೆ ಸಂಪರ್ಕ ಹೊಂದಿರುವ ಪ್ರಮುಖ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಿ ಸುಧಾರಣೆಗೊಳಿಸಲಾಗುವುದು ಎಂದು ಶಾಸಕ ಎಂ.ಆರ್. ಪಾಟೀಲ್ ಹೇಳಿದರು.

ಅವರು ತಾಲೂಕಿನ ಕಳಸ-ಸಂಕ್ಲಿಪೂರ ಸಿಸಿ ರಸ್ತೆ ನಿರ್ಮಾಣಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ 2024-25ನೇ ಸಾಲಿನಡಿ 150 ಲಕ್ಷ ವೆಚ್ಚದ ಕಾಮಗಾರಿಗೆ ಮಂಗಳವಾರ ಚಾಲನೆ ನೀಡಿ ಮಾತನಾಡಿ, ಈ ಭಾಗದಲ್ಲಿ ಗುಡಗೇರಿ-ಸಂಶಿ, ಗುಡಗೇರಿ-ಹರಲಾಪೂರ, ಮಂಡಿಗನಾಳ-ಗುಡಗೇರಿ ರಸ್ತೆ ಕಾಮಗಾರಿಗಳು ಈಗಾಗಲೇ ಆರಂಭಗೊಂಡಿವೆ. ಕುಂದಗೋಳ ತಾಲೂಕಿನಲ್ಲಿ ರೈತರ ಹೊಲಗಳಿಗೆ ಸಂಪರ್ಕ ಕಲ್ಪಿಸುವ ಹಲವು ಗ್ರಾಮೀಣ ರಸ್ತೆಗಳನ್ನು ಸುಧಾರಿಸಲಾಗುತ್ತಿದ್ದು, ಹಳ್ಳಗಳ ಮೇಲೆ ಸೇತುವೆಗಳ ನಿರ್ಮಾಣ ಕಾರ್ಯವೂ ಪ್ರಗತಿಯಲ್ಲಿದೆ. ಮಳೆಗಾಲದಲ್ಲಿ ಹೊಲಗಳಿಗೆ ತೆರಳಲು ತೊಂದರೆ ಉಂಟಾಗುತ್ತಿದ್ದು, ಹೊಸ ಸೇತುವೆ ನಿರ್ಮಾಣದಿಂದ ಅನುಕೂಲವಾಗಲಿದೆ ಎಂದರು.

ಅಖಂಡಪ್ಪ ಕಳಸೂರ, ಯಲ್ಲರಡ್ಡಿ ಯರಗುಪ್ಪಿ, ಸತೀಶ ಪಾಟೀಲ್, ಸೋಮಶೇಖರ ಬಡಪ್ಪನವರ, ಯಲ್ಲಪ್ಪ ಹೊಸಮನಿ, ಬಸವರಾಜ ಅಂಗಡಿ, ಬಸವರಾಜ ಮಳಗಿ, ಅಶೋಕ ದೊಡ್ಡಮಲ್ಲಪ್ಪನವರ, ಗದಿಗೆಪ್ಪ ತಳವಾರ, ಭೀಮಪ್ಪ ಹಳ್ಳಿಕೇರಿ, ಮಲ್ಲೇಶ ದೊಡ್ಡಮಲ್ಲಪ್ಪನವರ, ಫಕೀರಗೌಡ ಅಕ್ಕೂರ, ಪಕೀರಪ್ಪ ಗದ್ದಿ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಬಸವ ಸಂದೇಶ ಸಾರಲು ಬೈಕ್ ರ್‍ಯಾಲಿ

ಹುಬ್ಬಳ್ಳಿ: ವೀರಶೈವ ಸಂಘಟನಾ ಸಮಿತಿ ವತಿಯಿಂದ ಏ.17ರಿಂದ 20ರವರೆಗೆ ನಗರದ ಮೂರು ಸಾವಿರ ಮಠದ ಆವರಣದಲ್ಲಿ ಬಸವ ಜಯಂತಿ ಉತ್ಸವ ಕಾರ್ಯಕ್ರಮದ ಅಂಗವಾಗಿ ಶುಕ್ರವಾರ ಷಟ್‌ಸ್ಥಲ ಧ್ವಜಾರೋಹಣ ಹಾಗೂ ಬಸವ ಸಂದೇಶ ಸಾರಲು ಬೈಕ್ ರ್‍ಯಾಲಿಗೆ ಮೂರು ಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಚಾಲನೆ ನೀಡಿದರು. ಸಮಿತಿ ಅಧ್ಯಕ್ಷ ಪ್ರವೀಣ ಕುಬಸದ, ಪ್ರಧಾನ ಕಾರ್ಯದರ್ಶಿ ನಿತ್ಯಾನಂದ ಮನ್ನೂರಮಠ, ಪಾಲಿಕೆ ಸದಸ್ಯ ಶಿವು ಮೆಣಸಿನಕಾಯಿ, ಈರಣ್ಣಾ ಶಿಂತ್ರಿ, ಶೇಖರಗೌಡಾ ಪಾಟೀಲ್, ಮಲ್ಲಿಕಾರ್ಜುನ ಶಿರಗಣ್ಣವರ, ಚನ್ನಬಸಪ್ಪ ಧಾರವಾಡ ಶೆಟ್ಟರ, ಅಂದಪ್ಪಾ ಹರದಾರಿ, ರಾಜು ಕೋರ್ಯಾಣಮಠ, ಜಗದೀಶ್ ಬುಳ್ಳಾನವರ, ನವೀನ ಕುದರಿ, ಶಿವು ಹಿರೇಮಠ, ತಾರಾದೇವಿ ವಾಲಿ, ಸರೋಜಾ ಹೂಗಾರ, ರತ್ನಾ ಗಂಗಣ್ಣವರ, ರತ್ನಾ ಚೌಶೆಟ್ಟಿ, ಸರೋಜಾ ಅಂಗಡಿ, ರಾಜೇಶ್ವರಿ ಕಟ್ಟಿಮನಿ ಇನ್ನೂ ಅನೇಕ ಬಸವಾಭಿಮಾನಿಗಳು ಉಪಸ್ಥಿತರಿದ್ದರು.



ಪುಣ್ಯಾರಾಧನೆ ಮಹೋತ್ಸವ ಅದ್ದೂರಿ



ಕುಂದಗೋಳ: ತಾಲೂಕಿನ ಸಂಶಿ ಗ್ರಾಮದಲ್ಲಿ ಗುರುದೇವ ಬ್ರಹ್ಮಾನಂದ ಶಿವಯೋಗಿಗಳ 50ನೇ ಹಾಗೂ ಗುರುದೇವ ಸಿದ್ದೇಶ್ವರ ಸ್ವಾಮೀಜಿ 20ನೇ ಪುಣ್ಯಾರಾಧನೆ ಮಹೋತ್ಸವ ಗುರುಸಿದ್ದೇಶ್ವರ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ಶುಕ್ರವಾರ ಅದ್ದೂರಿಯಾಗಿ ಜರುಗಿತು.

ಬೆಳಗ್ಗೆ ಬ್ರಹ್ಮಾನಂದ ಗುರುದೇವರ ಕರ್ತೃ ಗದ್ದುಗೆಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ, ಅಖಂಡ ಶಿವನಾಮ ಭಜನೆ ಹಾಗೂ ಮಹಾ ಮಂಗಳಾರತಿ ನೆರವೇರಿಸಲಾಯಿತು. ಬಳಿಕ ಸ್ಥಳೀಯ ವಿರಕ್ತಮಠದಿಂದ ಶ್ರೀ ಕರಿಸಿದ್ದೇಶ್ವರ ಡೊಳ್ಳಿನ ಮೇಳ ಹಾಗೂ ಶ್ರೀ ನಾಗೇಶ್ವರ ಭಜನಾ ಮಂಡಳ, ಸುಮಂಗಲೆಯರ ಕುಂಭ, ಆರತಿ ಹಾಗೂ ವಿವಿಧ ಮಂಗಲ ವಾದ್ಯಗಳೊಂದಿಗೆ ಗುರುದೇವ ಬ್ರಹ್ಮಾನಂದ ಶಿವಯೋಗಿಗಳು ಹಾಗೂ ಗುರುದೇವ ಸಿದ್ದೇಶ್ವರ ಸ್ವಾಮೀಜಿ ಭಾವಚಿತ್ರ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಬ್ರಹ್ಮಾನಂದ ಆಶ್ರಮ ತಲುಪಿತು. ವಿರಕ್ತಮಠದ ಚನ್ನಬಸವದೇವರು, ನರಸಿಪುರದ ಶಾಂತಬಿಷ್ಠ ಚೌಡಯ್ಯ ಸ್ವಾಮೀಜಿ, ಸಂಗಪ್ಪ ಉಪಾಸಿ, ಶಿವಾನಂದ ಬಡ್ನಿ, ಶಿವಾನಂದ ಪೂಜಾರ, ಹಾಲಪ್ಪ ತಡಾಳ, ಗಿರೀಶ ಪಾಟೀಲ, ಸುರೇಶ ಬೇಟದೂರ, ಶಿವಯೋಗಿಗೌಡ ಪಾಟೀಲ, ಈರಣ್ಣ ಕಮ್ಮಾರ, ಶಿವನಗೌಡ ದ್ಯಾವನಗೌಡ ಹಾಗೂ ಭಕ್ತರು ಪಾಲ್ಗೊಂಡಿದ್ದರು.

ವೃತ್ತಿಜೀವನಕ್ಕೆ ಕಾರ್ಯಾಗಾರ ಅವಶ್ಯ

ಹುಬ್ಬಳ್ಳಿ: ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆ, ಇಂಗ್ಲಿಷ್ ವಿಭಾಗದ ವತಿಯಿಂದ ಆರ್‌ಯು ಕಾರ್ಪೊರೇಟ್ ರೆಡಿ ಎಂಬ ವಿಷಯ ಕುರಿತು ಕಾರ್ಯಾಗಾರ ಮಹಾವಿದ್ಯಾಲಯದ ಸಭಾಭವನದಲ್ಲಿ ಆಯೋಜಿಸಲಾಯಿತು.

ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಮೇಘಾ ದೊಡ್ಡಗೌಡರ, ಕಾರ್ಪೊರೇಟ್ ಕ್ಷೇತ್ರಕ್ಕೆ ಅಗತ್ಯವಾದ ಕೌಶಲ್ಯಗಳು, ಸಂವಹನ ನೈಪುಣ್ಯ, ವ್ಯಕ್ತಿತ್ವ ವಿಕಾಸ ಹಾಗೂ ಉದ್ಯೋಗ ಸಿದ್ಧತೆಯ ಬಗ್ಗೆ ವಿವರವಾಗಿ ಮಾತನಾಡಿದರು. ವಿದ್ಯಾರ್ಥಿಗಳು ತಮ್ಮ ಭವಿಷ್ಯದ ವೃತ್ತಿಜೀವನಕ್ಕೆ ತಯಾರಾಗುವಲ್ಲಿ ಇಂತಹ ಕಾರ್ಯಾಗಾರಗಳ ಮಹತ್ವವನ್ನು ಅವರು ಒತ್ತಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯೆ ಸುಮಂಗಲಾ ಬಿ. ಪಾಟೀಲ ಮಾತನಾಡಿ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಕಾರ್ಪೊರೇಟ್ ಜಗತ್ತಿನಲ್ಲಿ ಯಶಸ್ವಿಯಾಗಲು ಅಗತ್ಯವಾದ ಶಿಸ್ತು ಮತ್ತು ಪರಿಶ್ರಮದ ಮಹತ್ವವನ್ನು ತಿಳಿಸಿದರು. ಕಾರ್ಯಕ್ರಮವನ್ನು ಅಂಕಿತಾ ಅಗಸಿಮನಿ ಸ್ವಾಗತದೊಂದಿಗೆ ಪ್ರಾರಂಭಿಸಿದರು. ನಂತರ ಉಪನ್ಯಾಸಕಿ ಆರತಿ ಎಂ. ಪಟ್ಟಂದ ಸಂಪನ್ಮೂಲ ವ್ಯಕ್ತಿಯ ಪರಿಚಯವನ್ನು ನೀಡಿದರು. ವಿಭಾಗದ ಕಾರ್ಯದರ್ಶಿ ತೇಜಸ್ವಿನಿ ಕಟ್ಟಿಮನಿ ಧನ್ಯವಾದಗಳನ್ನು ಅರ್ಪಿಸಿದರು. ರಕ್ಷಿತಾ ಶಿರಕೋಳ ನಿರೂಪಿಸಿದರು ಹಾಗೂ ಕಾರ್ಯಕ್ರಮದಲ್ಲಿ ವಿಭಾಗದ ಮುಖ್ಯಸ್ಥ ದೇವದತ್ತ ವೈ ಹಾಗೂ ವಿದ್ಯಾರ್ಥಿಗಳು ಉಪಸ್ಥತರಿದ್ದರು.



ಹುಬ್ಬಳ್ಳಿ
ಶನಿವಾರ, 18 ಏಪ್ರಿಲ್ 2026
ಸಂಪುಟ 16, ಸಂಚಿಕೆ 24, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ


ಲೋಕಹಿತಂ ಮಮ ಕರಣೀಯಂ



ಹಾರ್ಮುಜ್ ಮುಕ್ತ ಸಂಚಾರಕ್ಕೆ ಅವಕಾಶ | ೦೭
139 ಶಾಸಕರು ನನ್ನದೇ ಗುಂಪು | ೦೮
ರಾಜ್ಯಸಭೆಗೆ ಹರಿವಂಶ್ ಉಪಸಭಾಪತಿ | ೦೭

ಲೋಕಸಭೆಯಲ್ಲಿ ವಿರೋಧ ಪಕ್ಷಗಳಿಂದ ಸಿಗದ ಬೆಂಬಲ
ಮೂರನೇ ಎರಡು ಬಹುಮತ ಸಿಗದೇ ಮಸೂದೆ ವಿಫಲ
ನಾರೀಶಕ್ತಿಗೆ ಸೋಲು





ಮತಗಳು
ಪರ **298** | ವಿರುದ್ಧ **230**
ಗೈರು - 0

ಮುಂದೇನು?
2029ರೊಳಗೆ ಮಹಿಳಾ ಮೀಸಲು ಜಾರಿಗೆ ತರಬೇಕೆಂಬ ಉದ್ದೇಶಕ್ಕೆ ಹಿನ್ನಡೆ ಉಂಟಾಗಿದೆ. ಸರ್ಕಾರ ಮರುಪರಿಶೀಲನೆ ಮಾಡಿ ಹೊಸ ರೂಪದಲ್ಲಿ ಮಸೂದೆ ತರಬಹುದೇ ಎಂಬುದು ಈಗ ಗಮನಾರ್ಹವಾಗಿದೆ. ಇನ್ನೊಂದೆಡೆ, ಮಹಿಳಾ ಪ್ರತಿನಿಧಿತ್ವದ ಪ್ರಶ್ನೆ ಮತ್ತೆ ರಾಜಕೀಯ ಕೇಂದ್ರಬಿಂದುವಾಗಿ ಮುಂದಿನ ಚುನಾವಣಾ ರಾಜಕೀಯ ದಲ್ಲೂ ಪ್ರಭಾವ ಬೀರುವ ಸಾಧ್ಯತೆ ಇದೆ.

◆**ಹೊಸದಿಲ್ಲಿ:** ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ.33 ಮೀಸಲು ಒದಗಿಸುವ ಉದ್ದೇಶದ ಸಂವಿಧಾನ(131ನೇ ತಿದ್ದುಪಡಿ) ಮಸೂದೆ ಲೋಕಸಭೆಯಲ್ಲಿ ಶುಕ್ರವಾರ ಐತಿಹಾಸಿಕ ಸೋಲು ಕಂಡಿದೆ. ಅಗತ್ಯವಾದ ಮೂರನೇ ಎರಡರಷ್ಟು ಬಹುಮತವನ್ನು ಪಡೆಯಲು ವಿಫಲವಾದ ಹಿನ್ನೆಲೆಯಲ್ಲಿ ಮಸೂದೆ



ಅಂಗೀಕಾರವಾಗದೆ ಕುಸಿದಿದ್ದು, ಮಹಿಳೆಯರ ಸಬಲೀಕರಣ ದಶಕಗಳ ಕನಸಿಗೆ ಮತ್ತೊಮ್ಮೆ ಬ್ರೇಕ್ ಬಿದ್ದಂತಾಗಿದೆ.

ಮಸೂದೆಗೆ ಬೆಂಬಲವಾಗಿ 298 ಮತಗಳು ಬಂದರೆ, 230 ಮಂದಿ ವಿರೋಧಿಸಿದರು. ಆದರೆ ಸಂವಿಧಾನ ತಿದ್ದುಪಡಿ ಮಸೂದೆ ಆಗಿರುವುದರಿಂದ 2/3 ಬಹುಮತ ಅಗತ್ಯವಾಗಿದ್ದು, ಸರ್ಕಾರ ಆ ಸಂಖ್ಯೆಯನ್ನು ತಲುಪಲಿಲ್ಲ, ಇಡೀ ಇಂಡಿ ಕೂಟ ಮಹಿಳಾ ಮಸೂದೆ ವಿರುದ್ಧವಾಗಿ ಮತ ಹಾಕಿತು. ಈ ಮಸೂದೆ ಸೋತಿದ್ದರಿಂದ ಮುಂದಿನ ಎರಡು ಮಸೂದೆಗಳನ್ನು ಮತಕ್ಕೆ ಹಾಕಲಿಲ್ಲ.

ಮತದಾನಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಸಂಸದರಿಗೆ ಮನವಿ ಮಾಡಿ, "ಮಹಿಳಾ ಸಬಲೀಕರಣದ ದೃಷ್ಟಿಯಿಂದ ಈ ಮಸೂದೆಗೆ ಬೆಂಬಲ ನೀಡಿ" ಎಂದು ಕೋರಿದ್ದರೂ ಅದು ಫಲ ನೀಡಲಿಲ್ಲ. ➡ಪುಟ ೪

ಬಿಜೆಪಿಯಿಂದ ಪ್ರತಿಭಟನೆ
ಲೋಕಸಭೆಯಲ್ಲಿ ಮಹಿಳಾ ಮಸೂದೆಗೆ ಸೋಲಾಗುತ್ತಿದ್ದಂತೆ ಸಂಸತ್ ಹೊರಗೆ ಬಿಜೆಪಿಯ ಮಹಿಳಾ ಸಂಸದೆಯರು ಬೀದಿಗಿಳಿದು ಇಂಡಿ ಕೂಟದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು. ಸುರಿವ ಮಳೆಯಲ್ಲೂ ಘೋಷಣೆ ಕೂಗುತ್ತಾ ನಡೆದ ಅವರು, ಇಂಡಿ ನಾಯಕರ ವಿರುದ್ಧ ಕಿಡಿಕಾರಿದರು. ಮಹಿಳಾ ಮೀಸಲಾತಿ ವಿಚಾರದಲ್ಲಿ ಬೆಂಬಲ ಕೊಡದೆ, ಮಹಿಳಾ ವಿರೋಧಿ ನಡೆ ಅನುಸರಿಸಿವೆ ಎಂದು ವಾಗ್ದಾಳಿ ನಡೆಸಿದರು.

- ಪ್ರಧಾನಿ, ಗೃಹ ಸಚಿವರ ಮನವಿಗೆ ಸಿಗದ ಮಾನ್ಯ
- ಮಸೂದೆ ಬಗ್ಗೆ ಕಾಂಗ್ರೆಸ್ ನಾಯಕರಿಂದ ಟೀಕೆ
- ಮಹಿಳಾ ಮೀಸಲು, ಪುನರ್ವಿಂಗಡಣೆಗೆ ವಿರೋಧ ಪಕ್ಷಗಳ ವಿರೋಧ
- ಎಸ್‌ಸಿ,ಎಸ್‌ಟಿ ಸ್ಥಾನ ಹೆಚ್ಚಳಕ್ಕೂ ಅಡ್ಡಿ: ಆರೋಪ
- ಒಬ್ಬ ವ್ಯಕ್ತಿ ಒಂದು ಮತ ಒಂದು ಮೌಲ್ಯ ತತ್ವಕ್ಕೆ ವ್ಯತ್ಯಾಸ ಇರುವುದು ಒಪ್ಪಿಗೆ
- 2026 ಬಳಿಕ ಜನಗಣತಿ, ಬಳಿಕ ಮಹಿಳಾ ಮೀಸಲು ಜಾರಿ ಭರವಸೆ

"ಮಹಿಳಾ ಸಬಲೀಕರಣ ನಮ್ಮ ಸರ್ಕಾರದ ಪ್ರಮುಖ ಗುರಿ. ಈ ಮಸೂದೆಗೆ ಬೆಂಬಲ ನೀಡುವುದು ದೇಶದ ಭವಿಷ್ಯಕ್ಕೆ ಬೆಂಬಲ ನೀಡಿದಂತೆ.
■ **ನರೇಂದ್ರ ಮೋದಿ,** ಪ್ರಧಾನಿ

"ವಿಪಕ್ಷಗಳು ಮಹಿಳೆಯರ ಹಕ್ಕಿಗೆ ಅಡ್ಡಿಯಾಗಿವೆ. ಇದು ನಾರಿ ಶಕ್ತಿಗೆ ಮಾಡಿದ ಅನ್ಯಾಯ. ದೇಶದ ಮಹಿಳೆಯರು ಇದಕ್ಕೆ ಉತ್ತರ ನೀಡುತ್ತಾರೆ.
■ **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಹತ್ಯೆ ಪ್ರಕರಣ
ಶಾಸಕ ವಿನಯ್ ಸೇರಿ 16 ಮಂದಿಗೆ ಜೀವಾವಧಿ ಸಜೆ

◆**ಬೆಂಗಳೂರು:** ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಅಪರಾಧಿಗಳಿಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಜೀವಾವಧಿ ಜೈಲು ಶಿಕ್ಷೆ ವಿಧಿಸಿ ಶುಕ್ರವಾರ ಮಹತ್ವದ ತೀರ್ಪು ಪ್ರಕಟಿಸಿದೆ. ಇದರಿಂದ ವಿನಯ್ ಕುಲಕರ್ಣಿ ಶಾಸಕ ಸ್ಥಾನಕ್ಕೆ ಕುತ್ತು ಎದುರಾಗಿದೆ. ಅಂತೆಯೇ ಯೋಗೀಶ್‌ಗೌಡ ಅವರ ಮಕ್ಕಳಿಗೆ 16 ಲಕ್ಷ ರೂ.ಗಳನ್ನು ಪರಿಹಾರವಾಗಿ ನೀಡಲು ನ್ಯಾಯಾಲಯ ಸೂಚನೆ ನೀಡಿದೆ.



ಕೊಲೆಯಾದ ಯೋಗೀಶ್‌ಗೌಡ

ವಿಶೇಷ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ಬುಧವಾರ ಒಟ್ಟು 17 ಮಂದಿಯನ್ನು ದೋಷಿಗಳು ಎಂದು ತೀರ್ಪು ನೀಡಿದ್ದರು. ಗುರುವಾರ ಶಿಕ್ಷೆಯ ಪ್ರಮಾಣ ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಸಿಬಿಐ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಹಾಗೂ ವಿನಯ್ ಕುಲಕರ್ಣಿ ಪರ ಹಿರಿಯ ವಕೀಲ ಶ್ಯಾಮಸುಂದರ್, ಇತರೆ ಅಪರಾಧಿಗಳ ಪರ ವಕೀಲರು ಹಾಗೂ ಸ್ವತಃ ಅಪರಾಧಿಗಳ ಮನವಿಯನ್ನು ಆಲಿಸಿದ್ದ ನ್ಯಾಯಾಲಯವು ಶುಕ್ರವಾರಕ್ಕೆ ತೀರ್ಪು ಕಾಯ್ದಿರಿಸಿತ್ತು.

ಬಟ್ಟೆ ಬದಲಿಸಲು ಅನುಮತಿ ನೀಡುವಂತೆ ಮನವಿ: ಜೀವಾವಧಿ ಶಿಕ್ಷೆ ಘೋಷಣೆ ಮಾಡಿದ ಬೆನ್ನಲ್ಲೇ ಶಾಸಕ ವಿನಯ್ ಕುಲಕರ್ಣಿ ಪರ ವಕೀಲ ಸುನಿಲ್ ಅವರು, ನನ್ನ ಕಕ್ಷಿದಾರರು 3 ದಿನದಿಂದ ಒಂದೇ ಬಟ್ಟೆಯಲ್ಲಿದ್ದಾರೆ, ಬಟ್ಟೆ ಬದಲಿಸಲು ಅನುಮತಿ ನೀಡುವಂತೆ ಮನವಿ ಮಾಡಿದ್ದಾರೆ. ಅಪರಾಧಿಗಳಿಗೆ ಬಟ್ಟೆ ಒದಗಿಸಲು ಜೈಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಜೈಲು ಕೈಪಿಡಿಯಲ್ಲಿರುವಂತೆ ಬಟ್ಟೆ ಒದಗಿಸಲು ಜಡ್ಜ್ ಸೂಚನೆ ನೀಡಿದ್ದಾರೆ. ➡ಪುಟ ೪



- ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಿಂದ ತೀರ್ಪು ಪ್ರಕಟ
- ಯೋಗೀಶ್‌ಗೌಡ ಅವರ ಮಕ್ಕಳಿಗೆ 16 ಲಕ್ಷ ರೂ.ಗಳನ್ನು ಪರಿಹಾರವಾಗಿ ನೀಡಲು ನ್ಯಾಯಾಲಯ ಸೂಚನೆ

ಜೀವಾವಧಿ ಶಿಕ್ಷೆಗೆ ಗುರಿಯಾದವರು
ವಿಕ್ರಮ್ ಬಳ್ಳಾರಿ(ಎ2), ಕೀರ್ತಿ ಕುಮಾರ್ ಅಲಿಯಾಸ್ ಬಸವರಾಜ್ ಕುರಹಟ್ಟಿ (ಎ3), ಸಂದೀಪ್ ಸವದತ್ತಿ(ಎ24), ವಿನಾಯಕ್ ಕಟಗಿ(ಎ5), ಮಹಾಬಲೇಶ್ವರ್ ಹೊಂಗಲ್ ಅಲಿಯಾಸ್ ಮುದಕ (ಎ6), ಸಂತೋಷ್ ಸವದತ್ತಿ(ಎ7), ಎಂ.ದಿನೇಶ್ (ಎ8), ಎಸ್.ಅಶ್ವತ್(ಎ9), ಕೆ.ಎಸ್. ಸುನೀಲ್ (ಎ10), ನಜೀರ್ ಅಹ್ಮದ್ (ಎ11), ಶನ್ವಾಜ್ (ಎ12), ಕೆ.ನೂತನ್ (ಎ13), ಸಿ.ಹರ್ಷಿತ್ (ಎ14), ವಿನಯ್ ಕುಲಕರ್ಣಿ (ಎ15), ಚಂದ್ರಶೇಖರ್ ಇಂಡಿ ಅಲಿಯಾಸ್ ಚಂದ್ರು ಮಾಮ (ಎ16) ಮತ್ತು ವಿಕಾಸ್ ಕಲಬುರ್ಗಿಗೆ (ಎ18) ಐಪಿಸಿ ಸೆಕ್ಷನ್ 302 ಹಾಗೂ 120ಬಿ ಅಪರಾಧಕ್ಕೆ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ.

ಶಾಸಕ ಸ್ಥಾನ ಕಳೆದುಕೊಂಡ ವಿನಯ್ ಕುಲಕರ್ಣಿ
ಯಾವುದೇ ಜನಪ್ರತಿನಿಧಿಗಳ ವಿರುದ್ಧ 2 ವರ್ಷಕ್ಕೂ ಹೆಚ್ಚಿನ ವರ್ಷ ಜೈಲು ಶಿಕ್ಷೆ ಪ್ರಕಟವಾದರೆ, ತಕ್ಷಣ ಅವರ ಶಾಸಕ ಸ್ಥಾನ ರದ್ದಾಗುತ್ತದೆ. ಸದ್ಯ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಜೀವಾವಧಿ ಜೈಲು ಶಿಕ್ಷೆ ವಿಧಿಸಲಾಗಿದೆ. ಈ ಹಿನ್ನೆಲೆ ವಿನಯ್ ಕುಲಕರ್ಣಿ ಅವರು ಶಾಸಕ ಸ್ಥಾನದಿಂದ ಅನರ್ಹಗೊಂಡಿದ್ದಾರೆ. ಕೋರ್ಟ್ ತನ್ನ ತೀರ್ಪಿನ ಪ್ರತಿಯನ್ನು ಸ್ಪೀಕರ್‌ಗೆ ಕಳುಹಿಸಲಿದ್ದು, ಆ ಬಳಿಕ ಸಭಾಧ್ಯಕ್ಷರು, ವಿನಯ್ ಕುಲಕರ್ಣಿ ಅವರನ್ನು ಅಧಿಕೃತವಾಗಿ ಶಾಸಕ ಸ್ಥಾನದಿಂದ ಅನರ್ಹಗೊಳಿಸಲಿದ್ದಾರೆ.

ಕೈ ನಾಯಕನ ಕುಕೃತ್ಯದ ಕತ್ತಲ ಲೋಕ
ಪ್ರಕರಣಕ್ಕೆ ಹೊಸ ತಿರುವು ನೀಡಿದ ಸಿಬಿಐ ಅಧಿಕಾರಿ ರಾಕೇಶ್ ರಂಜನ್
◆ಪುಟ ೦೦

ಟೆಂಗರಿಕರ್‌ಗೆ 7 ವರ್ಷ ಜೈಲು ಶಿಕ್ಷೆ
ಇದೇ ಅಪರಾಧಕ್ಕೆ ಐಪಿಸಿ ಸೆಕ್ಷನ್ 218 ಅನ್ವಯ 19ನೇ ಆರೋಪಿ



ಪೊಲೀಸ್ ಇನ್ಸ್‌ಪೆಕ್ಟರ್ ಆಗಿದ್ದ ಚನ್ನಕೇಶವ ಟೆಂಗರಿಕರ್‌ಗೆ ಏಳು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಜತೆಗೆ 30 ಸಾವಿರ ರೂ. ದಂಡ ವಿಧಿಸಲಾಗಿದೆ. ಜುಲ್ಮಾನೆ ಪಾವತಿಸಲು ತಪ್ಪಿದಲ್ಲಿ ಹೆಚ್ಚುವರಿಯಾಗಿ ಮೂರು ತಿಂಗಳು ಜೈಲು ವಾಸ ಅನುಭವಿಸಲು ನ್ಯಾಯಾಲಯ ಆದೇಶಿಸಿದೆ.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಅಶ್ವಿನಿ

ದಿನದ ಮಾತು
ನಿಜವಾದ ಜ್ಞಾನಕ್ಕೂ ಪುಸ್ತಕ ಪಾಂಡಿತ್ಯಕ್ಕೂ ಅಜಗಜಾಂತರ ವ್ಯತ್ಯಾಸವಿದೆ.
▲ಸುಭಾಷಿತ

ಕಿರುಸುದ್ದಿ

ರಾಮನಿಗೆ ಪ್ರಕಾಶ್ ರಾಜ್ ಅವಮಾನ; ಎಫ್‌ಐಆರ್
◆ಪುಟ ೭

ಸಂಪೂರ್ಣ ಮಾಡ್ಯೂಲ್ ಭೇದಿಸಲಿದ್ದೇವೆ: ಫಡ್ನವೀಸ್
◆ಪುಟ ೭

ಜಾದೂಗಾರ ಹೇಳಿಕೆ: ರಾಗಾ ವಿರುದ್ಧ ಬಿಜೆಪಿ ಆಕ್ರೋಶ
◆ಪುಟ ೭

ಹಕ್ಕಿಜ್ವರ ತಡೆಗೆ ಕ್ರಮ: ಸಚಿವ ದಿನೇಶ್ ಗುಂಡೂರಾವ್
◆ಪುಟ ೮

ಮಸೂದೆ ಮಹಿಳಾ ಸಬಲೀಕರಣಕ್ಕಾಗಿ ಅಲ್ಲ: ರಾಹುಲ್ ಗಾಂಧಿ ಟೀಕೆ
ಅಧಿಕಾರ ಉಳಿಸಿಕೊಳ್ಳಲು ಮಾಡಿದ ಯತ್ನ

◆**ಹೊಸದಿಲ್ಲಿ:** ಮಹಿಳಾ ಮೀಸಲು ಕಾಯ್ದೆಗೆ ಸಂಬಂಧಿಸಿದ ಸಂವಿಧಾನ ತಿದ್ದುಪಡಿ ಮಸೂದೆಗಳ ಕುರಿತು ತೀವ್ರ ಟೀಕೆ ವ್ಯಕ್ತಪಡಿಸಿರುವ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಈ ಮಸೂದೆ ಮಹಿಳಾ



ಸಬಲೀಕರಣಕ್ಕಾಗಿ ಅಲ್ಲ, ಬದಲಾಗಿ ದೇಶದ ಚುನಾವಣಾ ರಚನೆಯನ್ನು ಬದಲಾಯಿಸಿ ಅಧಿಕಾರವನ್ನು ಉಳಿಸಿಕೊಳ್ಳಲು ಮಾಡಿದ ಪ್ರಯತ್ನ ಎಂದು ಆರೋಪಿಸಿದರು. ಮಾತ್ರವಲ್ಲದೇ ಇದು ರಾಷ್ಟ್ರವಿರೋಧಿ ಕ್ರಮ ಎಂದು ಅವರು ಹೇಳಿದರು.

ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ರಾಹುಲ್ ಗಾಂಧಿ, ಈ ಮಸೂದೆ ಮಹಿಳೆಯರ ಹಕ್ಕುಗಳಿಗೆ ಸಹಾಯ ಮಾಡುವುದಿಲ್ಲ ಎಂದರು. ಸರ್ಕಾರ ಮಹಿಳೆಯರ ಹೆಸರನ್ನು ಬಳಸಿಕೊಂಡು ನಿಜವಾದ ಉದ್ದೇಶವನ್ನು ಮರೆಮಾಚುತ್ತಿದೆ. ➡ಪುಟ ೪

ರಾಹುಲ್ ಆರೋಪಗಳು
- ಈ ಮಸೂದೆ ಮಹಿಳಾ ಸಬಲೀಕರಣಕ್ಕಾಗಿ ಅಲ್ಲ, ದೇಶದ ಚುನಾವಣಾ ರಚನೆ ಬದಲಾಯಿಸಲು ಸರ್ಕಾರ ಯತ್ನಿಸುತ್ತಿದೆ
- ಇದು ರಾಷ್ಟ್ರವಿರೋಧಿ ಕ್ರಮ, ಮಹಿಳೆಯರ ಹೆಸರನ್ನು ಬಳಸಿಕೊಂಡು ನಿಜವಾದ ಉದ್ದೇಶವನ್ನು ಮರೆಮಾಚಲಾಗುತ್ತಿದೆ
- 2023ರ ಮಹಿಳಾ ಮೀಸಲು ಕಾಯ್ದೆ ತಕ್ಷಣ ಜಾರಿಗೆ ತರಬೇಕು, ಇದಕ್ಕೆ ವಿರೋಧ ಪಕ್ಷದ ಸಂಪೂರ್ಣ ಬೆಂಬಲವಿದೆ
- ಮಸೂದೆ ಒಬಿಸಿ, ಎಸ್‌ಸಿ-ಎಸ್‌ಟಿ, ಸಣ್ಣ ರಾಜ್ಯಗಳ ವಿರುದ್ಧವಾಗಿದೆ
- ಜಾತಿ ಗಣತಿ ತಪ್ಪಿಸಿ, ಒಬಿಸಿ ವರ್ಗಗಳ ಪ್ರಾತಿನಿಧ್ಯ ಕಡಿಮೆಗೆ ಯತ್ನ

ಖಾಸಗಿ ಬಸ್–ಕಾರ್ ನಡುವೆ ಭೀಕರ ಅಪಘಾತ | ಹೊತ್ತಿ ಉರಿದ ವಾಹನಗಳು
9 ಮಂದಿ ಸಜೀವ ದಹನ, ಓರ್ವ ಪಾರು

◆**ಯಾದಗಿರಿ:** ಖಾಸಗಿ ಬಸ್ ಹಾಗೂ ಕಾರಿನ ನಡುವೆ ನಡೆದ ಭೀಕರ ಅಪಘಾತದಲ್ಲಿ ಕಾರಿನಲ್ಲಿದ್ದ 9 ಮಂದಿ ಸಜೀವ ದಹನವಾದ ಹೃದಯ ವಿದ್ರಾವಕ ಘಟನೆ ಜಿಲ್ಲೆಯ ಸುರಪುರ ತಾಲೂಕಿನ ಶಾಂತಪುರ ಕ್ರಾಸ್ ಬಳಿಯ ಬೀದರ್-ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯಲ್ಲಿ ಶುಕ್ರವಾರ ನಡೆದಿದೆ. ಘಟನೆ ಇಡೀ ಜಿಲ್ಲೆಯನ್ನೇ ಬೆಚ್ಚಿಬೀಳಿಸಿದೆ. ರಾಯಚೂರು ಜಿಲ್ಲೆ ಮಾನ್ವಿ ತಾಲೂಕಿನ ಸಿರವಾರ ಪಟ್ಟಣದ ನಿವಾಸಿಗಳಾದ ಕೃಷ್ಣ ನಾಯಕ್(52), ಅನಂತ ಕಲಾ(45), ಶರಣಪ್ಪ(36), ನಿಸರ್ಗ(30), ಸಿದ್ದಾರ್ಥ(3), ಅದ್ವಿಕ್/ಶರಣಪ್ಪ(5) ಶ್ರೀನಿಧಿ(1.5 ವರ್ಷ), ಶಶಿಕಲಾ(30) ಹಾಗೂ ಚಂದನ್(8) ಮೃತ ದುರ್ದೈವಿಗಳಾಗಿದ್ದಾರೆ. ➡ಪುಟ ೪



ಕಾರಿನಲ್ಲಿದ್ದ 9 ಜನರ ಸಾವು
ಸಿರವಾರದಿಂದ ಸುರಪುರ ಪಟ್ಟಣದ ಪ್ರಸಿದ್ಧ ವೇಣುಗೋಪಾಲ ಸ್ವಾಮಿ ದೇವಸ್ಥಾನಕ್ಕೆ ತೆರಳಿ ವಾಪಸ್ ಊರಿಗೆ ಮರಳುವಾಗ ಈ ದುರ್ಘಟನೆ ಸಂಭವಿಸಿದೆ. ಘಟನೆಯಲ್ಲಿ ಕಾರು, ಖಾಸಗಿ ಬಸ್ ಕ್ಷಣಾರ್ಧದಲ್ಲಿ ಧಗಧಗನೆ ಉರಿದಿದ್ದು, ಕಾರಿನಲ್ಲಿದ್ದ 9 ಜನ ಸಜೀವ ದಹನವಾಗಿದ್ದಾರೆ. ವಿರಾಟ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬೆಂಕಿಯ ತೀವ್ರತೆಗೆ ಕೆಲವರ ತಲೆ ಬುರುಡೆಗಳು ಮಾತ್ರ ಕಾಣಿಸಿದ್ದು, ಇವು ಯಾರವು ಎಂಬುದು ಸಹ ಪತ್ತೆ ಹಚ್ಚುವುದು ಸವಾಲಿನ ಕೆಲಸವಾಗಿದೆ.

ಭಾರೀ ಆದಾಯ ಕೊರತೆ | ಗ್ರಾಹಕರಿಗೆ ಬರೆ
ವಿದ್ಯುತ್ ದರ ಏರಿಕೆ

◆**ಬೆಂಗಳೂರು:** ಬಿಸಿಲಿನ ತಾಪದ ನಡುವೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಬೆಸ್ಕಾಂ) ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಗ್ರಾಹಕರಿಗೆ ವಿದ್ಯುತ್ ಬೆಲೆ ಏರಿಕೆ ಬಿಸಿ ತಟ್ಟಲಿದೆ.

2024-25ನೇ ಸಾಲಿನ ಆರ್ಥಿಕ ವರ್ಷದಲ್ಲಿ ಉಂಟಾದ ಭಾರೀ ಆದಾಯ ಕೊರತೆಯನ್ನು ಸರಿದೂಗಿಸಲು, ಬೆಸ್ಕಾಂ ವ್ಯಾಪ್ತಿಯಲ್ಲಿ ಪ್ರತಿ ಯೂನಿಟ್‌ಗೆ 56 ಪೈಸೆಯಂತೆ, ಸೆಸ್ಕಾಂ ವ್ಯಾಪ್ತಿಯಲ್ಲಿ 15 ಪೈಸೆಯಂತೆ ಹೆಚ್ಚುವರಿ ಮೊತ್ತವನ್ನು ಗ್ರಾಹಕರಿಂದ ವಸೂಲಿ ಮಾಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ಅನುಮತಿ ನೀಡಿದೆ. ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಿದ್ದ ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ ಅರ್ಜಿಯನ್ನು ಪುರಸ್ಕರಿಸಿರುವ ಆಯೋಗವು, 2024-25ನೇ ಸಾಲಿನಲ್ಲಿ ವಿದ್ಯುತ್ ಮಾರಾಟದಿಂದ ಬೆಸ್ಕಾಂಗೆ ಒಟ್ಟು 2068.38 ಕೋಟಿ ರೂ. ಹಾಗೂ ಸೆಸ್ಕಾಂಗೆ 121.71 ಕೋಟಿ ರೂ. ಆದಾಯ ಕೊರತೆ ಉಂಟಾಗಿರುವುದನ್ನು ಮಾನ್ಯ ಮಾಡಿದೆ. ಈ ನಷ್ಟವನ್ನು ಭರಿಸಲು ಗ್ರಾಹಕರ ಮೇಲೆ ಟ್ರೂ ಅಪ್ ಹೆಸರಿನಲ್ಲಿ ಬೆಲೆ ಹೆಚ್ಚಳ ಮಾಡಲಾಗುತ್ತಿದೆ.

ಯಾವಾಗಿನಿಂದ ಜಾರಿಗೆ ಬರಲಿದೆ?: ಕೆಇಆರ್‌ಸಿ ಆದೇಶವು ಏಪ್ರಿಲ್ 17ರಂದು ಹೊರಬಿದ್ದಿದ್ದು, ಪರಿಷ್ಕೃತ ದರವು ಮೇ 1ರಿಂದ ಜಾರಿಗೆ ಬರಲಿದೆ. ಅಂದರೆ, ಮೇ ತಿಂಗಳಿನಲ್ಲಿ ಬರುವ ವಿದ್ಯುತ್ ಬಿಲ್‌ಗಳಲ್ಲಿ ಗ್ರಾಹಕರು ಬೆಸ್ಕಾಂ ವ್ಯಾಪ್ತಿಯಲ್ಲಿ 56 ಪೈಸೆ, ಸೆಸ್ಕಾಂ ವ್ಯಾಪ್ತಿಯಲ್ಲಿ 15 ಪೈಸೆ ಟ್ರೂ ಅಪ್ ದರವನ್ನು ಪಾವತಿಸಬೇಕಾಗುತ್ತದೆ. ಈ ವಸೂಲಾತಿಯು 2026-27ರ ಇಡೀ ಆರ್ಥಿಕ ವರ್ಷದಲ್ಲಿ ಅನ್ವಯವಾಗಲಿದ್ದು ಅಂದರೆ 2027-ಏಪ್ರಿಲ್ 30ರವರೆಗೆ ಮುಂದುವರಿಯಲಿದೆ. ➡ಪುಟ ೪



ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ಪರಿಷ್ಕೃತ ದರ ಪಟ್ಟಿ
- ಬೆಸ್ಕಾಂ-ಪ್ರತಿ ಯೂನಿಟ್‌ಗೆ 56 ಪೈಸೆ ಗ್ರಾಹಕರಿಂದ ಹೆಚ್ಚುವರಿ ಸಂಗ್ರಹ
- ಸೆಸ್ಕ್ -ಪ್ರತಿ ಯೂನಿಟ್‌ಗೆ 15 ಪೈಸೆ ಗ್ರಾಹಕರಿಂದ ಹೆಚ್ಚುವರಿ ಸಂಗ್ರಹ
- ಹೆಸ್ಕಾಂ-ಪ್ರತಿ ಯೂನಿಟ್‌ಗೆ 10 ಪೈಸೆ ಗ್ರಾಹಕರಿಗೆ ವಾಪಸ್
- ಜೆಸ್ಕಾಂ-ಪ್ರತಿ ಯೂನಿಟ್‌ಗೆ 10 ಪೈಸೆ ಗ್ರಾಹಕರಿಗೆ ವಾಪಸ್
- ಮೆಸ್ಕಾಂ-ಪ್ರತಿ ಯೂನಿಟ್‌ಗೆ 9 ಪೈಸೆ ಗ್ರಾಹಕರಿಗೆ ವಾಪಸ್

ಮುಂದಿನ 2 ವಾರಗಳ ಕಾಲ ದೇಶದಲ್ಲಿ ತೀವ್ರ ಬಿಸಿಗಾಳಿ
ವಿಶ್ವದಲ್ಲೇ ಅತಿ ಬಿಸಿ ದೇಶ ಭಾರತ?

◆**ಹೊಸದಿಲ್ಲಿ:** ಜಾಗತಿಕ ಬಿಸಿ ಏರುವಿಕೆ ಪರಿಣಾಮವಾಗಿ ಮುಂದಿನ ಎರಡು ವಾರಗಳಲ್ಲಿ ದೇಶದಲ್ಲಿ ದಾಖಲೆ ಬಿಸಿಗಾಳಿ ಬೀಸಲಿದ್ದು, ವಿಶ್ವದಲ್ಲೇ ಅತ್ಯಂತ ಬಿಸಿ ಪ್ರದೇಶವಾಗುವ ಎಲ್ಲಾ ಸಾಧ್ಯತೆಗಳಿವೆ ಎಂದು ಅಂದಾಜಿಸಲಾಗಿದೆ. ಹಲವು ರಾಜ್ಯಗಳಲ್ಲಿ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗುವ ನಿರೀಕ್ಷೆಯಿದ್ದು, ಕೆಲವು ಪ್ರದೇಶಗಳಲ್ಲಿ 48 ಡಿಗ್ರಿ ಸೆಲ್ಸಿಯಸ್ ಸಮೀಪಿಸುವ ಭೀತಿಯಿದೆ ಎಂದು ಭಾರತದ ಹವಾಮಾನ ಇಲಾಖೆ(ಐಎಂಡಿ) ಶುಕ್ರವಾರ ಹೇಳಿದೆ.

ಅತಿ ಉಷ್ಣತೆಗೆ ಕಾರಣವೇನು?: ಈ ತೀವ್ರ ಬಿಸಿಗಾಳಿಗೆ ಹಲವು ಹವಾಮಾನ ಸಂಬಂಧಿತ ಕಾರಣಗಳಿವೆ. ಮುಖ್ಯವಾಗಿ, ಒಂದು ಸ್ಥಿರವಾದ ಉನ್ನತ ಒತ್ತಡದ ವ್ಯವಸ್ಥೆ(ಹೈ ಪ್ರೆಶರ್ ಸಿಸ್ಟಮ್) ಭಾರತ ಉಪಖಂಡದ ಮೇಲೆ ಆವರಿಸಿಕೊಂಡಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ.

ಇದು ಬಿಸಿಯಾದ ಗಾಳಿಯನ್ನು ಹೊರಗೆ ಹೋಗದಂತೆ ಬಂಧಿಸುವ ಹೀಟ್ ಡೋಮ್ ಸ್ಥಿತಿಯನ್ನು ಉಂಟುಮಾಡುತ್ತದೆ. ಇದರ ಜತೆಗೆ ಪಶ್ಚಿಮದಿಂದ ಬರುವ ಒಣಗಾಳಿ ಹಾಗೂ ಮುಂಗಾರು ಮಳೆ ತಡವಾಗಿರುವುದು ಈ ಬಿಸಿಯನ್ನು ಮತ್ತಷ್ಟು ಹೆಚ್ಚಿಸಿದೆ. ಮೋಡಗಳ ಕೊರತೆಯಿಂದ ಸೂರ್ಯನ ಕಿರಣಗಳು ನೇರ ಭೂಮಿಯನ್ನು ತಾಕುತ್ತವೆ, ಇದರಿಂದ ಭೂಮಿ ಬೇಗ ಬಿಸಿ ಆಗುತ್ತದೆ. ➡ಪುಟ ೪

ದೇಶದಲ್ಲಿ ತಾಪಮಾನ 45-48 ಡಿಗ್ರಿ ಸೆಲ್ಸಿಯಸ್ ತಲುಪುವ ಭೀತಿ



ಕೃಷಿ ಉತ್ಪಾದನೆಗೆ ಹೊಡೆತ
ಈ ಉಷ್ಣತೆಯ ಅಲೆ ದೇಶದ ಆರ್ಥಿಕ ಮತ್ತು ಸಾಮಾಜಿಕ ಜೀವನದ ಮೇಲೂ ಪರಿಣಾಮ ಬೀರುತ್ತಿದೆ. ವಿಶೇಷವಾಗಿ ಗೋಧಿ ಮುಂತಾದ ಬೆಳೆಗಳು ಹೆಚ್ಚಿನ ತಾಪಮಾನಕ್ಕೆ ಸಂವೇದನಾಶೀಲ ಆಗಿರುವುದರಿಂದ ಕೃಷಿ ಉತ್ಪಾದನೆಗೆ ಹೊಡೆತ ಬೀಳಬಹುದು. ವಿದ್ಯುತ್ ಬಳಕೆ ಕೂಡ ಹೆಚ್ಚಾಗುವ ಸಾಧ್ಯತೆ ಇದೆ. ಏಕೆಂದರೆ ಜನರು ತಂಪು ಸಾಧನಗಳ ಮೇಲೆ ಹೆಚ್ಚಿನ ಅವಲಂಬನೆ ಇಡುತ್ತಾರೆ. ➡ಪುಟ ೪

ಕೃಷ್ಣನ ಮುಂದೆ ಮಾಂಸಾಹಾರ: ಹೋಟೆಲ್‌ವೊಂದರ ಉದ್ಘಟತನ

- ಕೇರಳದಲ್ಲಿ ವಿಷು ಪೋಸ್ಟರ್ ವಿವಾದ
- ಹೋಟೇಲ್ ಮಾಲೀಕ ಅರ್ಷದ್ ಸೇರಿ ಇಬ್ಬರ ಬಂಧನ
- ಧಾರ್ಮಿಕ ಭಾವನೆಗೆ ಧಕ್ಕೆ ಆರೋಪ
- ಪ್ರತಿಭಟನೆ ಭೀತಿ ಹಿನ್ನೆಲೆ ಪೊಲೀಸ್ ಮುನ್ನೆಚ್ಚರಿಕೆ
- ಉಪಾಹಾರ ಗೃಹ ಮಾಲೀಕರಿಂದ ಸಾರ್ವಜನಿಕ ಕ್ಷಮಾಪಣೆ

◆**ಆಲಪ್ಪುಳ(ಕೇರಳ):** ವಿಷು ಹಬ್ಬದ ಅಂಗವಾಗಿ ಒಂದು ಉಪಾಹಾರ ಗೃಹದ ಪ್ರಚಾರ ಪೋಸ್ಟರ್‌ನಲ್ಲಿ ಬಾಲಕೃಷ್ಣನನ್ನು ಮಾಂಸಾಹಾರ ತಿನಿಸಿನ ಮುಂದೆ ಕುಳಿತಿರುವಂತೆ ಚಿತ್ರಿಸಿ ಉದ್ಧಟತನ ಮೆರೆದಿದ್ದು, ಈ ಸಂಬಂಧ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.



ಪೊಲೀಸರ ಮಾಹಿತಿ ಪ್ರಕಾರ, ಕುಝಿ ಮಂಡಿ ಎಂಬ ಅರೇಬಿಕ್ ಮಾಂಸಾಹಾರ ಪದಾರ್ಥದ ಮುಂದೆ ಬಾಲಕೃಷ್ಣನ ಚಿತ್ರ ಹೊಂದಿದ ಪೋಸ್ಟರ್ ಅನ್ನು ವಾಟ್ಸಾಪ್ ಮೂಲಕ ಹಂಚಿಕೊಂಡ ಆರೋಪದಲ್ಲಿ ಚೇರ್ತಲಾ ಮನೋರಮಾ ಜಂಕ್ಷನ್ ಬಳಿಯ ಮೆಹರ್ ಮಂಡಿ ಆ್ಯಂಡ್ ಗ್ರಿಲ್ಸ್‌ನ ಮಾಲೀಕ ಅರ್ಷದ್‌ನನ್ನೂ ಬಂಧಿಸಲಾಗಿದೆ. ಈ ಕೃತ್ಯದಿಂದ ಹಿಂದೂ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ಉದ್ದೇಶ ಇದ್ದ ಆರೋಪದ ಹಿನ್ನೆಲೆಯಲ್ಲಿ ಬಂಧಿಸಲಾಗಿದೆ. ➡ಪುಟ ೪

ಖಡಕ್ ತೀರ್ಪುಗಳ ನ್ಯಾ. ಸಂತೋಷ್ ಗಜಾನನ ಭಟ್
ಭ್ರಷ್ಟ ಜನಪ್ರತಿನಿಧಿಗಳಿಗೆ ಸಿಂಹಸ್ವಪ್ನ

◆**ಬೆಂಗಳೂರು:** ಪ್ರಜ್ವಲ್ ರೇವಣ್ಣ, ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆ. ಪ್ರಕರಣ ಬೇರೆ ಬೇರೆಯಾದರೂ, ಅಪರಾಧಿ ಯಾರೇ ಆಗಿದ್ದರೂ, ಎಷ್ಟೇ ಪ್ರಭಾವಿಯಾಗಿದ್ದರೂ, ನ್ಯಾಯಬದ್ಧವಾಗಿ ಶಿಕ್ಷೆ ವಿಧಿಸಿದ್ದು ಹಿರಿಯ ನ್ಯಾಯಾಧೀಶ ಸಂತೋಷ್ ಗಜಾನನ ಭಟ್.

ಸಂತೋಷ್ ಗಜಾನನ ಭಟ್ ಬೆಂಗಳೂರಿನಲ್ಲಿ ಪ್ರಧಾನ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅದರಲ್ಲೂ ಜನಪ್ರತಿನಿಧಿಗಳು ಅಂದರೆ, ಹಾಲಿ ಸಂಸದ, ಶಾಸಕರು, ಮಾಜಿ ಸಂಸದ/ಶಾಸಕರುಗಳಿಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣಗಳನ್ನು ನಿರ್ವಹಿಸುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾಗಿದ್ದಾರೆ. ಲೈಂಗಿಕ ದೌರ್ಜನ್ಯ ಹಾಗೂ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಹೈ-ಪ್ರೊಫೈಲ್ ಪ್ರಕರಣಗಳನ್ನು ಇವರು ನಿಭಾಯಿಸಿದ್ದಾರೆ.

ಈ ಹಿಂದೆ ಇಡೀ ದೇಶದ ಗಮನ ಸೆಳೆದಿದ್ದ ಪ್ರಜ್ವಲ್ ರೇವಣ್ಣ ಪ್ರಕರಣದ ತೀರ್ಪಿನ ಬಳಿಕ ಮಾತನಾಡಿದ್ದ ಹಿರಿಯ ವಕೀಲರೊಬ್ಬರು, ರಾಜಕೀಯ ಹಸ್ತಕ್ಷೇಪ ಅಥವಾ ಹಣದ ಪ್ರಭಾವದಿಂದ ಸಂಪೂರ್ಣವಾಗಿ ಮುಕ್ತ ವಾದ ಪ್ರಕರಣವೊಂದನ್ನು ನಾವು ಕಣ್ಣಾರೆ ಕಂಡೆವು. ಖಂಡಿತ ವಾಗಿಯೂ ಈ ತೀರ್ಪು ಸಾರ್ವಜನಿಕ ವಲಯದಲ್ಲಿ ದೀರ್ಘ ಕಾಲ ಚರ್ಚೆಯಾಗಲಿದೆ ಎಂದು ಬಣ್ಣಿಸಿದ್ದರು. ➡ಪುಟ ೪



ಸಂಚಲನ ಮೂಡಿಸಿದ ತೀರ್ಪುಗಳು
ಕೇವಲ ಅತ್ಯಾಚಾರ, ಕೊಲೆ ಪ್ರಕರಣಗಳು ಮಾತ್ರವಲ್ಲ, ಭ್ರಷ್ಟ, ಅಪ್ರಮಾಣಿಕ ಜನಪ್ರತಿನಿಧಿಗಳ ಪಾಲಿಗೂ ಇವರು ಸಿಂಹಸ್ವಪ್ನರಾಗಿದ್ದಾರೆ. ಇವರ ನ್ಯಾಯಾಲಯದ ಮೆಟ್ಟಿಲೇರಿದ ಘಟಾನುಘಟಿ ರಾಜಕಾರಣಿಗಳು ಕೂಡ ನಡುಗಿದ್ದಾರೆ ಎಂದರೆ ತಪ್ಪಾಗಲ್ಲ. ಕೆ.ಆರ್. ನಗರದ ಮನೆ ಕೆಲಸದಾಕೆ ಮೇಲೆ ಪ್ರಜ್ವಲ್ ರೇವಣ್ಣ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಮಾತ್ರವಲ್ಲದೆ, ಅಕ್ರಮ ಗಣಿಗಾರಿಕೆ ಮತ್ತು ಭ್ರಷ್ಟಾಚಾರ ಪ್ರಕರಣಗಳಲ್ಲೂ ಇವರು ನೀಡಿದ ತೀರ್ಪುಗಳು ಸಂಚಲನ ಮೂಡಿಸಿವೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,65,000**(2,70,000) ಅಪರಂಜಿ ಚಿನ್ನ: **1,54,200**(1,55,570) ಆಭರಣ ಚಿನ್ನ: **1,41,350**(1,42,600) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **78,493**(504↑) ಎನ್‌ಎಸ್‌ಇ **24,353**(156↑)

$1 = ₹93.38

ವಿಶ್ವದಲ್ಲೇ ಅತಿ ಬಿಸಿ ದೇಶ ಭಾರತ?

ಪುಟ 1 ➔ ಮಳೆ ಅಭಾವದಿಂದ ಶೀತಲೀಕರಣದ ಯಾವುದೇ ಪ್ರಭಾವವಿಲ್ಲ. ಈ ಎಲ್ಲಾ ಕಾರಣಗಳು ಸೇರಿ ದೇಶದಾದ್ಯಂತ ತೀವ್ರ ಉಷ್ಣತೆಯ ಪರಿಸ್ಥಿತಿಯನ್ನು ನಿರ್ಮಿಸುತ್ತಿವೆ.

ಅತ್ಯಂತ ಬಾಧಿತ ಪ್ರದೇಶಗಳು: ರಾಜಸ್ಥಾನ, ಮಧ್ಯಪ್ರದೇಶ, ಉತ್ತರ ಪ್ರದೇಶ ಹಾಗೂ ದಿಲ್ಲಿ ರಾಜ್ಯಗಳು ಈ ಬಿಸಿಗಾಳಿಯಿಂದ ಹೆಚ್ಚು ತತ್ತರಿಸುತ್ತಿವೆ. ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಅರ್ಬನ್ ಹೀಟ್ ಐಲ್ಯಾಂಡ್ ಪರಿಣಾಮದಿಂದ ತಾಪಮಾನ ಇನ್ನಷ್ಟು ಹೆಚ್ಚಾಗುತ್ತದೆ. ಕಟ್ಟಡಗಳ ದಟ್ಟತೆ ಮತ್ತು ಹಸಿರು ಪ್ರದೇಶಗಳ ಕೊರತೆ ಇದರ ಪ್ರಮುಖ ಕಾರಣ. ಗ್ರಾಮೀಣ ಪ್ರದೇಶಗಳಲ್ಲಿಯೂ ಪರಿಸ್ಥಿತಿ ಗಂಭೀರವಾಗಿದೆ. ತೆರೆದ ಜಾಗಗಳು ದಿನಪೂರ್ತಿ ಬಿಸಿಯನ್ನು ಹೀರಿಕೊಂಡು ರಾತ್ರಿ ಹೊತ್ತಿಗೂ ಉಳಿಸಿಕೊಳ್ಳುತ್ತವೆ. ಇದರ ಪರಿಣಾಮವಾಗಿ ರಾತ್ರಿ ತಾಪಮಾನವೂ ಕಡಿಮೆಯಾಗದೇ ಜನರಿಗೆ ವಿಶ್ರಾಂತಿ ಸಿಗದ ಪರಿಸ್ಥಿತಿ ಉಂಟಾಗಿದೆ.

ಮುಂದಿನ ನಿರೀಕ್ಷೆಗಳು: ಈ ತೀವ್ರ ಪರಿಸ್ಥಿತಿಯ ಮಧ್ಯೆ ಕೆಲವು ನಿರಾಳತೆಯ ಲಕ್ಷಣಗಳೂ ಕಾಣಿಸುತ್ತಿವೆ. ಮುಂದಿನ ಎರಡು ವಾರಗಳ ಕೊನೆಗೆ ಮುಂಗಾರು ಪೂರ್ವ ಚಟುವಟಿಕೆಗಳು ಸ್ವಲ್ಪ ಮಟ್ಟಿಗೆ ಹೆಚ್ಚಾಗುವ ಸಾಧ್ಯತೆ ಇದೆ. ಕೆಲವು ಪ್ರದೇಶಗಳಲ್ಲಿ ಗುಡುಗು- ಮಿಂಚು ಸಹಿತ ಮಳೆಯಾಗಬಹುದು. ಇದರಿಂದ ತಾಪಮಾನ ಸ್ವಲ್ಪ ಇಳಿಕೆಯಾಗಬಹುದು. ಆದರೆ, ಅದುವರೆಗೆ, ಭಾರತವು ಈ ಋತುವಿನ ಅತ್ಯಂತ ಕಠಿಣ ಉಷ್ಣತೆಯ ಅವಧಿಯನ್ನು ಎದುರಿಸಬೇಕಾಗುತ್ತದೆ.


ಕೃಷಿ ಉತ್ಪಾದನೆಗೆ ಹೊಡೆತ

ಪುಟ 1 ➔ ಇದರಿಂದ ವಿದ್ಯುತ್ ಪೂರೈಕೆ ವ್ಯವಸ್ಥೆಯ ಮೇಲೆ ಒತ್ತಡ ಹೆಚ್ಚಾಗಿ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಬಹುದು. ಜನರು ತಮ್ಮ ದಿನಚರಿಯನ್ನು ಬದಲಾಯಿಸಿಕೊಂಡು, ಹೊರಾಂಗಣ ಚಟುವಟಿಕೆಗಳನ್ನು ಕಡಿಮೆ ಮಾಡುತ್ತಿದ್ದಾರೆ. ಕೆಲಸದ ಸಮಯದಲ್ಲೂ ಬದಲಾವಣೆಗಳನ್ನು ಮಾಡಲಾಗುತ್ತಿದೆ.

ಪರಿಣಾಮ ಮತ್ತು ಸಲಹೆ: ಈ ತೀವ್ರ ಬಿಸಿಯಿಂದ ಆರೋಗ್ಯ ಸಮಸ್ಯೆಗಳು ಹೆಚ್ಚಾಗುವ ಸಾಧ್ಯತೆ ಇದೆ. ಹೀಟ್ ಸ್ಟ್ರೋಕ್, ದೇಹದ ನೀರಿನ ಕೊರತೆ(ಡಿಹೈಡ್ರೇಷನ್) ಮತ್ತು ಇತರ ಗಂಭೀರ ಕಾಯಿಲೆಗಳು ಕಾಣಿಸಿಕೊಳ್ಳಬಹುದು. ಹವಾಮಾನ ಇಲಾಖೆ ಜನರಿಗೆ ಮಧ್ಯಾಹ್ನದ ಹೊತ್ತಿನಲ್ಲಿ ಹೊರಗೆ ಹೋಗುವುದನ್ನು ತಪ್ಪಿಸಲು ಸಲಹೆ ನೀಡಿದೆ.

ತಿಳಿ ಬಣ್ಣದ ಸಡಿಲ ಬಟ್ಟೆಗಳನ್ನು ಧರಿಸುವುದು, ಸಾಕಷ್ಟು ನೀರು ಕುಡಿಯುವುದು ಹಾಗೂ ತಂಪಾದ ಸ್ಥಳಗಳಲ್ಲಿ ಉಳಿಯುವುದು ಮುಖ್ಯ. ಮಕ್ಕಳಿಗೆ, ವೃದ್ಧರಿಗೆ ಹಾಗೂ ಹೊರಾಂಗಣದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವಿಶೇಷ ಜಾಗ್ರತೆ ಅಗತ್ಯ. ಆಸ್ಪತ್ರೆಗಳು ಕೂಡ ಬಿಸಿಗಾಳಿಯಿಂದ ಉಂಟಾಗುವ ರೋಗಿಗಳ ಸಂಖ್ಯೆಯಲ್ಲಿ ಏರಿಕೆಯನ್ನು ಎದುರಿಸಲು ಸಿದ್ಧವಾಗಿವೆ.

ರಾಮ ಬಾಣ



ತೃತೀಯ ಭಾಷೆಗೆ ಕೃಪಾಂಕ ನೀಡಲು ಮನವಿ

•**ಬೆಂಗಳೂರು:** ಎಸ್ಎಸ್ಎಲ್‌ಸಿ ಪರೀಕ್ಷೆ -1ರಲ್ಲಿ ತೃತೀಯ ಭಾಷೆ ಪರೀಕ್ಷೆಗೆ ನಾಲ್ಕು ದಿನಗಳಿರುವಾಗ ಸರ್ಕಾರ ಮೌಲ್ಯಮಾಪನದ ಬಗ್ಗೆ ಗೊಂದಲ ಸೃಷ್ಟಿಸಿರುವ ಹಿನ್ನೆಲೆಯಲ್ಲಿ ತೃತೀಯ ಭಾಷೆಗೆ 8 (ಶೇ.10) ಕೃಪಾಂಕ ನೀಡಬೇಕು ಎಂದು ಖಾಸಗಿ ಶಾಲೆಗಳ ಒಕ್ಕೂಟವು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದು ಆಗ್ರಹಿಸಿದೆ.

ಒಕ್ಕೂಟದಪ್ರಧಾನಕಾರ್ಯದರ್ಶಿ ಡಿ.ಶಶಿಕುಮಾರ್ ಅವರು ಪತ್ರ ಬರೆದಿದ್ದು, ವಿದ್ಯಾರ್ಥಿಗಳು ತೃತೀಯ ಭಾಷೆಗೆ ಅಂಕಗಳ ಬದಲಾಗಿ ಗ್ರೇಡ್ ನೀಡಲಾಗುತ್ತದೆ ಎಂಬ ಭಾವನೆಯಲ್ಲಿ ನಿರ್ಲಕ್ಷ್ಯಕ್ಕೆ ಕಾರಣವಾಗಿದೆ. ಈ ರೀತಿಯ ಅಸ್ಪಷ್ಟತೆ ಮತ್ತು ಅಂತಿಮ ಕ್ಷಣದಲ್ಲಿ ಉಂಟಾದ ಬದಲಾವಣೆಗಳು ವಿದ್ಯಾರ್ಥಿಗಳಲ್ಲಿ ಗೊಂದಲ ಕಾರಣವಾಗಿದ್ದು, ವಿದ್ಯಾರ್ಥಿಗಳು ಪರೀಕ್ಷೆಗೆ ಸರಿಯಾದ ಮಹತ್ವ ನೀಡದಂತಾಗಿದೆ. ಅಲ್ಲದೇ, ಪರೀಕ್ಷೆಗೆ ಮೊದಲು ಈ ಸಂಬಂಧ ಯಾವುದೇ ಸ್ಪಷ್ಟವಾದ ತಿದ್ದುಪಡಿ ಅಧಿಸೂಚನೆಗಳು ಅಥವಾ ಕಾನೂನುಬದ್ಧ ಆದೇಶಗಳನ್ನು ಇಲಾಖೆಯಿಂದ ಹೊರಡಿಸಲಾಗಿಲ್ಲ ಎಂದು ತಿಳಿಸಿದ್ದಾರೆ.

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

ಅತಿ ವಿಳಂಬವಾಗಿ ತೀರ್ಪು ಕೊಡುವ ಅಭ್ಯಾಸ ತೊಲಗಲಿ
- ಸುಪ್ರೀಂ ಕೋರ್ಟ್ ಅಭಿಮತ
- ತಡವಾಗಿ ಬಂದ ತೀರ್ಪು ಮರ ಸತ್ತ ಮೇಲೆ ನೀರು ಹಾಕಿದಂತೆ, ಮನುಷ್ಯನ ಜೀವ ಹೋದ ಮೇಲೆ ಅನ್ನ ದೊರಕಿದಂತೆ!

ದಿನ ಭವಿಷ್ಯ

ಮೇಷ
ಎಲ್ಲವೂ ಇಂದು ನಿಮಗೆ ಪೂರಕವಾಗಿ ಸಾಗುವುದು. ಈ ದಿನ ಸದುಪಯೋಗ ಮಾಡಿಕೊಳ್ಳಿ. ಪ್ರಮುಖ ಕಾರ್ಯ ಮುಗಿಸಿಕೊಳ್ಳಿ.

ವೃಷಭ
ಆರ್ಥಿಕ ಪ್ರಗತಿ ಸಾಧಾರಣ. ಆಧ್ಯಾತ್ಮದತ್ತ ಆಸಕ್ತಿ. ಸಣ್ಣ ವಿಷಯಗಳಿಗೆ ಹೆಚ್ಚು ಚಿಂತಿಸಬೇಡಿ. ದೃಢ ಮನಸ್ಸು ಪ್ರದರ್ಶಿಸಿ. ಕ್ರೀಡಾಳುಗಳಿಗೆ ಯಶಸ್ಸು.

ಮಿಥುನ
ನಿಮ್ಮ ಉದ್ದೇಶ ಇಂದು ಈಡೇರಲಿದೆ. ತುಸು ಹೆಚ್ಚಿನ ಪ್ರಯತ್ನ ಬೇಕಾದೀತು. ಮನೆಯವರ ಸಲಹೆಗೆ ಕಿವಿಗೊಡಿ, ತಿರಸ್ಕರಿಸಬೇಡಿ.

ಕಟಕ
ನಿಮ್ಮ ವ್ಯವಹಾರ ವಿಸ್ತರಣೆ ಇಂದಿನ ಗುರಿ ಆಗಿರಲಿ. ಅದರಲ್ಲಿ ಯಶ ಸಿಗಲಿದೆ. ಉದ್ಯೋಗ ಹುಡುಕಾಟ ಸಫಲ. ಚಿಕಿತ್ಸೆಗೆ ಹಣ ಖರ್ಚು.

ಸಿಂಹ
ವ್ಯಕ್ತಿಯೊಬ್ಬರ ಆಕರ್ಷಣೆ ಒಳಗಾಗುವ ಸಂಭವ. ಸ್ನೇಹಪ್ರಾಪ್ತಿ. ಉದ್ಯೋಗ ಅರಸುವವರಿಗೆ ಶುಭ ಸುದ್ದಿ. ಹೂಡಿಕೆಯಿಂದ ಲಾಭ.

ಕನ್ಯಾ
ಕೆಲಸದಲ್ಲಿ ಬದ್ಧತೆ ಇರಲಿ. ಪ್ರತಿಫಲ ತಾನಾಗಿ ಸಿಗುವುದು. ಆತ್ಮೀಯರ ಒಡನಾಟ ಉತ್ಸಾಹ ತುಂಬಲಿದೆ. ಖರೀದಿ ಖರ್ಚು ಹೆಚ್ಚಿಸಲಿದೆ.

ತುಲಾ
ಫಲಪ್ರದ ದಿನ. ಕೆಲಸದಲ್ಲಿ ಅಪೇಕ್ಷಿತ ಪ್ರಗತಿ. ಹೊಣೆಗಾರಿಕೆ ಸಮರ್ಥ ನಿರ್ವಹಣೆ. ಕುಟುಂಬಸ್ಥರ ಜತೆ ಸಮಯ ಕಳೆಯಿರಿ.

ವೃಶ್ಚಿಕ
ನಿಮಗೆ ಕೆಟ್ಟದ್ದನ್ನು ಬಯಸುವವರ ಒತ್ತಡಕ್ಕೆ ಮಣಿಯಬೇಡಿ. ಎದುರಿಸಿ ನಿಲ್ಲಿ. ಕೌಟುಂಬಿಕ ಬದುಕು ಏರುಪೇರು ಎದುರಿಸೀತು. ಸಮಚಿತ್ತವಿರಲಿ.

ಧನು
ನಿಮ್ಮ ಸುತ್ತಲಿನ ಜನರಲ್ಲಿ ಉತ್ಸಾಹ ತುಂಬುವ ಕಾರ್ಯ ನಿಮ್ಮಿಂದ ಆಗಲಿದೆ. ಹಿನ್ನಡೆಗೆ ಅಂಜಬೇಕಿಲ್ಲ. ಸೂಕ್ತ ಬೆಂಬಲ ಲಭ್ಯ.

ಮಕರ
ಹಣದ ವಿಚಾರದಲ್ಲಿ ನಿರ್ಲಕ್ಷ್ಯ ಬೇಡ. ನಷ್ಟ ಆದೀತು. ವೃತ್ತಿಯಲ್ಲಿ ಬಿಡುವಿಲ್ಲದ ಕೆಲಸ. ಆರೋಗ್ಯ ಕಡೆಗಣಿಸದಿರಿ. ಆಪ್ತ ಬಂಧು ಭೇಟಿ.

ಕುಂಭ
ದೈನಂದಿನ ಕಾರ್ಯ ಬೇಸರ ತರಬಹುದು. ಹೊಸತನಕ್ಕೆ ತುಡಿತ. ಆಪ್ತರ ಜತೆ ಪ್ರವಾಸ ಹೊರಡಿ. ಕೌಟುಂಬಿಕ ಸಮಸ್ಯೆ ಪರಿಹಾರದ ಸಂಕೇತ.

ಮೀನ
ಅಸಾಧ್ಯ ಕೆಲಸ ಇಂದು ಸಾಧಿಸುವಿರಿ. ಶ್ರಮ ಹೆಚ್ಚು ಬೇಕಾದೀತು. ಹಣದ ವ್ಯವಹಾರದಲ್ಲಿ ಲಾಭ. ಹಳೆ ಸ್ನೇಹಿತರ ಭೇಟಿ ಸಂಭವ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 8,0,3,5

ಒಮ್ಮೆಗೆ ಗರಿಷ್ಠ 150 ಜನರಿಗೆ ಮಾತ್ರ ಅವಕಾಶ: ಖಂಡ್ರೆ ಸ್ಪಷ್ಟನೆ
ಚಾರಣಕ್ಕೆ ನೇಚರ್ ಗೈಡ್

•**ಬೆಂಗಳೂರು:** ರಾಜ್ಯದಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲ ಅನುಮೋದಿತ ಚಾರಣ ಪಥಗಳಲ್ಲಿ ಇನ್ನು ಮುಂದೆ ಪ್ರಕೃತಿ ಮಾರ್ಗದರ್ಶಕ (ನೇಚರ್ ಗೈಡ್) ಇಲ್ಲದೆ ಚಾರಣಕ್ಕೆ ಅವಕಾಶ ಇರುವುದಿಲ್ಲ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

ಶುಕ್ರವಾರ ಚಾರಣಿಗರ ಸುರಕ್ಷತೆಗಾಗಿ ರೂಪಿಸಲಾಗಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್ಒಪಿ) ಬಿಡುಗಡೆಮಾಡಿ ಮಾತನಾಡಿದ ಅವರು, ಪ್ರತಿ 10 ಚಾರಣಿಗರಿಗೆ ಒಬ್ಬರು ಸ್ಥಳೀಯ ಪ್ರಕೃತಿ ಮಾರ್ಗದರ್ಶಕರಿರುತ್ತಾರೆ. ಎಲ್ಲ ಚಾರಣ ಪಥಗಳಲ್ಲಿ ಒಂದು ಬಾರಿಗೆ ಗರಿಷ್ಠ 150 ಜನರಿಗೆ ಮಾತ್ರ ಸೀಮಿತಗೊಳಿಸಲಾಗುವುದು ಎಂದರು.

ಚಾರಣಕ್ಕೆ ಬರುವವರು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಒಂದೊಮ್ಮೆ ಯಾವುದೇ ದಿನ ಒಬ್ಬರೇ ಚಾರಣಿಗರು ನೋಂದಾಯಿಸಿದ್ದರೂ ಗೈಡ್ ಸೌಲಭ್ಯ ಕಲ್ಪಿಸಲಾಗುವುದು, ಗೈಡ್ ಇಲ್ಲದೆ ಚಾರಣಕ್ಕೆ ಅವಕಾಶವಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಇತ್ತೀಚೆಗೆ ಕೊಡಗಿನ ತಡಿಯಾಂಡಮೋಳ್ ಬೆಟ್ಟದಲ್ಲಿ ಕೇರಳದಿಂದ ಚಾರಣಕ್ಕೆ ಬಂದಿದ್ದ ಮಹಿಳೆ ನಾಪತ್ತೆಯಾಗಿ ಕಾಡಿನಲ್ಲಿ 3 ದಿನ ಕಳೆಯುವಂತಾದ ಹಾಗೂ ಅರಣ್ಯ ವ್ಯಾಪ್ತಿಗೆ ಒಳಪಡದ ಚಿಕ್ಕಮಗಳೂರಿನ ಮಾಣಿಕ್ಯಧಾರಾ ಬಳಿ ನಾಪತ್ತೆಯಾಗಿ ಶವವಾಗಿ ಬಾಲಕಿ ಪತ್ತೆಯಾದ ಹಿನ್ನೆಲೆಯಲ್ಲಿ ಚಾರಣಿಗರ ಸುರಕ್ಷತೆಗಾಗಿ ಈ ಎಸ್ಒಪಿ ರೂಪಿಸಲು ಸೂಚಿಸಿದ್ದಾಗಿ ಸಚಿವರು ತಿಳಿಸಿದರು.

ಚಾರಣಿಗರ ಮೊಬೈಲ್‌ಗೆ ಟ್ರ್ಯಾಕಿಂಗ್ ಆ್ಯಪ್: ಅಲ್ಲದೇ ಪ್ರತಿಯೊಂದು ಚಾರಣಪಥದಲ್ಲೂ ನೇಚರ್ ಗೈಡ್‌ಗಳಿಗೆ ಜಿಪಿಎಸ್ ಅಳವಡಿಸಿದ ವಾಕಿಟಾಕಿಯನ್ನು ಕಡ್ಡಾಯವಾಗಿ ನೀಡಲಾಗುವುದು. ಅದೇ ರೀತಿ ಪ್ರತಿಯೊಬ್ಬ ಚಾರಣಿಗರ ಮೊಬೈಲ್‌ಗೆ ಚಾರಣಪಥದ ನಕ್ಷೆ ಸಹಿತ ಆ್ಯಪ್ ಅನ್ನು ಅಳವಡಿಸಲಾಗುವುದು. ಅಕಸ್ಮಾತ್ ಯಾರೇ ಚಾರಣಿಗರು ದಾರಿ ತಪ್ಪಿದರೆ ಅವರ ಶೋಧಕ್ಕೆ ಈ ಆ್ಯಪ್ ಸಹಕಾರಿಯಾಗಲಿದೆ. ಮೂಲ ನೆಲೆ(ಬೇಸ್‌ಕ್ಯಾಂಪ್)ಯಲ್ಲಿ ಚಾರಣಿಗರಿಗೆ ಸಂಕ್ಷಿಪ್ತ ಮಾಹಿತಿ ನೀಡಲಾಗುವುದು. ಹೆಚ್ಚು ಶಬ್ದ ಮಾಡುವ ಯಾವುದೇ ಸಾಧನಗಳಿಗೆ, ಹರಿತವಾದ ಲೋಹದ ವಸ್ತು, ಆಯುಧಗಳನ್ನು ತೆಗೆದುಕೊಂಡು ಹೋಗಲು ಮತ್ತು ಕ್ಯಾಂಪ್ ಫೈರ್‌ಗೆ ಚಾರಣ ಪಥದಲ್ಲಿ ಅವಕಾಶವಿರುವುದಿಲ್ಲ ಎಂದು ವಿವರಿಸಿದರು.



ನೇಚರ್ ಗೈಡ್‌ಗಳಿಗೆ ಹೊಣೆಗಾರಿಕೆ

ಇನ್ನು ಮುಂದೆ ಪ್ರಕೃತಿ ಮಾರ್ಗದರ್ಶಕರು (ಗೈಡ್) ಯಾವುದೇ ಚಾರಣಿಗ ತಮಗಿಂತ ಮುಂದೆ ಹೋಗಿಲ್ಲ ಹಾಗೂ ಹಿಂದೆ ಉಳಿದಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಬೇಸ್ ಕ್ಯಾಂಪ್, ವಿಶ್ರಾಂತಿ ತಾಣಗಳಲ್ಲಿ ಕಡ್ಡಾಯವಾಗಿ ಚಾರಣಿಗರ ಎಣಿಕೆ ಮಾಡಬೇಕು. ಪ್ರತಿ ಅರ್ಧ ತಾಸಿಗೊಮ್ಮೆ ತಮ್ಮ ವಾಕಿ ಟಾಕಿ ಮೂಲಕ ಬೇಸ್ ಕ್ಯಾಂಪ್‌ನೊಂದಿಗೆ ಸಂವಹನ ನಡೆಸಬೇಕು. ಚಾರಣಿಗರ ಜವಾಬ್ದಾರಿ ಹೊರುವಂತೆ ಅವರಿಗೆ ಹೊಣೆಗಾರಿಕೆ ನೀಡಲಾಗುವುದು. ಚಾರಣ ಆರಂಭವಾದ ಒಂದು ತಾಸಿನೊಗೆ ವಾಕಿಟಾಕಿ ಸಂವಹನ ಗೈಡ್ ಕಡೆಯಿಂದ ನಡೆಯದಿದ್ದರೆ ಬೇಸ್ ಕ್ಯಾಂಪ್ ಸಿಬ್ಬಂದಿಯೇ ಕರೆ ಮಾಡಿ ಖಚಿತಪಡಿಸಿಕೊಳ್ಳುತ್ತಾರೆ ಎಂದು ಸಚಿವ ಖಂಡ್ರೆ ತಿಳಿಸಿದರು. ಇನ್ನು ಮುಂದೆ ಪ್ರಕೃತಿ ಮಾರ್ಗದರ್ಶಕರು (ಗೈಡ್) ಯಾವುದೇ ಚಾರಣಿಗ ತಮಗಿಂತ ಮುಂದೆ ಹೋಗಿಲ್ಲ ಹಾಗೂ ಹಿಂದೆ ಉಳಿದಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಬೇಸ್ ಕ್ಯಾಂಪ್, ವಿಶ್ರಾಂತಿ ತಾಣಗಳಲ್ಲಿ ಕಡ್ಡಾಯವಾಗಿ ಚಾರಣಿಗರ ಎಣಿಕೆ ಮಾಡಬೇಕು. ಪ್ರತಿ ಅರ್ಧ ತಾಸಿಗೊಮ್ಮೆ ತಮ್ಮ ವಾಕಿ ಟಾಕಿ ಮೂಲಕ ಬೇಸ್ ಕ್ಯಾಂಪ್‌ನೊಂದಿಗೆ ಸಂವಹನ ನಡೆಸಬೇಕು. ಚಾರಣಿಗರ ಜವಾಬ್ದಾರಿ ಹೊರುವಂತೆ ಅವರಿಗೆ ಹೊಣೆಗಾರಿಕೆ ನೀಡಲಾಗುವುದು. ಚಾರಣ ಆರಂಭವಾದ ಒಂದು ತಾಸಿನೊಗೆ ವಾಕಿಟಾಕಿ ಸಂವಹನ ಗೈಡ್ ಕಡೆಯಿಂದ ನಡೆಯದಿದ್ದರೆ ಬೇಸ್ ಕ್ಯಾಂಪ್ ಸಿಬ್ಬಂದಿಯೇ ಕರೆ ಮಾಡಿ ಖಚಿತಪಡಿಸಿಕೊಳ್ಳುತ್ತಾರೆ ಎಂದು ಸಚಿವ ಖಂಡ್ರೆ ತಿಳಿಸಿದರು.

ಎಸ್ಒಪಿಯಲ್ಲಿ ಇನ್ನೂ ಏನಿದೆ?

- ಅಪ್ರಾಪ್ತ ವಯಸ್ಕರು ಚಾರಣಕ್ಕೆ ತೆರಳಲು ಅವರ ಪಾಲಕರ, ಪೋಷಕರ ಅನುಮತಿ ಪತ್ರ ಕಡ್ಡಾಯ
- ಹಿರಿಯ ನಾಗರಿಕರು ಚಾರಣ ಕೈಗೊಳ್ಳಲು ತಮ್ಮ ದೈಹಿಕ ಸಾಮರ್ಥ್ಯ ಮತ್ತು ಸದೃಢತೆಯ ಪ್ರಮಾಣ ಪತ್ರ ಒದಗಿಸಬೇಕು
- ಚಾರಣಿಗರಿಗೆ ಎದುರಾಗುವ ಆರೋಗ್ಯ ಸಮಸ್ಯೆಗೆ ಆರೈಕೆಗಾಗಿ ಗೈಡ್ ತಮ್ಮ ಜೊತೆ ಪ್ರಥಮ ಚಿಕಿತ್ಸಾ ಕಿಟ್ ಒಯ್ಯಬೇಕು
- ಫ್ಲಾಶ್ ಬಳಸಿ ಫೋಟೋ ತೆಗೆಯುವುದು, ಏಕ ಬಳಕೆ ಪ್ಲಾಸ್ಟಿಕ್ ಹಾಗೂ ಕ್ಯಾರಿ ಬ್ಯಾಗ್ ತೆಗೆದುಕೊಂಡು ಹೋಗುವುದು ನಿಷೇಧ
- ಯಾವುದೇ ತ್ಯಾಜ್ಯವನ್ನು ಚಾರಣಿಗರು ತಂದು ಬೇಸ್ ಕ್ಯಾಂಪ್‌ನಲ್ಲೇ ವಿಲೇವಾರಿ ಮಾಡಬೇಕು

ಭ್ರಷ್ಟ ಜನಪ್ರತಿನಿಧಿಗಳಿಗೆ ಸಿಂಹಸ್ವಪ್ನ

ಪುಟ 1 ➔ ಅಂತಹ ನ್ಯಾಯಸಮ್ಮತವಾದ ತೀರ್ಪನ್ನು ನೀಡಿದವರು ಇದೇ, ಸಂತೋಷ ಗಜಾನನ ಭಟ್.

14 ದಿನದಲ್ಲಿ ಅತ್ಯಾಚಾರಿಗೆ ಜೈಲು: ಸಂತೋಷ್ ಗಜಾನನ ಭಟ್ ಅವರು ಬೆಂಗಳೂರಿಗೆ ಬರುವ ಮುನ್ನ ಹಾಸನದಲ್ಲಿ ಜಿಲ್ಲಾ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದರು. ಅಲ್ಲಿ ಅವರು ಅತ್ಯಂತ ವೇಗವಾಗಿ ಮತ್ತು ಸಾಕ್ಷ್ಯಾಧಾರಗಳ ಆಧಾರದ ಮೇಲೆ ತೀರ್ಪುಗಳನ್ನು ನೀಡುವ ಮೂಲಕ ದೊಡ್ಡ ಹೆಸರು ಮಾಡಿದ್ದರು. ಹಾಸನದಲ್ಲಿ ಅತ್ಯಾಚಾರ ಪ್ರಕರಣವೊಂದರ ವಿಚಾರಣೆ ನಡೆಸಿದ್ದ ನ್ಯಾಯಾಧೀಶ ಭಟ್ ಅವರು, ಕೇವಲ 14 ದಿನಗಳ ವಿಚಾರಣೆಯಲ್ಲೇ ಆರೋಪಿಗೆ ಶಿಕ್ಷೆ ಪ್ರಕಟಿಸಿದ್ದರು.

ಭೈರತಿ ಬಸವರಾಜ್ ಪ್ರಕರಣ: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿದ್ದ ಕೆ.ಆರ್. ಪುರಂ ವಿಧಾನಸಭಾ ಕ್ಷೇತ್ರದ ಶಾಸಕ ಭೈರತಿ ಬಸವರಾಜ್ ಆರೋಪಿಯಾಗಿದ್ದಾರೆ.

ಸೂರಜ್ ರೇವಣ್ಣ ಪ್ರಕರಣ: ಲೈಂಗಿಕ ಕಿರುಕುಳದ ಆರೋಪದಲ್ಲಿ ಸುಮಾರು ಒಂದುತಿಂಗಳುಪರಪ್ಪನಅಗ್ರಹಾರಕೇಂದ್ರ ಕಾರಾಗೃಹದಲ್ಲಿದ್ದ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣಗೆಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಸೂರಜ್ ರೇವಣ್ಣ ಪ್ರಕರಣವನ್ನೂ ಇವರೇ ವಿಚಾರಣೆ ನಡೆಸುತ್ತಿದ್ದರು.

ಬಿಎಸ್‌ವೈ ವಿರುದ್ಧದ ಪೋಕ್ಸೋ ಪ್ರಕರಣ: ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ನಡೆಸಿದ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು, ಯಡಿಯೂರಪ್ಪ ಅವರಿಗೆ ವಿಧಿಸಲಾಗಿದ್ದ ಬಂಧನದ ಭೀತಿಯಿಂದ ತಾತ್ಕಾಲಿಕ ಸಮಾಧಾನ ನೀಡಿದ್ದರು.

ಸಂಚಲನ ಮೂಡಿಸಿದ ತೀರ್ಪುಗಳು



ಪುಟ 1 ➔ ರಾಜ್ಯದಲ್ಲಿ ಭಾರೀ ಬಿರುಗಾಳಿ ಎಬ್ಬಿಸಿದ ಮೈಸೂರು ಮುಡಾ ಪ್ರಕರಣದಲ್ಲೂ ಸಿಎಂ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ತನಿಖೆಗೆ ಆದೇಶಿಸಿದ್ದು ಇದೇ ಜನಪ್ರತಿನಿಧಿಗಳ ನ್ಯಾಯಾಲಯ. ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ನೀಡಿದ್ದ ಅನುಮತಿ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿತ್ತು. ಇದೇ ಆದೇಶದ ಆಧಾರದ ಮೇಲೆ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರು ಸಿಎಂ ವಿರುದ್ಧ ತನಿಖೆಗೆ ಆದೇಶಿಸಿದ್ದರು.

ಸರ್ಕಾರಕ್ಕೂ ಕ್ಲಾಸ್!

ಇನ್ನು ಕೋರ್ಟ್ ವ್ಯಾಪ್ತಿಯನ್ನು ಮೀರಿ ಸರ್ಕಾರ ಹಸ್ತಕ್ಷೇಪ ಮಾಡುವುದನ್ನು ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಎಂದಿಗೂ ಸಹಿಸಲ್ಲ. ಬಿಜೆಪಿ ಶಾಸಕ ಮುನಿರತ್ನ ಅವರ ಪ್ರಕರಣ. ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣ ಸೇರಿದಂತೆ ಮುನಿರತ್ನ ವಿರುದ್ಧದ ಪ್ರಕರಣಗಳ ತನಿಖೆಗಾಗಿ ರಾಜ್ಯ ಸರ್ಕಾರ ಎಸ್ಐಟಿ ರಚಿಸಿತ್ತು. ಅಕ್ಟೋಬರ್ 15ರಂದು ಮುನಿರತ್ನಗೆ ಜಾಮೀನು ನೀಡುವ ವೇಳೆ ಸರ್ಕಾರದ ಆ ಅಧಿಸೂಚನೆಯನ್ನು ನ್ಯಾಯಾಧೀಶರು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಕ್ರಿಮಿನಲ್ ಪ್ರಕರಣದಲ್ಲಿ ರಾಜ್ಯ ಸರ್ಕಾರವೂ ಒಂದು ಪಕ್ಷ. ಹಾಗಿದ್ದರೂ ಸರ್ಕಾರವು ತಟಸ್ಥತೆಯನ್ನು ಕಾಪಾಡಿಕೊಳ್ಳಬೇಕು. ತನಿಖೆಯ ಪ್ರತಿಯೊಂದು ಹೆಜ್ಜೆಯನ್ನೂ ಸರ್ಕಾರವೇ ಕಣ್ಗಾವಲು ಮಾಡುವುದರ ಮೂಲಕ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಕಸಿದುಕೊಳ್ಳುವಂತಿಲ್ಲ ಎಂದು ಅವರು ಖಡಕ್ ಆಗಿ ಹೇಳಿದರು.

ಕೃಷ್ಣನ ಮುಂದೆ ಮಾಂಸಾಹಾರ: ಹೋಟೆಲ್‌ವೊಂದರ ಉದ್ಧಟತನ

ಪುಟ 1 ➔ ಚೆರ್ತಾಲಾ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದಂತೆ, ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) ಕಲಂ 192(ಗಲಭೆಗೆ ಪ್ರಚೋದನೆ ನೀಡುವ ಉದ್ದೇಶದ ಕೃತ್ಯ) ಅನ್ವಯ ಪ್ರಕರಣ ದಾಖಲಿಸಲಾಗಿದೆ. ಇದೇ ವೇಳೆ, ಚೆರ್ತಾಲಾದಲ್ಲಿರುವ ಆ ಉಪಾಹಾರ ಗೃಹದ ವಿರುದ್ಧ ಹಿಂದೂ ಸಂಘಟನೆಯೊಂದು ಪ್ರತಿಭಟನೆ ನಡೆಸುವ ಸಾಧ್ಯತೆ ಇರುವ ಹಿನ್ನೆಲೆ, ಯಾವುದೇ ಅನಾಹುತ ಸಂಭವಿಸದಂತೆ ಪೊಲೀಸರು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದಾರೆ. ವಿವಾದ ಹೆಚ್ಚುತ್ತಿದ್ದಂತೆ, ಸಂಬಂಧಿತ ಉಪಾಹಾರ ಗೃಹದ ಮಾಲೀಕ ಸಾರ್ವಜನಿಕವಾಗಿ ಕ್ಷಮೆಯಾಚಿಸಿದ್ದಾನೆ. ಪೋಸ್ಟರ್ ತಯಾರಿಸುವ ಕೆಲಸವನ್ನು ಬೇರೆಯವರಿಗೆ ನೀಡಲಾಗಿದ್ದು, ಅವರ ನಿರ್ಲಕ್ಷ್ಯದಿಂದ ಇಂತಹ ವಿವಾದಾತ್ಮಕ ಚಿತ್ರ ರಚಿಸಲಾಗಿದೆ ಎಂದಿದ್ದಾನೆ.

ವಿದ್ಯುತ್ ದರ ಏರಿಕೆ

ಪುಟ 1 ➔ **ಕರಾವಳಿ-ಉತ್ತರ ಕರ್ನಾಟಕ ಗ್ರಾಹಕರು ನಿರಾಳ:** ಒಂದೆಡೆ ಬೆಸ್ಕಾಂ ಮತ್ತು ಸೆಸ್ಕ್ ಗ್ರಾಹಕರಿಗೆ ದರ ಏರಿಕೆಯ ಬಿಸಿ ತಟ್ಟಿದರೆ ಉತ್ತರ ಕರ್ನಾಟಕ ಮತ್ತು ಕರಾವಳಿ ಭಾಗದ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಹೆಸ್ಕಾಂ), ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಜೆಸ್ಕಾಂ), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಮೆಸ್ಕಾಂ) ವ್ಯಾಪ್ತಿಯ ಗ್ರಾಹಕರಿಗೆ ಸ್ವಲ್ಪ ಮಟ್ಟಿನ ಸಮಾಧಾನ ಸಿಕ್ಕಂತಾಗಿದೆ. ಈ ಭಾಗದ ಗ್ರಾಹಕರಿಗೆ ಯೂನಿಟ್‌ಗೆ ತಲಾ 9 ರಿಂದ 10 ಪೈಸೆಯಷ್ಟು ಹಣ ಬಿಲ್‌ನಲ್ಲಿ ಕಡಿತವಾಗಲಿದೆ.

ಅಧಿಕಾರ ಉಳಿಸಿಕೊಳ್ಳಲು ಮಾಡಿದ ಯತ್ನ

ಪುಟ 1 ➔ 2023ರ ಮಹಿಳಾ ಮೀಸಲು ಕಾಯ್ದೆಯನ್ನು ತಕ್ಷಣ ಜಾರಿಗೆ ತರಬೇಕು ಎಂದು ಅವರು ಒತ್ತಾಯಿಸಿ, ಅದಕ್ಕೆ ವಿರೋಧ ಪಕ್ಷದ ಸಂಪೂರ್ಣ ಬೆಂಬಲವಿದೆ ಎಂದು ಹೇಳಿದರು.

ಭಾರತದ ಇತಿಹಾಸದಲ್ಲಿ ಹಿಂದುಳಿದ ವರ್ಗಗಳು, ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಅನುಭವಿಸಿದ ಅನ್ಯಾಯವನ್ನು ಅವರು ಉಲ್ಲೇಖಿಸಿದರು. ಸರ್ಕಾರವು ಜಾತಿ ಗಣತಿಯನ್ನು ತಪ್ಪಿಸಲು ಯತ್ನಿಸುತ್ತಿದೆ ಮತ್ತು ಅದರ ಮೂಲಕ ಒಬಿಸಿ ವರ್ಗಗಳ ರಾಜಕೀಯ ಪ್ರಾತಿನಿಧ್ಯವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು. ಸಂವಿಧಾನದ ಮೇಲೆ ಮನುವಾದವನ್ನು ಹೇರಲು ಯತ್ನ ನಡೆಯುತ್ತಿದೆ ಎಂದು ಹೇಳಿದರು. ಈ ಮಸೂದೆ ಮೂಲಕ ಮುಂದಿನ 15 ವರ್ಷಗಳ ಕಾಲ ಜಾತಿ ಗಣತಿಯ ಪರಿಣಾಮ ರಾಜಕೀಯ ಪ್ರಾತಿನಿಧ್ಯದಲ್ಲಿ ಕಾಣಿಸದಂತೆ ಮಾಡುವ ಉದ್ದೇಶವಿದೆ ಎಂದು ರಾಹುಲ್ ಹೇಳಿದರು. ದೇಶದಲ್ಲಿ ರಾಜಕೀಯ ಬಲ ಕುಗ್ಗುತ್ತಿರುವ ಭಯದಿಂದ ಸರ್ಕಾರವು ಈ ಕ್ರಮಕ್ಕೆ ಮುಂದಾಗಿದೆ ಎಂದು ಆರೋಪಿಸಿದರು.

ಜಮ್ಮು-ಕಾಶ್ಮೀರ ಮತ್ತು ಅಸ್ಸಾಂನಲ್ಲಿ ನಡೆದ ಕ್ರಮಗಳನ್ನು ಉಲ್ಲೇಖಿಸಿ, ಈಗ ದೇಶದಾದ್ಯಂತ ಇದೇ ಮಾದರಿಯನ್ನು ಅನ್ವಯಿಸಲು ಯತ್ನಿಸಲಾಗುತ್ತಿದೆ. ದಕ್ಷಿಣ, ಈಶಾನ್ಯ ಮತ್ತು ಸಣ್ಣ ರಾಜ್ಯಗಳ ಪ್ರಾತಿನಿಧ್ಯವನ್ನು ಕಡಿಮೆ ಮಾಡುವ ಅಪಾಯವಿದೆ ಎಂದು ಎಚ್ಚರಿಸಿದರು. ಬಿಜೆಪಿ ವಿರುದ್ಧ ತೀವ್ರ ಟೀಕೆ ಮಾಡಿದ ರಾಹುಲ್ ಗಾಂಧಿ, ನೀವು ದೇಶವಲ್ಲ, ನೀವು ಸಶಸ್ತ್ರ ಪಡೆಗಳಲ್ಲ ಎಂದು ಹೇಳಿದರು. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ನೀಡಿದ ಕೆಲವು ಹೇಳಿಕೆಗಳಿಗೆ ಆಡಳಿತ ಪಕ್ಷದ ಸದಸ್ಯರಿಂದ ತೀವ್ರ ವಿರೋಧ ವ್ಯಕ್ತವಾಯಿತು ಮತ್ತು ಕ್ಷಮೆ ಕೇಳುವಂತೆ ಒತ್ತಾಯಿಸಲಾಯಿತು.

ತಮ್ಮ ಭಾಷಣದ ಆರಂಭದಲ್ಲಿ ಅವರು ತಮ್ಮ ಅಜ್ಜಿ ಇಂದಿರಾ ಗಾಂಧಿಯವರನ್ನು ನೆನಪಿಸಿಕೊಂಡರು, ಭಯವನ್ನು ಎದುರಿಸುವ ಧೈರ್ಯ ಇದ್ದಾಗ ಮಾತ್ರ ಸತ್ಯವನ್ನು ಅರಿತುಕೊಳ್ಳಬಹುದು ಎಂದು ''ಸತ್ಯಂ ಶಿವಂ ಸುಂದರಂ'' ಎಂಬ ಸಂದೇಶವನ್ನು ಅವರು ಉಲ್ಲೇಖಿಸಿದರು. ಭಾಷಣದ ಕೊನೆಯಲ್ಲಿ ಅವರು 16 ಎಂಬ ಸಂಖ್ಯೆಯನ್ನು ಉಲ್ಲೇಖಿಸಿ ಒಂದು ರಹಸ್ಯದಂತೆ ಹೇಳಿದರು, ಆದರೆ ಅದರ ಅರ್ಥವನ್ನು ವಿವರಿಸಲಿಲ್ಲ. ನಂತರ ಕಾಂಗ್ರೆಸ್ ನಾಯಕರು ಅದಕ್ಕೆ ವಿಭಿನ್ನ ಅರ್ಥಗಳನ್ನು ಸೂಚಿಸಿದರು. ಒಟ್ಟಾರೆ, ಈ ಮಸೂದೆ ಒಬಿಸಿ, ಎಸ್‌ಸಿ-ಎಸ್‌ಟಿ ಮತ್ತು ಸಣ್ಣ ರಾಜ್ಯಗಳ ವಿರುದ್ಧವಾಗಿದೆ ಎಂದು ರಾಹುಲ್ ಗಾಂಧಿ ಹೇಳಿದರು. ದೇಶವನ್ನು ವಿಭಜಿಸಲು ಯಾರಿಗೂ ಅವಕಾಶ ನೀಡುವುದಿಲ್ಲ ಎಂದು ಅವರು ದೃಢವಾಗಿ ಹೇಳಿದರು.

9 ಮಂದಿ ಸಜೀವ ದಹನ, ಓರ್ವ ಪಾರು

ಪುಟ 1 ➔ ಇನ್ನೂ ಘಟನೆಯಲ್ಲಿ ವಿರಾಟ್ ಎಂಬುವವರಿಗೆ ಗಂಭೀರ ಗಾಯಗಳಾಗಿದ್ದು, ರಾಯಚೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.

ಘಟನೆ ನಡೆಯುತ್ತಿದ್ದಂತೆಯೇ ಸ್ಥಳೀಯರು ಸುರಪುರ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾರೆ. ಸ್ಥಳಕ್ಕೆ ಸುರಪುರ ಶಾಸಕ ರಾಜಾ ವೇಣುಗೋಪಾಲ ನಾಯಕ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಘಟನೆಗೆ ಬಸ್ ಅಥವಾ ಕಾರಿನ ಚಾಲಕನ ನಿರ್ಲಕ್ಷ್ಯದಬಗ್ಗೆ ತನಿಖೆಯಿಂದ ತಿಳಿದು ಬರಬೇಕಿದೆ. ಬೆಂಗಳೂರಿನಿಂದ ಕಲಬುರಗಿ ಕಡೆಗೆ ಬರುತ್ತಿದ್ದ ಬಸ್ ಉರಿದು ಕರಕಲಾಗಿದ್ದು, ಅದೃಷ್ಟವಶಾತ್ ಒಬ್ಬ ಪ್ರಯಾಣಿಕನಿಗೂ ತೊಂದರೆಯಾಗಿಲ್ಲ. ಬಸ್ಸಿಗೆ ಬೆಂಕಿ ಹತ್ತಿಕೊಳ್ಳುತ್ತಿದ್ದಂತೆ ಎಲ್ಲ ಪ್ರಯಾಣಿಕರು ಕೆಳಗಡೆ ಇಳಿದು ಜೀವ ಉಳಿಸಿಕೊಂಡಿದ್ದಾರೆ.

> ಇಂಥ ದೊಡ್ಡ ದುರಂತದಿಂದ ನನ್ನ ಮನಸ್ಸಿಗೆ ತುಂಬಾ ನೋವಾಗಿದೆ. ಭಗವಂತ ಮೃತರ ಆತ್ಮಕ್ಕೆ ಶಾಂತಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಘಟನೆ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು.
> ■ ರಾಜಾ ವೇಣುಗೋಪಾಲ ನಾಯಕ, ಸುರಪುರ ಶಾಸಕ



> ಅಪಘಾತ ಹೇಗೆ ಸಂಭವಿಸಿದೆ ಎಂಬ ಬಗ್ಗೆ ಸಮಗ್ರ ಮಾಹಿತಿ ಕಲೆ ಹಾಕಲಾಗುತ್ತಿದ್ದು, ನಮ್ಮ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.
> ■ ಪೃಥ್ವಿಕ್ ಶಂಕರ್, ಎಸ್ಪಿ

ನಾರೀಶಕ್ತಿಗೆ ಸೋಲು

ಪುಟ 1 ➔ ಲೋಕಸಭೆಯಲ್ಲಿ ನಡೆದ ಚರ್ಚೆಯ ವೇಳೆ ಗೃಹ ಸಚಿವ ಅಮಿತ್ ಶಾ, 'ಇದು 2029ರೊಳಗೆ ಮಹಿಳಾ ಮೀಸಲು ಜಾರಿಗೆ ತರುವ ಐತಿಹಾಸಿಕ ಸುಧಾರಣೆ' ಎಂದು ಹೇಳಿ ವಿರೋಧ ಪಕ್ಷಗಳನ್ನು ಮನವೊಲಿಸಲು ಪ್ರಯತ್ನಿಸಿದರು.

ಅವರು ಪುನರ್ವಿಂಗಡಣೆ ಮೂಲಕ ಪ್ರತಿ ಮತಕ್ಕೂ ಸಮಾನ ಮೌಲ್ಯ ದೊರೆಯಲಿದೆ ಎಂದೂ ವಾದಿಸಿದರು. ಅಲ್ಲದೆ, ಪುನರ್ವಿಂಗಡಣೆ ವಿಚಾರದಲ್ಲಿ ಉತ್ತರ ಮತ್ತು ದಕ್ಷಿಣವೆಂದು ದೇಶವನ್ನು ಇಬ್ಭಾಗ ಮಾಡಬೇಡಿ ಎಂದು ಪ್ರತಿಪಕ್ಷಗಳಿಗೆ ತಿವಿದ ಅಮಿತ್ ಶಾ ಅವರು, ಶೇ.50ರ ಆಧಾರದಲ್ಲೇ ಲೋಕಸಭಾ ಕ್ಷೇತ್ರಗಳ ವಿಂಗಡಣೆ ಮಾಡಲಾಗುವುದು. ಇದರಿಂದ ಯಾವುದೇ ರಾಜ್ಯಗಳಿಗೂ ಮೋಸವಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು. ಈಗ ಇರುವ ಸದಸ್ಯರ ಸಂಖ್ಯೆ ಮೂಲಕ ಮಹಿಳಾ ಮಸೂದೆ ನೀಡುವುದು ಕಷ್ಟ.


ಹೀಗಾಗಿಯೇ, ಪುನರ್ವಿಂಗಡಣೆಗೆ ಮುಂದಾಗಿದ್ದೇವೆ ಎಂಬ ಸ್ಪಷ್ಟನೆಯನ್ನೂ ನೀಡಿದರು. ಆದರೆ, ಮಸೂದೆ ಸೋಲಿನ ಬಳಿಕ ಶಾ ತೀವ್ರ ಪ್ರತಿಕ್ರಿಯೆ ನೀಡಿದ್ದು, 'ಮಹಿಳೆಯರ ಹಕ್ಕನ್ನು ವಿರೋಧ ಪಕ್ಷಗಳು ತಡೆದಿವೆ. ಇದು ನಾರೀಶಕ್ತಿಗೆ ಅವಮಾನ' ಎಂದು ಆರೋಪಿಸಿದರು. ಮುಂದಿನ ಚುನಾವಣೆಗಳಲ್ಲಿ ಮಹಿಳೆಯರು ಇದಕ್ಕೆ ಉತ್ತರ ನೀಡಲಿದ್ದಾರೆ ಎಂದೂ ಎಚ್ಚರಿಸಿದರು. ಇನ್ನೊಂದೆಡೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸರ್ಕಾರದ ಉದ್ದೇಶಗಳನ್ನೇ ಪ್ರಶ್ನಿಸಿ, 'ಇದು ಮಹಿಳಾ ಮೀಸಲು ಮಸೂದೆ ಅಲ್ಲ; ದೇಶದ ಚುನಾವಣಾ ರಚನೆಯನ್ನು ಬದಲಿಸುವ ಪ್ರಯತ್ನ'' ಎಂದು ಟೀಕಿಸಿದರು. ಮಸೂದೆ ಮೂಲಕ ಜನಸಂಖ್ಯಾ ಆಧಾರಿತ ರಾಜಕೀಯ ಸಮೀಕರಣಗಳನ್ನು ಬದಲಿಸಲು ಯತ್ನಿಸಲಾಗಿದೆ ಎಂದು ಅವರು ಆರೋಪಿಸಿದರು. ಪ್ರಿಯಾಂಕಾ ಗಾಂಧಿ ಸಹ ಪ್ರತಿಕ್ರಿಯಿಸಿ, 'ಇದು ಮಹಿಳಾ ಹಕ್ಕಿನ ವಿಷಯವಲ್ಲ; ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಉಳಿಸುವ ಹೋರಾಟ' ಎಂದು ಹೇಳಿದ್ದು, ಮಸೂದೆ ಸೋಲನ್ನು ಪ್ರಜಾಸತ್ತಾತ್ಮಕ ಜಯ ಎಂದು ವರ್ಣಿಸಿದರು. ಲೋಕಸಭೆಯಲ್ಲಿ ಮತದಾನ ನಂತರ ತೀವ್ರ ಗದ್ದಲದ ನಡುವೆ ಪರಿಸ್ಥಿತಿ ಉದ್ವಿಗ್ನಗೊಂಡಿದ್ದು, ಬಿಜೆಪಿ ನಾಯಕರು ಸಂಸತ್ ಭವನದ ಹೊರಗೆ ಪ್ರತಿಭಟನೆ ನಡೆಸಿದರು.

> ಇದು ಮಹಿಳಾ ಮೀಸಲು ಮಸೂದೆ ಅಲ್ಲ; ಚುನಾವಣಾ ವ್ಯವಸ್ಥೆಯನ್ನು ಬದಲಿಸುವ ರಾಜಕೀಯ ಯತ್ನ. ನಾವು ಇದರ ವಿರುದ್ಧ ನಿಂತಿದ್ದೇವೆ.
> ■ ರಾಹುಲ್ ಗಾಂಧಿ, ಲೋಕಸಭೆ ವಿಪಕ್ಷ ನಾಯಕ

ಈ ಮಸೂದೆಗೆ ಕ್ಷೇತ್ರ ಮರುವಿಂಗಡಣೆ ಬಿಲ್ ಜೋಡಣೆ ಮಾಡಲಾಗಿದ್ದೇ ಪ್ರಮುಖ ರಾಜಕೀಯ ವಿವಾದಕ್ಕೆ ಕಾರಣವಾಗಿತ್ತು. ದಕ್ಷಿಣ ರಾಜ್ಯಗಳ ಪ್ರತಿನಿಧಿತ್ವ ಕುಗ್ಗುವ ಸಾಧ್ಯತೆ ಇದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದರೆ, ಸರ್ಕಾರ ಅದನ್ನು ಸಂಪೂರ್ಣವಾಗಿ ತಳ್ಳಿ ಹಾಕಿತ್ತು. ಮಸೂದೆ ವಿಫಲವಾದ ಹಿನ್ನೆಲೆಯಲ್ಲಿ, ಅದರೊಂದಿಗೆ ಸಂಪರ್ಕ ಹೊಂದಿದ್ದ ಡಿಲಿಮಿಟೇಶನ್ ಬಿಲ್‌ಗಳನ್ನೂ ಸರ್ಕಾರ ಹಿಂಪಡೆಯಲು ತೀರ್ಮಾನಿಸಿತು.

ಪ್ರತಿಪಕ್ಷಗಳ ವಿರುದ್ಧ ಅಮಿತ್ ಶಾ ಚಾಟಿ

•**ಹೊಸದಿಲ್ಲಿ:** ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳಾ ಮೀಸಲು ಮತ್ತು ಎಸ್‌ಸಿ-ಎಸ್‌ಟಿ ಸ್ಥಾನಗಳ ಹೆಚ್ಚಳಕ್ಕೆ ವಿರೋಧ ಪಕ್ಷಗಳು ಅಡ್ಡಿಯಾಗುತ್ತಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಲೋಕಸಭೆಯಲ್ಲಿ ಶುಕ್ರವಾರ ನೇರ ವಾಗ್ದಾಳಿ ನಡೆಸಿದರು.



ಲೋಕಸಭೆಯಲ್ಲಿ ಮಹಿಳಾ ಮೀಸಲು ಕಾಯ್ದೆ ತಿದ್ದುಪಡಿ ಹಾಗೂ ಕ್ಷೇತ್ರ ಪುನರ್ವಿಂಗಡಣೆ ಆಯೋಗ ರಚನೆಗೆ ಸಂಬಂಧಿಸಿದ ಮೂರು ಮಸೂದೆಗಳ ಚರ್ಚೆಗೆ ಉತ್ತರ ನೀಡಿದ ಶಾ, ಪ್ರತಿ ಕ್ಷೇತ್ರದಲ್ಲೂ ಮತದಾರರ ಸಂಖ್ಯೆಯನ್ನು ಸಮನಾಗಿಸುವುದೇ ಪುನರ್ವಿಂಗಡಣೆಯ ಉದ್ದೇಶ ಎಂದು ಹೇಳಿದರು. ಕೆಲವು ಕ್ಷೇತ್ರಗಳಲ್ಲಿ 40 ಲಕ್ಷಕ್ಕೂ ಹೆಚ್ಚು ಮತದಾರರು ಇದ್ದರೆ, ಇನ್ನೂ ಕೆಲವು ಕಡೆ ಕಡಿಮೆ ಮತದಾರರಿದ್ದಾರೆ ಎಂಬ ಅಸಮತೋಲನವನ್ನು ಸರಿಪಡಿಸಲಾಗುತ್ತದೆ ಎಂದರು. ಚರ್ಚೆಯಲ್ಲಿ ಸುಮಾರು 130 ಸಂಸದರು ಪಾಲ್ಗೊಂಡಿದ್ದರು. 'ಎಲ್ಲರೂ ಮಹಿಳಾ ಮೀಸಲು ಸಂವಿಧಾನ ತಿದ್ದುಪಡಿ ಕ್ರಮವನ್ನು ಸ್ವಾಗತಿಸುತ್ತೇವೆ ಎಂದರೂ, ಇಂಡಿ ಕೂಟ ಮೈತ್ರಿ ಸದಸ್ಯರು ಸ್ಪಷ್ಟವಾಗಿ ವಿರೋಧ ವ್ಯಕ್ತಪಡಿಸಿದ್ದಾರೆ' ಎಂದು ಶಾ ಆರೋಪಿಸಿದರು.

ಶಾಸಕ ವಿನಯ್ ಸೇರಿ 16 ಮಂದಿಗೆ ಜೀವಾವಧಿ ಸಜೆ

ಪುಟ 1 ➔ **17 ಅಪರಾಧಿಗಳಿಗೆ ಶಿಕ್ಷೆ ಘೋಷಣೆ:** 20ನೇ ಆರೋಪಿ ವಾಸುದೇವ ರಾಮ ನಿಲೇಕಣಿ ಮತ್ತು 21ನೇ ಆರೋಪಿ ಸೋಮಶೇಖರ್ ಬಸಪ್ಪ ನ್ಯಾಮಗೌಡ ಅವರಿಗೆ ಅನುಮಾನದ ಲಾಭ ನೀಡಿ ಅವರನ್ನು ಪ್ರಕರಣದಲ್ಲಿ ಖುಲಾಸೆಗೊಳಿಸಲಾಗಿದೆ. ಒಂದನೇ ಆರೋಪಿ ಬಸವರಾಜ್ ಮುತ್ತಗಿ ನೀಡಲಾಗಿದ್ದ ಕ್ಷಮಾದಾನವನ್ನು ಕಾಯಂಗೊಳಿಸಲಾಗಿದೆ. ಅಪ್ರೂವರ್ ಆಗಿ, ಪ್ರತಿಕೂಲ ಸಾಕ್ಷಿಯಾಗಿ ಬದಲಾಗಿದ್ದ 17ನೇ ಆರೋಪಿ ಶಿವಾನಂದ ಬಿರಾದಾರ್‌ನನ್ನು ಪ್ರಾಸಿಕ್ಯೂಷನ್‌ಗೆ ಒಳಪಡಿಸಲು ಅಗತ್ಯ ಅನುಮತಿ ಪಡೆಯಲು ಪ್ರಾಸಿಕ್ಯೂಷನ್‌ಗೆ ಅನುಮತಿಸಲಾಗಿದೆ. ಹೀಗಾಗಿ, ಒಟ್ಟು 21 ಆರೋಪಿಗಳ ಪೈಕಿ ನಾಲ್ವರನ್ನು ಹೊರತುಪಡಿಸಿ ಉಳಿದ 17 ಮಂದಿಗೆ ಶಿಕ್ಷೆಯಾಗಿದೆ.

ಪತಿ ಸಾವಿಗೆ ಸಿಕ್ಕ ನ್ಯಾಯ: ಮಲ್ಲಮ್ಮ

•**ಧಾರವಾಡ:** ನ್ಯಾಯಾಲಯದ ತೀರ್ಪಿಗೆ ತಲೆ ಬಾಗುವೆ. ನನ್ನ ಪತಿ ಇಲ್ಲದೆ 10 ವರ್ಷಗಳು ಅನುಭವಿಸಿದ ನೋವಿಗಿಂತ 10 ಪಟ್ಟು ನೋವು ಅಪರಾಧಿಗಳು ಜೈಲಿನಲ್ಲಿ ಅನುಭವಿಸುತ್ತಾರೆ ಎಂದು ಯೋಗೀಶಗೌಡರ ಪತ್ನಿ ಮಲ್ಲಮ್ಮ ಗೌಡರ ಹೇಳಿದರು. ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮಹಾಬಲೇಶ್ವರ ನನ್ನ ಮನೆಯಲ್ಲಿ ಇದ್ದು, ಉಂಡು ಪತಿಯ ಹತ್ಯೆ ಮಾಡಿದ್ದು ಬಹಳ ದುಃಖ ತರಿಸಿದೆ. ಕೋರ್ಟ್‌ನಿಂದ ನ್ಯಾಯ ಸಿಕ್ಕಿದೆ. ಯೋಗೀಶಗೌಡರ ನಮ್ಮನ್ನು ಅಗಲಿಲ್ಲ, ನೆನಪಲ್ಲಿ ಇದ್ದಾರೆ ಎಂದರು. ಅಪರಾಧಿಗಳ ಕುರಿತು ಏನೂ ಮಾತನಾಡಲ್ಲ ಎಂದರು.

ಪೊಲೀಸ್ ವಸತಿ ಗೃಹ, ವಿವಿಧ ಕಟ್ಟಡಗಳಿಗೆ ಸಚಿವ ಜಿ.ಪರಮೇಶ್ವರ ಶಂಕುಸ್ಥಾಪನೆ

ನ್ಯಾಯ ವ್ಯವಸ್ಥೆಯಲ್ಲಿ ಕರ್ನಾಟಕ ಪೊಲೀಸ್ ಮೊದಲ ಸ್ಥಾನ

ಬೆಳಗಾವಿ: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಮೂಲಕ ದೇಶದ ಕಾನೂನು ಪಾಲನೆ ಮತ್ತು ನ್ಯಾಯ ವ್ಯವಸ್ಥೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಮೊದಲ ಸ್ಥಾನದಲ್ಲಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಶುಕ್ರವಾರ ನಗರದ ಸಿಟಿ ಲೇನ್ ಪೊಲೀಸ್ ಕ್ವಾಟರ್ಸ್ ಆವರಣದಲ್ಲಿ ನಡೆದ ಬೆಳಗಾವಿ ನಗರ ಪೊಲೀಸ್ ಆಯುಕ್ತಾಲಯ ಮತ್ತು ಬೆಳಗಾವಿ ಜಿಲ್ಲಾ ಪೊಲೀಸ್ ಪೊಲೀಸ್ ಕಟ್ಟಡಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಕಾರ್ಯಕ್ರಮ ನೆರವೇರಿಸಿ ಅವರು ಮಾತನಾಡಿದರು.

ಪೊಲೀಸ್ ಇಲಾಖೆಯಿಂದ ಬೆಳಗಾವಿ ಭಾಗದಲ್ಲಿ ಐತಿಹಾಸಿಕ ಕಾರ್ಯಕ್ರಮಗಳನ್ನು ನೆರವೇರಿಸಲಾಗಿದೆ. 67.79 ಕೋಟಿ ವೆಚ್ಚದಲ್ಲಿ ಗೋಕಾಕ, ಕಿತ್ತೂರು, ಕುಲಗೋಡ, ಸಂಕೇಶ್ವರ, ಚಿಕ್ಕೋಡಿ ಸೇರಿದಂತೆ ಜಿಲ್ಲೆಯ ವಿವಿಧೆಡೆ ಉದ್ಘಾಟನೆ ಸೇರಿದಂತೆ ಅಡಿಗಲ್ಲು ಹಾಕಲಾಗುತ್ತಿದೆ. ಶಹಾಪುರನಲ್ಲಿ 3.92ವೆಚ್ಚದಲ್ಲಿ ವಸತಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಒಂದು ಮನೆ ನಿರ್ಮಾಣಕ್ಕೆ 38 ಲಕ್ಷ ವೆಚ್ಚವಾಗಲಿದೆ. ಕಳೆದ ವರ್ಷದ ಬಜೆಟ್‌ನಲ್ಲಿ 2000 ಕೋಟಿ ಕೊಟ್ಟಿದ್ದು, ಈ ವರ್ಷ ಬಜೆಟ್‌ನಲ್ಲಿ 350 ಕೋಟಿ ರೂ. ನೀಡಲಾಗಿದೆ ಎಂದರು.

ಕಾನೂನು ರಕ್ಷಣೆ ಮಾಡುವ ದೃಷ್ಟಿಯಿಂದ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ರಾಜ್ಯದ ಪೊಲೀಸ್ ಇಲಾಖೆಗೆ ಸೌಕರ್ಯ ಒದಗಿಸಲು ಸರ್ಕಾರ ಸ್ಪಂದಿಸಿದೆ. ಪೊಲೀಸ್ ಸಿಬ್ಬಂದಿಗಳಿಗೆ ಸಾಕಷ್ಟು ಯೋಜನೆಗಳನ್ನು ಕೊಡುಗೆಯಾಗಿ ನೀಡಲಾಗಿದೆ. ಪೊಲೀಸ್ ಸಿಬ್ಬಂದಿಗಳು ಜನ ಸೇವೆಗೆ ತಕ್ಷಣ ಸ್ಪಂದಿಸಬೇಕು ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಯುವಕರಿಗೆ ಮಾದಕ ವಸ್ತುಗಳ ಹಂಚಿಕೆ ಹಾಗೂ ಮಾದಕ ವಸ್ತುಗಳ ಸೇವನೆ ಪ್ರಕರಣಗಳು ಕಂಡು ಬರುತ್ತಿದ್ದು, ಇದಕ್ಕೆ ಕಡಿವಾಣ ಹಾಕಲು ಇಡೀ ರಾಜ್ಯದಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುತ್ತಿದ್ದು, ಮಾದಕ ವಸ್ತುಗಳ ಮಾರಾಟಗಾರರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸೈಬರ್ ಕ್ರೈಂ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ತಂತ್ರಜ್ಞಾನ ಬಳಕೆಯಿಂದ ಅಂತಹ ಪ್ರಕರಣಗಳನ್ನು ಪತ್ತೆಮಾಡಿ ವಂಚಕರಿಗೆ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಆಸಿಫ್ ಸೇಠ್, ನಗರ ಪೊಲೀಸ್ ಆಯುಕ್ತ, ಭೊರಸೆ ಭೂಷಣ್ ಗುಲಾಬರಾವ್ ಮಾತನಾಡಿದರು.

ಬೈಲಹೊಂಗಲ ಶಾಸಕ ಮಹಾಂತೇಶ ಕೌಜಲಗಿ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಉಪಾಧ್ಯಕ್ಷ ಸುನೀಲ ಹನುಮಣ್ಣವರ, ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಾನಕಿ ಕೆ.ಎಂ, ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಆರ್.ಹಿತೇಂದ್ರ, ಬೆಳಗಾವಿ ಉತ್ತರ ವಲಯದ ಪೊಲೀಸ್ ಮಹಾನಿರೀಕ್ಷಕರಾದ ಡಾ. ಚೇತನ್ ಸಿಂಗ್ ರಾಠೋಡ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್, ಜಿಪಂ ಸಿಇಓ ರಾಹುಲ್ ಶಿಂಧೆ, ಡಿಸಿಪಿ ನಾರಾಯಣ ಭರಮನಿ ಇದ್ದರು.



ಜನ ಸ್ನೇಹಿ ಪೊಲೀಸ್ ಆಡಳಿತ

ಬೆಳಗಾವಿ: ಪೊಲೀಸ್ ಠಾಣೆಗಳು ಹೈಟೆಕ್ ಆಗಿ ಕೆಲಸ ಮಾಡುತ್ತಿವೆ. ಜನ ಸ್ನೇಹಿ ಪೊಲೀಸ್ ಆಡಳಿತ ಉತ್ತಮವಾಗಿ ನಡೆಯುತ್ತಿವೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು. ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜನರ ಸೇವೆ ಮಾಡುವ ಪೊಲೀಸರು ಇರಬೇಕು. ನಿಮ್ಮ ಶಿಸ್ತು ಮೀರಿ ಹೊಂದಾಣಿಕೆ ಮಾಡಿಕೊಳ್ಳಿ ಎನ್ನುವುದಲ್ಲ. ಕಾನೂನು ಪ್ರಕಾರ ನಿಯಮ ಪಾಲನೆ ಮಾಡಬೇಕು ಎಂದು ಸೂಚನೆ ನೀಡುತ್ತಿರುತ್ತೇವೆ ಎಂದರು. ನಾನು ಮೂರನೇ ಬಾರಿ ಗೃಹ ಸಚಿವನಾಗಿ ಕೆಲಸ ಮಾಡುತ್ತಿದ್ದೇನೆ. ಪೊಲೀಸರಿಗೆ ಕೊಡಬೇಕಾದ ಸೌಲಭ್ಯ ಕೊಡುವುದರಲ್ಲಿ ಹಿಂದೆ ಇಲ್ಲ. ನಮ್ಮ ಕಾರ್ಯಕ್ರಮಕ್ಕೆ ಸಾಕಷ್ಟು ಬಾರಿ ಸಿಎಂ ಸಿದ್ದರಾಮಯ್ಯ ಅನುದಾನ ಕೊಟ್ಟಿದ್ದಾರೆ ಎಂದರು.

ಶಿಲಾನ್ಯಾಸ

ಬೆಳಗಾವಿ ನಗರ ಪೊಲೀಸ್ ಬೆಳಗಾವಿ ನಗರ ಸಿಟಿ ಲೇನ್‌ನಲ್ಲಿ ನೂತನವಾಗಿ ನಿರ್ಮಿಸಿರುವ 144 ಪೊಲೀಸ್ ವಸತಿಗೃಹ ಕಟ್ಟಡಗಳು ಹಾಗೂ ಶಿವಾಜಿ ನಗರದಲ್ಲಿ ನೂತನವಾಗಿ ಬ್ಯಾರಕ್ ಮತ್ತು ಡೈನಿಂಗ್, ಕಿಚನ್ ಬ್ಲಾಕ್ ಕಟ್ಟಡಗಳ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಲಾಯಿತು.

ಬಿರುಗಾಳಿಗೆ ಬಿದ್ದ ಖರ್ಗೆ ಬೃಹತ್ ಕಟೌಟ್: ತಪ್ಪಿದ ದುರಂತ

ಕಲಬುರಗಿ: ನಗರದಲ್ಲಿ ಅಕಾಲಿಕ ಮಳೆ ಹಾಗೂ ಬಿರುಗಾಳಿಯಿಂದ ಬೃಹತ್ ಕಟೌಟ್ ನೆಲಕ್ಕುರುಳಿದ ಘಟನೆ ಶುಕ್ರವಾರ ರಾತ್ರಿ ನಡೆದಿದೆ.

ನಗರದ ಬುದ್ಧ ವಿಹಾರದ ದ್ವಾರದ ಬಳಿ ಅಳವಡಿಸಲಾಗಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರ ಭಾವಚಿತ್ರ ಹೊಂದಿದ ಕಟೌಟ್, ಬಿರುಗಾಳಿಯ ತೀವ್ರತೆಗೆ ತತ್ತರಿಸಿ ಕೆಳಗೆ ಬಿದ್ದಿದೆ.



ಘಟನೆಯ ವೇಳೆ ರಸ್ತೆ ಮೂಲಕ ಸಾಗುತ್ತಿದ್ದ ಕಾರಿನ ಮೇಲೆ ಕಟೌಟ್ ಬಿದ್ದಿದ್ದು, ಚಾಲಕ ಪ್ರಾಣಾಪಾಯದಿಂದಪಾರಾಗಿದ್ದಾನೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸದೇ ಭಾರೀ ದುರಂತ ತಪ್ಪಿದೆ.

ಈ ಘಟನೆ ಸ್ಥಳೀಯರಲ್ಲಿ ಆತಂಕ ಮೂಡಿಸಿದ್ದು,ಸಾರ್ವಜನಿಕಸ್ಥಳಗಳಲ್ಲಿ ಅಳವಡಿಸುವ ಬೃಹತ್ ಕಟೌಟ್‌ಗಳ ಭದ್ರತೆ ಬಗ್ಗೆ ಪ್ರಶ್ನೆಗಳು ಉದ್ಭವಿಸಿವೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

ಉರುಳಿದ ಮರ: ಕಾರು ಜಖಂ



ಗಾದಿಗನೂರು: ಗ್ರಾಮದಲ್ಲಿ ಶುಕ್ರವಾರ ಸಂಜೆ ಅಕಾಲಿಕ ಮಳೆ ಮತ್ತು ಬಿರುಗಾಳಿಗೆ ಶ್ರೀ ಗಾದಿಲಿಂಗೇಶ್ವರ ದೇವಸ್ಥಾನದ ಹತ್ತಿರ ಮರ ಬಿದ್ದು ಮನೆಯ ಮುಂದೆ ನಿಲ್ಲಿಸಿದ್ದ ಕಾರಿನ ಮೇಲೆ ಮರ ಉರಳಿ ಬಿದ್ದ ಕಾರಣ ಕಾರು ಜಖಂಗೊಂಡಿದೆ.

ಶುಕ್ರವಾರ ಸಂಜೆ ಬಿರುಗಾಳಿ ಸಹಿತ ಮಳೆ ಬಿದ್ದ ಕಾರಣ ಊರಿನಲ್ಲಿ ವಿದ್ಯುತ್ ತಂತಿಗಳು ಕಟ್ಟಾಗಿ ಬಿದ್ದು ಕರೆಂಟ್ ಇಲ್ಲದೆ ಜನರು ಹೈರಾಣಾಗಿದ್ದ ಜೆಸ್ಕಾಂ ಅಧಿಕಾರಿಗಳು ಆದಷ್ಟು ಬೇಗ ಸರಿಪಡಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಧರೆಗುರುಳಿದ ಪ್ರವಚನದ ಟೆಂಟ್

ಕಲಬುರಗಿ: ಜಿಲ್ಲೆಯ ವಿವಿಧ ಭಾಗಗಳಲ್ಲಿ ಶುಕ್ರವಾರ ಮಧ್ಯಾಹ್ನ ತೀವ್ರ ಬಿಸಿಲು ಕಾಣಿಸಿಕೊಂಡಿದ್ದು, ಸುಮಾರು 45 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಸಂಜೆ ವೇಳೆಗೆ ಹವಾಮಾನದಲ್ಲಿ ಆಕಸ್ಮಿಕ ಬದಲಾವಣೆಕಂಡುಬಂದು,ಗುಡುಗು ಸಿಡಿಲು ಸಮೇತ ಮಳೆಯಾಯಿತು.

ಜಿಲ್ಲೆಯ ಕಾಳಗಿ ತಾಲೂಕಿನ ರಟಕಲ್ ಗ್ರಾಮದಲ್ಲಿರುವ ಶ್ರೀ ಮುರಗೇಂದ್ರ ಶಿವಯೋಗಿಗಳ ಮಠದಲ್ಲಿನಡೆಯುತ್ತಿದ್ದ ಪಟ್ಟಾಧಿಕಾರ ಮಹೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ ನಿರ್ಮಿಸಲಾಗಿದ್ದ ಭಾರೀ ಟೆಂಟ್ ಗಾಳಿಗೆ ತೂರಿ ಹೋಗಿ ಧರೆಗುರುಳಿತು. ಗುಡುಗು ಸಿಡಿಲು ಹಾಗೂ ಗಾಳಿ–ಮಳೆಯಿಂದ ಟೆಂಟ್ ಸಂಪೂರ್ಣವಾಗಿ ಹಾನಿಗೊಳಗಾಗಿ ಅಪಾರ ನಷ್ಟ ಉಂಟಾಗಿದೆ.

ಘಟನೆಯ ನಂತರ ನೀಲಕಂಠ ದೇವರು, ರೇವಣಸಿದ್ಧ ಶಿವಾಚಾರ್ಯರು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದರು. ಜೊತೆಗೆ ರೇವಣಸಿದ್ಧ ಶರಣರು, ಗೌರಿ ಗುಡ್ಡಾ ರಟಕಲ್ ಪ್ರದೇಶದಲ್ಲಿ ಹಾನಿಗೊಂಡ ಟೆಂಟ್‌ನ್ನು ವೀಕ್ಷಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ತಿಳಿದು ಬಂದಿದೆ. ಸ್ಥಳೀಯರು ಹಾಗೂ ಭಕ್ತರು ಸೇರಿ ಹಾನಿಗೊಳಗಾದ ವ್ಯವಸ್ಥೆ ತೆರವುಗೊಳಿಸುವ ಕಾರ್ಯದಲ್ಲಿ ತೊಡಗಿದ್ದಾರೆ.



ಕಿರುಸುದ್ದಿ

ಸರ್ಕಾರಿ ಗೌರವಗಳೊಂದಿಗೆ ಯೋಧನ ಅಂತ್ಯಕ್ರಿಯೆ



ಕುಂದಗೋಳ: ಪಶ್ಚಿಮ ಬಂಗಾಳದ ಕೋಲ್ಕತ್ತಾದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಅಕಾಲಿಕ ಮರಣ ಹೊಂದಿದ ತಾಲೂಕಿನ ಶಿರೂರ ಗ್ರಾಮದ ಹೆಮ್ಮೆಯ ಪುತ್ರ, ಗಡಿ ಭದ್ರತಾ ಪಡೆಯ (ಬಿಎಸ್ಎಫ್) ಯೋಧ ಸಂತೋಷ ರಾಮಪ್ಪ ಹೊನ್ನಪ್ಪನವರ (38) ಅವರ ಪಾರ್ಥಿವ ಶರೀರಕ್ಕೆ ಸಕಲ ಸರ್ಕಾರಿ ಹಾಗೂ ಮಿಲಿಟರಿ ಗೌರವಗಳೊಂದಿಗೆ ಶುಕ್ರವಾರ ರಾತ್ರಿ ಕುಟುಂಬದ ಜಮೀನಿನಲ್ಲಿ ಅಂತಿಮ ಸಂಸ್ಕಾರ ನೆರವೇರಿಸಲಾಯಿತು.

ಕಳೆದ 14 ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂತೋಷ ಅವರು ದೇಶದ ವಿವಿಧ ಗಡಿ ಭಾಗಗಳಲ್ಲಿ ಕಾರ್ಯನಿರ್ವಹಿಸಿದ್ದರು. ಕಳೆದ ಬುಧವಾರ ರಾತ್ರಿ ಅವರು ಕೋಲ್ಕತ್ತಾದಲ್ಲಿ ನಿಧನರಾಗಿದ್ದರು.

ಶುಕ್ರವಾರ ರಾತ್ರಿ ಯೋಧನ ಪಾರ್ಥಿವ ಶರೀರ ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಗ್ರಾಮಸ್ಥರು ಹೂಗಳಿಂದ ನಮಸ್ಕರಿಸಿ ಅಂತಿಮ ನಮನ ಸಲ್ಲಿಸಿದರು. ಮೆರವಣಿಗೆಯ ಉದ್ದಕ್ಕೂ ಮೃತರ ತಂದೆ ರಾಮಪ್ಪ, ತಾಯಿ ಮಂಜವ್ವ, ಪತ್ನಿ ಕಾವ್ಯಾ ಹಾಗೂ ಪುಟ್ಟ ಮಗಳ ಆಕ್ರಂದನ ಕಂಡುಬಂದಿತು.

ಅಂತ್ಯಕ್ರಿಯೆಯ ವೇಳೆ ಮಿಲಿಟರಿ ಸಂಪ್ರದಾಯದಂತೆ ಪಾರ್ಥಿವ ಶರೀರದ ಮೇಲಿದ್ದ ತ್ರಿವರ್ಣ ಧ್ವಜವನ್ನು ಗೌರವಪೂರ್ವಕವಾಗಿ ಮೃತ ಯೋಧನ ಪತ್ನಿ ಕಾವ್ಯಾ ಅವರಿಗೆ ಹಸ್ತಾಂತರಿಸಲಾಯಿತು. ಕಂದಾಯ ಇಲಾಖೆ ಹಾಗೂ ಪೊಲೀಸ್ ಇಲಾಖೆಯಿಂದ ಸಕಲ ಸರ್ಕಾರಿ ಗೌರವಗಳನ್ನು ಸಮರ್ಪಿಸಿ ವಿಧಿವಿಧಾನಗಳನ್ನು ಪೂರೈಸಲಾಯಿತು.

ಈ ಸಂದರ್ಭದಲ್ಲಿ ಕಲ್ಯಾಣಪುರ ಮಠದ ಅಭಿನವ ಬಸವಣ್ಣಜ್ಜನವರು, ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಷಣ್ಮುಕ ಶಿವಳ್ಳಿ, ಕೆಪಿಸಿಸಿ ಸದಸ್ಯ ಚಂದ್ರಶೇಖರ ಜುಟ್ಟಲ್, ಪೊಲೀಸ್ ಉಪಾಧೀಕ್ಷಕ ಶಿವಾನಂದ ಕಟವಿ, ತಹಶೀಲ್ದಾರ್ ರಾಜು ಮಾವರಕರ, ಸಿಪಿಐ ಸಮೀರ ಮುಲ್ಲಾ, ಪಶು ವೈದ್ಯಾಧಿಕಾರಿ ಡಾ.ಹನುಮಂತಗೌಡ ಪಾಟೀಲ, ಪಿಡಿಓ ಬಿ. ರಾಘವೇಂದ್ರ, ಗ್ರಾಮ ಲೆಕ್ಕಾಧಿಕಾರಿ ಈರಣ್ಣ ರಂಗಪ್ಪನವರ, ಮುಖಂಡರಾದ ರುದ್ರಣ್ಣ ಗಾಣಿಗೇರ, ಅಶೋಕ ಘೊರ್ಪಡೆ, ಗ್ರಾಮದ ಮಾಜಿ ಯೋಧರು, ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಿ ವೀರ ಯೋಧನಿಗೆ ಗೌರವ ಸಲ್ಲಿಸಿದರು.

ರಾಷ್ಟ್ರಮಟ್ಟದ ತಾಂತ್ರಿಕ ಮೇಳಕ್ಕೆ ಚಾಲನೆ

ಧಾರವಾಡ: ನಗರದಪ್ರತಿಷ್ಠಿತಶ್ರೀಧರ್ಮಸ್ಥಳಮಂಜುನಾಥೇಶ್ವರ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ 2026ನೇ ಸಾಲಿನ ತಾಂತ್ರಿಕ ಹಾಗೂ ಸಾಂಸ್ಕೃತಿಕ (ಇನ್ಸಿಗ್ನಿಯಾ) ರಾಷ್ಟ್ರಮಟ್ಟದ ತಾಂತ್ರಿಕ ಮೇಳಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ಚಾಲನೆ ನೀಡಿದ ಎಸ್‌ಡಿಎಂ ಸೊಸೈಟಿ ಕಾರ್ಯದರ್ಶಿ ವಿ.ಜೀವಂದರಕುಮಾರ್, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಪಠ್ಯದ ಜ್ಞಾನ ಸಾಲದು, ಇಂತಹ ತಾಂತ್ರಿಕ ಮೇಳಗಳು ವಿದ್ಯಾರ್ಥಿಗಳ ಪ್ರಾಯೋಗಿಕ ಜ್ಞಾನ ಹೆಚ್ಚಿಸುತ್ತವೆ ಎಂದು ಹೇಳಿದರು.

ತಂತ್ರಜ್ಞಾನ ನಿರಂತರ ಬದಲಾಗುತ್ತಿದ್ದು, ವಿದ್ಯಾರ್ಥಿಗಳು ಹೊಸ ಆವಿಷ್ಕಾರಗಳಿಗೆ ಒಗ್ಗಿಕೊಳ್ಳಬೇಕು. ಇನ್ಸಿಗ್ನಿಯಾ ಅಂತಹ ವೇದಿಕೆಗಳು ನವೀನ ಆಲೋಚನೆಗಳಿಗೆ ರೆಕ್ಕೆ ನೀಡುತ್ತಿದ್ದು, ಸಮಾಜದ ಸಮಸ್ಯೆಗಳಿಗೆ ತಾಂತ್ರಿಕ ಪರಿಹಾರ ಹುಡುಕುವಂತೆ ಹೇಳಿದರು.

ಇಂದಿನ ಕಾಲಘಟ್ಟದಲ್ಲಿ ಹೊಸತನಕ್ಕೆ ಹೆಚ್ಚಿನ ಬೆಲೆ ಇದೆ. ಹೀಗಾಗಿ ವಿದ್ಯಾರ್ಥಿಗಳು ನಾಲ್ಕು ಗೋಡೆಗಳ ನಡುವಿನ ಪಠ್ಯಕ್ರಮ ಕಲಿಕೆಯನ್ನು ಪ್ರಾಯೋಗಿಕವಾಗಿಯೂ ಅಳವಡಿಸಿಕೊಳ್ಳುವಲ್ಲಿ ಈ ಇನ್ಸಿಗ್ನಿಯಾ ವೇದಿಕೆ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಜಗತ್ತಿನಾದ್ಯಂತ ಭಾರತದ ಎಂಜಿನಿಯರ್‌ಗಳಿಗೆ ಬೇಡಿಕೆಯಿದೆ. ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಗೆಲ್ಲಲು ಸತತ ಅಧ್ಯಯನ ಮತ್ತು ಕೌಶಲಾಭಿವೃದ್ಧಿ ಅತ್ಯಗತ್ಯವಿದೆ. ಹೀಗಾಗಿ ಲಭಿಸುವ ಅವಕಾಶಗಳು ಸದ್ಬಳಸಿಕೊಂಡು, ಉನ್ನತ ಸಾಧನೆ ಮಾಡಲು ಹೇಳಿದರು.

ಎಷ್ಟೇ ದೊಡ್ಡ ತಂತ್ರಜ್ಞನಾದರೂ, ಮಾನವೀಯ ಮೌಲ್ಯಗಳು ಮತ್ತು ನೈತಿಕತೆಯನ್ನು ಮರೆಯಬಾರದು. ತಂತ್ರಜ್ಞಾನವು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಪ್ರಯೋಜನಕಾರಿಯಾಗಬೇಕು ಎಂದು ವಿ.ಜೀವಂದರಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.



ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ಸಂಸ್ಥೆ ವಿದ್ಯಾರ್ಥಿಗಳಿಗೆ ಉತ್ತಮ ಮೂಲಸೌಕರ್ಯ ಮತ್ತು ತಾಂತ್ರಿಕ ವೇದಿಕೆ ಒದಗಿಸುತ್ತಿದೆ. ಇದನ್ನು ಸದ್ಬಳಸಿಕೊಂಡು ಶಿಸ್ತಿನಿಂದ ಮುನ್ನಡೆಯಲು ಪ್ರಾಚಾರ್ಯ ಡಾ.ರಮೇಶ ಚಕ್ರಸಾಲಿ ಹೇಳಿದರು.

ಮೇಳದಲ್ಲಿ ಆಟೋ ಎಕ್ಸಪೋದಲ್ಲಿ ವೈವಿಧ್ಯಮಯ ವಾಹನಗಳ ಪ್ರದರ್ಶನ ಗಮನ ಸೆಳೆಯಿತು. ವಿಭಿನ್ನ ಶೈಲಿಯ ಮತ್ತು ಕಾರ್ಯಕ್ಷಮತೆ ಹೊಂದಿದ ಮೋಟಾರ್ ಸೈಕ್‌ಗಳು, ವಿಂಟೇಜ್ ವಾಹನಗಳು, ಸಮಕಾಲೀನ ಕಾರುಗಳು, ಅತ್ಯಾಧುನಿಕ ಎಲೆಕ್ಟ್ರಿಕ್ ಮತ್ತು ಹೈಬ್ರಿಡ್ ವಾಹನಗಳು ಆಕರ್ಷಿಸಿದವು. ಅಲ್ಲದೇ, ಇದು ಆಟೋ ಮೋಟಿವ್ ವಿನ್ಯಾಸಗಳ ಮತ್ತು ಭವಿಷ್ಯದ ಆವಿಷ್ಕಾರಗಳ ನೋಟ ಒದಗಿಸಿತು. ವಿವಿಧ ಎಂಜಿನಿಯರಿಂಗ್ ವಿಭಾಗಗಳ ವಿದ್ಯಾರ್ಥಿಗಳು ಇತ್ತೀಚಿನ ಬೆಳವಣಿಗೆಗಳ ಕುರಿತು ಪ್ರಬಂಧ ಮಂಡಿಸಿದರು. ಇನ್ಸಿಗ್ನಿಯಾ ಸಂಚಾಲಕ ಡಾ. ಸತೀಶ ಕೆ.ಎ.,ಪ್ರೊ. ಜೆ.ವಿ.ವಡವಿ ಅನೇಕರು ಇದ್ದರು. ಪ್ರೊ.ಇಂದಿರಾ ಉಮರ್ಜಿ ನಿರೂಪಿಸಿ, ವಂದಿಸಿದರು.

20 ಕೋಟಿ ವೆಚ್ಚದಲ್ಲಿ ಸಾರಿಗೆ ನಿಗಮ ಕಟ್ಟಡ: ಖರ್ಗೆ

ಕಲಬುರಗಿ: ಕಲಬುರಗಿಯಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನೂತನ ಕೇಂದ್ರ ಕಚೇರಿಯ ಆಡಳಿತ ಕಟ್ಟಡವನ್ನು 20ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸುವ ಕಾಮಗಾರಿಗೆ ಸಚಿವ ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು,ಈಗ ಕಾರ್ಯ ನಿರ್ವಹಿಸುತ್ತಿರುವ ಕಟ್ಟಡ 58 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದು, ಈಗ ಶಿಥಿಲಗೊಂಡಿರುವುದರಿಂದ ನೂತನ ಆಡಳಿತ ಕಚೇರಿಯನ್ನು ನಿರ್ಮಾಣ ಮಾಡಲು ಸಂಪುಟ ನಿರ್ಧರಿಸಿದೆ. ಉದ್ದೇಶಿತ ಕಟ್ಟಡವು ವಾಣಿಜ್ಯ ಸಂಕೀರ್ಣ ಹೊಂದಲಿದೆ ಎಂದು ಹೇಳಿದ್ದಾರೆ.

ಇನ್ನೂ ಯಾದಗಿರಿ ತಾಲೂಕು ಮತ್ತು ಜಿಲ್ಲೆಯಲ್ಲಿರುವ ಹತ್ತಿಕುಣಿ ಕ್ಲಸ್ಟರ್ ಯೋಜನೆಯ 72 ಕೋಟಿ ರೂಪಾಯಿ ಮೊತ್ತದ ಕಾಮಗಾರಿಯ ವಿನ್ಯಾಸ ವರದಿಗೂ ಸಹ ಸಚಿವ ಸಂಪುಟ ಸಭೆಯು ಆಡಳಿತಾತ್ಮಕ ಅನುಮೋದನೆ ನೀಡಿದೆ.

14 ಕಿಲೋ ಮೀಟರ್ ಉದ್ದದ ಹತ್ತಿಕುಣಿ ಜಲಾಶಯ ಯೋಜನೆಯ ಎಡದಂಡೆ ಕಾಲುವೆಯನ್ನು 1973ರಲ್ಲಿ ನಿರ್ಮಿಸಲಾಯಿತು. ಇದು ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕಿನ ಹತ್ತಿಕುಣಿ, ಯಡ್ಡಳ್ಳಿ, ಹೊನಗೇರಾ, ಬಂಡಹಳ್ಳಿ, ದಸ್ತರಾಭಾದ ಮತ್ತು ಮಂಡರಗಿಯ ಬರಪೀಡಿತ ಗ್ರಾಮಗಳಿಗೆ ಸೇರಿದ 5300 ಎಕರೆ ಕೃಷಿ ಯೋಗ್ಯ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸುವ ಉದ್ದೇಶದಿಂದ ನಿರ್ಮಿಸಲಾಯಿತು.

ಕಳೆದ 53 ವರ್ಷಗಳಿಂದ ಈ ಕಾಲುವೆಯ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳದೇ ಇರುವುದರಿಂದ ಕಾಲುವೆಯಲ್ಲಿ ನೀರಿನ ಹರವಿನ ಪ್ರಮಾಣ ಕುಸಿದಿರುವುದರಂದ ಹಾಗೂ ಅಲಬೂರು, ಬಾದರ್ಲಿ, ಗಿಣಿವಾರ, ಹರತನೂರು, ಮತ್ತು ವೆಂಗಲಾಪುರ ಗ್ರಾಮಗಳ ಕೊನೆಯ ರೈತರ ಭೂಮಿಗೂ ನೀರು ದೊರೆಯುವಂತಾಗಲು ಶಿಥಿಲಾವಸ್ಥೆಯಲ್ಲಿರುವ ಹತ್ತಿಕುಣಿ ಜಲಾಶಯ ಕಾಲುವೆಯ ದುರಸ್ತಿ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಕಬ್ಬು ಬೇಸಾಯದಲ್ಲಿ ಎಐ ತಂತ್ರಜ್ಞಾನ ಜಾರಿಗೆ ಬರಲಿ

ಬೆಳಗಾವಿ: ಕಳೆದ ಎರಡು ವರ್ಷಗಳಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಐದು ಸಾವಿರಕ್ಕೂ ಹೆಚ್ಚು ರೈತರು ಕೃತಕ ಬುದ್ಧಿಯನ್ನು ಬಳಸಿಕೊಂಡು ಎಐ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕಬ್ಬು ಬೇಸಾಯ ಮಾಡುತ್ತಿರುವ ಕಾರಣ ಪ್ರತಿ ಎಕರೆಗೆ 50ರಷ್ಟು ಹೆಚ್ಚು ಇಳುವರಿ ಪಡೆಯುತ್ತಿದ್ದು, ಬೇಸಾಯದ ಖರ್ಚು ಕೂಡ ಕಡಿಮೆಯಾಗಿದೆ. ಇದರಿಂದ ರೈತರಿಗೆ ಹೆಚ್ಚು ಲಾಭ ಬರುತ್ತಿದೆ ಎಂದು ರೈತ ಸಂಘಟನೆಯ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ ಹೇಳಿದರು.



ಶುಕ್ರವಾರ ಬೆಳಗಾವಿ ನಗರದ ಸರ್ಕಿಟ್ ಹೌಟ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಕದ ರಾಜ್ಯ ಮಹಾರಾಷ್ಟ್ರದಲ್ಲಿ ಎಐ ಮಾದರಿಯ ತಂತ್ರಜ್ಞಾನ ಅಳವಡಿಸಿಕೊಳ್ಳುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ 25,000 ಖರ್ಚು ಬರುತ್ತದೆ. ಈ ತಂತ್ರಗಾರಿಕೆಗೆ ಮಹಾರಾಷ್ಟ್ರ ರಾಜ್ಯ ಸರ್ಕಾರ 18000 ಸಹಾಯಧನ ನೀಡುತ್ತಿದ್ದು, ರೈತರಿಗೆ ಅನಕೂಲ ಮಾಡಿಕೊಡುತ್ತಿದೆ. ಉಳಿದ 7 ಸಾವಿರ ರೂಗಳನ್ನು ಆಯಾ ಭಾಗದ ಸಕ್ಕರೆ ಕಾರ್ಖಾನೆ ಭರಿಸುತ್ತಿದೆ. ಇದೇ ಮಾದರಿಯಲ್ಲಿ ರಾಜ್ಯದಲ್ಲಿಯೂ ಕರ್ನಾಟಕ ಸರ್ಕಾರ ಮಹಾರಾಷ್ಟ್ರದ ಮಾದರಿಯನ್ನು ಜಾರಿಗೆ ತರಬೇಕೆಂದು ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷ ಕುರುಬೂರ ಶಾಂತಕುಮಾರ ಸರ್ಕಾರಕ್ಕೆ ಒತ್ತಾಯಿಸಿದರು.

ಮಹಾರಾಷ್ಟ್ರದಲ್ಲಿನ ಕಬ್ಬು ಬೆಳೆಯುವ ತಂತ್ರಗಾರಿಕೆಯ ಬಗ್ಗೆ ಅಧ್ಯಯನ ನಡೆಸಲು ಮಹಾರಾಷ್ಟ್ರದ ಬಾರಮತಿ ಕೃಷಿ ವಿಜ್ಞಾನ ಕೇಂದ್ರಕ್ಕೆ ನಮ್ಮ ರಾಜ್ಯ ರೈತ ಸಂಘಟನೆಯ ವತಿಯಿಂದ 16 ರೈತರತಂಡವು ಎಐತಂತ್ರಗಾರಿಕೆಯ ಅಧ್ಯಯನದ ಬಗ್ಗೆ ಮಾಹಿತಿ ಪಡೆದುಕೊಂಡು ಬಂದಿದ್ದಾರೆ. ಅಲ್ಲಿನ ನೂತನ ತಂತ್ರಗಾರಿಕೆಯಿಂದ ಕರ್ನಾಟಕ ರಾಜ್ಯದಲ್ಲಿ ಎಲ್ಲ ರೈತರು ಉತ್ತಮವಾದ ಕಬ್ಬಿನ ಬೆಳೆ ಬೆಳೆಯುವುದಕ್ಕೆ ಅನಕೂಲವಾಗಲಿದೆ ಎಂದು ಹೇಳಿದರು.

ಈ ವೇಳೆ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ್ ಬೆಳಗಾಂಕರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಮೇಶ್ ಹಿರೇಮಠ, ಎಸ್.ಬಿ.ಸಿದ್ನಾಳ್, ರಾಜ್ಯ ಉಪಾಧ್ಯಕ್ಷ ಎನ್.ಎಚ್. ದೇವಕುಮಾರ್, ರಾಜ್ಯ ಸಂಘಟನಾ ಕಾರ್ಯದರ್ಶಿ ಹತ್ತಳ್ಳಿ ದೇವರಾಜ್, ಧಾರವಾಡ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರಶುರಾಮ್ ಎತ್ತಿನಗುಡ್ಡ, ಬರಡನಪುರ ನಾಗರಾಜ್, ಬಾಪುಗೌಡ ಬಸವನಗೌಡ ಪಾಟೀಲ್, ವೀರಣ್ಣಗೌಡ, ಶಿವಪ್ಪ ಬೈರೂಜಿ ಇದ್ದರು.

ಸಂಪಾದಕೀಯ

ಮಹಿಳಾ ಮೀಸಲು: ತಪ್ಪಿದ ಐತಿಹಾಸಿಕ ಅವಕಾಶ

ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ.33 ಮೀಸಲು ನೀಡುವ ಸಂವಿಧಾನ ತಿದ್ದುಪಡಿ ಮಸೂದೆ ಸೋಲು ಕಂಡಿರುವುದು ಕೇವಲ ಒಂದು ಶಾಸನಾತ್ಮಕ ಘಟನೆ ಮಾತ್ರವಲ್ಲ; ಅದು ದೇಶದ ರಾಜಕೀಯ ಮನೋಭಾವದನ್ನೇ ಪ್ರತಿಬಿಂಬಿಸುವ ಸಂಗತಿಯಾಗಿದೆ. ಮಹಿಳೆಯರ ರಾಜಕೀಯ ಪ್ರತಿನಿಧಿತ್ವವನ್ನು ಹೆಚ್ಚಿಸುವ ಮಹತ್ವದ ಅವಕಾಶವನ್ನು ವಿಪಕ್ಷಗಳು ಕೈಚೆಲ್ಲಿರುವುದು ದುಃಖಕರ ಮತ್ತು ಚಿಂತಾಜನಕ. ಭಾರತದ ಜನಸಂಖ್ಯೆಯ ಅರ್ಧ ಭಾಗ ಮಹಿಳೆಯರದ್ದಾಗಿದ್ದರೂ, ಅವರ ಪಾಲ್ಗೊಳ್ಳುವಿಕೆ ಶಾಸನಮಂಡಳಿಗಳಲ್ಲಿ ತೀರಾ ಕಡಿಮೆ. ಈ ಅಸಮತೋಲನವನ್ನು ಸರಿಪಡಿಸುವ ನಿಟ್ಟಿನಲ್ಲಿ ಮಹಿಳಾ ಮೀಸಲು ಮಸೂದೆ ಒಂದು ಐತಿಹಾಸಿಕ ಹೆಜ್ಜೆಯಾಗಬಹುದಿತ್ತು. ಆದರೆ, ರಾಜಕೀಯ ಲೆಕ್ಕಾಚಾರಗಳ ನಡುವೆ ಈ ಮಹತ್ವದ ಸುಧಾರಣೆ ತಡೆಯಲ್ಪಟ್ಟಿರುವುದು, ಮಹಿಳಾ ಸಬಲೀಕರಣದ ವಿಷಯದಲ್ಲಿ ವಿಪಕ್ಷಗಳ ನಿಷ್ಠೆಯ ಮೇಲೆ ಪ್ರಶ್ನೆಗಳನ್ನು ಎಬ್ಬಿಸುತ್ತದೆ.

ಮಹಿಳೆಯರಿಗೆ ರಾಜಕೀಯ ಅವಕಾಶ ಕಲ್ಪಿಸುವುದು ತಾತ್ವಿಕವಾಗಿ ಎಲ್ಲರೂ ಒಪ್ಪಿಕೊಂಡಿರುವ ವಿಷಯವಾಗಿದ್ದರೂ, ಅಂತಿಮ ಕ್ಷಣದಲ್ಲಿ ಅದಕ್ಕೆ ಬೆಂಬಲ ನೀಡದಿರುವುದು ದ್ವಂದ್ವ ನೀತಿಯನ್ನು ತೋರಿಸುತ್ತದೆ. 'ಮಹಿಳಾ ಹಕ್ಕುಗಳು' ಎಂಬ ಘೋಷಣೆಗಳು ಕೇವಲ ರಾಜಕೀಯ ಘೋಷಣೆಗಳಾಗಿಯೇ ಉಳಿಯಬಾರದು; ಅವು ಕಾರ್ಯರೂಪಕ್ಕೆ ಬರಬೇಕಾದ ಸಮಯ ಇದು. ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಹೆಚ್ಚಿದರೆ ಆಡಳಿತ ವ್ಯವಸ್ಥೆಯಲ್ಲಿ ಗುಣಮಟ್ಟದ ಬದಲಾವಣೆ ಸಾಧ್ಯವಾಗುತ್ತದೆ ಎಂಬುದು ಅನೇಕ ಅಧ್ಯಯನಗಳಿಂದ ಸಾಬೀತಾಗಿದೆ. ಗ್ರಾಮ ಪಂಚಾಯಿತಿಗಳಿಂದ ಹಿಡಿದು ರಾಜ್ಯ ಮತ್ತು ರಾಷ್ಟ್ರ ಮಟ್ಟದವರೆಗೆ ಮಹಿಳೆಯರು ತಮ್ಮ ಸಾಮರ್ಥ್ಯವನ್ನು ತೋರಿದ್ದಾರೆ. ಹೀಗಿರುವಾಗ, ಅವರಿಗೆ ಶಾಸನಮಂಡಳಿಗಳಲ್ಲಿ ಸಮರ್ಪಕ ಅವಕಾಶ ನೀಡುವುದು ನ್ಯಾಯಸಮ್ಮತವೂ ಆಗತ್ಯವೂ ಆಗಿದೆ.

ಈ ಹಿನ್ನೆಲೆಯಲ್ಲಿ, ಸರ್ಕಾರ ಮಹಿಳಾ ಮೀಸಲುಗಾಗಿ ತನ್ನ ಹೋರಾಟವನ್ನು ಮುಂದುವರಿಸುವ ನಿರ್ಧಾರ ಸ್ವಾಗತಾರ್ಹ. ಆದರೆ, ಇದೇ ಸಂದರ್ಭದಲ್ಲಿ ವಿಪಕ್ಷಗಳೂ ತಮ್ಮ ನಿಲುವನ್ನು ಮರುಪರಿಶೀಲಿಸಬೇಕು. ಮಹಿಳೆಯರ ಹಿತಾಸಕ್ತಿಯನ್ನು ರಾಜಕೀಯದ ಪೆಟ್ಟಿಗೆಯಲ್ಲಿ ಸೀಮಿತಗೊಳಿಸದೆ, ರಾಷ್ಟ್ರದ ಭವಿಷ್ಯದ ದೃಷ್ಟಿಯಿಂದ ವಿಚಾರಿಸುವ ಅಗತ್ಯವಿದೆ. ಒಟ್ಟಾರೆಯಾಗಿ, ಮಹಿಳಾ ಮೀಸಲು ಮಸೂದೆ ಸೋಲು ಕಂಡಿರುವುದು ಒಂದು ಅವಕಾಶ ಕಳೆದುಕೊಂಡಂತೆ ಆಗಿದೆ. ಆದರೆ ಇದು ಅಂತಿಮವಾಗಬಾರದು. ದೇಶದ ರಾಜಕೀಯ ವ್ಯವಸ್ಥೆ ಮಹಿಳೆಯರಿಗೆ ನ್ಯಾಯ ಒದಗಿಸುವ ದಿಸೆಯಲ್ಲಿ ಮತ್ತೊಮ್ಮೆ ಒಗ್ಗೂಡಬೇಕು. ಮಹಿಳಾ ಸಬಲೀಕರಣವು ಮಾತಿನ ಮಟ್ಟದಲ್ಲಿ ಅಲ್ಲ, ಕಾರ್ಯರೂಪದಲ್ಲಿ ಸಾಧನೆಯಾಗಬೇಕಾದ ಕಾಲ ಇದು.

ಪತ್ರ ಮಿತ್ರ

ವಿದ್ಯಾರ್ಥಿಗಳು ಸಂಕಷ್ಟದಲ್ಲಿ...

ಸರಕಾರದ ವಿವೇಚನಾರಹಿತ, ಎಳ್ಳಷ್ಟೂ ಗಂಭೀರತೆ ಇಲ್ಲದ, ಬದ್ಧತೆಯೂ ಇಲ್ಲದ ನಿರ್ಧಾರದ ಪರಿಣಾಮವನ್ನು ಈ ಬಾರಿಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಎದುರಿಸುವಂತಾಗಿದೆ. ಅಕಾಡೆಮಿಕ್ ವರ್ಷ ಶುರುವಾಗಿ, ಎಲ್ಲ ವಿಷಯಗಳ ಬಗ್ಗೆ ತಯಾರಿ ಮಾಡಿಕೊಂಡು, ಇನ್ನೇನು ಪರೀಕ್ಷೆ ಬರೆಯಲು ಕೇವಲ ಎರಡು ದಿನ ಬಾಕಿ ಎನ್ನುವಾಗ, ಶಿಕ್ಷಣ ಸಚಿವರು ದಿಢೀರ್ ಪತ್ರಿಕಾಗೋಷ್ಠಿ ಕರೆದು ಈ ವರ್ಷದಿಂದ ಹಿಂದಿ ಪರೀಕ್ಷೆಯಲ್ಲಿ ಪಡೆದ ಅಂಕ ಲೆಕ್ಕಕ್ಕಿಲ್ಲ, ಹಿಂದಿಗೆ ಅಂಕಗಳ ಬದಲಿಗೆ ಗ್ರೇಡ್ ಮಾತ್ರ ನೀಡುವುದಾಗಿ ಘೋಷಿಸಿಬಿಟ್ಟರು ! ಕೆಲ ಪಾಲಕರು ಇದರ ವಿರುದ್ಧ ಕೋರ್ಟ್ ಮೊರೆ ಹೋದಾಗ, ಸೂಕ್ತ ಮಾಹಿತಿ ಕೊಡಲು ಅಶಕ್ಯರಾದ್ದರಿಂದ, ದಂಡ ಭರಿಸಬೇಕು ಎಂದು ಕೋರ್ಟ್ ಹೇಳಿತು. ಆದರೆ ಮತ್ತದೇ ಕೋರ್ಟಿನ ಮತ್ತಿಬ್ಬರು ನ್ಯಾಯಾಧೀಶರು ವ್ಯತಿರಿಕ್ತ ತೀರ್ಪು ನೀಡಿದ್ದಾರೆ. ಗ್ರೇಡ್ ಬದಲಾಗಿ ಅಂಕಗಳನ್ನೇ ನೀಡಬೇಕು ಎಂದು ಹೇಳಿದ್ದಾರೆ.

ಹೇಗೂ ಪರ್ಸಂಟೇಜಿಗೆ ತೆಗೆದುಕೊಳ್ಳುವುದಿಲ್ಲ ಅಂತ ಮಕ್ಕಳು ಹಿಂದಿ ಪರೀಕ್ಷೆಯನ್ನು ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ, ಇನ್ನೂ ಕೆಲವರಂತೂ ಪರೀಕ್ಷೆಗೇ ಹಾಜರಾಗಲಿಲ್ಲ. ಈಗ ಅವರ ಸ್ಥಿತಿ ಹೇಗಾಗಿರಬೇಡ ? ಶಿಕ್ಷಣ ಸಚಿವರು ಪರೀಕ್ಷಾರ್ಥಿಗಳೊಡನೆ ಚೆಲ್ಲಾಟ ಆಡಿದಂತಾಗಿದೆ. ಇದರೊಟ್ಟಿಗೆ ಶಿಕ್ಷಣ ನೀತಿಯ ಜಿದ್ದಾಜಿದ್ದಿಯು ಒಕ್ಕೂಟ ವ್ಯವಸ್ಥೆಯನ್ನೇ ಹಾಳುಗೆಡವುತ್ತಿದೆ. NEP v/s SEP ಎಂಬಂತಾಗಿದೆ. ಇಲ್ಲೂ ಬೇಡವಾದ ಕಾರಣಕ್ಕೆ ಪೈಪೋಟಿ! ಕೇಂದ್ರದ ನಡೆಯನ್ನೆಲ್ಲ ತಿರಸ್ಕರಿಸಬೇಕು ಅನ್ನುವುದೆಷ್ಟು ಸರಿ. ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ಸುತರಾಂ ಒಪ್ಪಿತವಲ್ಲ, ಶಿಕ್ಷಣ ಕ್ಷೇತ್ರವೂ ಕಲುಷಿತಗೊಳ್ಳುತ್ತಿದೆ. ದುರದೃಷ್ಟವೆಂದರೆ ಇದರ ನೇರ ಪರಿಣಾಮ ಬೀಳುವುದು ಯುವ ಪೀಳಿಗೆಯ ಮೇಲೆ. ಇಲ್ಲಿ, ಇನ್ನೂ ಒಂದು ಸಂಗತಿ ಮುಖ್ಯ. JEE, NEET ನಂತಹ ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳನ್ನು ಎದುರಿಸುವಂತೆ ಮಾಡುವಲ್ಲಿ, ರಾಜ್ಯ ಶಿಕ್ಷಣ ನೀತಿ ಸ್ಪರ್ಧಾತ್ಮಕತೆಗೆ ಪೂರಕವಾಗಿರಬೇಡವೆ ? ಉದ್ಯೋಗ ಮಾರುಕಟ್ಟೆಯಲ್ಲಿ, ಕೆಲ ವಿಶ್ವವಿದ್ಯಾಲಯದ ಪದವೀಧರರು ಅರ್ಜಿ ಸಲ್ಲಿಸುವ ಅವಶ್ಯಕತೆ ಇಲ್ಲ ಎಂಬುದನ್ನು ಜಾಹೀರಾತಿನಲ್ಲೇ ಪ್ರಕಟಿಸುವಂತಹ ಪರಿಸ್ಥಿತಿ ಏನನ್ನು ಸೂಚಿಸುತ್ತದೆ ?

ಈಗ ಹೊರಬಿದ್ದ ನ್ಯಾಯಾಲಯದ ತೀರ್ಪು, ಪರೀಕ್ಷೆ ಬರೆದವರ ಮೇಲೆ ಯಾವ ರೀತಿ ಪರಿಣಾಮ ಬೀರೀತು ಎಂಬುದನ್ನು ಕಾದು ನೋಡಬೇಕು.

-ಶಂಕರನಾರಾಯಣ ಭಟ್, ಮಾಡಗೇರಿ

ಲವ್ ಜಿಹಾದ್‌ನ ವಿಸ್ತೃತ ರೂಪ

ಪ್ರತಿಷ್ಠಿತ ಟಿಸಿಎಸ್ ಕಂಪೆನಿಯಲ್ಲಿ ಮುಸ್ಲಿಂ ಮೇಲಧಿಕಾರಿಗಳಿಂದ ಕೆಳ ಉದ್ಯೋಗಿಗಳ ಮೇಲೆ ನಡೆದ ಲೈಂಗಿಕ ದೌರ್ಜನ್ಯ, ಬಲವಂತದ ಮತಾಂತರ ಕೃತ್ಯಗಳು ಆಘಾತಕಾರಿ ಬೆಳವಣಿಗೆ. ಹಿಂದು ಹುಡುಗಿಯರನ್ನೇ ಗುರಿಯಾಗಿಸಿಕೊಂಡು ನಡೆದ ಈ ಕೃತ್ಯಗಳು ಲವ್ ಜಿಹಾದ್‌ನ ಇನ್ನೊಂದು ರೂಪ. ವರುಷಗಳಿಂದಲೇ ನಡೆಯುತ್ತಿದ್ದ ಇಂತಹ ಬೆಳವಣಿಗೆಯು ಕಂಪೆನಿಯ ಮಾಲಕತ್ವದ ಗಮನಕ್ಕೆ ಬರದಿರುವುದು ಅಚ್ಚರಿಯೆ. ಇದು ವ್ಯವಸ್ಥಿತವಾಗಿ ನಡೆಯುತ್ತಿರುವ ಲವ್ ಜಿಹಾದ್ ಆಗಿರುವುದರಿಂದ ಹಾಗೂ ಹೊರಗಿನ ಬೆಂಬಲವೂ ಇರುವುದರಿಂದ ಅದೊಂದೇ ಕಂಪೆನಿಗೆ ಇದು ಖಂಡಿತಾ ಸೀಮಿತವಾಗಿರಲಾರದು. ಇನ್ನಿತರ ಹಲವಾರು ಕಂಪೆನಿಗಳಲ್ಲೂ ಇಂತಹ ಘಟನೆಗಳು ನಡೆದಿರುವ ಸಾಧ್ಯತೆಗಳಿವೆ. ಈ ನಿಟ್ಟಿನಲ್ಲೂ ತನಿಖೆ ನಡೆಯಬೇಕಾಗಿದೆ.

-ಆಶಾ ನಾಯಕ್, ಮಣಿಪಾಲ

ಸೂರ್ಯ ರೇಖೆ ಮತ್ತು ಚಕ್ರಗಳು

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಮೊದಲನೆಯದಾಗಿ ಸೂರ್ಯ ರೇಖೆ ಮತ್ತು ಚಕ್ರಗಳು ಈ ಎರಡೂ ಸಂಗತಿಗಳು ನಿಮ್ಮೊಳಗಿನ ಶಕ್ತಿಯನ್ನು ಉದ್ದೀಪನಗೊಳಿಸುತ್ತದೆ. ನಿಮಗೊಂದು ತೇಜಸ್ಸನ್ನು ನೀಡುತ್ತದೆ. ನಿಮ್ಮೊಳಗೆ ಸದಾ ಚೈತನ್ಯ ಹರಿಯುವಂತೆ ಮಾಡುತ್ತದೆ. ಒಮ್ಮೆ ಇವೆಲ್ಲಾ ಸಾಧ್ಯವಾದರೆ ಮುಂದೆಂದೂ ನೀವು ಹಿಂತಿರುಗಿ ನೋಡುವುದಿಲ್ಲ.

ಆತ್ಮವಿಶ್ವಾಸ ಮತ್ತು ಪ್ರಕಾಶಗೊಳ್ಳುವುದು

ನಿಮಗೆ ತುಂಬಾ ಆತ್ಮವಿಶ್ವಾಸ ಇದೆ, ಆದರೆ ಅದನ್ನು ವ್ಯಕ್ತಪಡಿಸುವ ಮಾರ್ಗ ತಿಳಿದಿಲ್ಲ. ಅದು ಪ್ರಕಾಶಗೊಳ್ಳಬೇಕು ಎಂದಾದರೆ ನಿಮ್ಮ ಕುಂಡಲಿನಿ ಜಾಗೃತವಾಗಬೇಕು. ಅದು ಜಾಗೃತವಾಗಿದೆ ಎನ್ನುವುದನ್ನು ನಿಮ್ಮ ಕೈಯಲ್ಲಿರುವ ಸೂರ್ಯ ರೇಖೆಯ ದಪ್ಪ, ಆಳ ಮತ್ತು ಸ್ಪಷ್ಟತೆ ತೋರಿಸುತ್ತದೆ. ಅದಕ್ಕಾಗಿ ನಿಮಗೆ ಕೇವಲ ಆತ್ಮವಿಶ್ವಾಸ ಇದ್ದರೆ ಅದನ್ನು ಧೈರ್ಯವಾಗಿ ಅಭಿವ್ಯಕ್ತಗೊಳಿಸುವ ಸಾಮರ್ಥ್ಯವನ್ನು ಪಡೆಯಬೇಕು. ಆದಕ್ಕಾಗಿ ಕುಂಡಲಿನಿ ಶಕ್ತಿಯನ್ನು ಗಳಿಸಲೇ ಬೇಕಾಗುತ್ತದೆ. ಯಾರ ಸೂರ್ಯ ರೇಖೆಯು ಹೆಚ್ಚು ಹೆಚ್ಚು ಉದ್ದವಾಗಿದೆಯೋ ಅವರಲ್ಲಿ ಇಂತಹಾ ಪರಿಣಾಮ ಸ್ಪಷ್ಟವಾಗಿ ಗೋಚರಿಸುತ್ತದೆ. ಅಂತಹಾ ವ್ಯಕ್ತಿಯನ್ನು ನೀವು ನೋಡಿದ ಕೂಡಲೇ ಅವರ ಪ್ರಭಾವಕ್ಕೆ ಬೀಳುತ್ತೀರಿ. ಅಂದರೆ ಅಷ್ಟು ಪ್ರಮಾಣದ ತೇಜಸ್ಸು ಅವರಲ್ಲಿ ಇರುತ್ತದೆ. ಸಮಾಜದಲ್ಲಿ ಒಳ್ಳೆಯ ಸ್ಥಾನವನ್ನು ಪಡೆಯುತ್ತಾರೆ. ಅವರನ್ನು ನೋಡಿದ ಕೂಡಲೇ ಒಂದು ರೀತಿಯ ತೇಜಸ್ಸು ಅವರಿಂದ ಹೊರಹೊಮ್ಮುವುದನ್ನು ನೀವು ಪ್ರಯತ್ನ ಮಾಡಿದರೆ ನೋಡಬಹುದು.

ಅನಾಹತ ಮತ್ತು ಆಜ್ಞಾ ಚಕ್ರಗಳ ಪ್ರಭಾವ

ಸಾಮಾನ್ಯವಾಗಿ ನಿಮ್ಮಲ್ಲಿ ಸೂರ್ಯ ರೇಖೆಯು ಹಸ್ತದ ಮಧ್ಯ ಭಾಗದಿಂದ ಅಥವಾ ಜೀವನ ರೇಖೆಯ ಪಕ್ಕದಲ್ಲಿ ಪ್ರಾರಂಭವಾಗಿ ಉಂಗುರ ಬೆರಳಿನ ಬುಡದವರೆಗೆ ಬಂದು ಕೊನೆಗೊಳ್ಳುತ್ತದೆ. ಹೀಗೆ ಸೂಕ್ತವಾದ ರೀತಿಯಲ್ಲಿ ಕೊನೆಗೊಂಡರೆ ಆಗ ನಿಮಗೆ ಹೆಚ್ಚು ಆತ್ಮವಿಶ್ವಾಸವಿದೆ ಎನ್ನುವುದು ಲೋಕಕ್ಕೇ ಗೋಚರವಾಗಿರುತ್ತದೆ.

ಹೀಗೆ ಸೂರ್ಯ ಚಕ್ರ ಚೆನ್ನಾಗಿ ಗೋಚರವಾಗಿ ಕಂಡರೆ ನಿಮ್ಮನ್ನು ಹಿಡಿಯಲು ಸಾಧ್ಯವೇ ಇಲ್ಲ. ನೀವು ಅಪಾರವಾದ ಜ್ಞಾನ ಪಿಪಾಸುಗಳಾಗುತ್ತೀರಿ. ಜ್ಞಾನ ಮಾರ್ಗದ ಎಲ್ಲಾ ಸಾಧ್ಯತೆಗಳನ್ನೂ ನೀವು ನಿಮ್ಮದಾಗಿಸಿಕೊಳ್ಳುತ್ತೀರಿ. ಆ ಮೂಲಕ ವಿಕಾಸದ ಹಾದಿಯಲ್ಲಿ ಸಾಗುತ್ತೀರಿ. ಸೃಜನಶೀಲತೆ ನಿಮ್ಮೊಳಗಿನಿಂದ ಪ್ರಭಾವಳಿಯ ರೀತಿ ಹೊರಹೊಮ್ಮುತ್ತದೆ. ನೀವು ಮೃದು ಮತ್ತು ಸೌಜನ್ಯದ ಮೂರ್ತಿಯಾಗುತ್ತೀರಿ. ಹೀಗೆ ಆದರೆ ನೀವೇ ಕುಂಡಲಿನಿ ದೇವಿಯು ಎಲ್ಲಿದ್ದಾಳೆಂದು ಅರಿಯುತ್ತೀರಿ. ಸೂರ್ಯ ರೇಖೆಯೂ ಸಹಾ ಅಪಾರವಾದ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ಇಲ್ಲಿಂದ ಮುಂದೆ ನೀವು ಯಾರೊಂದಿಗೂ ಹೆಚ್ಚು ಮಾತನಾಡುವುದಿಲ್ಲ, ಹೆಚ್ಚು ಹತ್ತಿರ ತೆಗೆದುಕೊಳ್ಳುವುದೇ ಇಲ್ಲ, ಅವರು ಯಾರ ಬಗ್ಗೆಯೂ ಹೆಚ್ಚು ವಿಮರ್ಶೆ ಮಾಡುವುದು, ಬೈಯುವುದು, ದೂರು ನೀಡುವುದು, ಮಾಡುವುದಿಲ್ಲ. ಆದರೆ ಒಂದು ದಿನ ನಿಮ್ಮ ಅಡ್ಡ ಪಲ್ಲಕ್ಕಿ ಉತ್ಸವಕ್ಕೆ ಇವುಗಳೇ ಅಡ್ಡ ಬರುತ್ತವೆ. ಮತ್ತು ನೀವು ತಾನಾಗಿಯೇ ಅಂತಹಾ ಉತ್ಸವಗಳನ್ನು ಕೇಳಿ ಮಾಹಿತಿ ಪಡೆದುಕೊಂಡು ಅದರಿಂದ ದೂರವೇ ಇರುತ್ತೀರಿ.

ಕುಂಡಲಿನಿಯನ್ನು ನೀವೇ ಜೀವಿತಾವಧಿಯಲ್ಲಿ ಒಮ್ಮೆ ನೋಡುವ ಗ್ರಹಿಕೆಯ ಮೂಲಕ ಯಥೇಚ್ಛ ಮಾಹಿತಿಗಳನ್ನು, ಅಪಾರ ಪ್ರಮಾಣದ ವಸ್ತುಗಳನ್ನು ಪಡೆದುಕೊಳ್ಳಲು ಸಾಧ್ಯ. ಅಂದರೆ ಕುಂಡಲಿನಿಯು ಅಂತರಂಗದಲ್ಲಿ ಪ್ರವಹಿಸುತ್ತಾ ಇರುತ್ತದೆ. ಸೂರ್ಯ ರೇಖೆಯು ಬಹಿರಂಗದಲ್ಲಿ ಅಡ್ಡಾಡುತ್ತಾ ಇರುತ್ತದೆ.

ಕುಂಡಲಿನಿಯ ಶಕ್ತಿ ಜಾಗೃತವಾದಂತೆ ಸೂರ್ಯ ರೇಖೆಯ ಜಾಗೃತಿಯೂ ಅದೇ ಸಮಯದಲ್ಲಿ ಪ್ರಾರಂಭವಾಗುತ್ತದೆ. ಆಗ ಕುಂಡಲಿನಿಯ ಅನುಭವ ಮಾತ್ರ ಆಗುತ್ತದೆ. ಕಾಣಿಸುವುದಿಲ್ಲ. ನೀವು ಆಧ್ಯಾತ್ಮಿಕವಾಗಿ ಸಾಧನೆ ಮಾಡುತ್ತಾ ಹೋದಂತೆ ನಿಮ್ಮ ಶಕ್ತಿಯ ಅರಿವು ಆಗುತ್ತದೆ. ನಿಮ್ಮಲ್ಲಿ ಅಪಾರವಾದ ವಿಶೇಷ ಜ್ಞಾನ ಇರುತ್ತದೆ. ವಿಶೇಷ ಕೌಶಲ್ಯ ಇರುತ್ತದೆ. ಅದನ್ನೆಲ್ಲಾ ನಿಮ್ಮ ಸೂರ್ಯ ರೇಖೆಯು ತೋರಿಸಿದರೆ; ನಿಮ್ಮಲ್ಲೊಂದು ಅಯಸ್ಕಾಂತೀಯ ಆಕರ್ಷಣೆ ಉಂಟಾಗುತ್ತದೆ.

ಮೂಲಾಧಾರ ಮತ್ತು ಸೂರ್ಯರೇಖೆ

ನಿಮ್ಮ ಹಸ್ತದ ಮಣಿಕಟ್ಟಿನಿಂದ ಸೂರ್ಯ ರೇಖೆಯು ಪ್ರಾರಂಭವಾಗಿದ್ದರೆ; ಅಂತಹಾ ವ್ಯಕ್ತಿಯ ಮೂಲಾಧಾರ ಮೊದಲಿಗೇ ಜಾಗೃತವಾಗಿರುತ್ತದೆ. ಅಂದರೆ ಅವರು ಹುಟ್ಟಿನಿಂದ ಅದೃಷ್ಟವಂತರಾಗಿರುತ್ತಾರೆ. ಮತ್ತು ಮುಂದೆಯೂ ಸಾಧನೆ ಮಾಡಿದರೆ ಅವರ ಅದೃಷ್ಟ ಹಾಗೇ ಉಳಿಯುತ್ತದೆ. ಕುಂಡಲಿನಿಯು ಮೂಲಾಧಾರದಲ್ಲಿಯೇ ಜಾಗೃತವಾಗಿದ್ದರೆ, ಅಂತಹಾ ವ್ಯಕ್ತಿಗೆ ಆರ್ಥಿಕ ಭದ್ರತೆ ಮತ್ತು ಸಮಾಜದಲ್ಲಿ ಸ್ಥಾನಮಾನ ಸಿಕ್ಕು, ದೃಢವಾಗಿ ನಿಲ್ಲುವ ಆತ್ಮವಿಶ್ವಾಸವನ್ನು ಸೂರ್ಯ ರೇಖೆ ನೀಡುತ್ತದೆ.

ಸ್ವಾಧಿಷ್ಠಾನ ಮತ್ತು ಸೂರ್ಯರೇಖೆ

ಸ್ವಾಧಿಷ್ಠಾನ ಚಕ್ರವು ಜಾಗೃತವಾಗಿದ್ದರೆ, ನಿಮ್ಮ ಸೂರ್ಯ ರೇಖೆಯು ದಪ್ಪಗೆ, ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತದೆ. ವ್ಯಕ್ತಿಯು ಕಲೆಯನ್ನು ಆರಾಧಿಸಲು ತೊಡಗುತ್ತಾನೆ. ಚಿತ್ರಕಲೆ, ಸಂಗೀತ ಅಥವಾ ಸಾಹಿತ್ಯದ ಮೂಲಕ ಅವರ ಸಾಧನೆ ಹೆಚ್ಚಾಗಿಯೇ ಇರುತ್ತದೆ. ಕೊನೆಕೊನೆಗೆ ಅವರು ಅದಕ್ಕೇ ಮುಡಿಪಾಗುತ್ತಾರೆ. ಹೀಗೆ ಅವರು ಭಾವುಕರೂ, ಸೃಜನಶೀಲರೂ ಆಗಿರುತ್ತಾರೆ.

ಮಣಿಪುರ ಮತ್ತು ಸೂರ್ಯರೇಖೆ

ಸೂರ್ಯ ರೇಖೆಯು ನೇರವಾಗಿ ಮಣಿಪುರ ಚಕ್ರಕ್ಕೆ ಸಂಬಂಧಿಸಿದೆ. ನಿಮ್ಮ ಸಂಕಲ್ಪ ಶಕ್ತಿಯ ಪ್ರೇರೇಪಣಾ ತಾಣವಿದು. ಇಂಗ್ಲೀಷ್‌ನಲ್ಲಿ ಮಣಿಪುರ ಚಕ್ರವನ್ನು ಸೋಲಾರ್ ಪ್ಲೆಕ್ಸ್ ಎಂದೇ ಕರೆಯುತ್ತಾರೆ. ಒಮ್ಮೆ ಸಂಕಲ್ಪ ಮಾಡಿದರೆ ಅವರ ಗುರಿಯು ಎಂದೆಂದೂ ಬದಲಾಗದು. ಅದಕ್ಕಾಗಿಯೇ ಇಂತಹಾ ವ್ಯಕ್ತಿಗಳಲ್ಲಿ ಸೂರ್ಯ ರೇಖೆಯು ದಪ್ಪಗೆ, ಸ್ಪಷ್ಟವಾಗಿ, ಆಳವಾಗಿ ಇರುತ್ತದೆ. ಇದು ಅವರ ಅಧಿಕಾರದ ರೀತಿಯನ್ನು, ನಾಯಕತ್ವದ ಸ್ವಭಾವವನ್ನು ತೋರಿಸುತ್ತದೆ. ಇವರು ಗುಂಪಿನಲ್ಲಿ ಎಲ್ಲೇ ಇದ್ದರೂ ನಾಯಕರಾಗಿ ಆಯ್ಕೆಯಾಗುತ್ತಾರೆ. ಇವರ ಪ್ರಭಾವವು ಮಣಿಪುರ ಚಕ್ರ ಜಾಗೃತವಾದಷ್ಟೂ ಹೆಚ್ಚುತ್ತಾ ಹೋಗುತ್ತದೆ.

ಮಣಿಪುರ ಚಕ್ರವನ್ನು ನಾಭೀ ಚಕ್ರ ಎಂದೂ ಸಹಾ ಕರೆಯುತ್ತಾರೆ. ಅಂದರೆ ಇದು ದೇಹದ ಮಧ್ಯಭಾಗದಲ್ಲಿ ಇರುವ ಚಕ್ರ. ಸೂರ್ಯ ರೇಖೆಯು ಇಲ್ಲಿ ಪ್ರಬಲವಾಗಿದ್ದರೆ ವ್ಯಕ್ತಿಯು ಯಾವುದೇ ಕಾರಣಕ್ಕೂ ಯಾವುದೇ ರೋಗಗಳಿಗೂ ತುತ್ತಾಗುವುದಿಲ್ಲ. ಮನಸ್ಸಿನಿಂದ ತುಂಬಾ ಧೃಢವಾಗಿ ಇರುತ್ತಾರೆ. ನಿದ್ದೆ ಬೇಕೆಂದಾಗ ಬರುತ್ತದೆ. ಯಾವುದನ್ನೂ ತೀವ್ರವಾಗಿ ಹಚ್ಚಿಕೊಳ್ಳುವುದಿಲ್ಲ, ಮತ್ತು ತಮ್ಮದಾಗಿರುವುದನ್ನು ಯಾವತ್ತಿಗೂ ಬಿಟ್ಟುಕೊಡುವುದಿಲ್ಲ.

ಅನಾಹತ ಮತ್ತು ಸೂರ್ಯರೇಖೆ

ಇವರಲ್ಲಿ ಸೂರ್ಯ ರೇಖೆಯು ಹೃದಯ ರೇಖೆಯ ಬುಡದಿಂದ ಮೇಲೇರಿರುತ್ತದೆ. ಅಂದರೆ ಅನಾಹತ ಚಕ್ರವು ಇವರಲ್ಲಿ ಹೆಚ್ಚು ಕ್ರಿಯಾಶೀಲವಾಗಿದೆ ಎನ್ನಬಹುದು. ಇಂತಹಾ ವ್ಯಕ್ತಿಗಳಲ್ಲಿ ಯಾವಾಗಲೂ ಇನ್ನೊಬ್ಬರ ಒಳಿತನ್ನು ಬಯಸುವ ಗುಣ ಇರುತ್ತದೆ. ಇವರು ಎಲ್ಲಾ ತರಹದ ಜನರ ಪ್ರೀತಿಯನ್ನು ಗಳಿಸಬಲ್ಲರು. ಇವರೇ ಖುದ್ದಾಗಿ ಪ್ರೇಮಮಯಿಗಳು. ಮಾತಿನಲ್ಲಾಗಲೀ, ನಡೆನುಡಿಯಲ್ಲಾಗಲೀ ಯಾವಾಗಲೂ ಸಮತೋಲನವನ್ನು ಹೊಂದಿರುತ್ತಾರೆ. ಸದಾ ನಗುಮುಖದ ಇವರು ಶುದ್ಧ ಮನಸ್ಸಿನವರಾಗಿರುತ್ತಾರೆ. ಒಳಗೊಂದು ಹೊರಗೊಂದು ಎನ್ನುವ ಮನೋಭಾವ ಇವರಲ್ಲಿ ಇರುವುದಿಲ್ಲ. ನೇರ ಮತ್ತು ಸೃಜನಶೀಲತೆ ಇವರ ವ್ಯಕ್ತಿತ್ವ ಆಗಿರುತ್ತದೆ. ಇವರ ಹೆಂಡತಿ ಅಥವಾ ಗಂಡ ಮಾತ್ರ ಇವರನ್ನು ಅನುಮಾನದಿಂದ ನೋಡುತ್ತಾರೆ. ಕಾರಣ ಇವರ ಹೃದಯ ರೇಖೆಯನ್ನು ಸೂರ್ಯ ರೇಖೆಯು ತನ್ನ ಪ್ರಖರವಾದ ಶಕ್ತಿಯಿಂದ ಮರೆ ಮಾಡಿರುತ್ತದೆ. ಇದರಿಂದಾಗಿ ತಮಗೇನೋ ಅನ್ಯಾಯವಾಗಿದೆ ಎಂದು ಅವರು ಭಾವಿಸುತ್ತಾರೆ.

ವಿಶುದ್ಧ ಮತ್ತು ಸೂರ್ಯರೇಖೆ

ಸೂರ್ಯ ರೇಖೆಯು ನೇರವಾಗಿದ್ದರೆ, ಯಾವುದೇ ಕಾರಣಕ್ಕೂ ಬುಧ ಪರ್ವತದತ್ತ ವಾಲದೇ ಇದ್ದರೆ ಅದು ವಿಶುದ್ಧ ಚಕ್ರವು ಶುದ್ಧ ಮತ್ತು ಸಮತೋಲನದಲ್ಲಿ ಇದೆ ಎಂದು ಅರ್ಥ. ಇಂತಹಾ ವ್ಯಕ್ತಿಗಳು ಮಾತಿನಲ್ಲಿ ನೇರ ಮತ್ತು ನಿಷ್ಠುರರಾಗಿರುತ್ತಾರೆ. ಇವರು ಯಾವುದೇ ಸಂಗತಿಗಳನ್ನೂ ಸರಿಯಾದ ರೀತಿಯಲ್ಲಿ ಒಂದೇ ಅರ್ಥ ಬರುವಂತೆ ಸಂವಹನ ಮಾಡಬಲ್ಲರು. ಇವರು ಸಿಇಒ ಆಗಿದ್ದರೆ ಅಂತಹಾ ಕಂಪನಿಯು ಕೆಲವೇ ವರ್ಷಗಳಲ್ಲಿ ಅಪಾರವಾದ ಅಭಿವೃದ್ಧಿಯನ್ನು ಸಾಧಿಸುತ್ತದೆ. ಸಾರ್ವಜನಿಕ ಭಾಷಣದಲ್ಲಿ ಇವರು ಎತ್ತಿದ ಸ್ವರ ಗಾರುಡಿಗರು. ಜನರನ್ನು ಮಂತ್ರಮುಗ್ಧರನ್ನಾಗಿಸುವ ಮಾತು ಇವರದಾಗಿರುತ್ತದೆ. ಇವರು ತಮ್ಮ ಮಾತುಗಳಿಂದಲೇ ಕೀರ್ತಿಯನ್ನು ಗಳಿಸುತ್ತಾರೆ. ಇವರು ಸಾಮಾನ್ಯವಾಗಿ ಹಾಸ್ಯಗಾರರಾಗಿರುತ್ತಾರೆ. ಜನರನ್ನು ಬಲುಬೇಗ ನಗಿಸುತ್ತಾರೆ, ಆಲೋಚನೆಗೆ ಹಚ್ಚುತ್ತಾರೆ, ಚಿಂತಿಸುವಂತೆ ಮಾಡುತ್ತಾರೆ, ಮನಸ್ಸು ಹಗುರವಾಗುವಂತೆ ನೋಡಿಕೊಳ್ಳುತ್ತಾರೆ. ಉತ್ಸಾಹ ಮೂಡುವಂತೆ, ಪುಳುಕಿತವಾಗುವಂತೆ, ಆತ್ಮವಿಮರ್ಶೆ ಮಾಡಿಕೊಳ್ಳುವಂತೆಯೂ ಮಾಡಬಲ್ಲರು.

ಆಜ್ಞಾ ಮತ್ತು ಸೂರ್ಯರೇಖೆ

ಇವರಲ್ಲಿ ಸೂರ್ಯ ರೇಖೆಯು ಹೆಡ್‌ಲೈನ್ ಅಂದರೆ ಮಿದುಳು ರೇಖೆ ಅಥವಾ ಬುದ್ಧಿ ರೇಖೆಯಿಂದ ಪ್ರಾರಂಭವಾಗಿರುತ್ತದೆ. ಇವರು ದೈಹಿಕ ಶ್ರಮಕ್ಕಿಂತಾ ಬುದ್ಧಿಯನ್ನು ಹೆಚ್ಚು ಬಳಸುತ್ತಾರೆ. ಇವರು ಪ್ರತ್ಯುತ್ಪನ್ನಮತಿಗಳು. ಅಂದರೆ ಯಾವುದೇ ಸಂಗತಿಯಾಗಿರಲೀ ತಕ್ಷಣದಲ್ಲಿ ಇವರಿಗೆ ಅದಕ್ಕೆ ಉತ್ತರ ಹೊಳೆಯುತ್ತದೆ. ಮತ್ತು ಪ್ರತಿಕ್ರಿಯೆಯನ್ನು, ಉತ್ತರವನ್ನು ನೀಡುತ್ತಾರೆ. ಅಪಾರವಾದ ದೂರದೃಷ್ಟಿ ಇವರಿಗೆ ಇರುತ್ತದೆ. ಅದಕ್ಕಾಗಿ ಇವರು ಮಾಡಿದ ಯಾವುದೇ ಕೆಲಸಗಳು ಎಂದಿಗೂ ವ್ಯರ್ಥವಾಗುವುದಿಲ್ಲ.

ಆದರೆ ಇವರು ತಮ್ಮ ಮಕ್ಕಳಿಗೆ ಮಾತ್ರ ಏನನ್ನೂ ಹೇಳುವುದಿಲ್ಲ!! ಮಕ್ಕಳ ಮೇಲೆ ಧೃತರಾಷ್ಟ್ರನ ಪ್ರೀತಿ ಇವರದು. ಅಕ್ಕಪಕ್ಕದವರಿಗೆ ಕಿರಿಕಿರಿ ಉಂಟು ಮಾಡುವುದು ಇವರ ಮೊದಲ ಕೆಲಸ. ಸದಾ ಕಾಲ ಜನರಿಂದ ಸುತ್ತುವರೆದಿರುವುದು ಇವರಿಗೆ ಇಷ್ಟ.

ಹದಿಹರೆಯದ ಸಮಸ್ಯೆಗಳು-ಅವುಗಳನ್ನು ನಿಭಾಯಿಸುವ ಬಗೆ

ಭಾರತೀಯರು ಮಾನವರನ್ನು 'ಅಮೃತಸ್ಯ ಪುತ್ರಾಃ' ಎಂಬ ಶ್ರೇಷ್ಠ ಭಾವನೆಯಿಂದ ಕಾಣುತ್ತಾರೆ.

ಒಳನೋಟ

• ಹೆ.ಬಾ. ಮಲ್ಯ



ಪ್ರತಿಯೊಬ್ಬ ವ್ಯಕ್ತಿಯೂ ಹದಿಹರೆಯದ ಕಾಲಘಟ್ಟವನ್ನು ದಾಟಿಯೇ ತಾರುಣ್ಯಕ್ಕೆ ಕಾಲಿಡುತ್ತಾನೆ. ಇಂಗ್ಲೀಷಿನಲ್ಲಿ ಹದಿಮೂರರಿಂದ ಹತ್ತೊಂಬತ್ತನೇ ವಯಸ್ಸಿನ ವರೆಗೆ (Thirteen- Nineteen) ಟೀನ್ ಏಜ್ ಎನ್ನುತ್ತಾರೆ. ವಿದ್ಯಾರ್ಥಿಗಳು ಹೈಸ್ಕೂಲು ಮುಗಿಸಿ ಪಿ.ಯು. ಕಾಲೇಜಿಗೆ ಸೇರುವ ಅವಧಿ ಎನ್ನಬಹುದು. ಹದಿಹರೆಯದಲ್ಲಿ ಮಕ್ಕಳಲ್ಲಿ ಅನೇಕ ರೀತಿಯ ದೈಹಿಕ, ಮಾನಸಿಕ, ಬೌದ್ಧಿಕ ಬದಲಾವಣೆಗಳಾಗುತ್ತವೆ. ಮಕ್ಕಳ ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳ ಅಂಗರಚನೆಯಲ್ಲಿ ಹಲವು ಬದಲಾವಣೆಗಳಾಗುತ್ತವೆ. ಆಗ ಅವರ ಬೆಳವಣಿಗೆಯ ವೇಗವೂ ಹೆಚ್ಚು. ಈ ಹೊಸ ಬೆಳವಣಿಗೆಯೊಂದಿಗೆ ಮಾನಸಿಕವಾಗಿ ಹೊಂದಿಕೊಳ್ಳಲು ಹಿರಿಯರ ಮಾರ್ಗದರ್ಶನದ ಅಗತ್ಯವಿದೆ. ಹಿಂದೆ ಕೂಡು ಕುಟುಂಬಗಳಲ್ಲಿ ಈ ಜ್ಞಾನ ತನ್ನಿಂತಾನೇ ಸಿಗುತ್ತಿತ್ತು.

ಈ ವಯಸ್ಸಿನಲ್ಲಿ ಓದಿನ ಕಡೆಗೆ ಗಮನ ನೀಡಬೇಕಾಗುತ್ತದೆ. ಆದರೆ ಈ ವಯಸ್ಸಿನಲ್ಲಿ ಚಂಚಲತೆ ಕಾಡುತ್ತದೆ. ಹಲವು ವಿಧದ ಬಯಕೆಗಳು, ಅದರಲ್ಲೂ ಮುಖ್ಯವಾಗಿ ಲೈಂಗಿಕ ಬಯಕೆ ಕಾಡತೊಡಗುತ್ತದೆ. ಈ ವಯಸ್ಸಿನಲ್ಲಿ ಸಂತಾನೋತ್ಪತ್ತಿ ಅಂಗಗಳು ಬೆಳವಣಿಗೆ ಕಂಡಿರುತ್ತವೆ. ಸುಂದರ ಉಡುಗೆ, ಫ್ಯಾಷನ್, ಬೈಕ್, ಸಿನೆಮಾ, ಕ್ರಿಕೆಟ್ ಇತ್ಯಾದಿ ಬಯಕೆಗಳಿರುತ್ತವೆ. ಎಲ್ಲಕ್ಕಿಂತಲೂ ಮಿಗಿಲಾಗಿ ಲೈಂಗಿಕ ಬಯಕೆ ತೀವ್ರವಾಗಿರುತ್ತದೆ. ಅದನ್ನು ಸ್ವಂತ ವಿವೇಕದಿಂದ, ಹಿರಿಯರ ಯೋಗ್ಯ ಮಾರ್ಗದರ್ಶನದಿಂದ ಹತೋಟಿಯಲ್ಲಿಡದಿದ್ದರೆ ಅನೇಕ ಸಮಸ್ಯೆಗಳು ನಿರ್ಮಾಣವಾಗುವ ಸಾಧ್ಯತೆ ಇದೆ. ಇಂದು ಸಮಾಜದಲ್ಲಿ ಕಂಡು ಬರುತ್ತಿರುವ ಅತ್ಯಾಚಾರ, ಲವ್ ಜಿಹಾದ್ ಪ್ರಕರಣಗಳಿಗೆ ಯೋಗ್ಯ ಮಾರ್ಗದರ್ಶನದ ಕೊರತೆ ಕಾರಣ. ಮಾದಕ ಜಾಹೀರಾತುಗಳು, ಯುವತಿಯರ ಮೈಮಾಟ ಪ್ರದರ್ಶನ, ತುಂಡುಡುಗೆಗಳು, ಪಬ್ ಸಂಸ್ಕೃತಿಗಳು ಇದಕ್ಕೆ ಕಾರಣ ಹಾಗೂ ಯುವಕರ ಮನಸ್ಸನ್ನು ಅಡ್ಡದಾರಿಗೆಳೆಯಲು ಕಾರಣ. ಲೈಂಗಿಕ ಭಾವನೆಯನ್ನೇ ಪ್ರೀತಿ-ಪ್ರೇಮ ಎಂಬ ತಪ್ಪು ಕಲ್ಪನೆಯನ್ನು ಮೂಡಿಸಲಾಗುತ್ತಿದೆ. ಹಿಂದೆ ಗುರುಕುಲ ಶಿಕ್ಷಣ ಪದ್ಧತಿಯಲ್ಲಿ ಬ್ರಹ್ಮಚರ್ಯಕ್ಕೆ ಬಹಳ ಮಹತ್ವವಿರುತ್ತಿತ್ತು. ಯಮ-ನಿಯಮ-ಧ್ಯಾನ, ಪ್ರಾಣಾಯಾಮಗಳ ಸಾಧನೆ ನಡೆಯುತ್ತಿತ್ತು. ಇದರಿಂದ ಓದಿನಲ್ಲಿ ಏಕಾಗ್ರತೆ ಸಾಧಿಸಲು ಅನುಕೂಲವಾಗುತ್ತದೆ. ಮಹಾಪುರುಷರು ತಮ್ಮ ಜೀವನದಲ್ಲಿ ಬ್ರಹ್ಮಚರ್ಯವನ್ನು ಪಾಲಿಸಿದ ಬಗ್ಗೆ ಶಿಕ್ಷಣ ಸಂಸ್ಥೆಗಳಲ್ಲಿ ಉದಾಹರಣೆಗಳನ್ನು, ಕಥೆಗಳನ್ನು ಹೇಳಿದಾಗ ಎಳೆ ಮನಸ್ಸುಗಳು ಅದನ್ನು ಬೇಗನೇ ಗ್ರಹಿಸುತ್ತವೆ. ಪುರಾಣ, ಇತಿಹಾಸಗಳಲ್ಲಿ ಇಂಥ ಆದರ್ಶ ಪುರುಷರ ಹೇರಳ ಉದಾಹರಣೆಗಳು ಸಿಗುತ್ತವೆ. ಸ್ವಾಮಿ ವಿವೇಕಾನಂದರು ಅಮೆರಿಕಾ ದೇಶದ ಚಿಕಾಗೋದಲ್ಲಿ ಐತಿಹಾಸಿಕ ಭಾಷಣ ಮಾಡಿದ ನಂತರ ಜಗತ್ಪ್ರಸಿದ್ಧರಾಗುತ್ತಾರೆ. ಅನೇಕ ನಗರಗಳಿಂದ ಅವರಿಗೆ ಆಹ್ವಾನಗಳು ಬರುತ್ತವೆ. ಒಂದು ಕಡೆ ಪ್ರವಚನ ಮುಗಿಸಿದ ನಂತರ ಓರ್ವ ಮಹಿಳೆ ಅವರ ರೂಪಕ್ಕೆ ಮಾರುಹೋಗಿ "ನನಗೆ ನಿಮ್ಮಿಂದ ನಿಮ್ಮಂಥಹವನೇ ಓರ್ವ ಮಗನನ್ನು ಪಡೆಯಬೇಕೆಂಬ ಆಸೆ ಇದೆ" ಎಂದಳು. ಸಾಮಾನ್ಯ ವ್ಯಕ್ತಿಯಾದರೆ, ಮನಸ್ಸಿನ ಮೇಲೆ ಹತೋಟಿ ಇಲ್ಲದವನಾದರೆ ಈ ಆಹ್ವಾನವನ್ನು ಸ್ವೀಕರಿಸಿ ಬಿಡುತ್ತಿದ್ದನೇನೋ ಏನೋ. ಆದರೆ ಅವರು ವಿವೇಕಾನಂದರು. ಅವರು ತಕ್ಷಣ ಬಗ್ಗಿ ಆಕೆಯ ಕಾಲುಮುಟ್ಟಿ ನಮಸ್ಕರಿಸಿ "ಅಮ್ಮಾ, ನೀನು ಅಷ್ಟು ಸಮಯ ಕಾಯಬೇಕೇಕೆ? ಇದೋ ನಾನೇ ಎದುರಿಗೆ ಇರುವಾಗ ನನ್ನಂಥ ಇನ್ನೊಬ್ಬ ಮಗ ಏಕೆ. ನಾನೇ ನಿನ್ನ ಮಗನೆಂದು ತಿಳಿ" ಎಂದು ಬಿಟ್ಟರು. ಆಕೆ ಕಕ್ಕಾಬಿಕ್ಕಿ. ಅದು ಭಾರತದ ಮಣ್ಣಿನ ಸಂಸ್ಕೃತಿ, ಬ್ರಹ್ಮಚರ್ಯ, ಪ್ರಾಣಾಯಾಮ, ಧ್ಯಾನಗಳ ಪ್ರಭಾವ.

ಪ್ರಸಿದ್ಧ ಕ್ರಾಂತಿಕಾರಿ ಚಂದ್ರಶೇಖರ ಆಜಾದನ ಜೀವನ ರೋಮಾಂಚಕಾರಿಯಾದುದು. ಒಮ್ಮೆ ಒಂದು ಹಳ್ಳಿಗೆ ಹೋಗಿ ಬರುವಾಗ ರಾತ್ರಿಯಾದಾಗ ಪರಿಚಿತ ದೇಶಭಕ್ತರ ಮನೆಗೆ ಉಳಿಯಲು ಹೋಗುತ್ತಾನೆ. ಊಟದ ನಂತರ ಮೇಲ್ಚಾವಣಿಗೆ ಹತ್ತಿ ಹೋಗಿ ಚಿಮಣಿ ದೀಪದಲ್ಲಿ ಸಂಗ್ರಹವಾದ ಹಣದ ಲೆಕ್ಕಾಚಾರ ಬರೆಯಲಾರಂಭಿಸಿದ. ಕೂಡುಕುಟುಂಬದ ಆ ಮನೆಯಲ್ಲಿ ಹದಿಹರೆಯದ ವಿಧವೆ ಯುವತಿಯೊಬ್ಬಳು ಈ ತರುಣನ ಬಗ್ಗೆ ಆಕರ್ಷಿತಳಾಗಿ ಎಲ್ಲರೂ ಮಲಗಿದ ಮೇಲೆ ಛಾವಣಿ ಮೇಲೆ ಬಂದಳು. ಅವಳ ಕಣ್ಣಲ್ಲಿ ಬಯಕೆ ಇತ್ತು. ಇದನ್ನು ಗುರ್ತಿಸಿದ ಆಜಾದ್ ಆಕೆಗೆ ವಾಪಸ್ ಹೋಗಲು ಹೇಳಿದ. ಆಕೆ ಮುಂದುವರಿದು ಬಂದಾಗ ಹಣವನ್ನು ಚೀಲದಲ್ಲಿ ತುಂಬಿಸಿ ಚಿಮಣಿ ದೀಪ ಆರಿಸಿ ಹೆಚ್ಚು ಎತ್ತರವಿಲ್ಲದ ತಾರಸಿಯಿಂದ ಕೆಳಕ್ಕೆ ಧುಮುಕಿ ಕತ್ತಲಲ್ಲಿ ಮಾಯವಾದ. ಅಷ್ಟು ಬಲಿಷ್ಠವಾಗಿತ್ತು ಆಜಾದನ ಮನಸ್ಸು. ಆತನ ಮನಸ್ಸು ಒಂದಿಷ್ಟು ಚಂಚಲಗೊಂಡಿದ್ದರೂ ಅನಾಹುತವಾಗಿ ಹೋಗುತ್ತಿತ್ತು. ಏಕಾಂತದಲ್ಲಿ ಯಾರೂ ನೋಡದಿದ್ದಾಗಲೂ ಓರ್ವ ವ್ಯಕ್ತಿ ಹೇಗೆ ನಡೆದುಕೊಳ್ಳುತ್ತಾನೆ ಎಂಬುದರಲ್ಲಿ ಆತನ ನಿಜವಾದ ಆತ್ಮ ಸಂಯಮ ಎದ್ದು ಕಾಣುತ್ತದೆ.

ಬುದ್ಧನ ಶಿಷ್ಯರಲ್ಲಿ ಆನಂದ ಪ್ರಮುಖ. ಬುದ್ಧ ತನ್ನೆಲ್ಲ ಶಿಷ್ಯರನ್ನು ಭಿಕ್ಷೆಗೆ ಹಳ್ಳಿಗಳಿಗೆ ಕಳಿಸುತ್ತಿದ್ದ. - ಧರ್ಮ ಪ್ರಚಾರ ಹಾಗೂ ಶಿಷ್ಯರಿಗೆ ಲೋಕಜ್ಞಾನ ಬರಲಿ ಎಂಬ ಉದ್ದೇಶ. ಒಮ್ಮೆ ಧರ್ಮ ಪ್ರಚಾರ ಮುಗಿಸಿ ಆನಂದ ಹಾಗೂ ಶಿಷ್ಯರು ಆಶ್ರಮಕ್ಕೆ ಹಿಂತಿರುಗಿ ಬರುವಾಗ ಮುಸ್ಸಂಜೆಯಾಗಿಬಿಡುತ್ತದೆ. ಒಂದು ನದಿ ದಾಟಿ ಬರಬೇಕಾಗಿತ್ತು. ಅಂಬಿಗ ಹೊರಟು ಹೋಗಿ ಬಿಟ್ಟಿದ್ದ. ಅಷ್ಟರಲ್ಲಿ ಓರ್ವ ಪ್ರಾಯದ ಯುವತಿ ಬಂದಳು. ನದಿಯಲ್ಲಿ ಎದೆ ಮಟ್ಟ ನೀರಿತ್ತು. ಗಂಡಸರೇನೋ ದಾಟಬಹುದಿತ್ತು. ಆದರೆ ಸೀರೆ ಉಟ್ಟಿದ್ದ ಹರೆಯದ ಯುವತಿ ದಾಟುವುದು ಹೇಗೆ? ಆನಂದ ಆಕೆಯನ್ನು ತನ್ನ ಹೆಗಲ ಮೇಲೆ ಕೂರಿಸಿ, ನದಿ ದಾಟಿಸಿ, ಆಚೆ ದಡದಲ್ಲಿ ಇಳಿಸಿ, ಏನೂ ಆಗದವನಂತೆ ನಡೆದ. ಇತರ ಶಿಷ್ಯರಿಗೆ ಆತನ ಮೇಲೆ ಮತ್ಸರ. ತಾನಾದರೂ ಹೆಗಲ ಮೇಲೆ ಕೂರಿಸಿಕೊಂಡು ದಾಟಿಸುತ್ತಿದ್ದೆ ಎಂದು. ಆತನ ಬ್ರಹ್ಮಚರ್ಯ ವ್ರತ ನಷ್ಟವಾಯಿತೆಂದು ಮಾತಾಡಿಕೊಳ್ಳುತ್ತಾ ಗುರುಗಳ ಬಳಿ ರಾತ್ರಿ ದೂರು ನೀಡಿದರು. "ರಾತ್ರಿಯಾಯಿತು ಈಗ ಮಲಗಿ ನಾಳೆ ಬೆಳಗ್ಗೆ ನೋಡುವ" ಎಂದ ಬುದ್ಧ. ರಾತ್ರಿ ಇಡೀ ಶಿಷ್ಯರ ಬಾಯಲ್ಲಿ, ಮನಸ್ಸಿನಲ್ಲಿ ಆಕೆಯದೇ ಚಿತ್ರ, ಧ್ಯಾನ. ಬೆಳಗ್ಗೆ ಮತ್ತೆ ಶಿಷ್ಯರು ನೆನಪಿಸಿದಾಗ ಬುದ್ಧ ಆನಂದನನ್ನು ನಡೆದ ವಿಷಯದ ಬಗ್ಗೆ ಕೇಳಿದ. ಆನಂದ ನಿರ್ವಿಕಾರ ಮನಸ್ಸಿನಿಂದ "ನಾನೊಂದು ಮಾಂಸದ ಮೂಟೆಯನ್ನು ಹೊತ್ತು ತಂದು ಈಚೆ ದಡದಲ್ಲಿ ಬಿಟ್ಟು ಬಂದೆ. ಆಮೇಲೆ ಮರೆತು ಬಿಟ್ಟೆ" ಎಂದ. ಆಗ ಬುದ್ಧ ಶಿಷ್ಯರಿಗೆ ಹೇಳಿದ "ಆನಂದ ಅವಳನ್ನೊಂದು ಮಾಂಸದ ಮೂಟೆಯೆಂದಷ್ಟೇ ತಿಳಿದ. ಅದನ್ನು ಈಚೆ ದಡದಲ್ಲೇ ಬಿಟ್ಟು ಎಲ್ಲ ಮರೆತ. ನೀವಾದರೋ ಆಕೆಯ ರೂಪದ ನೆನಪನ್ನು ಮನಸ್ಸಿನಲ್ಲಿ ಹೊತ್ತುಕೊಂಡು ಆಶ್ರಮಕ್ಕೆ ತಂದು ರಾತ್ರಿಯಿಡೀ ಆಕೆಯ ಧ್ಯಾನದಲ್ಲೇ ಕಳೆದಿರಿ. ಇದು ಬ್ರಹ್ಮಚರ್ಯ ವ್ರತ ಪಾಲನೆಯ ಲಕ್ಷಣವಲ್ಲ. ಮನಸ್ಸಿನ ಒಳಗೂ ಹೊರಗೂ ಪರಿಶುದ್ಧನಾಗಿರುವುದೇ ಸಾಧನೆಯ ಲಕ್ಷಣ" ಎಂದು ಬುದ್ಧಿ ಹೇಳಿ ಏಕಾಗ್ರತೆಯಿಂದ ಕುಳಿತು ಮನಸ್ಸು ಚಂಚಲವಾಗದಂತೆ ನೋಡಿಕೊಳ್ಳಬೇಕು ಎಂದ. ಶಿಷ್ಯರು ನಾಚಿಕೆಯಿಂದ ತಲೆ ತಗ್ಗಿಸಿದರು.

ಆದರೆ ಈಗ ಆ ಶ್ರೇಷ್ಠ ಗುರುಕುಲ ಶಿಕ್ಷಣವಿಲ್ಲ, ಯಮ-ನಿಯಮ, ಬ್ರಹ್ಮಚರ್ಯ ಪಾಲನೆಯ ಬಗ್ಗೆ ಶಿಕ್ಷಣ ಇಲ್ಲ. ಪಾಶ್ಚಾತ್ಯರದು ಭೋಗಭೂಮಿ. ಅವರಿಗೆ ದುಡ್ಡು, ಹೆಣ್ಣು, ಹೆಂಡಗಳೇ ದೇವರು. ಭೌತಿಕ ಸುಖವೇ ಜೀವನ. ಭಾರತ ತ್ಯಾಗಭೂಮಿ. ಸಂಯಮ, ಸಹಿಷ್ಣುತೆಯ ಸಂಸ್ಕೃತಿ. ಈಗ ಮೆಕಾಲೆ ಶಿಕ್ಷಣದಿಂದ ಭಾರತೀಯರಲ್ಲಿ ಕೂಡಾ ಅನೇಕರು ಭೌತಿಕ ಜೀವನದತ್ತ ಆಕರ್ಷಿತರಾಗುತ್ತಿದ್ದಾರೆ. ಈ ಪ್ರವೃತ್ತಿ ಬದಲಾಗಬೇಕಾದರೆ ಮತ್ತೆ ಯಮ-ನಿಯಮ, ಬ್ರಹ್ಮಚರ್ಯ, ಪ್ರಾಣಾಯಾಮಗಳ ಶಿಕ್ಷಣ ನೀಡಬೇಕಾದ ಅಗತ್ಯವಿದೆ. ವಿಶೇಷವಾಗಿ ಬ್ರಹ್ಮಚರ್ಯ ಪಾಲನೆಯ ಬಗ್ಗೆ ಒತ್ತು ನೀಡಬೇಕಾಗಿದೆ. ಲೈಂಗಿಕತೆ ಬಗ್ಗೆ ಯುವಕಯುವತಿಯರಿಗೆ ಯೋಗ್ಯ ತಿಳಿವಳಿಕೆ ನೀಡುವ ಅಗತ್ಯವಿದೆ. ಲೈಂಗಿಕ ಭಾವನೆಯನ್ನು ಮಾನವ ಹಾಕಿಕೊಂಡದ್ದಲ್ಲ, ದೇವರೇ ಅಂದರೆ ಪ್ರಕೃತಿಯೇ ಮಾನವನಲ್ಲಿ ಹಾಕಿರುವುದು. ಸಂತತಿ ಮುಂದುವರಿಯಬೇಕೆಂಬುದೇ ಪ್ರಕೃತಿಯ ಉದ್ದೇಶ. ಆದ್ದರಿಂದ ಲೈಂಗಿಕತೆಯನ್ನು ಪವಿತ್ರ ಎಂದು ಭಾವಿಸಬೇಕು. ಪರಿಶುದ್ಧ ಮನಸ್ಸಿನಿಂದ ನೋಡಬೇಕು. ಈ ಸುಭಾಷಿತ ನೋಡಿ:-

"ಮಾತೃವತ್ ಪರದಾರೇಷು ಪರದ್ರವ್ಯೇಷು ಲೋಷ್ಠವತ್।
ಆತ್ಮವತ್ ಸರ್ವಭೂತೇಷು ಯಃ ಪಶ್ಯತಿ ಸಃ ಪಂಡಿತಃ॥

"ಸಂತಾನಕ್ಕಾಗಿ ಓರ್ವ ಯುವತಿಯೊಡನೆ ವಿವಾಹ. ಇತರ ಎಲ್ಲ ಸ್ತ್ರೀಯರನ್ನು ತಾಯಿಯಂತೆ ಕಾಣಬೇಕು. ಪರದ್ರವ್ಯ ಮಣ್ಣಿನ ಹೆಂಟೆಯಂತೆ. ಎಲ್ಲರನ್ನೂ ತನ್ನಂತೆಯೇ ಕಾಣುವವನೇ ಪಂಡಿತ" ಎಂದರ್ಥ. ಲೈಂಗಿಕತೆ ಪಾಪವಲ್ಲ. ಅನ್ಯ ಮತಗಳಲ್ಲಿ ಮನುಷ್ಯ ಪಾಪಿ ಎನ್ನಲಾಗಿದೆ. ಏಕೆಂದರೆ ಲೈಂಗಿಕ ಸಂಯೋಗ ಪಾಪ ಎಂಬ ಭಾವನೆ. ಭಾರತೀಯರು ಮಾನವರನ್ನು 'ಅಮೃತಸ್ಯ ಪುತ್ರಾಃ' ಎಂಬ ಶ್ರೇಷ್ಠ ಭಾವನೆಯಿಂದ ಕಾಣುತ್ತಾರೆ. ಪಾಪಿಗಳೆಂದಲ್ಲ. ಇಂದು ಹದಿಹರೆಯದವರಿಗೆ ಇಂಥ ಶ್ರೇಷ್ಠ ಶಿಕ್ಷಣದ ಆವಶ್ಯಕತೆ ಇದೆ. ಆಗಲೇ ಅತ್ಯಾಚಾರ, ಲವ್ ಜಿಹಾದ್ ಎಲ್ಲ ಕೊನೆಗೊಳ್ಳುತ್ತವೆ.

ನವ ಭಾರತದ ಉದ್ಯಮದಲ್ಲಿ ನಾರೀಶಕ್ತಿ

▸ ಶೋಭಾ ಕರಂದ್ಲಾಜೆ, ಕೇಂದ್ರ ಸಚಿವರು



ಪ್ರಧಾನಮಂತ್ರಿ ನರೇಂದ್ರ ಮೋದಿ ಲೋಕಸಭೆ ಮತ್ತು ರಾಜ್ಯಶಾಸಕಾಂಗಗಳಲ್ಲಿ 3ನೇ ಒಂದರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡುವ 'ನಾರಿ ಶಕ್ತಿ ವಂದನ್ ಅಧಿನಿಯಮ'ವನ್ನು ಕಳೆದ ಸೆಪ್ಟೆಂಬರ್ ಸಂಸತ್‌ನಲ್ಲಿ ಪ್ರತಿಪಾದಿಸಿ ಮಹಿಳೆಯರು ಏಳಿಗೆಯಾಗದ ಹೊರತು ದೇಶದ ಏಳಿಗೆ ಅಸಾಧ್ಯ ಎಂಬ ದೃಢ ಸಂಕಲ್ಪವನ್ನು ವ್ಯಕ್ತಪಡಿಸಿದ್ದರು. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ(ಎಂಎಸ್ ಎಂಇ) ವಲಯದಲ್ಲಿ ಸರ್ಕಾರ ಮಾಡುತ್ತಿರುವ ಕೆಲಸಗಳಲ್ಲೂ ಅದೇ ಉದ್ದೇಶ ಪ್ರತಿಫಲಿಸುವುದನ್ನು ಪ್ರತಿದಿನವೂ ಕಾಣಬಹುದಾಗಿದೆ. 'ಎಂಎಸ್‌ಎಂಇ' ವಲಯವನ್ನು ಸಾಮಾನ್ಯವಾಗಿ ಭಾರತದ ಆರ್ಥಿಕತೆಯ ಬೆನ್ನೆಲುಬು ಎಂದು ಕರೆಯಲಾಗುತ್ತದೆ. ಆದರೆ ಹತ್ತಿರದಿಂದ ನೋಡಿದರೆ, ಅದರ ಹೃದಯದಲ್ಲಿ ಮಹಿಳಾ ಉದ್ಯಮಿಗಳ ಶಾಂತಶಕ್ತಿವನ್ನು ಕಾಣಬಹುದು. ಆ ಶಾಂತ ಶಕ್ತಿಯು ಅಂತಿಮವಾಗಿ ರಾಷ್ಟ್ರೀಯ ಮನ್ನಣೆ, ಸಾಂಸ್ಥಿಕ ಬೆಂಬಲ ಮತ್ತು ನೀತಿ ಬೆಂಬಲವನ್ನು ಪಡೆಯುತ್ತಿದೆ. ಇದೆಲ್ಲದಕ್ಕೂ ಆ ಶಾಂತ ಶಕ್ತಿ ಸದಾ ಅರ್ಹವಾದುದಷ್ಟೇ.

ಯಶೋಗಾಥೆ ಹೇಳುವ ಅಂಕಿ ಅಂಶಗಳು

ಭಾರತದ 'ಎಂಎಸ್‌ಎಂಇ' ಪರಿಸರ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣವು ನಿರಂತರವಾಗಿ ಹೆಚ್ಚುತ್ತಿದೆ. 2026ರ ಆರಂಭದ ವೇಳೆಗೆ, 'ಉದ್ಯಮ್ ನೋಂದಣಿ ಪೋರ್ಟಲ್' ಮತ್ತು 'ಉದ್ಯಮ್ ಅಸಿಸ್ಟ್ ವೇದಿಕೆ'ಯಲ್ಲಿ 3.11 ಕೋಟಿಗೂ ಹೆಚ್ಚು ಮಹಿಳಾ ಉದ್ಯಮಗಳು ನೋಂದಾಯಿಸಲ್ಪಟ್ಟಿವೆ. ಈ ನೋಂದಣಿಗಳ ಪ್ರಕಾರ ದೇಶದ ಎಲ್ಲಾ ನೋಂದಾಯಿತ ಎಂಎಸ್‌ಎಂಇಗಳಲ್ಲಿ ಮಹಿಳಾ ಮಾಲೀಕತ್ವದ ಉದ್ಯಮಗಳು ಸುಮಾರು ಶೇ.40ರಷ್ಟು ಪಾಲನ್ನು ಹೊಂದಿವೆ. ಮಹಿಳಾ ಉದ್ಯಮಿಗಳಿಗೆ ಪರಿಣಾಮಕಾರಿಯಾದ ಸುಧಾರಣೆಗಳಲ್ಲಿ ಒಂದೆಂದರೆ ಅದು ಉದ್ಯಮ್ ನೋಂದಣಿ ಪೋರ್ಟಲ್. ಸಂಪೂರ್ಣವಾಗಿ ಆನ್‌ಲೈನ್ ಆಗಿರುವುದು ಅಧಿಕಾರಶಾಹಿಯ ಅಡತಡೆಯನ್ನು ನಿವಾರಿಸಿತು. ಜನವರಿ 2023ರಲ್ಲಿ ಪ್ರಾರಂಭಿಸಲಾದ ಉದ್ಯಮ್ ಅಸಿಸ್ಟ್, 'ಪ್ಯಾನ್ '(PAN) ಅಥವಾ 'ಜಿಎಸ್‌ಟಿಐಎನ್' ಹೊಂದಿರದ ಅನೌಪಚಾರಿಕ ಆರ್ಥಿಕತೆಯ ಮಹಿಳೆಯರನ್ನು ತಲುಪಿತು. ಆ ಮೂಲಕ ಆದ್ಯತೆಯ ವಲಯದ ಸಾಲ ಮತ್ತು ಸರ್ಕಾರಿ ಯೋಜನೆಯ ಪ್ರಯೋಜನಗಳ ವ್ಯಾಪ್ತಿಗೆ ತಂದಿತು.

ಆರ್ಥಿಕ ಶಕ್ತಿಯಾಗಿ ನಾರೀಶಕ್ತಿ

ಮಹಿಳೆಯರ ಸಬಲೀಕರಣವು ರಾಷ್ಟ್ರೀಯ ಕಾರ್ಯತಂತ್ರ ಎಂದು ಪ್ರಧಾನಿ ಮೋದಿ ಒತ್ತಿ ಹೇಳುತ್ತಾ ಬಂದಿದ್ದಾರೆ. ಅವರ ಮಾತುಗಳಲ್ಲಿ ಹೇಳುವುದಾದರೆ, ಮಹಿಳೆಯರು ಸಬಲೀಕರಣಗೊಂಡಾಗ ಕುಟುಂಬಗಳು ಸಶಕ್ತವಾಗುತ್ತವೆ. ಕುಟುಂಬಗಳು ಸಶಕ್ತವಾದಾಗ, ರಾಷ್ಟ್ರದ ಬಲಿಷ್ಠ ಬೆಳವಣಿಗೆ ಸಾಧ್ಯವಾಗುತ್ತದೆ. ನಾರಿ ಶಕ್ತಿ ವಂದನ್ ಅಧಿನಿಯಮವು ರಾಜಕೀಯ ಕ್ಷೇತ್ರದಲ್ಲಿ ಈ ತತ್ವದ ಅತ್ಯಂತ ಸ್ಪಷ್ಟ ಅಭಿವ್ಯಕ್ತಿಯಾಗಿದೆ. ಆದರೆ ಆರ್ಥಿಕ ಕ್ಷೇತ್ರದಲ್ಲಿ ವಿಶೇಷವಾಗಿ ಎಂಎಸ್‌ಎಂಇ ವಲಯದಲ್ಲಿ ಮಹಿಳೆಯರ ಬಗ್ಗೆ ಸರ್ಕಾರದ ಬದ್ಧತೆಯನ್ನು ಸಮಗ್ರ ಮತ್ತು ಬಹುಮುಖಿ ನೀತಿಗಳಲ್ಲಿ ಕಾಣಬಹುದಾಗಿದೆ.

ಎಂಎಸ್‌ಎಂಇ ಸಚಿವಾಲಯದ ಕಾರ್ಯಕ್ರಮಗಳು ಪೂರೈಕೆ ಬದಿಯಲ್ಲಿ ಎಂಟು ಪ್ರಮುಖ ಮಧ್ಯಸ್ಥಿಕೆ ವಿಭಾಗಗಳ ಮೂಲಕ ಉದ್ಯಮಿಗಳನ್ನು ಬೆಂಬಲಿಸುತ್ತವೆ. ತಂತ್ರಜ್ಞಾನದ ಪ್ರವೇಶ, ಸಾಲ ಮತ್ತು ಹಣಕಾಸಿನ ಲಭ್ಯತೆ, ಡಿಜಿಟಲೀಕರಣವನ್ನು ಉತ್ತೇಜಿಸುವುದು, ಮೂಲಸೌಕರ್ಯ ಬೆಂಬಲ, ಔಪಚಾರಿಕೀಕರಣ ಮತ್ತು ಸೇರ್ಪಡೆ, ಮಾರುಕಟ್ಟೆಗೆ ಪ್ರವೇಶ ಮತ್ತು ಉದ್ಯಮ-ದರ್ಜೆಯ ಕೌಶಲ್ಯ. 5 ವರ್ಷಗಳಲ್ಲಿ ಪ್ರಧಾನ ಮಂತ್ರಿ ಉದ್ಯೋಗ ಸೃಷ್ಟಿ ಕಾರ್ಯಕ್ರಮದ ಅಡಿಯಲ್ಲಿ 3.2 ಲಕ್ಷಕ್ಕೂ ಹೆಚ್ಚು ಮಹಿಳಾ ಮಾಲೀಕತ್ವದ ಉದ್ಯಮಗಳಿಗೆ ಬೆಂಬಲ ನೀಡಲಾಗಿದೆ. ಇತ್ತೀಚಿನ ದತ್ತಾಂಶದ ಪ್ರಕಾರ, ಒಟ್ಟಾರೆ ಪಿಎಂಇಜಿಪಿ ಫಲಾನುಭವಿಗಳಲ್ಲಿ ಶೇ. 39ರಷ್ಟು ಮಹಿಳೆಯರೇ ಆಗಿದ್ದು, ಇದು ಉದ್ಯಮಿ ಮಹಿಳೆಯರ ಬೆಳವಣಿಗೆಯ ಹಸಿವು ಪ್ರತಿಬಿಂಬಿಸುತ್ತದೆ. 'ಅತಿ ಸಣ್ಣ ಮತ್ತು ಸಣ್ಣ ಉದ್ಯಮಗಳಿಗಾಗಿ ಸಾಲ ಖಾತರಿ ನಿಧಿ ಟ್ರಸ್ಟ್' ಮಹಿಳಾ ಸಾಲಗಾರರಿಗೆ ಖಾತರಿಯ ವ್ಯಾಪ್ತಿಯನ್ನು ಶೇಕಡಾ 90ರವರೆಗೆ ಹೆಚ್ಚಿಸಿದೆ.

'ಮಹಿಳಾ ನಾರು ಯೋಜನೆ'ಯು ಮಹಿಳಾ ಕುಶಲಕರ್ಮಿಗಳಿಗೆ ವಿಶೇಷ ಕೌಶಲ್ಯ ಅಭಿವೃದ್ಧಿ ಮತ್ತು ಆರ್ಥಿಕ ಬೆಂಬಲವನ್ನು ನೀಡುತ್ತದೆ. ಎಂಎಸ್ ಎಂಇ-ಟೀಮ್ (ಟ್ರೇಡ್‌ಎನೇಬಲ್‌ಮೆಂಟ್ ಅಂಡ್ ಮಾರ್ಕೆಟಿಂಗ್) ಮೂಲಕ ಮಾರುಕಟ್ಟೆ ಸನ್ನದ್ಧತೆಗಾಗಿ ಮಹಿಳೆಯರಿಗೆ ಬೆಂಬಲ ಒದಗಿಸಲು ಗಮನ ನೀಡಲಾಗುತ್ತಿದೆ. ಇದರ ಅಡಿಯಲ್ಲಿ ಯೋಜನೆಯ 5 ಲಕ್ಷ ಫಲಾನುಭವಿಗಳಲ್ಲಿ ಶೇ.50ರಷ್ಟು ಮಹಿಳೆಯರಾಗಿರುವಂತೆ ಖಾತರಿಪಡಿಸುವ ಗುರಿಯನ್ನು ಹೊಂದಲಾಗಿದೆ. 'ಯಶಸ್ವಿನಿ' ಅಭಿಯಾನವು ಎಂಎಸ್‌ಎಂಇ ಯೋಜನೆಗಳು ಮತ್ತು ನೋಂದಣಿ ಪ್ರಯೋಜನಗಳ ಬಗ್ಗೆ ಮಹಿಳೆಯರಿಗೆ ತಿಳಿಸಲು ಮೀಸಲಾದ ರಾಷ್ಟ್ರವ್ಯಾಪಿ ಜಾಗೃತಿ ಅಭಿಯಾನವಾಗಿದೆ.

ಕೌಶಲ್ಯ, ಆತ್ಮವಿಶ್ವಾಸ, ಸಮುದಾಯ

ಉದ್ಯಮಶೀಲತೆ ಎನ್ನುವುದು ಸಾಲ ಮತ್ತು ಮಾರುಕಟ್ಟೆಗಳನ್ನು ಮೀರಿ ಕೌಶಲ್ಯ ಮತ್ತು ಆತ್ಮವಿಶ್ವಾಸದ ವಿಷಯವಾಗಿದೆ. ಸಾಂಪ್ರದಾಯಿಕವಾಗಿ ಮಹಿಳೆಯರೇ ಸಮುದಾಯಗಳ ಆರ್ಥಿಕ ಬೆನ್ನೆಲುಬಾಗಿರುವ ಈಶಾನ್ಯ ಭಾರತದಲ್ಲಿ, ಉದ್ದೇಶಿತ ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ತರಬೇತಿ ಪಡೆದವರಲ್ಲಿ ಮಹಿಳೆಯರೇ ಗರಿಷ್ಠ ಪ್ರಮಾಣದಲ್ಲಿರುವುದನ್ನು ಖಾತರಿಪಡಿಸಲಾಗಿದೆ. ಸ್ವಸಹಾಯ ಗುಂಪುಗಳನ್ನು 'ಎಂಎಸ್‌ಎಂಇ' ಬೆಂಬಲ ಪರಿಸರ ವ್ಯವಸ್ಥೆಗಳೊಂದಿಗೆ ಸಂಯೋಜಿಸಲಾಗಿದೆ, ಪರಸ್ಪರ ಬೆಂಬಲಿಸುವ ಮಹಿಳಾ ಉದ್ಯಮಿಗಳ ಸಮುದಾಯಗಳನ್ನು ರಚಿಸಲಾಗಿದೆ. 'ನಾರಿ ಶಕ್ತಿ ವಂದನ್ ಅಧಿನಿಯಮ' ಭಾರತದ ಮಹಿಳೆಯರು ದೇಶದ ಸಂಸತ್ತಿಗೆ ಸೇರಿದವರು ಎಂದು ಜಗತ್ತಿಗೆ ತಿಳಿಸಿದೆ. ಭಾರತದ ಮಹಿಳೆಯರು ಇಲ್ಲಿನ ಮಾರುಕಟ್ಟೆಗಳು, ಇಲ್ಲಿನ ಉದ್ಯಮಗಳು, ಇಲ್ಲಿನ ರಫ್ತು ಸರಪಳಿಗಳು, ಇಲ್ಲಿನ ನಾವೀನ್ಯತೆ ಕೇಂದ್ರಗಳು ಮತ್ತು ಇಲ್ಲಿನ ಆಡಳಿತ ಮಂಡಳಿಗಳ ಭಾಗವಾಗಿದ್ದಾರೆ ಎಂದು ಎಂಎಸ್‌ಎಂಇ ನೀತಿಗಳು ಹೇಳುತ್ತಿವೆ.

ಮೋದಿ 2047ರ ವಿಕಸಿತ ಭಾರತಕ್ಕಾಗಿ ತಮ್ಮ ದೂರದೃಷ್ಟಿಗೆ ಅಡಿಪಾಯವೆಂದು ಪ್ರತಿಪಾದಿಸಿರುವ ಅದೇ ಸತ್ಯದ ಎರಡು ಅಭಿವ್ಯಕ್ತಿಗಳು ಇವಾಗಿವೆ. ಅಭಿವೃದ್ಧಿ ಹೊಂದಿದ ಭಾರತವು 3 ಕೋಟಿಗೂ ಅಧಿಕ (ಮತ್ತಷ್ಟು ಹೆಚ್ಚುತ್ತಿರುವ) ಮಹಿಳಾ ಉದ್ಯಮಿಗಳಿಂದಲೇ ಅಭಿವೃದ್ಧಿಯ ಎಂಜಿನ್ ಆಗಿರುವ ದೇಶವಾಗಿರಲಿದೆ. ಆದರೆ ನಾವು ಇನ್ನೂ ಅಲ್ಲಿಗೆ ತಲುಪಿಲ್ಲ. ಈ ಸರ್ಕಾರದ ಮೇಲ್ವಿಚಾರಣೆಯಲ್ಲಿ ಮತ್ತು ನಮ್ಮ ಪ್ರಧಾನಮಂತ್ರಿಯವರ ಬದ್ಧತೆಯೊಂದಿಗೆ ನಾವು ನಿಸ್ಸಂದೇಹವಾಗಿ ಉತ್ತಮ ಹಾದಿಯಲ್ಲಿದ್ದೇವೆ.

ಇಸ್ರೇಲ್–ಲೆಬನಾನ್ ಕದನ ವಿರಾಮ ಒಪ್ಪಂದ ಅನ್ವಯ ವಾಣಿಜ್ಯ ಹಡಗುಗಳು ಸಾಗಲು ಜಲಸಂಧಿ ತೆರೆದ ಇರಾನ್

ಹಾರ್ಮುಜ್: ಮುಕ್ತ ಸಂಚಾರಕ್ಕೆ ಅವಕಾಶ

- ಅಮೆರಿಕ-ಇರಾನ್ ಒಪ್ಪಂದಕ್ಕೆ ಬರುವವರೆಗೆ ಈ ನಿಲುವು
- ಇರಾನ್ ವಿದೇಶಾಂಗ ಸಚಿವ, ಅಧ್ಯಕ್ಷ ಟ್ರಂಪ್ ಘೋಷಣೆ


ಟೆಹ್ರಾನ್: ಇರಾನ್ ಮತ್ತು ಅಮೆರಿಕ ರಾಷ್ಟ್ರಗಳು ಮಧ್ಯಪ್ರಾಚ್ಯ ಯುದ್ಧ ಕೊನೆಗೊಳಿಸಲು ಒಪ್ಪಂದಕ್ಕೆ ಬರುವವರೆಗೆ ಇಸ್ರೇಲ್–ಲೆಬನಾನ್ ಯುದ್ಧ ವಿರಾಮ ಒಪ್ಪಂದದ ಆಧಾರದಲ್ಲಿ ವಾಣಿಜ್ಯ ಹಡಗುಗಳ ಮುಕ್ತ ಸಂಚಾರಕ್ಕಾಗಿ ಹಾರ್ಮುಜ್ ಜಲಸಂಧಿಯನ್ನು ಇರಾನ್ ತೆರೆಯಲಿದೆ. ವಾಣಿಜ್ಯ ಹಡಗುಗಳ ಮುಕ್ತ ಸಂಚಾರಕ್ಕಾಗಿ ಹಾರ್ಮುಜ್ ಜಲಸಂಧಿಯನ್ನು ಇರಾನ್ ಸಂಪೂರ್ಣ ತೆರೆಯಲಿದೆ



ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಘೋಷಿಸಿದ್ದಲ್ಲದೆ, ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರೂ ದೃಢೀಕರಿಸಿದ್ದಾರೆ. ಇಸ್ರೇಲ್–ಲೆಬನಾನ್ ನಡುವಿನ 10 ದಿನಗಳ ಕದನ ವಿರಾಮ ಒಪ್ಪಂದದಲ್ಲಿ ಉಳಿದಿರುವ ದಿನಗಳ ಕಾಲ ವಾಣಿಜ್ಯ ಹಡಗುಗಳ ಮುಕ್ತ ಸಂಚಾರಕ್ಕೆ ಅವಕಾಶ ನೀಡಲಾಗುವುದು ಎಂದು ಅಬ್ಬಾಸ್ ಸ್ಪಷ್ಟಪಡಿಸಿದ್ದಾರೆ.

ಮ್ಯಾಕ್ರಾನ್, ಸ್ಟಾರ್ಮರ್ ಸ್ವಾಗತ

ಹಾರ್ಮುಜ್ ತಾತ್ಕಾಲಿಕವಾಗಿ ತೆರೆಯಲು ಇರಾನ್ ಒಪ್ಪಿಕೊಂಡಿರುವುದನ್ನು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ಮತ್ತು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಶುಕ್ರವಾರ ಸ್ವಾಗತಿಸಿದ್ದಾರೆ. ಇರಾನ್ ನಿರ್ಧಾರವನ್ನು ಸ್ವಾಗತಿಸಿದ ಮ್ಯಾಕ್ರಾನ್, ಎಲ್ಲವೂ ಸರಿಯಾದ ದಿಶೆಯಲ್ಲಿ ಸಾಗುತ್ತಿದೆ. ಹಾರ್ಮುಜ್‌ನಲ್ಲಿ ಮುಕ್ತ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಮತ್ತು ಸಾಗರೋತ್ತರ ನಿಯಮಗಳ ಪಾಲನೆ ಆಗಬೇಕು. ಮುಂದಿನ ವಾರ ಲಂಡನ್‌ನಲ್ಲಿ ಹಾರ್ಮುಜ್ ಪರಿಸ್ಥಿತಿ ಅವಲೋಕಿಸಲು 40 ರಾಷ್ಟ್ರಗಳ ಸಭೆ ಕರೆದಿದ್ದೇವೆ ಎಂದು ಹೇಳಿದ್ದಾರೆ. ನಮ್ಮ ಜನರಿಗೆ ಶಾಂತಿ ಮತ್ತು ಸ್ಥಿರತೆ ಬೇಕಾಗಿದೆ. ಅಂತಾರಾಷ್ಟ್ರೀಯ ನಾಯಕರೆಲ್ಲರೂ ಜತೆಯಾಗಿ ಇದನ್ನೇ ಪ್ರತಿಪಾದಿಸಿದ್ದರಿಂದ ಸಾಧ್ಯವಾಗಿದೆ ಎಂದು ಸ್ಟಾರ್ಮರ್ ಹೇಳಿದ್ದಾರೆ.



ಕಚ್ಚಾ ತೈಲ ಬೆಲೆ ಶೇ.11 ಇಳಿಕೆ

ವಾಣಿಜ್ಯ ಹಡಗುಗಳ ಮುಕ್ತ ಸಂಚಾರಕ್ಕೆ ಹಾರ್ಮುಜ್ ಜಲಸಂಧಿಯನ್ನು ಪೂರ್ಣ ಪ್ರಮಾಣದಲ್ಲಿ ತೆರೆಯುವುದಾಗಿ ಇರಾನ್ ವಿದೇಶಾಂಗ ಸಚಿವರು ಘೋಷಿಸಿದ ತಕ್ಷಣ ಶುಕ್ರವಾರ ರಾತ್ರಿ ಜಾಗತಿಕ ಕಚ್ಚಾ ತೈಲ ಬೆಲೆ ಶೇ.11ರಷ್ಟು ಇಳಿಕೆಯಾಗಿದೆ. ಬ್ರೆಂಟ್ ಕಚ್ಚಾ ತೈಲ ಬೆಲೆ 11.12 ಡಾಲರ್ (ಶೇ.11.2ರಷ್ಟು) ಇಳಿಕೆಯಾಗಿದೆ. ಇದರಿಂದ ಪ್ರತಿ ಬ್ಯಾರೆಲ್ ಕಚ್ಚಾ ತೈಲ ಬೆಲೆ 88.27 ಡಾಲರ್ ಅನ್ನು ತಲುಪಿದೆ. ಅಮೆರಿಕದ ವೆಸ್ಟ್ ಟೆಕ್ಸಾಸ್ ಕಚ್ಚಾ ತೈಲ 11.4 ಡಾಲರ್‌ನಷ್ಟು (ಶೇ.12) ಇಳಿಕೆಯಾಗಿದ್ದು, ಇದರಿಂದ ಪ್ರತಿ ಬ್ಯಾರೆಲ್ ಕಚ್ಚಾ ತೈಲದ ಬೆಲೆಯು 83.29 ಡಾಲರ್ ಅನ್ನು ತಲುಪಿದೆ.



ನೌಕಾ ದಿಗ್ಬಂಧನ ಇರಲಿದೆ: ಅಧ್ಯಕ್ಷ ಡೊನಾಲ್ಡ್ ಟ್ರಂಪ್

ಹಾರ್ಮುಜ್ ಜಲಸಂಧಿಯನ್ನು ಇರಾನ್ ತೆರೆದರೂ ಸಹ ಅಮೆರಿಕ–ಇರಾನ್ ನಡುವಿನ ಕದನ ವಿರಾಮ ಒಪ್ಪಂದ ಶೇ.100ರಷ್ಟು ಇತ್ಯರ್ಥ ಆಗುವವರೆಗೆ ಇರಾನ್ ಬಂದರುಗಳು ಮತ್ತು ಕರಾವಳಿ ಪ್ರದೇಶಗಳ ಮೇಲೆ ಅಮೆರಿಕ ಸೇನೆ ಹೇರಿದ್ದ ನೌಕಾ ದಿಗ್ಬಂಧನವು ಮುಂದುವರಿಯಲಿದೆ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಇಸ್ರೇಲ್‌ಗಿದೆ ಸ್ವಯಂ ರಕ್ಷಣೆ ಹಕ್ಕು: ಕದನ ವಿರಾಮ ಒಪ್ಪಂದ ಪ್ರಕಾರ, ದಕ್ಷಿಣ ಲೆಬನಾನ್ ಪ್ರದೇಶದಲ್ಲಿ ಹಿಜ್ಬೊಲ್ಲಾ ಉಗ್ರರು ಅಥವಾ ಲೆಬನಾನ್ ನಾಗರಿಕರ ಮೇಲೆ ಇಸ್ರೇಲ್ ಸೇನೆ ದಾಳಿ ನಡೆಸುವಂತಿಲ್ಲ. ಆದರೆ ಸ್ವಯಂ ರಕ್ಷಣೆಯ ಹಕ್ಕನ್ನು ಇಸ್ರೇಲ್ ಉಳಿಸಿಕೊಂಡಿದೆ. ಆದರೆ ಇಸ್ರೇಲ್ ಸೇನೆ ಬೈರೂತ್ ಮತ್ತು ದಕ್ಷಿಣ ಲೆಬನಾನ್‌ನಲ್ಲಿ ಕದನ ವಿರಾಮ ಉಲ್ಲಂಘಿಸಿ ದಾಳಿ ನಡೆಸಿರುವುದಾಗಿ ಲೆಬನಾನ್ ಆರೋಪಿಸಿದೆ.

ಮಧ್ಯಪ್ರಾಚ್ಯ ಸಂಘರ್ಷ: ಪಾಕ್ ತತ್ತರ, 7ಗಂಟೆ ವಿದ್ಯುತ್ ಕಡಿತ!

ಇಸ್ಲಾಮಾಬಾದ್: ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಪಾಕಿಸ್ತಾನ ತೀವ್ರವಾಗಿ ತತ್ತರಿಸಿದ್ದು, ಇಡಿ ದೇಶದಲ್ಲಿ ದಿನಕ್ಕೆ 6ರಿಂದ 7ಗಂಟೆ ಕಾಲ ವಿದ್ಯುತ್ ಕಡಿತ ಅನಿವಾರ್ಯವಾಗಿದೆ . ಇದು ಪಾಕಿಸ್ತಾನ ಸರಕಾರ ಹಿಂದೆ ಘೋಷಿಸಿದ್ದಕ್ಕಿಂತ ಮೂರು ಪಟ್ಟು ಹೆಚ್ಚಿನ ಕಡಿತವಾಗಿದೆ .ಹಾಗೆಯೇ ಎಲ್ ಎನ್‌ಜಿ ಬಿಕ್ಕಟ್ಟಿಗೆ ಮಧ್ಯಪ್ರಾಚ್ಯ ಯುದ್ಧವೇ ಕಾರಣವಾಗಿದೆ, ಹಾಗೆಯೇ ವಿದ್ಯುತ್ ಕೊರತೆಗೆ ಜಲವಿದ್ಯುತ್ ಉತ್ಪಾದನೆಯಲ್ಲಿ ಆಗಿರುವ ಕುಸಿತ ಕಾರಣ .ಪರಿಸ್ಥಿತಿಯ ಮೇಲೆ ಈಗ ನಮಗೆ ಯಾವುದೇ ನಿಯಂತ್ರಣ ಇಲ್ಲದಂತಾಗಿದೆ ಎಂದು ಅಲ್ಲಿನ ಇಂಧನ ಸಚಿವ ಅವೈಸ್ ಲೆಘಾರಿ ಹೇಳಿದ್ದಾರೆ. ರಾತ್ರಿ ವೇಳೆ ಮತ್ತು ಪೀಕ್ ಅವರ್‌ಗಳಲ್ಲಿ ನಮಗೆ ವಿದ್ಯುತ್ ಒದಗಿಸಲು ಸಾಧ್ಯವಾಗದೆ ಜನತೆಗೆ ಅನಾನುಕೂಲವಾಗುತ್ತಿದ್ದಲ್ಲಿ, ನಾನೇ ಇದಕ್ಕೆ ಉತ್ತರದಾಯಿ. ಇದಕ್ಕಾಗಿ ಕ್ಷಮೆ ಯಾಚಿಸುತ್ತೇನೆ. ಆದರೆ ಇಂತಹ ಸನ್ನಿವೇಶ ಯಾಕೆ ಉಂಟಾಗಿದೆ ಎಂದರೆ ಪರಿಸ್ಥಿತಿಯ ಮೇಲೆ ನಮ್ಮ ನಿಯಂತ್ರಣ ತಪ್ಪಿದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಪಾಕಿಸ್ತಾನವೀಗ 3,400ಮೆ.ವಾ.ವಿದ್ಯುತ್ ಕೊರತೆ ಎದುರಿಸುತ್ತಿದೆ. ಜಲವಿದ್ಯುತ್ ಉತ್ಪಾದನೆಯಲ್ಲಿ ಆಗಿರುವ ಕುಸಿತ ಮತ್ತು ಎಲ್ ಎನ್‌ಜಿ ಆಧಾರಿತ ವಿದ್ಯುತ್ ಉತ್ಪಾದನೆಯಲ್ಲಾಗಿರುವ ತೀವ್ರ ಕುಸಿತ ಕಾರಣವಾಗಿದೆ .6000ಮೆ.ವಾ.ಸಾಮರ್ಥ್ಯದ ವಿದ್ಯುತ್ ಸ್ಥಾವರದಲ್ಲಿ ಈಗ ಕೇವಲ 500ಮೆ.ವಾ.ವಿದ್ಯುತ್ ಮಾತ್ರವೇ ಉತ್ಪಾದನೆಯಾಗುತ್ತಿದೆ. ಇದಕ್ಕೆ ಖತಾರ್‌ನಿಂದ ಎಲ್‌ಎನ್‌ಜಿ ಆಮದಿನಲ್ಲಾಗಿರುವ ಅಡಚಣೆಯೇ ಕಾರಣ. ಇದರಿಂದಾಗಿ ನಾವು ಈಗ ದೇಶಾದ್ಯಂತ ವಿದ್ಯುತ್ ಕಡಿತ ಮಾಡುವುದು ಅನಿವಾರ್ಯವಾಗಿದೆ ಎಂದು ಅವರು ತಿಳಿಸಿದರು. ಪಾಕಿಸ್ತಾನದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಗಳಲ್ಲೂ ಭಾರೀ ಏರಿಕೆ ಉಂಟಾಗಿದ್ದು, ಅಡುಗೆ ಅನಿಲ ಪೂರೈಕೆಯಲ್ಲೂ ಭಾರೀ ವ್ಯತ್ಯಯವುಂಟಾಗಿದೆ.

ಸ್ನೇಹಿತ ಪ್ರಧಾನಿ ಮೋದಿ ಜತೆ ಫಲಪ್ರದ ಮಾತುಕತೆ: ಟ್ರಂಪ್

ವಾಷಿಂಗ್ಟನ್: ಈ ವಾರದ ಆರಂಭದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಬಹಳ ಉತ್ತಮ ದೂರವಾಣಿ ಸಂಭಾಷಣೆ ನಡೆದಿತ್ತು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಗುರುವಾರ ತಡರಾತ್ರಿ ಶ್ವೇತಭವನದಲ್ಲಿ ಹೇಳಿದರು.



ಮಂಗಳವಾರ 40 ನಿಮಿಷಗಳ ದೂರವಾಣಿ ಸಂಭಾಷಣೆ

ನಾನು ಅವರೊಂದಿಗೆ ಬಹಳ ಉತ್ತಮ ಮಾತುಕತೆ ನಡೆಸಿದ್ದೇನೆ. ಅವರು ನನ್ನ ಭಾರತದಲ್ಲಿನ ಸ್ನೇಹಿತರು ಮತ್ತು ಅವರು ಉತ್ತಮ ಕೆಲಸ ಮಾಡುತ್ತಿದ್ದಾರೆ. ನಮ್ಮ ಮಾತುಕತೆ ತುಂಬಾ ಉತ್ತಮವಾಗಿತ್ತು ಎಂದು ಎಎನ್‌ಐ ಕೇಳಿದ ಪ್ರಶ್ನೆಗೆ ಟ್ರಂಪ್ ಪ್ರತಿಕ್ರಿಯೆ ನೀಡಿದ್ದರು.

ಮಂಗಳವಾರ ಪ್ರಧಾನಿ ಮೋದಿಗೆ ದೂರವಾಣಿ ಕರೆ ಮಾಡಿದ ಕುರಿತು ಟ್ರಂಪ್ ತಡವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಆ ವೇಳೆ ಇಬ್ಬರು ನಾಯಕರು ದ್ವಿಪಕ್ಷೀಯ ಸಂಬಂಧ ಹಾಗೂ ಪಶ್ಚಿಮ ಏಷ್ಯಾ ಯುದ್ಧ ಮತ್ತು ಹಾರ್ಮುಜ್ ಜಲಸಂಧಿ ತೆರೆಯುವ ಕುರಿತು ಪರಿಸ್ಥಿತಿ ಅವಲೋಕನ ನಡೆಸಿದ್ದರು.

ಸ್ನೇಹಿತ ಅಧ್ಯಕ್ಷ ಟ್ರಂಪ್‌ರಿಂದ ಕರೆ ಸ್ವೀಕರಿಸಿದೆ. ವಿವಿಧ ಕ್ಷೇತ್ರಗಳಲ್ಲಿ ನಮ್ಮ ದ್ವಿಪಕ್ಷೀಯ ಸಹಕಾರದಲ್ಲಿ ಸಾಧಿಸಿದ ಪ್ರಗತಿ ಪರಿಶೀಲಿಸಿದ್ದೇವೆ. ಎಲ್ಲಾ ಕ್ಷೇತ್ರಗಳಲ್ಲಿ ನಮ್ಮ ಸಮಗ್ರ ಜಾಗತಿಕ ತಂತ್ರಜ್ಞಾನ ಸಹಭಾಗಿತ್ವವನ್ನು ಮತ್ತಷ್ಟು ಬಲಪಡಿಸಲು ನಾವು ಬದ್ಧರಾಗಿದ್ದೇವೆ. ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಬಗ್ಗೆ ಕೂಡ ಚರ್ಚಿಸಿ, ಹಾರ್ಮುಜ್ ಜಲಸಂಧಿಯನ್ನು ತೆರೆಯುವ ಮತ್ತು ಸುರಕ್ಷಿತವಾಗಿ ಇರಿಸುವ ಮಹತ್ವವನ್ನು ಒತ್ತಿ ಹೇಳಿದ್ದೇವೆ ಎಂದು ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು.

ಅಮೆರಿಕ-ಇರಾನ್ ಮಧ್ಯೆ ದ್ವಿತೀಯ ಹಂತದ ಚರ್ಚೆಗೆ ಪಾಕ್‌ನಲ್ಲಿ ಸಿದ್ಧತೆ

ಇಸ್ಲಾಮಾಬಾದ್: ಅಮೆರಿಕ–ಇರಾನ್ ಮಧ್ಯೆ ಮುಂದಿನ ವಾರ ನಡೆಯಲಿರುವ ದ್ವಿತೀಯ ಹಂತದ ಕದನ ವಿರಾಮ ಮಾತುಕತೆಗೆ ಪಾಕಿಸ್ತಾನ ಸಕಲ ಸಿದ್ಧತೆಗಳನ್ನು ಆರಂಭಿಸಿದೆ ಎಂದು ಶುಕ್ರವಾರ ಪಾಕ್ ಅಧಿಕಾರಿಗಳು ತಿಳಿಸಿದ್ದಾರೆ. ಏ.22ರಂದು ಅಮೆರಿಕ–ಇರಾನ್ ತಾತ್ಕಾಲಿಕ ಕದನ ವಿರಾಮ ಕೊನೆಗೊಳ್ಳಲಿದ್ದು, ದ್ವಿತೀಯ ಹಂತದ ಮಾತುಕತೆಗೆ ಪಾಕ್ ಸಿದ್ಧತೆ ನಡೆಸುತ್ತಿದೆ.



ಮಧ್ಯಪ್ರಾಚ್ಯ ಯುದ್ಧವು ಜಾಗತಿಕ ಇಂಧನ ಪೂರೈಕೆಯನ್ನು ಅಸ್ತವ್ಯಸ್ತಗೊಳಿಸಿದೆ. ಈ ಯುದ್ಧದಿಂದ ಪಾಕ್ ಆರ್ಥಿಕತೆ ಇನ್ನಷ್ಟು ಕುಸಿತವನ್ನು ಕಂಡಿದೆ. ಇದರಿಂದ ಮೊದಲ ಮಾತುಕತೆ ವಿಫಲವಾದ ಬಳಿಕ ದ್ವಿತೀಯ ಹಂತದ ಮಾತುಕತೆಗೆ ಇರಾನ್ ಮತ್ತು ಅಮೆರಿಕವನ್ನು ಪಾಕ್ ಮನವೊಲಿಸಿದೆ.

ಸುಮಾರು 45 ವರ್ಷಗಳ ಬಳಿಕ ಎರಡು ವಾರದೊಳಗೆ ಅಮೆರಿಕ ಮತ್ತು ಇರಾನ್ ಇದು ಎರಡನೇ ಬಾರಿಗೆ ನೇರ ಚರ್ಚೆ ನಡೆಸಲಿವೆ. ಕಳೆದ ವಾರಾಂತ್ಯದಲ್ಲಿ ಅಮೆರಿಕ ಮತ್ತು ಇರಾನ್ ನಾಲ್ಕು ದಶಕಗಳ ಬಳಿಕ ನೇರ ಮಾತುಕತೆ ನಡೆಸಿದ್ದರೂ, ಒಪ್ಪಂದಕ್ಕೆ ಬರದೇ ಮಾತುಕತೆಗಳು ಅಂತ್ಯ ಕಂಡಿದ್ದವು. ಎರಡೂ ರಾಷ್ಟ್ರಗಳ ನಾಯಕರನ್ನು ಇನ್ನೊಮ್ಮೆ ನೇರ ಮಾತುಕತೆಗೆ ಕರೆತರಲು ಪಾಕ್ ತೀವ್ರ ರಾಜತಾಂತ್ರಿಕ ಚಟುವಟಿಕೆಗಳನ್ನು ನಡೆಸಿದೆ. ತಾತ್ಕಾಲಿಕವಾಗಿ ಘೋಷಿಸಲಾದ ಎರಡು ವಾರಗಳ ಕದನ ವಿರಾಮವನ್ನು ಎರಡೂ ದೇಶಗಳು ಮುಂದುವರಿಸುವ ಕಾರಣದಿಂದ, ಪಾಕಿಸ್ತಾನಕ್ಕೆ ತನ್ನ ಮಧ್ಯಸ್ಥಿಕೆ ಪ್ರಯತ್ನವನ್ನು ಪುನರಾರಂಭಿಸಲು ಅವಕಾಶ ಸಿಕ್ಕಿದಂತಾಗಿದೆ. ಪಾಕ್ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಬುಧವಾರ ಟೆಹ್ರಾನ್‌ಗೆ ಭೇಟಿ ನೀಡಿದರೆ, ಪ್ರಧಾನಿ ಶೆಹಬಾಜ್ ಶರೀಫ್ ಇದೇ ಹಿನ್ನೆಲೆ ಮೂರು ರಾಷ್ಟ್ರಗಳ ಪ್ರವಾಸವನ್ನು ನಡೆಸುತ್ತಿದ್ದಾರೆ.

ಸೌದಿ ಅರೇಬಿಯಾ ಮತ್ತು ಕತಾರ್ ನಾಯಕರೊಂದಿಗೆ ಮಾತುಕತೆ ನಡೆಸಿದ ಬಳಿಕ ಪಾಕ್ ಪ್ರಧಾನಿ ಗುರುವಾರ ರಾತ್ರಿ ಟರ್ಕಿಗೆ ಆಗಮಿಸಿದರೆ, ಸೇನಾ ಮುಖ್ಯಸ್ಥ ಮುನೀರ್ ಇರಾನ್‌ನ ರಾಜಕೀಯ ಮತ್ತು ಸೇನಾಧಿಕಾರಿಗಳೊಂದಿಗೆ ಇಪ್ಪತ್ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ಸಭೆ ನಡೆಸಿದ್ದಾರೆ.

ಪರಮಾಣು ಯೋಜನೆ ಕೈಬಿಡಲು ಸಿದ್ಧವಿಲ್ಲ ಇರಾನ್: ಟೆಹ್ರಾನ್ ತನ್ನ ಪರಮಾಣು ಬಾಂಬ್ ತಯಾರಿಕಾ ಯೋಜನೆ ಯನ್ನು ಕೈಬಿಡಲು ನಿರಾಕರಿಸಿ ರುವುದೇ ಅಮೆರಿಕ– ಇರಾನ್ ಮಧ್ಯೆ ಮಾತುಕತೆ ಒಪ್ಪಂದಕ್ಕೆ ಬರದಿರಲು ಪ್ರಮುಖ ಕಾರಣಗಳಲ್ಲೊಂದು ಎಂದು ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಹೇಳಿದ್ದಾರೆ.

ಭದ್ರತೆ ಹೆಚ್ಚಿಸಿದ ಪಾಕ್

ಇಸ್ಲಾಮಾಬಾದ್ ಮತ್ತು ರಾವಲ್ಪಿಂಡಿ ನಗರಗಳಲ್ಲಿ ಅಮೆರಿಕ–ಇರಾನ್ ನಡುವಿನ ದ್ವಿತೀಯ ಹಂತದ ಯುದ್ಧ ವಿರಾಮ ಒಪ್ಪಂದ ಮಾತುಕತೆಗಾಗಿ ಪೂರ್ವಸಿದ್ಧತೆಗಳು ಆರಂಭಗೊಂಡಿದ್ದು, ಇತರ ಪ್ರಾಂತ್ಯಗಳಿಂದ ಸಾವಿರಾರು ಪೊಲೀಸರು ಹಾಗೂ ಅರೆಸೈನಿಕ ಸಿಬ್ಬಂದಿ ಆಗಮಿಸುತ್ತಿದ್ದಾರೆ. ಸಾಮಾನ್ಯವಾಗಿ ದೊಡ್ಡ ಮಟ್ಟದ ಭದ್ರತಾ ವ್ಯವಸ್ಥೆ ಅಗತ್ಯವಿದ್ದಾಗ, ಇಸ್ಲಾಮಾಬಾದ್ ಆಡಳಿತವು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಇತರ ಪ್ರಾಂತ್ಯಗಳ ಸಹಾಯ ಪಡೆಯುತ್ತದೆ. ಮೊದಲ ಹಂತದ ಮಾತುಕತೆ ಸಂದರ್ಭ 10,000ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಇಸ್ಲಾಮಾಬಾದ್ ಮತ್ತು ರಾವಲ್ಪಿಂಡಿ ನಗರಗಳಲ್ಲಿ ವಾಹನ ಸಂಚಾರಕ್ಕೆ ಕಟ್ಟುನಿಟ್ಟಿನ ನಿರ್ಬಂಧಗಳನ್ನು ಹೇರಲಾಗಿದೆ. ಶಾಲಾ–ಕಾಲೇಜುಗಳನ್ನು, ವಿಮಾನ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಮಾರುಕಟ್ಟೆಗಳನ್ನೂ ಮುಚ್ಚುವ ಸಾಧ್ಯತೆಗಳಿವೆ.

ಶಾಂತಿ ಒಪ್ಪಂದ ಅಂತಿಮವಾದರೆ ಇಸ್ಲಾಮಾಬಾದ್‌ಗೆ ಭೇಟಿ: ಟ್ರಂಪ್

ಅಮೆರಿಕ–ಇರಾನ್ ನಡುವಿನ ಶಾಂತಿ ಮಾತುಕತೆ ಯಶಸ್ವಿಯಾಗಿ ಒಪ್ಪಂದಕ್ಕೆ ಸಹಿ ಹಾಕಿದರೆ ತಾನು ಇಸ್ಲಾಮಾಬಾದ್‌ಗೆ ಭೇಟಿ ನೀಡುವುದಾಗಿ ಗುರುವಾರ ತಡರಾತ್ರಿ, ಅಮೆರಿಕ ಅಧ್ಯಕ್ಷ ಟ್ರಂಪ್ ಹೇಳಿಕೊಂಡಿದ್ದಾರೆ. ಇದುವರೆಗೆ ನಾವು ಉತ್ತಮ ಮಾತುಕತೆ ನಡೆಸಿದ್ದೇವೆ ಎಂದು ಟ್ರಂಪ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಯುರೇನಿಯಂ ಹಸ್ತಾಂತರ ಅಲ್ಲಗಳೆದ ಇರಾನ್

ಸಮೃದ್ಧೀಕರಿಸಿದ ಯುರೇನಿಯಂ ಹಸ್ತಾಂತರಿಸಲು ಇರಾನ್ ಒಪ್ಪಿಕೊಂಡಿದೆ ಎಂದು ಹೇಳುವ ಮೂಲಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಪೇಚಿಗೆ ಸಿಲುಕಿದ್ದಾರೆ. ಇರಾನ್ ತನ್ನಲ್ಲಿರುವ ಸಮೃದ್ಧೀಕರಿಸಿದ ಯುರೇನಿಯಂ ಸಂಗ್ರಹವನ್ನು ಅಮೆರಿಕಕ್ಕೆ ಹಸ್ತಾಂತರಿಸುವ ಯಾವುದೇ ಒಪ್ಪಂದವನ್ನು ನಾವು ಮಾಡಿಕೊಂಡಿಲ್ಲ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಗೇರ್ ಘಾಲಿಬಫ್ ಸ್ಪಷ್ಟಪಡಿಸಿದ್ದಾರೆ. ಟ್ರಂಪ್ ಸುಳ್ಳು ಹೇಳಿದ್ದಾರೆ. ಇಂತಹ ಯಾವ ಒಪ್ಪಂದವೂ ಅಮೆರಿಕ–ಇರಾನ್ ನಡುವೆ ನಡೆದಿಲ್ಲವೆಂದು ಕೆಲವು ಇರಾನ್ ಮೂಲಗಳು ತಿಳಿಸಿವೆ.

ಕಿರುಸುದ್ದಿ

ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್‌ಗೆ ಹೈ ಆದೇಶ

ಹೊಸದಿಲ್ಲಿ: ಅಲಹಾಬಾದ್ ಹೈಕೋರ್ಟ್ (ಲಕ್ನೋ ಪೀಠ) ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರ ವಿರುದ್ಧ ಎಫ್‌ಐಆರ್ ದಾಖಲಿಸಲು ಮತ್ತು ಅವರ ಬ್ರಿಟಿಷ್ ಪೌರತ್ವದ ಬಗ್ಗೆ ತನಿಖೆ ನಡೆಸಲು ನಿರ್ದೇಶಿಸಿದೆ. ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದ ಲಕ್ನೋದ ಜನಪ್ರತಿನಿಧಿಗಳ ನ್ಯಾಯಾಲಯ ಜ.28ರ ಆದೇಶವನ್ನು ಪ್ರಶ್ನಿಸಿ ಬಿಜೆಪಿ ಕಾರ್ಯಕರ್ತ ಎಸ್. ವಿಘ್ನೇಶ್ ಶಿಶಿರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ವೇಳೆ ಅಹ್ಮದಾಬಾದ್ ಹೈಕೋರ್ಟ್ ಈ ಪ್ರಮುಖ ಆದೇಶ ನೀಡಿದೆ.

ಮರಳು ಮಾಫಿಯಾ: ಸಿಸಿಟಿವಿ ಅಳವಡಿಸಿ

ಹೊಸದಿಲ್ಲಿ: ರಾಷ್ಟ್ರೀಯ ಚಂಬಲ್ ಘರಿಯಾಲ್ ಅಭಯಾರಣ್ಯದಲ್ಲಿ ಅಕ್ರಮ ಮರಳು ಮಾಫಿಯಾ ತಡೆಗಟ್ಟಲು ಅರಣ್ಯ ಪ್ರದೇಶದಲ್ಲಿ ಸಿಸಿಟಿವಿ ಅಳವಡಿಸಲು ಮಧ್ಯಪ್ರದೇಶ, ರಾಜಸ್ಥಾನ ಮತ್ತು ಉತ್ತರಪ್ರದೇಶ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ಜಾದೂಗಾರ ಹೇಳಿಕೆ: ರಾಗಾ ವಿರುದ್ಧ ಬಿಜೆಪಿ ಆಕ್ರೋಶ

ಹೊಸದಿಲ್ಲಿ : ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ವಿಪಕ್ಷ ನಾಯಕ ರಾಹುಲ್ ಮಾಡಿದ ಟೀಕೆ ಲೋಕಸಭೆಯಲ್ಲಿ ಶುಕ್ರವಾರ ಕಾವೇರಿದ ಚರ್ಚೆಗೆ ಹೇತುವಾಯಿತು. ಪ್ರಧಾನಿ ಮೋದಿ ಅವರೋರ್ವ ಜಾದೂಗಾರನೆಂಬ ರಾಹುಲ್ ಟೀಕೆಯಿಂದ ಆಕ್ರೋಶಿತ ಸಚಿವ ರಾಜನಾಥ ಸಿಂಗ್, ತಮ್ಮ ಆಸನದಿಂದ ಎದ್ದು ನಿಂತು, ಇಂತಹ ಕಮೆಂಟ್‌ಗಳನ್ನು ಖಂಡಿಸಿದಷ್ಟೂ ಸಾಲದು, ಈ ರೀತಿ ಅಸಂಬದ್ಧ ಟೀಕೆ ಮೂಲಕ ರಾಹುಲ್ ರಾಷ್ಟ್ರೀಯ ಭಾವನೆಗಳಿಗೆ ಘಾಸಿ ಮಾಡುತ್ತಿದ್ದಾರೆ ಮತ್ತು ಸಶಸ್ತ್ರಪಡೆಗಳ ತ್ಯಾಗ ಬಲಿದಾನಗಳನ್ನು ಅಪಮಾನಿಸುತ್ತಿದ್ದಾರೆಂದು ಗುಡುಗಿದರು.

ಆಪರೇಷನ್ ಸಿಂದೂರ್ ಮತ್ತು ಬಾಲಾಕೋಟ್‌ನ ಜಾದೂಗಾರ ಈಗ ಸಿಕ್ಕಿಬಿದ್ದಿದ್ದಾರೆ. ಜಾದೂಗಾರನಿಗೂ ಉದ್ಯಮಿಗಳಿಗೂ ನಂಟಿದೆ ಎಂಬುದು ಎಲ್ಲರಿಗೂ ಗೊತ್ತು ಎಂದು ರಾಹುಲ್ ಸದನದಲ್ಲಿ ತಮ್ಮ ನಾಲಗೆ ಹರಿಯಬಿಟ್ಟಿದ್ದರು. ರಾಹುಲ್‌ರ ಈ ಅಸಂಬದ್ಧ ಟೀಕೆಗಳಿಂದ ಕೋಪಗೊಂಡ ಸಚಿವ ರಾಜನಾಥ ಸಿಂಗ್, ಪ್ರಧಾನಿ ಮೋದಿ, ಸಶಸ್ತ್ರ ಪಡೆಗಳನ್ನು ಹೀನಾಯವಾಗಿ ಟೀಕಿಸುತ್ತಿರುವ ವಿಪಕ್ಷ ನಾಯಕನ ವಿರುದ್ಧ ಕ್ರಮ ಕೈಗೊಳ್ಳಬೇಕು, ಅವರನ್ನು ಉಚ್ಚಾಟಿಸಬೇಕೆಂದು ಆಗ್ರಹಿಸಿದರು. ರಾಹುಲ್ ವ್ಯಂಗ್ಯವನ್ನು ಸಭಾಪತಿ ಓಂ ಬಿರ್ಲಾ ಕೂಡ ತೀಕ್ಷ್ಣವಾಗಿ ಖಂಡಿಸಿದರು. ಜಾದೂಗಾರ ಪದ ಬಳಕೆ ಅಸಾಂವಿಧಾನಿಕ ಎಂದು ರಾಹುಲ್‌ರನ್ನು ತರಾಟೆಗೆತ್ತಿಕೊಂಡರು.ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಮರುವಿಂಗಡಣೆ ಬಗ್ಗೆ ಚರ್ಚೆಗಾಗಿ ಆಯೋಜಿಸಲಾಗಿದ್ದ ವಿಶೇಷ ಅಧಿವೇಶನದಲ್ಲಿ ಈ ರೀತಿ ವಾಗ್ವಾದಗಳು ನಡೆದುವು. ಚರ್ಚೆಯಲ್ಲಿ ಪಾಲ್ಗೊಂಡಿದ್ದ ರಾಹುಲ್, ಮಸೂದೆಯು ಮಹಿಳಾ ಮೀಸಲಾತಿ ಪರ ಅತ್ಯಲ್ಪ ಕಾಳಜಿ ಹೊಂದಿದೆ ಆರೋಪಿಸಿದ್ದರು.

ಧಾರ್ಮಿಕ ಆಚರಣೆಗಳಿಗೆ ನ್ಯಾಯಾಂಗ ಪರಿಶೀಲನೆ?

ಹೊಸದಿಲ್ಲಿ : ಧಾರ್ಮಿಕ ಪಂಥಗಳ ಆಚರಣೆಗಳೂ ನ್ಯಾಯಾಂಗ ಪರಿಶೀಲನೆಗೆ ಒಳಪಡಬಹುದು ಎಂದು ಸುಪ್ರೀಂ ಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ. ಶಬರಿಮಲೆ ದೇವಸ್ಥಾನದ ಮಹಿಳಾ ಪ್ರವೇಶ ಸೇರಿದಂತೆ ಧಾರ್ಮಿಕ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ಭೇದಭಾವ ಕುರಿತ ಅರ್ಜಿಗಳ ವಿಚಾರಣೆಯ ವೇಳೆ ನ್ಯಾಯಾಲಯ ಈ ಅಭಿಪ್ರಾಯ ನೀಡಿದೆ.

ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ವಿಚಾರಣೆ ನಡೆಸುತ್ತಿರುವ ಈ ಪ್ರಕರಣದಲ್ಲಿ, ನ್ಯಾಯಮೂರ್ತಿಗಳು ವೈಯಕ್ತಿಕ ಧಾರ್ಮಿಕ ನಂಬಿಕೆಗಳನ್ನು ಮೀರಿ, ಮನಸ್ಸಿನ ಸ್ವಾತಂತ್ರ್ಯ ಮತ್ತು ಸಂವಿಧಾನದ ಮೌಲ್ಯಗಳ ಆಧಾರದಲ್ಲಿ ತೀರ್ಪು ನೀಡಬೇಕು ಎಂದು ಸೂಚಿಸಿದೆ.ವಿಚಾರಣೆಯ ವೇಳೆ ಹಿರಿಯ ವಕೀಲ ರಾಜೀವ್ ಧವನ್, ಈ ಪ್ರಕರಣವು ಕೇವಲ ಹಿಂದೂ ಧರ್ಮ ಅಥವಾ ಶಬರಿಮಲೆ ದೇವಸ್ಥಾನಕ್ಕೆ ಮಾತ್ರ ಸೀಮಿತವಲ್ಲ, ಬದಲಾಗಿ ಎಲ್ಲಾ ಧರ್ಮಗಳ ನಂಬಿಕೆ ಮತ್ತು ಸಂವಿಧಾನಾತ್ಮಕ ವ್ಯವಸ್ಥೆಗೆ ಸಂಬಂಧಿಸಿದೆ ಎಂದು ವಾದಿಸಿದರು.

'ಮನಸ್ಸಿನ ಸ್ವಾತಂತ್ರ್ಯವು ಅತ್ಯಂತ ವಿಶಾಲವಾದ ಹಕ್ಕು. ಇದು ವ್ಯಕ್ತಿಗೆ ಧರ್ಮವನ್ನೂ ಪ್ರಶ್ನಿಸುವ ಅವಕಾಶ ನೀಡುತ್ತದೆ, ಆದರೆ ಅದು ಗೌರವಪೂರ್ವಕವಾಗಿರಬೇಕು,' ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ನ್ಯಾ.ನಾಗರತ್ನ ಅವರು 'ಮನಸ್ಸಿನ ಸ್ವಾತಂತ್ರ್ಯ ಧರ್ಮಕ್ಕಿಂತ ದೊಡ್ಡದೆಯೇ?' ಎಂದು ಪ್ರಶ್ನಿಸಿದರು. ನ್ಯಾ. ಅಮಾನುಲ್ಲಾ ಕೂಡ ನ್ಯಾಯಮೂರ್ತಿಗಳು ತಮ್ಮ ವೈಯಕ್ತಿಕ ಧಾರ್ಮಿಕ ಭಾವನೆಗಳನ್ನು ಮೀರಿ ಸಂವಿಧಾನಾತ್ಮಕ ದೃಷ್ಟಿಕೋನದಿಂದ ವಿಚಾರಣೆ ನಡೆಸಬೇಕೆಂದು ಅಭಿಪ್ರಾಯಪಟ್ಟರು.

ರಾಮನಿಗೆ ಪ್ರಕಾಶ್ ರಾಜ್ ಅವಮಾನ, ಎಫ್‌ಐಆರ್

ಕೋಝಿಕೋಡ್: ಕೇರಳ ಸಾಹಿತ್ಯ ಸಮ್ಮೇಳನದಲ್ಲಿ, ಕೋಟ್ಯಂತರ ಭಕ್ತರ ಆರಾಧ್ಯ ದೇವ ಭಗವಾನ್ ಶ್ರೀರಾಮಚಂದ್ರ ಮತ್ತು ರಾಮಾಯಣವನ್ನು ಅಣಕಿಸಿರುವ ನಟ ಪ್ರಕಾಶ್‌ರಾಜ್ ವಿರುದ್ಧ ಕ್ರಿಮಿನಲ್ ದೂರು ದಾಖಲಾಗಿದೆ.

ಸಾಹಿತ್ಯ ಮೇಳದಲ್ಲಿ ಶ್ರೀರಾಮ ಮತ್ತು ರಾಮಾಯಣ ಸಹಿತ ಹಿಂದು ಧರ್ಮ–ದೇವರುಗಳನ್ನು ಪ್ರಕಾಶ್‌ರಾಜ್ ಉದ್ದೇಶಪೂರ್ವಕ ಅಣಕಿಸಿದ್ದಾರೆ. ಇವರ ಕುಚೋದ್ಯಗಳು ಲಕ್ಷಾಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ಘಾಸಿಮಾಡಿದೆ. ಮುಕ್ತ ಭಾಷಣ ಮತ್ತು ಉದ್ದೇಶಪೂರ್ವಕ ಅಪಮಾನಕ್ಕಿರುವ ವ್ಯತ್ಯಾಸದ ಮಿತಿಯನ್ನು ಮೀರಿ ಪ್ರಕಾಶ್ ರಾಜ್ ಹಿಂದು ಧರ್ಮವನ್ನು ಅಪಮಾನಿಸಿದ್ದಾರೆಂದು ದೂರಿನಲ್ಲಿ ಆರೋಪಿಸಲಾಗಿದೆ. ಹಾಸ್ಯಾಸ್ಪದ ಜತೆ ವಿಡಂಬನಾತ್ಮಕವಾಗಿ ಪ್ರಕಾಶ್ ರಾಜ್ ಹಿಂದು ದೇವರುಗಳನ್ನು, ಧರ್ಮವನ್ನು ಟೀಕಿಸಿದ್ದು, ಇದಕ್ಕೆ ನೆರೆದವರ ಪೈಕಿ ಕೆಲವರಿಂದ ಚಪ್ಪಾಳೆ ವ್ಯಕ್ತವಾದರೆ, ಬಹುತೇಕರು ಸ್ಥಿರತೆ ಅಥವಾ ತಾಟಸ್ಥ್ಯ ಭಾವ ತಳೆದಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ. ಕೇರಳಕ್ಕೆ ಭೇಟಿ ಕೊಡುವವರಿಗೆ ಮಲೆಯಾಳಂ ಭಾಷೆ ಗೊತ್ತಿರಬೇಕು. ಯಾರನ್ನೂ ಯಾವುದೇ ಆಹಾರ ಸೇವಿಸದಂತೆ ನಿರ್ಬಂಧಿಸಕೂಡದು ಎಂದು ವಿವಿಧ ವಿಷಯಗಳ ಕುರಿತ ಚರ್ಚೆಯಲ್ಲಿ ಪ್ರಕಾಶ್‌ರಾಜ್ ಹೇಳಿದ್ದರು. ಭಗವಾನ್ ಶ್ರೀರಾಮ, ರಾಮಾಯಣ ಸಹಿತ ಹಿಂದು ಧರ್ಮ –ಧರ್ಮೀಯರನ್ನು ಅಪಮಾನಿಸಿ, ನೋಯಿಸಿದ್ದಕ್ಕಾಗಿ ಈ ನಟನ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಕಲಂ 299, 302, 196, 352, 353 ಕಲಂಗಳಲ್ಲಿ ಪ್ರಕರಣ ದಾಖಲಾಗಿದೆ. ಇವು ಅರಾಜಕತೆ, ವೈರತ್ವ ಹುಟ್ಟುಹಾಕುವುದು, ಸಾರ್ವಜನಿಕ ಸೌಹಾರ್ದತೆಗೆ ಭಂಗ ಇತ್ಯಾದಿಗಳಿಗೆ ದಂಡನೆ ನೀಡುವ ಕಲಂಗಳಾಗಿವೆ.

ರಾಜ್ಯಸಭೆಗೆ ಹರಿವಂಶ್ ಉಪಸಭಾಪತಿ

ಹೊಸದಿಲ್ಲಿ : ನಾಮನಿರ್ದೇಶಿತ ಸದಸ್ಯ ಹರಿವಂಶ್ ಅವರು ಸತತ ತೃತೀಯ ಬಾರಿಗೆ ರಾಜ್ಯಸಭೆಯ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಸದನದ ಉಪಾಧ್ಯಕ್ಷರಾಗಿ ಹರಿವಂಶ್ ಆಯ್ಕೆಗಾಗಿ ಸದನ ನಾಯಕ ಜೆ.ಪಿ.ನಡ್ಡಾ ಮಂಡಿಸಿದ ನಿರ್ಣಯವನ್ನು ಎಸ್.ಫಂಗ್ನಾನ್ ಕೊನ್ಯಾಕ್ ಅನುಮೋದಿಸಿದ್ದರು. ಬಳಿಕ ಇದನ್ನು ಧ್ವನಿಮತದಿಂದ ಅಂಗೀಕರಿಸಲಾಯಿತು. ಹರಿವಂಶ್ ಆಯ್ಕೆಯಾಗಿ ಇವರ ಪರ ಒಟ್ಟು 5 ನಿರ್ಣಯಗಳನ್ನು ಮಂಡಿಸಲಾಗಿತ್ತು.

ಹರಿವಂಶ್ ರಾಜ್ಯಸಭೆಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆಂದು ತಾನು ಘೋಷಿಸುವುದಾಗಿ ಸದನದ ಅಧ್ಯಕ್ಷ ಸಿ.ಪಿ. ರಾಧಾಕೃಷ್ಣನ್ ನಿರ್ಣಯ ಅಂಗೀಕಾರ ಬಳಿಕ ತಿಳಿಸಿದರು. ಇದೇ ಮೊದಲ ಬಾರಿಗೆ ನಾಮನಿರ್ದೇಶಿತ ಸದಸ್ಯರೊಬ್ಬರು ಉಪ ಸಭಾಪತಿಯಾಗಿ ಆಯ್ಕೆಯಾಗಿದ್ದಾರೆ.

ದಿಲ್ಲಿ ಕೆಂಪು ಕೋಟೆ ಸ್ಫೋಟ ಪ್ರಕರಣದಲ್ಲಿ ಆಘಾತಕಾರಿ ಮಾಹಿತಿ ಬಹಿರಂಗ

ದೇಶವ್ಯಾಪಿ ದಾಳಿಗೆ ಭಯೋತ್ಪಾದಕರ ಸಂಚು

ಹೊಸದಿಲ್ಲಿ: ದಿಲ್ಲಿಯ ಕೆಂಪು ಕೋಟೆ ಸಮೀಪ ನಡೆದ ಸ್ಫೋಟ ಪ್ರಕರಣದ ತನಿಖೆಯಲ್ಲಿ ಕಾಶ್ಮೀರ ಮೂಲದ ಉಗ್ರ ಜಾಲದ ಹಿಂದೆ ವೈದ್ಯರು ಸೇರಿದಂತೆ ಉನ್ನತ ಶಿಕ್ಷಣ ಪಡೆದವರ ಪಾತ್ರವಿರುವುದು ಬೆಳಕಿಗೆ ಬಂದಿದೆ. ಈ ಸಂಬಂಧ ರಾಜ್ಯ ತನಿಖಾ ಸಂಸ್ಥೆ (ಎಸ್‌ಐಎ) 4 ವೈದ್ಯರು ಸೇರಿ ಒಟ್ಟು 10 ಮಂದಿ ವಿರುದ್ಧ ಆರೋಪಪಟ್ಟಿ ಸಲ್ಲಿಸಿದೆ.

ತನಿಖೆ ಪ್ರಕಾರ, ಈ ಜಾಲವು ಕಾಶ್ಮೀರದಲ್ಲಿ ಕಾರ್ಯ ನಿರ್ವಹಿಸು ತ್ತಿದ್ದರೂ ದೇಶದ ಇತರ ಭಾಗಗಳಲ್ಲಿಯೂ ತನ್ನ ಪ್ರಭಾವವನ್ನು ವಿಸ್ತರಿಸಲು ಪ್ರಯತ್ನಿಸುತ್ತಿತ್ತು. ಪ್ರಮುಖ ಆರೋಪಿ ಉಮರ್ ಉನ್ ನಬಿ ನೇತೃತ್ವದಲ್ಲಿ ಕಾರ್ಯನಿರ್ವಹಿಸಿದ್ದ ಈ ಗುಂಪು, ಉಗ್ರ ಸಂಘಟನೆಗಳ ಸಿದ್ಧಾಂತಗಳನ್ನು ಯುವಕರಲ್ಲಿ ಹರಡುವುದು, ಅವರನ್ನು ನೇಮಕ ಮಾಡಿಕೊಳ್ಳುವುದು ಮತ್ತು ದಾಳಿಗಳಿಗೆ ಸಿದ್ಧಗೊಳಿಸುವ ಕಾರ್ಯದಲ್ಲಿ ತೊಡಗಿಕೊಂಡಿತ್ತು. ಆರೋಪ ಪಟ್ಟಿಯಲ್ಲಿ ಹೇಳಿರುವಂತೆ, ಈ ಜಾಲವು ಡಿಜಿಟಲ್ ವೇದಿಕೆಗಳ ಮೂಲಕ ರಹಸ್ಯ ಸಂವಹನ ನಡೆಸುತ್ತಿದ್ದು, ಸುರಕ್ಷತಾ

- ಜಮ್ಮು ಕಾಶ್ಮೀರ ಪೊಲೀಸರಿಂದ ಆರೋಪಪಟ್ಟಿ ಸಲ್ಲಿಕೆ
- ಉಗ್ರ ಜಾಲದಲ್ಲಿ ವೈದ್ಯರ ಸಂಪರ್ಕ ಬಯಲು



ವ್ಯವಸ್ಥೆಗಳನ್ನು ತಪ್ಪಿಸಲು ವಿಶೇಷ ತಂತ್ರಗಳನ್ನು ಬಳಸುತ್ತಿತ್ತು. ದಿಲ್ಲಿಯ ರೆಡ್‌ಫೋರ್ಟ್ ಪ್ರದೇಶದಲ್ಲಿ ನಡೆದ ಕಾರು ಸ್ಫೋಟ ಪ್ರಕರಣವು ಇವರ ಕಾರ್ಯಚಟುವಟಿಕೆಗಳಿಗೆ ನೇರವಾಗಿ ಸಂಬಂಧಿಸಿದೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ವೈದ್ಯರು ಸೇರಿದಂತೆ ಸಮಾಜದಲ್ಲಿ ಗೌರವಾನ್ವಿತ ವೃತ್ತಿಯವರೇ ಉಗ್ರ ಚಟುವಟಿಕೆಗಳಲ್ಲಿ ತೊಡಗಿರುವುದು ಭದ್ರತಾ ಸಂಸ್ಥೆಗಳಿಗೆ ಗಂಭೀರ ಆತಂಕ ಉಂಟುಮಾಡಿದೆ. ಇದು ಕೇವಲ ಭೌತಿಕ ದಾಳಿಗಳಷ್ಟೇ ಅಲ್ಲ, ಸಿದ್ಧಾಂತ ಮಟ್ಟದಲ್ಲಿಯೂ ಉಗ್ರವಾದ ವಿಸ್ತರಿಸುತ್ತಿರುವುದನ್ನು ಸೂಚಿಸುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮುಖ್ಯಾಂಶಗಳು

- ಕೆಂಪುಕೋಟೆ ಸ್ಫೋಟ ಪ್ರಕರಣದಲ್ಲಿ ಹೊಸ ತಿರುವು
- 4 ವೈದ್ಯರು ಸೇರಿ 10 ಮಂದಿ ವಿರುದ್ಧ ಎಸ್‌ಐಎ ಚಾರ್ಜ್‌ಶೀಟ್
- ಉಮರ್ ಉನ್ ನಬಿ ನೇತೃತ್ವದ ಉಗ್ರ ಜಾಲ
- ಡಿಜಿಟಲ್ ಮೂಲಕ ನೇಮಕಾತಿ, ಉಗ್ರ ಸಿದ್ಧಾಂತ ಹರಡುವಿಕೆ

ಇದೇ ವೇಳೆ, ಈ ಜಾಲವು ದೇಶದ ವಿವಿಧ ನಗರಗಳಲ್ಲಿ ದೊಡ್ಡ ಮಟ್ಟದ ದಾಳಿಗಳಿಗೆ ಸಂಚು ರೂಪಿಸಿದ್ದ ಸಾಧ್ಯತೆಗಳನ್ನೂ ತನಿಖಾ ಸಂಸ್ಥೆಗಳು ಪರಿಶೀಲಿಸುತ್ತಿವೆ.

ಟಿಸಿಎಸ್ ಲವ್ ಜಿಹಾದ್ ಪ್ರಕರಣದ ಬಗ್ಗೆ ಮಹಾರಾಷ್ಟ್ರ ಮುಖ್ಯಮಂತ್ರಿ ಫಡ್ನವೀಸ್

ಸಂಪೂರ್ಣ ಮಾಡ್ಯೂಲ್ ಭೇದಿಸಲಿದ್ದೇವೆ

ಮುಂಬೈ: ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ದೇಶದ ಪ್ರಮುಖ ಟೆಕ್ ದೈತ್ಯ ಟಿಸಿಎಸ್ ನಲ್ಲಿ ನಡೆದಿರುವ ಕಾರ್ಪೊರೇಟ್ ಜಿಹಾದ್ ಮತ್ತು ಲೈಂಗಿಕ ಕಿರುಕುಳ ಪ್ರಕರಣದ ಸಂಪೂರ್ಣ ಮಾಡ್ಯೂಲ್ ಅನ್ನು ಭೇದಿಸಲಿದ್ದೇವೆ ಎಂಬುದಾಗಿ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಶುಕ್ರವಾರ ಘೋಷಿಸಿದ್ದಾರೆ.

ಈ ಮೂಲಕ ಕಾರ್ಪೊರೇಟ್ ಜಿಹಾದ್ ಮತ್ತು ಲೈಂಗಿಕ ಕಿರುಕುಳದ ಆಘಾತಕಾರಿ ಕುಕೃತ್ಯದ ಹಿಂದಿರುವ ಷಡ್ಯಂತ್ರ ಬಗ್ಗೆ ಈಗ ಮಹಾರಾಷ್ಟ್ರ ಸರಕಾರವೂ ಗಂಭೀರ ನಿಲುವು ತಳೆದಿದೆ. ದೇಶದ ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿ ಟಿಸಿಎಸ್ ಈ ವಿಷಯವನ್ನು ಗಂಭೀರವಾಗಿ ಗಮನಿಸಿದೆ. ಪ್ರಸ್ತುತ ನಡೆಯುತ್ತಿರುವ ತನಿಖೆಗೆ ಸಹಾಯ ಮಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಕಂಪೆನಿ ತೆಗೆದುಕೊಂಡಿರುವ ಕ್ರಮಗಳನ್ನು ಶ್ಲಾಘಿಸಿದರು. ಈ ಹೇಯ ಸಂಚಿನಲ್ಲಿ ಶಾಮೀಲಾದ ಯಾರನ್ನೂ ಬಿಡುವುದಿಲ್ಲ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಇದು ಒಂದು ಮಾಡ್ಯೂಲ್‌ನಿಂದ ಹುಟ್ಟಿಕೊಟ್ಟ ಗಂಭೀರ ಸಮಸ್ಯೆಯಾಗಿದ್ದು, ಈ ಮಾಡ್ಯೂಲನ್ನು ನಾವು ಭೇದಿಸುತ್ತೇವೆ. ನಾವು ಕೇಂದ್ರ ಸಂಸ್ಥೆಗಳಿಂದಲೂ ಸಹಾಯ ಪಡೆಯುತ್ತಿದ್ದೇವೆಎಂದು ಅವರು ಮಾಹಿತಿ ನೀಡಿದರು. ಈ ಷಡ್ಯಂತ್ರದಲ್ಲಿ ಮಹಿಳಾ ಉದ್ಯೋಗಿಗಳನ್ನು ಗುರಿಯಾಗಿಸಲು ಏಳು ಪುರುಷ ಆರೋಪಿಗಳು ಸಂಘಟಿತ ಗ್ಯಾಂಗ್‌ನಂತೆ ಕಾರ್ಯನಿರ್ವಹಿಸುತ್ತಿದ್ದ ಅಂಶವನು ಪೊಲೀಸ್ ತನಿಖೆಯು ಬಯಲಿಗೆಳೆದಿದ್ದು, ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು 9 ಪ್ರಕರಣಗಳನ್ನು ದಾಖಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಏ.9ರಂದೇ ನಿದಾ ಖಾನ್ ಅಮಾನತು

ಹೊಸದಿಲ್ಲಿ: ಮಹಾರಾಷ್ಟ್ರದ ನಾಸಿಕ್‌ನಲ್ಲಿ ಟಿಸಿಎಸ್ ಬಿಪಿಒ ಘಟಕದಲ್ಲಿ ನಡೆದ ಲೈಂಗಿಕ ದೌರ್ಜನ್ಯ, ಕಿರುಕುಳ ಮತ್ತು ಬಲವಂತದ ಮತಾಂತರಕ್ಕೆ ಪ್ರಯತ್ನಿಸಿದ ಪ್ರಕರಣದ ಪ್ರಮುಖ ಆರೋಪಿ ನಿದಾ ಖಾನ್‌ಳನ್ನು ಏ.9ರಂದು ಕೆಲಸದಿಂದ ಅಮಾನತುಗೊಳಿಸಿರುವುದು ತಡವಾಗಿ ಬೆಳಕಿಗೆ ಬಂದಿದೆ. ನಿದಾ ಖಾನ್ ಮೇಲಿನ ಗಂಭೀರ ಆರೋಪ ಮತ್ತು ಪೊಲೀಸ್ ತನಿಖೆಯ ಹಿನ್ನೆಲೆ ಟಿಸಿಎಸ್ ನಿದಾಳನ್ನು ಉದ್ಯೋಗದಿಂದ ಅಮಾನತುಗೊಳಿಸಿದೆ. ನ್ಯಾಯಾಂಗ ಅಥವಾ ಪೊಲೀಸ್ ಕಸ್ಟಡಿಯಲ್ಲಿ ಸಿಲುಕಿರುವ ನಿಮ್ಮ ಮೇಲಿನ ಗಂಭೀರ ಆರೋಪದ ಕುರಿತು ಕಂಪನಿಗೆ ತಿಳಿದುಬಂದಿದ್ದು, ಗಂಭೀರತೆಯನ್ನು ಅರ್ಥೈಸಿಕೊಂಡು ನೀವು ಉದ್ಯೋಗದಲ್ಲಿ ಮುಂದುವರಿಯಲು ಸಾಧ್ಯವಿಲ್ಲದ ಕಾರಣ ಮ್ಯಾನೇಜ್‌ಮೆಂಟ್‌ನ ಮುಂದಿನ ನಿರ್ಧಾರದವರೆಗೆ ನಿಮ್ಮನ್ನು ಅಮಾನತಿನಲ್ಲಿಡುವ ತೀರ್ಮಾನಕ್ಕೆ ಬಂದಿದೆ ಎಂದು ಉಲ್ಲೇಖಿಸಿದ್ದಾರೆ.

ಗರ್ಭಿಣಿ ಎಂದು ನಿರೀಕ್ಷಣಾ ಜಾಮೀನಿಗೆ ಅರ್ಜಿ?: ನಿದಾ ಪ್ರಸ್ತುತ ಮುಂಬೈನಲ್ಲಿದ್ದು, ಮೊದಲ ಮಗುವಿನ ನಿರೀಕ್ಷೆಯಲ್ಲಿ ಇರುವುದಾಗಿ ಹೇಳಿಕೊಂಡಿದ್ದಾಳೆ. ಪೊಲೀಸರ ಕೈಗೆ ಸಿಗದೆ ತಲೆಮರೆಸಿರುವ ನಿದಾ ತಮ್ಮ ಆರೋಗ್ಯ ಪರಿಸ್ಥಿತಿಯನ್ನೇ ಬಳಸಿಕೊಂಡು ನಾಸಿಕ್ ಸ್ಥಳೀಯ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ.

139 ಶಾಸಕರು ನನ್ನದೇ ಗುಂಪು: ಡಿಕೆಶಿ



• ಬೆಂಗಳೂರು: 139 ಶಾಸಕರು ನನ್ನದೇ ಗುಂಪು, ಕಾಂಗ್ರೆಸ್ ಗುಂಪು. ನಮಗೆ ಪಕ್ಷ ಹಾಗೂ ಪಕ್ಷದ ಹಿತ ಮುಖ್ಯ. ಪಕ್ಷದ ಅಭಿವೃದ್ಧಿಗೆ ಹಾಗೂ ಅದರ ಏಳಿಗೆ ಏನು ಬೇಕು ಎಂಬುದರ ಬಗ್ಗೆ ಚರ್ಚೆ ನಡೆಸಿದ್ದೇವೆ. ನಾವೆಲ್ಲ ಒಟ್ಟಿಗೆ ಸೇರಿ ಕೆಲಸ ಮಾಡುತ್ತಿದ್ದೇವೆ, ಮಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ, ನಾನು ಒಟ್ಟಿಗೇ ಇದ್ದೇವೆ. ಪ್ರತಿದಿನ ಜತೆಯಲ್ಲೇ ಕೂರುತ್ತೇವೆ, ಚರ್ಚಿಸುತ್ತೇವೆ. ಎಲ್ಲರೂ ನಮ್ಮ ಶಾಸಕರೇ. ಮಾಧ್ಯಮಗಳೇ ನಮ್ಮನ್ನು ಇಬ್ಭಾಗ ಮಾಡುತ್ತಿವೆ. ಬೆಂಗಳೂರಿನ ಟ್ರಾಫಿಕ್ ಹೇಗೆ ನಿಯಂತ್ರಣ, ಕಡಿಮೆ ಮಾಡಬೇಕು ಎನ್ನುವ ವಿಚಾರವಾಗಿ ನಾನು ಹಾಗೂ ಸತೀಶ್ ಜಾರಕಿಹೊಳಿ ಚರ್ಚೆ ನಡೆಸಿದ್ದೇವೆ. ನೆಲಮಂಗಲದಿಂದ ಗೊರಗುಂಟೆಪಾಳ್ಯ ದವರೆಗೆ ಹೆಚ್ಚು ವಾಹನ ಸಂಚಾರ ದಟ್ಟಣೆ ಇದೆ. ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ಮೂಲಕ ನಗರದ ಒಳಗೆ ವಾಹನಗಳು ಬರದಂತೆ ಹೇಗೆ ಬದಲಿ ವ್ಯವಸ್ಥೆ ಮಾಡಬಹುದು. ನೈಸ್ ರಸ್ತೆಗೆ ಮುನ್ನ ಯಾವ ವ್ಯವಸ್ಥೆ ಮಾಡಬಹುದು ಎಂದು ಚರ್ಚೆ ನಡೆಸಿದ್ದೇವೆ. ಈಗಾಗಲೇ ಬಿಜಿನೆಸ್ ಕಾರಿಡಾರ್ ಯೋಜನೆ ಕೈಗೆತ್ತಿಕೊಂಡಿದ್ದೇವೆ ಎಂದರು.

ನನ್ನ ಮೇಲೆ ದೂರಿದರೂ ಚಿಂತೆ ಇಲ್ಲ

ಪಕ್ಷಕ್ಕೆ ತನ್ನದೇ ಆದ ರೀತಿ-ರಿವಾಜುಗಳಿವೆ. ಎಐಸಿಸಿ, ಎಐಸಿಸಿ ಸಿ ವಿಚಾರವಾಗಿ ದಿಲ್ಲಿ ನಾಯಕರು ಏನೂ ಹೇಳಿದರೆ, ನಾವು ಏನೂ ಮಾಡಲೂ ಆಗುವುದಿಲ್ಲ. ಹೈಕಮಾಂಡ್ ಮಾರ್ಗದರ್ಶನದ ಅನುಸಾರವಾಗಿ ಮಾಡಬೇಕಾಗುತ್ತದೆ. ಕೆಲವರು ನನ್ನ ಮೇಲೆ ದೂರಬಹುದು. ಹಾಗೇ ನನ್ನ ಮೇಲೆ ಹೇಳಿದರೂ ಚಿಂತೆಯಿಲ್ಲ, ಪಕ್ಷದ ಶಿಸ್ತಿನ ಚೌಕಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡಬೇಕಾಗುತ್ತದೆ ಎಂದರು.

ಹಕ್ಕಿಜ್ವರ ತಡೆಗೆ ಕ್ರಮ: ಸಚಿವ



• ಬೆಂಗಳೂರು: ನಗರದ ಹೆಸರಘಟ್ಟದ ಮತ್ತೂರು ಗ್ರಾಮದಲ್ಲಿ ಕೋಳಿಗಳಲ್ಲಿ ಹಕ್ಕಿಜ್ವರ (ಎಚ್5ಎನ್1) ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕರ ಸುರಕ್ಷತೆಗಾಗಿ ನಮ್ಮ ಸರ್ಕಾರವು ಸಮರೋಪಾದಿಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ. ಜನರು ಆತಂಕಪಡುವ ಅಗತ್ಯವಿಲ್ಲ, ಪರಿಸ್ಥಿತಿ ಸಂಪೂರ್ಣ ನಿಯಂತ್ರಣದಲ್ಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ನೀಡಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿರುವ ಅವರು, ಭೋಪಾಲ್ ಎನ್‌ಐಎಚ್‌ಎಸ್‌ಎಡಿ ಪ್ರಯೋಗಾಲಯದ ವರದಿಯ ಪ್ರಕಾರ, ಕಳೆದ ಏ.14ರಂದು ಮತ್ತೂರಿನ ಕೇಂದ್ರದಲ್ಲಿ ಹಕ್ಕಿಜ್ವರ ದೃಢಪಟ್ಟಿದೆ. ವಿಷಯ ತಿಳಿಯುತ್ತಿದ್ದಂತೆ ಏ.16ರಂದು ರಾಜ್ಯ ಮತ್ತು ಜಿಲ್ಲಾ ಮಟ್ಟದ ಆರೋಗ್ಯ ಇಲಾಖೆಯ ತ್ವರಿತ ಪ್ರತಿಕ್ರಿಯೆ ತಂಡಗಳು (ಆರ್‌ಆರ್‌ಟಿ) ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿವೆ. ಈಗಾಗಲೇ ಮತ್ತೂರು ಗ್ರಾಮದಲ್ಲಿ ಸೋಂಕಿತ ವಲಯ (3 ಕಿ.ಮೀ ವ್ಯಾಪ್ತಿ) ಮತ್ತು ಸುತ್ತಲಿನ 10 ಕಿ.ಮೀ ಪ್ರದೇಶವನ್ನು ಕಣ್ಗಾವಲು ವಲಯ ಎಂದು ಘೋಷಿಸಲಾಗಿದೆ. ಈ ಪ್ರದೇಶವನ್ನು ಒಂದು ವರ್ಷದವರೆಗೆ ನಿರ್ಬಂಧಿತ ಪ್ರದೇಶವೆಂದು ಗುರುತಿಸಲಾಗಿದೆ ಎಂದು ತಿಳಿಸಿದ್ದಾರೆ.

10 ಸಿಬ್ಬಂದಿ ಕ್ವಾರಂಟೈನ್: ಏ.15 ರಂದು 7,444 ಕೋಳಿಗಳು, 14 ಸಾವಿರಕ್ಕೂ ಅಧಿಕ ಮೊಟ್ಟೆಗಳು, 2,250 ಕೆ.ಜಿ. ಕೋಳಿ ಆಹಾರಗಳನ್ನು ಪಶುಪಾಲನೆ ಇಲಾಖೆ ನೇತೃತ್ವದಲ್ಲಿ ವೈಜ್ಞಾನಿಕವಾಗಿ ಕಲ್ಲಿಂಗ್ ಮಾಡಿ ವಿಲೇವಾರಿ ಮಾಡಲಾಗಿದ್ದು, ಇದರಲ್ಲಿ ಭಾಗಿಯಾಗಿದ್ದ 10 ಸಿಬ್ಬಂದಿಗೆ ಕ್ವಾರಂಟೈನ್ ಮಾಡಿ, ಒಸೆಲ್ಟಾಮಿವಿರ್ ಔಷಧಿಯೊಂದಿಗೆ ವೈದ್ಯಕೀಯ ನಿಗಾದಲ್ಲಿ ಇರಿಸಲಾಗಿದೆ. ಈ ಸ್ಥಳವನ್ನು ಒಂದು ವರ್ಷದವರೆಗೆ ನಿರ್ಬಂಧಿತ ಪ್ರದೇಶ ಎಂದು ಘೋಷಣೆ ಮಾಡಲಾಗಿದೆ ಎಂದರು.

ಆರೋಗ್ಯ ಇಲಾಖೆ ಕಣ್ಗಾವಲು ಕ್ರಮ ತೀವ್ರಗೊಳಿಸಿದ್ದು, 3 ಕಿ.ಮೀ. ವ್ಯಾಪ್ತಿ ವಲಯದಲ್ಲಿ ಒಟ್ಟು 3,422 ಜನಸಂಖ್ಯೆಯ 2 ಗ್ರಾಮಗಳಿದ್ದು, 3 ರಿಂದ 10 ಕಿ.ಮೀ ವ್ಯಾಪ್ತಿಯಲ್ಲಿ ಒಟ್ಟು 22,395 ಜನಸಂಖ್ಯೆ ಇರುವ 17 ಗ್ರಾಮಗಳಿವೆ. ಆರೋಗ್ಯ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತರು ದಿನನಿತ್ಯ ಮನೆ-ಮನೆ ಭೇಟಿ ನೀಡಿ ಮುಂದಿನ ಹತ್ತು ದಿನಗಳ ಕಾಲ ಜ್ವರ ಕಣ್ಗಾವಲು ನಡೆಸಲಾಗುವುದು ಎಂದರು.

ನಾರೀಶಕ್ತಿಗೆ ಮಾಡಿದ ದ್ರೋಹ: ಛಲವಾದಿ



• ಬೆಂಗಳೂರು: ಸಂಸತ್ತಿನಲ್ಲಿ ನಾರೀ ಶಕ್ತಿ ವಂದನಾ ಮಸೂದೆಯನ್ನು ವಿರೋಧಿಸುವ ಮೂಲಕ ಮಹಿಳಾ ವಿರೋಧಿ ಕಾಂಗ್ರೆಸ್‌ನ ಅಸಲಿ ಮುಖವಾಡ ಬಯಲಾಗಿದೆ. ಇದು ನಾರಿಶಕ್ತಿಗೆ ಮಾಡಿದ ದ್ರೋಹ! ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

ನಾರಿಶಕ್ತಿ ವಂದನಾ ಮಸೂದೆಯ ಸೋಲನ್ನು ತನ್ನ ಐತಿಹಾಸಿಕ ಜಯ ಎಂದು ಸಂಭ್ರಮಿಸುತ್ತಿರುವ ಕಾಂಗ್ರೆಸ್ ಪಕ್ಷದ ನಡೆ ಅತ್ಯಂತ ಅಮಾನವೀಯ ಮತ್ತು ಕೀಳು ಮನಸ್ಥಿತಿಯ ಪರಮಾವಧಿಯಾಗಿದೆ. ಮಹಿಳೆಯರಿಗೆ ಸಿಗಬೇಕಿದ್ದ ಸಾಂವಿಧಾನಿಕ ಹಕ್ಕು ಮತ್ತು ಅಧಿಕಾರವನ್ನು ಕತ್ತುಹಿಸುಕಿ ಅದನ್ನು ಗೆಲುವು ಎಂದು ಆಚರಿಸುವುದು ಈ ದೇಶದ ಸಂಸದೀಯ ಇತಿಹಾಸದಲ್ಲೇ ಅತ್ಯಂತ ಅವಮಾನಕರವಾದ ಸಂಗತಿ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಂಬೇಡ್ಕರ್ ಅವರ ಆಶಯಕ್ಕೆ ದ್ರೋಹ: ಪ್ರಜಾಪ್ರಭುತ್ವದ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ಅಂದೇ ಹಿಂದೂ ಕೋಡ್ ಬಿಲ್ ಮೂಲಕ ಮಹಿಳೆಯರಿಗೆ ಸಮಾನ ಹಕ್ಕು ಮತ್ತು ಆಸ್ತಿಯಲ್ಲಿ ಪಾಲು ನೀಡಬೇಕೆಂದು ಹೋರಾಡಿದ್ದರು. ಅಂದು ಅಂಬೇಡ್ಕರ್ ಅವರ ಆಶಯಗಳಿಗೆ ಅಡ್ಡಗಾಲು ಹಾಕಿದ್ದ ಕಾಂಗ್ರೆಸ್, ಇಂದು ಮೋದಿ ಸರ್ಕಾರ ಮಹಿಳೆಯರಿಗೆ ರಾಜಕೀಯವಾಗಿ ಶಕ್ತಿ ತುಂಬಲು ತಂದ ಮಸೂದೆಯನ್ನು ವಿಫಲಗೊಳಿಸಿ ತನ್ನ ಹಳೆಯ ರೋಗವನ್ನು ಮತ್ತೊಮ್ಮೆ ಪ್ರದರ್ಶಿಸಿದೆ ಎಂದು ಟೀಕಿಸಿದ್ದಾರೆ.

ಮಹಿಳಾ ಸಬಲೀಕರಣ ಕಾಂಗ್ರೆಸ್‌ಗೆ ಭಯ ತರುತ್ತಿದೆಯೇ? ಪ್ರಧಾನಿ ಮೋದಿ ನೇತೃತ್ವದ ಸರ್ಕಾರವು ಮಹಿಳೆಯರು ಈ ದೇಶದ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲುದಾರರಾಗಬೇಕು ಎಂಬ ಉದ್ದೇಶದಿಂದ ಈ ಮಸೂದೆಯನ್ನು ಮಂಡಿಸಿತ್ತು. ಆದರೆ, ಮಹಿಳೆಯರು ಪ್ರಬಲರಾದರೆ ತಮ್ಮ ವೋಟ್ ಬ್ಯಾಂಕ್ ರಾಜಕಾರಣಕ್ಕೆ ಧಕ್ಕೆ ಬರುತ್ತದೆ ಎಂಬ ಭಯದಿಂದ ಕಾಂಗ್ರೆಸ್ ಈ ಪ್ರಕ್ರಿಯೆಯನ್ನು ಹಳಿ ತಪ್ಪಿಸಿದೆ ಎಂದು ಆರೋಪಿಸಿದ್ದಾರೆ.

ಮಹಿಳೆಯರ ಹಕ್ಕುಗಳ ಸಮಾಧಿಯಾಗುವುದನ್ನು ತನ್ನ ಜಯ ಎಂದು ಹೆಮ್ಮೆ ಪಡುವ ಕಾಂಗ್ರೆಸ್‌ನ ಮನಸ್ಥಿತಿ ಎಂತಹ ಕ್ರೂರ ಮನಸ್ಥಿತಿ ಇರಬೇಕು? ಇದು ಕಾಂಗ್ರೆಸ್ಸಿಗರ ಮಹಿಳಾ ವಿರೋಧಿ ಧೋರಣೆಯನ್ನು ಎತ್ತಿ ತೋರಿಸುತ್ತದೆ. ಅವರ ದೃಷ್ಟಿಯಲ್ಲಿ ಮಹಿಳೆಯರು ಕೇವಲ ಘೋಷಣೆಗಳಿಗೆ ಸೀಮಿತವಾಗಬೇಕೇ ಹೊರತು ಅಧಿಕಾರಕ್ಕೆ ಬರಬಾರದು ಎಂಬುದು ಸ್ಪಷ್ಟವಾಗಿದೆ ಎಂದಿದ್ದಾರೆ. ಯಾವ ಪಕ್ಷವು ಮಹಿಳೆಯರ ಏಳಿಗೆಯನ್ನು ಕಂಡು ಸಂಭ್ರಮಿಸುವುದಿಲ್ಲವೋ, ಯಾವ ಪಕ್ಷವು ನಿಮ್ಮ ಹಕ್ಕಿನ ಸೋಲನ್ನು ತನ್ನ ಗೆಲುವು ಎಂದು ಕರೆಯುತ್ತದೆಯೋ, ಅಂತಹ ಪಕ್ಷಕ್ಕೆ ಈ ಪ್ರಜಾಪ್ರಭುತ್ವದಲ್ಲಿ ಜಾಗವಿಲ್ಲ. ಕಾಂಗ್ರೆಸ್ ಪಕ್ಷದ ಈ ದ್ರೋಹವನ್ನು ಪ್ರತಿಯೊಬ್ಬ ಮಹಿಳೆಯೂ, ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯೂ ಖಂಡಿಸಬೇಕಿದೆ ಎಂದರು.

ಕಿರುಸುದ್ದಿ

ಮಹಿಳೆಯರ ಉನ್ನತಿಗೆ ಕಾಂಗ್ರೆಸ್ ಅಡ್ಡಗಾಲು: ಬಿಜೆಪಿ

• ಬೆಂಗಳೂರು: ಸಂಸತ್ತಿನಲ್ಲಿ ಮಂಡನೆಯಾದ ನಾರಿ ಶಕ್ತಿ ವಂದನಾ ಅಧಿನಿಯಮ ಮಸೂದೆಯನ್ನು ಪ್ರತಿಪಕ್ಷ ಕಾಂಗ್ರೆಸ್ ಸೋಲಿಸಿದೆ ಎಂದು ರಾಜ್ಯ ಬಿಜೆಪಿ ಟೀಕಿಸಿದೆ. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಕಟುವಾಗಿ ಟೀಕಿಸಿರುವ ರಾಜ್ಯ ಬಿಜೆಪಿ, ದೇಶ ಈ ದಿನವನ್ನೆಂದೂ ಮರೆಯದು. ಭಾರತದ ಇತಿಹಾಸಕ್ಕೆ ಇದೊಂದು ಕರಾಳ ದಿನ ಎಂದು ಹೇಳಿದೆ. ಮಹಿಳೆಯರಿಗೆ ಶೇ.33 ಮೀಸಲಾತಿ ಒದಗಿಸುವ ಐತಿಹಾಸಿಕ ಮಸೂದೆಯನ್ನು ಕಾಂಗ್ರೆಸ್ ನೇತೃತ್ವದ ಇಂಡಿ ಒಕ್ಕೂಟ ಸೋಲಿಸಿದೆ. ಮಹಿಳೆಯರ ಉನ್ನತಿಗೆ ಅಡ್ಡಗಾಲು ಹಾಕಿದ ಪ್ರತಿಪಕ್ಷಗಳನ್ನು ದೇಶದ ನಾರಿಶಕ್ತಿ ಎಂದಿಗೂ ಕ್ಷಮಿಸದು. ದೇಶದ ಹಿತದೃಷ್ಟಿಯಿಂದ, ಮಹಿಳೆಯರ ಸಬಲೀಕರಣಕ್ಕಾಗಿ ಸ್ವತಃ ದೇಶದ ಪ್ರಧಾನಿಯೇ ಮಸೂದೆಯನ್ನು ಪಕ್ಷಾತೀತವಾಗಿ ಬೆಂಬಲಿಸುವಂತೆ ಕೋರಿಕೊಂಡರೂ ರಾಜಕೀಯ ಜಿದ್ದಿಗೆ ಬಿದ್ದ ಮಹಿಳಾ ವಿರೋಧಿಗಳು ಮಸೂದೆಗೆ ಸೋಲುಣಿಸಿದ್ದಾರೆ ಎಂದು ತಿಳಿಸಿದೆ. ಇದು ಮಸೂದೆಯ ಸೋಲಲ್ಲ, ದೇಶದ ಸೋಲು. ದೇಶದ ಜನತೆ ಎಂದಿಗೂ ಕಾಂಗ್ರೆಸ್ ಪಕ್ಷ ಕ್ಷಮಿಸಲಾರರು ಎಂದು ರಾಜ್ಯ ಬಿಜೆಪಿ ಹೇಳಿದೆ.

ಅಸಹಾಯಕ ಪರಿಸ್ಥಿತಿಯಲ್ಲಿ ಸಿಎಂ: ಕೆ.ಎನ್.ರಾಜಣ್ಣ



• ಬೆಂಗಳೂರು: ಕೆಲವು ಒತ್ತಡಗಳಿಂದಾಗಿ ಸಿಎಂ ಸಿದ್ದರಾಮಯ್ಯ ಅಸಹಾಯಕ ಪರಿಸ್ಥಿತಿಯಲ್ಲಿದ್ದು, ಡಿಸಿಎಂ ಡಿ.ಕೆ ಶಿವಕುಮಾರ್ ಹಾದಿ ತಪ್ಪುತ್ತಿದ್ದಾರೆ ಎಂದು ಶಾಸಕ ಕೆ.ಎನ್ ರಾಜಣ್ಣ ಹೇಳಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಮೀರ್ ಅಹಮದ್ ಅವರನ್ನೇ ಟಾರ್ಗೆಟ್ ಮಾಡಲಾಗುತ್ತಿದೆ. ಹಿಂದೆ ವಾಲ್ಮೀಕಿ ಸಮುದಾಯವನ್ನು ಗುರಿಯಾಗಿಸಲಾಗಿತ್ತು, ಈಗ ಅಲ್ಪಸಂಖ್ಯಾತ ಸಮುದಾಯದವರನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಈ ಸಂಬಂಧವಾಗಿ ತಾವು ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡುವುದಾಗಿ ತಿಳಿಸಿದರು. ಪಕ್ಷದಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳು ಹುನ್ನಾರಗಳನ್ನು ನಡೆಸುತ್ತಿವೆ. ಇಂತಹ ಸನ್ನಿವೇಶಗಳು ಬಂದಾಗ ಮುಖ್ಯಮಂತ್ರಿಗಳು ಗಟ್ಟಿಯಾಗಿ ನಿಲ್ಲಬೇಕು, ಆದರೆ ಅವರು ನಿಲ್ಲುತ್ತಿಲ್ಲ ಎಂಬುದು ತಮಗೆ ಬೇಸರ ತರಿಸಿದೆ. ಸಿದ್ದರಾಮಯ್ಯನವರು ಏನಾದ್ರೂ ಕಟ್ಟ ಹಾಕಿದ್ದಾರಾ, ನಾವು ಸಿದ್ದರಾಮಯ್ಯ ಅವರಿಂದ ಈ ರೀತಿ ಅಸಹಾಯಕ ಪರಿಸ್ಥಿತಿಯನ್ನು ನಿರೀಕ್ಷಿಸಿರಲಿಲ್ಲ ಎಂದು ಪ್ರಶ್ನಿಸಿದರು.

ನಂಜುಂಡೇಶ್ವರನ ಹುಂಡಿಯಲ್ಲಿ 2.11 ಕೋಟಿ ರೂ.

• ಮೈಸೂರು: ದಕ್ಷಿಣ ಕಾಶಿ ಎಂದು ಪ್ರಸಿದ್ಧಿಯಾಗಿರುವ ಜಿಲ್ಲೆಯ ನಂಜನಗೂಡಿನ ನಂಜುಂಡೇಶ್ವರನ ದೇವಾಲಯದಲ್ಲಿ ಕೇವಲ ಒಂದೇ ತಿಂಗಳಲ್ಲಿ ಬರೋಬರಿ ಎರಡು ಕೋಟಿಗೂ ಅಧಿಕ ಆದಾಯ ಸಂಗ್ರಹವಾಗಿದೆ. ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಸಿಜೆ ಕೃಷ್ಣ ನೇತೃತ್ವದಲ್ಲಿ ಹುಂಡಿ ಹಣದ ಎಣಿಕೆ ಕಾರ್ಯ ನಡೆಸಲಾಯಿತು. ನಂಜನಗೂಡಿನ ಬ್ಯಾಂಕ್ ಆಫ್ ಬರೋಡ ಶಾಖೆಯ ವ್ಯವಸ್ಥಾಪಕ ಮತ್ತು ಸಿಬ್ಬಂದಿ ಹಾಗೂ ಗ್ರಾಮೀಣ ಪ್ರದೇಶದ ಸುತ್ತಮುತ್ತಲ ಮಹಿಳಾ ಸ್ತ್ರೀ ಶಕ್ತಿ ಸಂಘದ ನೂರಾರು ಮಹಿಳೆಯರು ಎಣಿಕೆ ಕಾರ್ಯದಲ್ಲಿ ಭಾಗಿಯಾಗಿದ್ದರು. ನಂಜನಗೂಡಿನ ನಂಜುಂಡೇಶ್ವರನ ದೇವಾಲಯದ ದಾಸೋಹ ಭವನದಲ್ಲಿ 37 ಹುಂಡಿಗಳನ್ನು ಎಣಿಸಿದಾಗ, ಬರೋಬರಿ 2 ಕೋಟಿ 11 ಲಕ್ಷದ 48 ಸಾವಿರದ 728 ರೂ ಹಣ ಸಂಗ್ರಹವಾಗಿರುವುದು ಕಂಡು ಬಂದಿದೆ. ದಾಖಲೆಯ ಮೊತ್ತದ ಜೊತೆಗೆ ಭಕ್ತರಿಂದ 58 ಗ್ರಾಂ ಚಿನ್ನ, 2,ಕೆಜಿ 500 ಗ್ರಾಂ ಬೆಳ್ಳಿ, ಜತೆಗೆ 46 ವಿದೇಶಿ ಕರೆನ್ಸಿಗಳು ದೊರೆತಿವೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ

ನಾರೀಶಕ್ತಿಗೆ ಇಂಡಿ ಕೂಟ ಅಪಮಾನ



• ಬೆಂಗಳೂರು: ನಾರೀ ಶಕ್ತಿ ವಂದನಾ ಮಸೂದೆಗೆ ಸಂಸತ್ತಿನಲ್ಲಿ ಸೋಲುಂಟಾ ಗಿರುವುದು ಭಾರತದ ಪ್ರಜಾ ಪ್ರಭುತ್ವದ ವ್ಯವಸ್ಥೆಯ ಕರಾಳ ದಿನವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘ ಪೋಸ್ಟ್ ಮಾಡಿರುವ ಅವರು, ಸಂವಿಧಾನದ ಆಶಯ ಮತ್ತು ಪ್ರಜಾ ಪ್ರಭುತ್ವದ ನೈಜ ಉದ್ದೇಶವನ್ನು ಸ್ವಾತಂತ್ರ್ಯಾನಂತರದಿಂದಲೂ ಮೆಟ್ಟಿ ನಿಲ್ಲುವುದು, ಸರ್ವಾಧಿಕಾರ ಮೆರೆಯುವುದು, ಜನರ ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕುವುದು ಕಾಂಗ್ರೆಸ್‌ನ ಸಂಸ್ಕೃತಿಯಾಗಿದೆ. ಲಕ್ಷಾಂತರ ಜನರ ತ್ಯಾಗ-ಬಲಿ ದಾನದಿಂದ ದೇಶಕ್ಕೆ ಸ್ವಾತಂತ್ರ್ಯ ದೊರಕಿದ್ದು, ಅದನ್ನು ಸ್ವೇಚ್ಛಾಚಾರ ದಿಂದ ಕಾಂಗ್ರೆಸ್ ಬಳಸಿಕೊಂಡಿದೆ ಎಂದು ಟೀಕಿಸಿದ್ದಾರೆ.

ಸದ್ಯ ದೇಶದ ರಾಜಕೀಯ ಭೂಪಟದಲ್ಲಿ ಅಸ್ತಿತ್ವಕ್ಕಾಗಿ ತಿಣುಕಾಡುತ್ತಿರುವ ಕಾಂಗ್ರೆಸ್ ತನ್ನದೇ ಮನಸ್ಥಿತಿಯ ಇತರ ಪಕ್ಷಗಳನ್ನು ಕಟ್ಟಿಕೊಂಡು ಇಂಡಿ ಕೂಟದ ಹೆಸರಿನಲ್ಲಿ ಸ್ತ್ರೀ ಕುಲದ ಹಕ್ಕನ್ನು ಇಂದು ಲೋಕಸಭೆಯಲ್ಲಿ ಹಿಂಡಿದೆ. ದುಶ್ಯಾಸನ, ರಾವಣರ ಸಂಸ್ಕೃತಿ ನೆನಪಿಸುವ ರೀತಿಯಲ್ಲಿಇಂದು ಸಂಸತ್ತಿನಲ್ಲಿ ನಡೆದುಕೊಂಡು ಡಾ. ಅಂಬೇಡ್ಕರ್ ಅವರ ಮಹದಾಶಯ, ಅಣ್ಣ ಬಸವಣ್ಣ ಅವರು ಪ್ರತಿಪಾದಿಸಿದ ಲಿಂಗ ಸಮಾನತೆಯನ್ನು ಹತ್ತಿಕ್ಕಲು ಯತ್ನಿಸಿವೆ ಎಂದು ಆಕ್ಷೇಪಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ ಸರ್ಕಾರದ ಸ್ವಾತಂತ್ರ್ಯದ ನೈಜತೆ ಹಾಗೂ ಸಂವಿಧಾನದ ಶಕ್ತಿಯನ್ನು ನಾರಿ ಕುಲಕ್ಕೆ ಸಮರ್ಪಿಸಬೇಕೆಂಬ ಮಹತ್ವಾಕಾಂಕ್ಷೆಯ ಕಾಯ್ದೆಗೆ ಹಿನ್ನಡೆಯುಂಟಾಗಿರುವುದು ಕೇವಲ ತಾತ್ಕಾಲಿಕವಷ್ಟೇ. ಇಡೀದೇಶದಮಹಿಳಾಶಕ್ತಿ ಇಂಡಿಒಕ್ಕೂಟಕ್ಕೆ ಭವಿಷ್ಯತ್ತಿನಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ! ಅತೀ ಶೀಘ್ರದಲ್ಲಿ ಲಿಂಗ ಸಮಾನತೆ, ಪ್ರಜಾಪ್ರಭುತ್ವದ ಸುಂದರತೆ ಅರಳಲಿದೆ, ಸಂವಿಧಾನದ ಶಕ್ತಿ ಮೆರೆಯಲಿದೆ, ಮಹಿಳಾ ಮೀಸಲಾತಿ ವಿಜೃಂಭಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಿಪಕ್ಷಗಳಿಂದ ಅಡ್ಡಿ: ಅಶೋಕ

ದೇಶದ ಶಾಸನ ರಚನೆಯಲ್ಲಿ ಮತ್ತು ನೀತಿ ನಿರೂಪಣೆಯಲ್ಲಿ ಮಹಿಳೆಯರಿಗೆ ಸೂಕ್ತ ಸ್ಥಾನಮಾನ ಕಲ್ಪಿಸುವ ನಿಟ್ಟಿನಲ್ಲಿ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವ ಐತಿಹಾಸಿಕ ಅವಕಾಶವನ್ನು ಕಾಂಗ್ರೆಸ್ ನೇತೃತ್ವದ ಇಂಡಿ ಮೈತ್ರಿಕೂಟ ಅಡ್ಡಗಟ್ಟಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಆರೋಪಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಇದು ಯಾವುದೇ ಪಕ್ಷದ ಸೋಲಲ್ಲ ಅಥವಾ ಯಾವ ಸರ್ಕಾರಕ್ಕಾದ ಹಿನ್ನಡೆಯೂ ಅಲ್ಲ. ಇದು ದೇಶದ ಕೋಟ್ಯಂತರ ಮಹಿಳೆಯರ ಆಶಯಗಳ ಸೋಲು ಎಂದಿದ್ದಾರೆ. ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪಕ್ಷಾತೀತ ಕರೆಗೆ ಸ್ಪಂದಿಸದೇ ಮಹಿಳಾ ಸಬಲೀಕರಣಕ್ಕೆ ಕೊಡಲಿ ಪೆಟ್ಟು ಕೊಟ್ಟ ಕಾಂಗ್ರೆಸ್ ಪಕ್ಷದ ಮಹಿಳಾ ವಿರೋಧಿ ಧೋರಣೆಗೆ ದೇಶ ಇವತ್ತು ಸಾಕ್ಷಿಯಾಗಿದೆ ಎಂದು ಟೀಕಿಸಿದರು.

ಡ್ರಗ್ಸ್ ಜಾಲದ ವಿರುದ್ಧ ಕಠಿಣ ಕ್ರಮ: ಸಚಿವ ಡಾ.ಜಿ.ಪರಮೇಶ್ವರ

ಗಲಭೆರಹಿತ ರಾಜ್ಯ ನಮ್ಮದು



• ಬೆಳಗಾವಿ: ಕಳೆದ ಮೂರು ವರ್ಷದಲ್ಲಿ ರಾಜ್ಯದಲ್ಲಿ ಕೋಮು ಗಲಭೆಗಳು ನಡೆದಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಹೇಳಿದರು.

ಶುಕ್ರವಾರ ಬೆಳಗಾವಿ ನಗರದಲ್ಲಿ ಪೊಲೀಸ್ ಕಟ್ಟಡಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನಾ ಸಮಾರಂಭ ಉದ್ಘಾಟಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದು ಮೂರು ವರ್ಷವಾಗಿದೆ. ಇಲ್ಲಿಯವರೆಗೂ ಒಂದು ಕೋಮು ಗಲಭೆಯಾಗಿಲ್ಲ, ನಮ್ಮ ಪೊಲೀಸ್ ಇಲಾಖೆ ಒಳ್ಳೆಯ ರೀತಿ ಕೆಲಸ ಮಾಡುತ್ತಿವೆ ಎಂದರು. ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣ ದಲ್ಲಿ ಡ್ರಗ್ಸ್ ತಂದು ಹಂಚುವ ಪ್ರಯತ್ನ ನಡೆದಿದೆ. ಆ ಸಂಚನ್ನು ಮಟ್ಟಹಾಕಲು ನಮ್ಮ ಸರ್ಕಾರ ಡ್ರಗ್ಸ್ ಹಂಚುವವರು, ಸರಬರಾಜು ಮಾಡುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಮಟ್ಟಹಾಕಲಾಗಿದೆ. ಒಂದು ವರ್ಷದಲ್ಲಿ ಸಾವಿರಾರು ಕೋಟಿ ರೂ. ಡ್ರಗ್ಸ್ ಸುಟ್ಟು ಹಾಕಿದ್ದೇವೆ. ಇದನ್ನು ಸವಾಲ್ ಆಗಿ ಸ್ವೀಕರಿಸಿ ಅದನ್ನು ಮಟ್ಟ ಹಾಕುತ್ತೇವೆ ಎಂದರು.

ಸಮಾಜದ ವಿರುದ್ಧವಾಗಿ ಕೆಲಸ ಮಾಡು ತ್ತಾರೆ. ಅವರ ವಿರುದ್ಧ ಮುಲ್ಲಾಜಿಲ್ಲದೆ ಕ್ರಮ ಜರುಗಿಸಲಾಗುವುದು. ಪೊಲೀಸರು ಶಾಲಾ, ಕಾಲೇಜುಗಳಲ್ಲಿ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಾರೆ. ಡ್ರಗ್ಸ್ ವಿಚಾರದಲ್ಲಿ ನಾವು ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದರು. ಮಹಾಂತೇಶ ಕೌಜಲಗಿ, ಎಡಿಜಿಪಿ ಆರ್.ಹಿತೇಂದ್ರ, ಐಜಿಪಿ ಡಾ.ಚೇತನಸಿಂಗ್ ರಾಥೋರ್, ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಉಪಸ್ಥಿತರಿದ್ದರು.

ಸೈಬರ್ ಕ್ರೈಂ ಹೆಚ್ಚಳ

ಇತ್ತೀಚೆಗೆ ಸಾಮಾನ್ಯ ಕ್ರೈಂ ಕಡಿಮೆ ಯಾಗುತ್ತಿವೆ. ಸೈಬರ್ ಕ್ರೈಂ ಹೆಚ್ಚಾಗಿವೆ. ನಿವೃತ್ತ ಹೊಂದಿದವರ ಖಾತೆಯಲ್ಲಿ ನೋಡಿ ಸೈಬರ್ ವಂಚಕರು ಹೊಂಚು ಹಾಕುತ್ತಿದ್ದಾರೆ. ಅದನ್ನು ತಡೆಯುವ ಪ್ರಯತ್ನ ಮಾಡುತ್ತಿದ್ದೇವೆ. ಸೈಬರ್ ಕ್ರೈಂ ತಡೆಯುವ ಪ್ರಯತ್ನ ನಮ್ಮ ತಂತ್ರಜ್ಞಾನದಿಂದ ತಡೆ ಹಿಡಿಯಲಾಗುತ್ತಿದೆ. ಪ್ರತಿ ಜಿಲ್ಲೆಯಲ್ಲಿ ಸೈಬರ್ ಲ್ಯಾಬ್ ಮಾಡಿ ಪ್ರತಿಯೊಬ್ಬ ಪೊಲೀಸ್ ಸಿಬ್ಬಂದಿಗಳಿಗೆ ತರಬೇತಿ ನೀಡಲು ಸೂಚನೆ ನೀಡಿದ್ದೇವೆ ಎಂದರು.

ಶೇ.33ರಷ್ಟು ಮೀಸಲಾತಿ: ಕ್ರಾಂತಿಕಾರಕ ಹೆಜ್ಜೆ

• ಹೊಸದಿಲ್ಲಿ: ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಇರಿಸಿರುವ ಹೆಜ್ಜೆ ಐತಿಹಾಸಿಕ ಎಂದು ಬಣ್ಣಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಈ ಮಸೂದೆಯು ಭಾರತದ ಪ್ರಜಾಪ್ರಭುತ್ವದ ಪಯಣದಲ್ಲಿ ಕ್ರಾಂತಿಕಾರಕ ಹೆಜ್ಜೆ ಎಂದಿದ್ದಾರೆ.

ಲೋಕಸಭೆಯಲ್ಲಿ ಶುಕ್ರವಾರ ಬೆಳಗ್ಗೆ ಮಹಿಳಾ ಮೀಸಲು ಮಸೂದೆ ಬೆಂಬಲಿಸಿ ಮಾತನಾಡಿ, ಕಾಂಗ್ರೆಸ್ ಪಕ್ಷವು ನಿರಂತರವಾಗಿ ಸುಧಾರಣೆಗಳಿಗೆ ವ್ಯವಸ್ಥಿತವಾಗಿ ತಡೆಯೊಡ್ಡುತ್ತಿದೆ. ಈ ಮಸೂದೆಯನ್ನು ಬೆಂಬಲಿಸುವುದನ್ನು ಬಿಟ್ಟು ಜನರನ್ನು ದಾರಿತಪ್ಪಿಸುವ ಸಂಕಥನಗಳನ್ನು ಸೃಷ್ಟಿಸುತ್ತಿದೆ ಎಂದು ಹೇಳಿದರು. ಕಾಂಗ್ರೆಸ್ ಸೃಷ್ಟಿಸುತ್ತಿರುವ ಗೊಂದಲಗಳಿಗೆ ಅರ್ಥವಿಲ್ಲ, ಅವುಗಳನ್ನು ಜನರು ನಂಬುವುದಿಲ್ಲ ಹಾಗೂ ಸಂಕುಚಿತ ಸಂಕಥನಗಳ ಕಾಂಗ್ರೆಸ್ ವಾದವು ರಾಷ್ಟ್ರದ ವಿಶಾಲ ತಳಹದಿಯ ಭಾವನೆಯನ್ನು ಪ್ರತಿಬಿಂಬಿಸುವುದಿಲ್ಲ. ಕಾಂಗ್ರೆಸ್ ಹಾಗೂ ಡಿಎಂಕೆ ಪಕ್ಷಗಳ ವಾದಗಳು ಭಯ ಹುಟ್ಟಿಸುವ ರೀತಿಯಲ್ಲಿವೆ ಎಂದು ಹೇಳಿದರು.

ಸಂಘಟಿತ ಲವ್ ಜಿಹಾದ್ ವಿಸ್ತರಣೆ ಸಾಧ್ಯತೆ: ಸಿ.ಟಿ.ರವಿ



• ಬೆಂಗಳೂರು: ಮಹಾರಾಷ್ಟ್ರದ ನಾಸಿಕ್‌ನ ಟಿಸಿಎಸ್‌ನಲ್ಲಿ ನಡೆದ ಸಂಘಟಿತ ಲವ್ ಜಿಹಾದ್ ಪ್ರಕರಣ ಬೆಳಕಿಗೆ ಬಂದ ನಂತರ ಇಂತಹ ಸಂಘಟಿತ ಲವ್ ಜಿಹಾದ್ ಜಾಲ ಕರ್ನಾಟಕದ ಕಂಪನಿಗಳಲ್ಲೂ ವಿಸ್ತರಿಸಿರುವ ಸಾಧ್ಯತೆ ಇದೆ. ಆದ್ದರಿಂದ ಇಲ್ಲೂ ಒಂದು ಎಸ್‌ಐಟಿ ರಚಿಸಿ ತನಿಖೆಯಾಗಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಗ್ರಹಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ನಾಸಿಕ್ ಪ್ರಕರಣ ಬಹಳ ಗಂಭೀರವಾಗಿದೆ. ಕರ್ನಾಟಕದಲ್ಲೂ ಟಿಸಿಎಸ್ ರೀತಿಯ ಅನೇಕ ಬಹುರಾಷ್ಟ್ರೀಯ ಕಂಪನಿಗಳಿವೆ. ಉದ್ಯೋಗಕ್ಕಾಗಿ ಬರುವ ಅಸಹಾಯಕ ಹೆಣ್ಣು ಮಕ್ಕಳ ಶೋಷಣೆ, ಲವ್ ಜಿಹಾದ್ ನಂತಹ ಮತಾಂತರದ ಜಾಲ ಇಲ್ಲೂ ಇರುವ ಸಾಧ್ಯತೆ ಇದೆ. ಆದ್ದರಿಂದ ಇವುಗಳ ಕುರಿತು ಸಮಗ್ರ ತನಿಖೆ ಆಗಬೇಕು ಎಂದರು.

ಹಾಲಿ ಅಥವಾ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ ಸಮಗ್ರ ತನಿಖೆ ಮಾಡಬೇಕು. ಆಗ ಸತ್ಯಾಸತ್ಯತೆ ಹೊರಬರಲಿದೆ. ಮತಾಂತರ ಮತ್ತು ಮತಾಂತರದ ನಂತರ ಇಡೀ ದೇಶವನ್ನೇ ದುರ್ಬಲಗೊಳಿಸುವ ಸಂಚು ತಿಳಿಯಲಿದೆ. ಮುಖ್ಯಮಂತ್ರಿಗಳು ಈ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಪೂರ್ವಕ ಮನವಿ ಮಾಡಿದರು.

ನಾಸಿಕ್ ಪೊಲೀಸರು ಒಳ್ಳೆಯ ಕೆಲಸ ಮಾಡಿದ್ದಾರೆ. ಪ್ರಕರಣವನ್ನು ಲಘುವಾಗಿ ಪರಿಗಣಿಸದೆ ವಿಶೇಷ ಕಾರ್ಯಪಡೆ ಮಾಡಿ ಉದ್ಯೋಗಿಗಳಾಗಿ ಸೇರಿ ವ್ಯವಸ್ಥಿತ ಜಾಲವನ್ನು ಬಯಲಿಗೆಳೆದರು. ಈ ರೀತಿ ಸಂಘಟಿತ ಜಾಲ ವಿದೇಶಿ ನೆಟ್‌ವರ್ಕ್ ಹೊಂದಿದೆ ಎಂಬ ಪ್ರಾಥಮಿಕ ವರದಿಯಿದೆ. ಇದು ನಾಸಿಕ್‌ಗೆ ಮಾತ್ರ ಸೀಮಿತವೇ ಅಥವಾ ದೇಶದ ಉದ್ದಗಲಕ್ಕೂ ಹರಡಿದೆಯೇ ಎಂಬ ಬಗ್ಗೆ ತನಿಖೆಯ ಅವಶ್ಯಕತೆ ಇದೆ. ಸರ್ಕಾರ ಈ ನಿಟ್ಟಿನಲ್ಲಿ ಕೈ ಕಟ್ಟಿ ಕೂರಬಾರದು. ಈ ಲವ್ ಜಿಹಾದ್ ಪ್ರಕರಣ ಕೇವಲ ನಾಸಿಕ್ ಮತ್ತು ಟಿಸಿಎಸ್‌ಗೆ ಸೀಮಿತವಾಗಿದೆ ಎಂದು ಭಾವಿಸಬಾರದು ಎಂದು ಸಿ.ಟಿ.ರವಿ ಹೇಳಿದರು.

ಹೊಸದಿಲ್ಲಿಯಲ್ಲಿ ಚಾತುರ್ಮಾಸ್ಯ ವ್ರತ



• ಬೆಂಗಳೂರು: ಉಡುಪಿಯ ಪೇಜಾವರ ಮಠದ ಯತಿಯೊಬ್ಬರು ಮೊದಲ ಬಾರಿ ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ಚಾತುರ್ಮಾಸ್ಯ ವ್ರತ ನಡೆಸುತ್ತಿದ್ದಾರೆ. ಅಯೋಧ್ಯಾ ರಾಮ ಮಂದಿರ ಟ್ರಸ್ಟ್ ವಿಶ್ವಸ್ಥರೂ ಆಗಿರುವ ಶ್ರೀ ವಿಶ್ವಪ್ರಸನ್ನತೀರ್ಥರು ತಮ್ಮ 39ನೇ ಚಾತುರ್ಮಾಸ್ಯ ವ್ರತವನ್ನು ತಮ್ಮ ಶಾಖಾ ಮಠದಲ್ಲಿ ನಡೆಸಲು ಸಂಕಲ್ಪಿಸಿದ್ದಾರೆ.

ಹೊಸದಿಲ್ಲಿಯ ವಸಂತ್ ಕುಂಜ್‌ನಲ್ಲಿರುವ ಪೇಜಾವರ ಮಠದಲ್ಲಿ ಈ ಸಂಬಂಧ ಪೂರ್ವಭಾವಿ ಸಮಾಲೋಚನಾ ಸಭೆಯು ಪೇಜಾವರ ಶ್ರೀಗಳ ಸಾನ್ನಿಧ್ಯದಲ್ಲಿ ನಡೆಯಿತು. ಈ ವೇಳೆ ಆಶೀರ್ವಚನ ನೀಡಿದ ಪೇಜಾವರ ಶ್ರೀಗಳು, ಪೇಜಾವರ ಮಠ ನಮ್ಮ ಗುರುಗಳಾದ ಶ್ರೀವಿಶ್ವೇಶತೀರ್ಥರ ಅನುಗ್ರಹಪೂರ್ಣ ಮಾರ್ಗದರ್ಶನದಲ್ಲಿ ಯಾವತ್ತೂ ಹಿಂದು ಸಮಾಜದ ಶ್ರೇಯಸ್ಸಿಗಾಗಿ ಚಿಂತಿಸುವುದರ ಜತೆಗೆ ಭಕ್ತರ ಸಹಕಾರದೊಂದಿಗೆ ಕಾರ್ಯನಿರ್ವಹಿಸಿಕೊಂಡು ಬಂದಿದೆ.

ಈ ಚಾತುರ್ಮಾಸ್ಯವೂ ಅದರ ಭಾಗವಾಗಬೇಕು. ಕೇವಲ ಸ್ವಾಮೀಜಿಯವರು ಬಂದರು; ವ್ರತ ನಡೆಸಿದರು ಎಂಬುದಕ್ಕೆ ಮಾತ್ರ ಸೀಮಿತವಾಗದೆ, ಇದರ ಸಣ್ಣ ಪ್ರಯೋಜನವಾದರೂ ಈ ಭಾಗದ ಭಕ್ತರಿಗೆ ಆಸ್ತಿಕ ಸಮಾಜಕ್ಕೆ, ದಿಲ್ಲಿಯ ಜನತೆಗೆ ಸಿಗುವಂತಾಗಬೇಕು ಎನ್ನುವುದು ನಮ್ಮ ಆಶಯವಾಗಿದೆ. ಧರ್ಮ ದೇಶಕ್ಕೆ ಒದಗಿರುವ ಸಮಸ್ಯೆಗಳ ಬಗೆಗೂ ಪ್ರಾಮಾಣಿಕ ಚಿಂತನೆ ಮಾಡೋಣ ಎಂದರು.

ವಿಶ್ವ ಹಿಂದು ಪರಿಷತ್ ಅಂತಾರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಛುಗ್ ಮಾತನಾಡಿ, ದಶಕಗಳ ನಂತರ ಇಡೀ ದೇಶದಲ್ಲಿ ಸನಾತನ ಧರ್ಮ ಸಂರಕ್ಷಣೆಯ ಜಾಗೃತಿಪ್ರಜ್ಞೆ ಹೊಸ ನವಚೈತನ್ಯ ಪಡೆಯುತ್ತಿದೆ. ವಿಹಿಂಪ ಸ್ಥಾಪನೆಯಿಂದ ಮೊದಲ್ಗೊಂಡು ಈ ತನಕವೂ ಈ ಎಲ್ಲ ಹೆಜ್ಜೆಗಳಲ್ಲಿ ಉಡುಪಿಯ ಪೇಜಾವರ ಮಠದ ಅದರಲ್ಲೂ ಕೀರ್ತಿಶೇಷ ಶ್ರೀವಿಶ್ವೇಶತೀರ್ಥರ ಉತ್ಸಾಹಪೂರ್ಣ ಮಾರ್ಗದರ್ಶನ ಮತ್ತು ನೇತೃತ್ವ ಅವಿನಾಭಾವವಾಗಿದೆ ಎಂದು ಸ್ಮರಿಸಿದರು.

ವರ್ತಮಾನದಲ್ಲಿ ಕಾಣುತ್ತಿರುವ ಹಿಂದು ಪರ ಉತ್ಸಾಹಗಳಿಗೆ ಬಹಳ ದೊಡ್ಡ ವಿರೋಧಿ ಶಕ್ತಿಗಳ ಸವಾಲುಗಳೂ ಇವೆ. ಆದರೆ, ಅವೆಲ್ಲವನ್ನೂ ಹಿಮ್ಮೆಟ್ಟಿಸಿ ಈ ಉತ್ಸಾಹವನ್ನು ಕಾಯ್ದುಕೊಂಡು ಬಹಳಷ್ಟು ಸಾಧಿಸಬೇಕಾಗಿದೆ. ಅದಕ್ಕಾಗಿ ಪೇಜಾವರ ಶ್ರೀಗಳೂ ಸೇರಿದಂತೆ ದೇಶದ ಸಂತಸಮಾಜದ ಪೂರ್ಣ ತಪಸ್ಸು ಮತ್ತು ಮಾರ್ಗದರ್ಶನ ಅತ್ಯಂತ ಅವಶ್ಯಕವಾಗಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಶ್ರೀಗಳು ಹೊಸದಿಲ್ಲಿಯಲ್ಲಿ ಎರಡು ತಿಂಗಳು ಲಭ್ಯರಿದ್ದು ಚಾತುರ್ಮಾಸ್ಯ ವ್ರತದಂಥಹ ಪವಿತ್ರ ವ್ರತ ಸಂಕಲ್ಪಿಸಿರುವುದು ಅತ್ಯಂತ ಸಕಾಲಿಕವಾಗಿದೆ ಎಂದರು.

ಬೆಳ್ಳಂಬೆಳಗ್ಗೆ ಹಿಂಡಲಗಾ ಜೈಲಿಗೆ ಡಿಜಿಪಿ ಭೇಟಿ



• ಬೆಳಗಾವಿ: ಇಲ್ಲಿನ ಹಿಂಡಲಗಾ ಕೇಂದ್ರ ಕಾರಾಗೃಹದ ಮೇಲೆ ಶುಕ್ರವಾರ ಬೆಳ್ಳಂಬೆಳಗ್ಗೆ ಬಂಧಿಖಾನೆ ಡಿಜಿಪಿ ಅಲೋಕ್ ಕುಮಾರ್ ಅವರು ತಮ್ಮ ತಂಡದೊಂದಿಗೆ ಅನಿರೀಕ್ಷಿತ ದಾಳಿ ನಡೆಸಿದ್ದಾರೆ.

ಜೈಲಿನಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಿಗೆ ಬ್ರೇಕ್ ಹಾಕಲು ನಡೆಸಿದ ಈ ಕಾರ್ಯಾಚರಣೆ ಈಗ ರಾಜ್ಯಾದ್ಯಂತ ಸಂಚಲನ ಮೂಡಿಸಿದೆ. ಬಂಧಿಖಾನೆ ಡಿಜಿಪಿ ಅಲೋಕ್ ಕುಮಾರ್ ನೇತೃತ್ವದಲ್ಲಿ ಬೆಳಗಾವಿಯ ಹಿಂಡಲಗಾ ಕೇಂದ್ರದ ಕಾರಾಗೃಹದ ಮೇಲೆ ದಾಳಿ ನಡೆಸಲಾಗಿದೆ. ದಾಳಿಯಲ್ಲಿ ಸುಮಾರು 52 ಜನ ಪೊಲೀಸ್ ಸಿಬ್ಬಂದಿ ಹಾಗೂ ಬೆಳಗಾವಿ ನಗರ ಪೊಲೀಸರ ಒಳಗೊಂಡ ತಂಡವು ಎರಡು ಶ್ವಾನಗಳ ಸಹಾಯದೊಂದಿಗೆ ಪ್ರತಿ ಸೆಲ್‌ಗಳನ್ನು ಕೂಲಂಕಷವಾಗಿ ತಪಾಸಣೆ ನಡೆಸಿತು.

ಸತತ 2 ಗಂಟೆ ನಡೆದ ಈ ಮಹತ್ವದ ಕಾರ್ಯಾಚರಣೆಯಲ್ಲಿ ಕೈದಿಗಳ ಬಳಿ ಇದ್ದ ಒಂದು ಸಿಗರೆಟ್ ಪ್ಯಾಕೆಟ್ ಹಾಗೂ ಅನಧಿಕೃತವಾಗಿ ಬಳಸುತ್ತಿದ್ದ ಜಿಮ್ ಡೆಂಬಲ್ಸ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಜೈಲಿನೊಳಗೆ ಇಂತಹ ವಸ್ತುಗಳು ಪತ್ತೆಯಾಗಿರುವುದು ಸುರಕ್ಷತಾ ಲೋಪವನ್ನು ಎತ್ತಿ ತೋರಿಸಿದ್ದು, ಕರ್ತವ್ಯ ನಿರ್ಲಕ್ಷ್ಯ ತೋರಿದ ಸಿಬ್ಬಂದಿಯನ್ನು ಡಿಜಿಪಿ ತರಾಟೆಗೆ ತೆಗೆದುಕೊಂಡಿದ್ದಾರೆ. ಜೈಲಿನಲ್ಲಿ ಅಕ್ರಮ ತಡೆಯುವಲ್ಲಿ ವಿಫಲರಾದ ಜೈಲಾಧಿಕಾರಿಗಳಿಗೆ ಡಿಜಿಪಿ ಅಲೋಕ್ ಕುಮಾರ್ ಸ್ಥಳದಲ್ಲೇ ಚಳಿ ಬಿಡಿಸಿದ್ದಾರೆ. ದಾಳಿಯ ಬಳಿಕ ಮರಳಿ ಹೋಗುವಾಗ ತಪ್ಪಿತಸ್ಥ ಜೈಲಾಧಿಕಾರಿಗಳಿಗೆ ನಾನು ಖಂಡಿತವಾಗಿಯೂ ಶಿಕ್ಷೆ ನೀಡುತ್ತೇನೆ ಎಂದು ಖಡಕ್ ಎಚ್ಚರಿಕೆ ನೀಡುವ ಮೂಲಕ ಅಧಿಕಾರಿಗಳಲ್ಲಿ ನಡುಕ ಹುಟ್ಟಿಸಿದ್ದಾರೆ.

ಮನ್ ಕೀ ಬಾತ್‌ನಲ್ಲಿ ಕಲಬುರಗಿ ಖಡಕ್ ರೊಟ್ಟಿ ಕೊಂಡಾಡಿದ ಪ್ರಧಾನಿ ನರೇಂದ್ರ ಮೋದಿ

ಅಮೆರಿಕಕ್ಕೆ ಕಲಬುರಗಿ ಜಿಲ್ಲೆಯ ಖಡಕ್ ರೊಟ್ಟಿ!

▸ ರಾಚಪ್ಪಾ ಜಂಬಗಿ

• ಕಲಬುರಗಿ: ರೊಟ್ಟಿ ತಿಂದವ ಗಟ್ಟಿ ಎಂಬ ಜನಪ್ರಿಯ ಗಾದೆ ಮಾತಿನ ಅರ್ಥವನ್ನು ಜೀವಂತಗೊಳಿಸುವಂತೆ, ಕಲಬುರಗಿಯ ಖಡಕ್ ಜೋಳದ ರೊಟ್ಟಿ ಇದೀಗ ಜಾಗತಿಕ ವೇದಿಕೆಗೆ ಹೆಜ್ಜೆ ಇಡುತ್ತಿದೆ.

ದೇಶದ ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಮನ್ ಕೀ ಬಾತ್‌ನ 123ನೇ ಸಂಚಿಕೆಯಲ್ಲಿ ಕಲಬುರಗಿ ಮಹಿಳೆಯರ ಸ್ವಾವಲಂಬಿ ಬದುಕಿಗೆ ಉತ್ತೇಜನ ನೀಡುವ ಕಲಬುರಗಿ ರೊಟ್ಟಿ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ ಬಳಿಕ, ಇದರ ಖ್ಯಾತಿ ಮತ್ತಷ್ಟು ಹೆಚ್ಚಾಗಿದೆ.

ಸಾಂಪ್ರದಾಯಿಕ ರುಚಿ, ಪೌಷ್ಟಿಕತೆ ಮತ್ತು ಮಹಿಳಾ ಸಬಲೀಕರಣದ ಸಂಕೇತವಾದ ಕಲಬುರಗಿ ರೊಟ್ಟಿ ಇದೀಗ ಅಮೆರಿಕಾ, ಯುಕೆ ಮತ್ತು ಆಸ್ಟ್ರೇಲಿಯಾ ಸೇರಿದಂತೆ ವಿದೇಶಿ ರಾಷ್ಟ್ರಗಳಿಗೂ ಸರಬರಾಜಾಗಲು ಸಜ್ಜಾಗುತ್ತಿದೆ.

ಗ್ರಾಮೀಣ ಮಹಿಳೆಯರ ಕೈಚಳಕ ಮತ್ತು ಪರಿಶ್ರಮದ ಫಲವಾಗಿ ಬೆಳೆದ ಈ ಉತ್ಪನ್ನ, ಸ್ಥಳೀಯತೆ ಮೀರಿಸಿ ಜಾಗತಿಕ ಮಾರುಕಟ್ಟೆಯಲ್ಲಿ ತನ್ನದೇ ಗುರುತನ್ನು ಮೂಡಿಸಲು ಸನ್ನದ್ಧವಾಗಿದ್ದು, ಕಲಬುರಗಿ ರೊಟ್ಟಿಯ ಈ ಸಾಧನೆ ಕೇವಲ ಆಹಾರ ಪದಾರ್ಥದ ಯಶಸ್ಸಲ್ಲ, ಮಹಿಳೆಯರ ಆತ್ಮನಿರ್ಭರತೆಗೆ ಹೊಸ ದಿಕ್ಕು ತೋರಿಸುವ ಪ್ರೇರಣಾದಾಯಿ ಹೆಜ್ಜೆಯಾಗಿದೆ.



ಅಮೆರಿಕಾದ 5 ಎಂಜಿನಿಯರ್ಸ್ ಒಪ್ಪಿಗೆ

ಅಮೆರಿಕಾದ ಐದು ಸಾಫ್ಟ್‌ವೇರ್ ಎಂಜಿನಿಯರ್ಸ್ ಸದ್ಯಕ್ಕೆ ಬೆಂಗಳೂರಿನಲ್ಲಿದ್ದು, ಕಲಬುರಗಿ ರೊಟ್ಟಿ ಸ್ವಾದ ಚೆಕ್ ಮಾಡಲು ಈಗಾಗಲೇ ಅವರಿಗೆ ಕಲಬುರಗಿ ರೊಟ್ಟಿಯ ಐದು ಬಾಕ್ಸ್ ಕಳುಹಿಸಲಾಗಿದೆ. ರೊಟ್ಟಿಯ ಕುರಿತು ಒಪ್ಪಿಗೆ ಸೂಚಿಸಿದ್ದಾರೆ. ರೊಟ್ಟಿಯ ರುಚಿ ಚೆಕ್ ಮಾಡಿದ ಬಳಿಕ ಆರ್ಡರ್ ಪಕ್ಕಾವಾದಲ್ಲಿ ಕಂಪನಿ ಜೊತೆಗೆ ಅಗ್ರಿಮೆಂಟ್ ಮಾಡಿಕೊಂಡು ಪ್ರೀಮಿಯಂ ದರದ ಬೇಡಿಕೆಯೊಂದಿಗೆ ಮುಂಬರುವ ದಿನಗಳಲ್ಲಿ ಆಯಾ ದೇಶಕ್ಕೆ 10 ಸಾವಿರ ರೊಟ್ಟಿಗಳ ಮೊದಲ ಕನ್ಸೈನಮೆಂಟ್ ಹೋಗಲಿದೆ. ಇದೀಗ ನಾವು 150 ರೂಪಾಯಿಗೆ ಒಂದು ಬಾಕ್ಸ್ ಮಾರಾಟ ಮಾಡುತ್ತಿದ್ದು, ಕೋಟನೂರ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಕಲಬುರಗಿ ರೊಟ್ಟಿ ಪ್ಯಾಕಿಂಗ್ ಕೇಂದ್ರ ಮಾಡಲಾಗುತ್ತಿದೆ. ಸಿಎಸ್‌ಆರ್ ಅನುದಾನದಡಿ ಎಚ್‌ಡಿಎಫ್‌ಸಿ ಬ್ಯಾಂಕ್ 55 ಲಕ್ಷ ರೂ. ಮೌಲ್ಯದ ಯಂತ್ರ ಕೊಡುತ್ತಿದೆ. ನಮ್ಮಲ್ಲಿನ ಎಕ್ಸಿಸ್ಟಿಂಗ್ ಆಫೀಸ್ ಸೆಟ್ ಅಫ್ ರಿನ್ನೋವೇಷನ್‌ಗೆ 30 ಲಕ್ಷ ಖರ್ಚು ಮಾಡಲಾಗುತ್ತಿದೆ ಎಂದು ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಹೊಸ ದಿಗಂತಕ್ಕೆ ತಿಳಿಸಿದರು.

ಆಸ್ಥಮ್ ಎಕ್ಸ್‌ಪೋರ್ಟ್ ಕಂಪನಿಯಿಂದ ಸರಕು: ವಿಶ್ವದ 25 ಕಡೆಗಳಲ್ಲಿ ತಮ್ಮ ಇಂಪೋರ್ಟ್ ಆ್ಯಂಡ್ ಎಕ್ಸ್‌ಪೋರ್ಟ್ ವ್ಯಾಪಾರ ಹೊಂದಿರುವ ಕಲಬುರಗಿ ಮೂಲದವರದೇ ಆಗಿರುವ ಆಸ್ಥಮ್ ಎಕ್ಸ್‌ಪೋರ್ಟ್ ಆ್ಯಂಡ್ ಇಂಪೋರ್ಟ್ ಕಂಪನಿಯವರು ಸದ್ಯಕ್ಕೆ ಭಾರತದಲ್ಲಿದ್ದು, ಅವರೊಂದಿಗೆ ಕಳೆದ ಮೂರು ತಿಂಗಳಿಂದ ಮಾತುಕತೆ ನಡೆಸಿ ಕಲಬುರಗಿಯ ಖಡಕ್ ರೊಟ್ಟಿಗೆ ವಿಶ್ವಮಟ್ಟದಲ್ಲಿ ಸರಕು ಮಾಡಬೇಕೆಂದು ಮಾತುಕತೆ ನಡೆದಿದೆ.

ಪ್ರಾರಂಭಿಕದಲ್ಲಿ ಮೂರು ರಾಷ್ಟ್ರಗಳಾದ ಯುಎಸ್‌ಎ, ಯುಕೆ ಹಾಗೂ ಆಸ್ಟ್ರೇಲಿಯಾಗೆ ರೊಟ್ಟಿಯ ಕ್ವಾಲಿಟಿ ಚೆಕ್ ಮಾಡಲು ತಲಾ 100 ರೊಟ್ಟಿ, 10 ಬಾಕ್ಸ್ (ಒಂದು ಬಾಕ್ಸ್‌ನಲ್ಲಿ 10 ರೊಟ್ಟಿ) ಸ್ಯಾಂಪಲ್‌ನ್ನು ಮುಂದಿನ ವಾರ ಫ್ಲೈಟ್ ಮೂಲಕ ಕಳಿಹಿಸಲಾಗುತ್ತಿದೆ.



“ಕಲಬುರಗಿ ರೊಟ್ಟಿ ಈಗಾಗಲೇ ಆನ್‌ಲೈನ್‌ನಲ್ಲಿ ಲಭ್ಯವಿದೆ. ಇದೀಗ ವಿದೇಶಕ್ಕೆ ಕಳಿಸಲು ಹೊಸ ಹೆಜ್ಜೆ ಇಡಲಾಗುತ್ತಿದ್ದು, ಅಮೆರಿಕಾ ಸೇರಿ 3 ರಾಷ್ಟ್ರಕ್ಕೆ 10 ಬಾಕ್ಸ್‌ಗಳಂತೆ 100 ರೊಟ್ಟಿ ಸ್ಯಾಂಪಲ್ ಕಳಿಸಲಾಗುತ್ತಿದೆ. ಬಳಿಕ ಆರ್ಡರ್ ಬಂದರೆ 10 ಸಾವಿರದ ಮೊದಲ ಕನ್ಸೈನಮೆಂಟ್ ಹೋಗಲಿದೆ. ವಿದೇಶದಿಂದ ಆರ್ಡರ್ ಬರುವ ವಿಶ್ವಾಸ ನಮಗಿದೆ.

■ ಪ್ರಿಯಾಂಕ್ ಖರ್ಗೆ, ಉಸ್ತುವಾರಿ ಸಚಿವ, ಕಲಬುರಗಿ

“ಕಲಬುರಗಿ ರೊಟ್ಟಿ ನಿರೀಕ್ಷೆಗೂ ಮೀರಿ ಯಶಸ್ಸು ಕಾಣುತ್ತಿದೆ. ವೆಬ್‌ಸೈಟ್‌ನಲ್ಲಿ ಸಹ ಸಾಕಷ್ಟು ಜನರಿಂದ ಕರೆ ಬರುತ್ತಿದ್ದು, ನಾವು ಇದೀಗ ವಿದೇಶಕ್ಕೆ ಸರಕು ಮಾಡಲು ಎಕ್ಸ್‌ಪೋರ್ಟ್ ಪರವಾನಗಿಗಾಗಿ ಪ್ರಯತ್ನ ನಡೆಸಿದ್ದೇವೆ. ಪ್ರಧಾನಿ ಹಾಗೂ ಸಿಎಂ ಸಹ ಕಲಬುರಗಿ ರೊಟ್ಟಿ ಕುರಿತು ಪ್ರಶಂಸೆ ವ್ಯಕ್ತಪಡಿಸಿ, ಮಹಿಳೆಯರಿಗೆ ಉತ್ತೇಜನ ನೀಡಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಲಬುರಗಿ ರೊಟ್ಟಿ ಸದ್ದಾಗಿದ್ದು ಖುಷಿ ನೀಡುತ್ತಿದೆ.

■ ಫೌಜಿಯಾ ತರನ್ನುಮ್, ಡಿಸಿ, ಕಲಬುರಗಿ



ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382-220556 ಇ-ಮೇಲ್: predkarwar@gmail.com

ಕ್ರಸಂ: ಪಂರಾ.ಇಂ/ಕಾ/ಪಿಬಿ-1/2026-27/03 ದಿ: 16.04.2026

ಟೆಂಡರ್ ಪ್ರಕಟಣೆ-03/2026-27 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2025-26ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅನುದಾನದ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಪ್ರವರ್ಗ 1) (1) ಹೊನ್ನಾವರ ತಾ: ಹೆರೆಂಗಡಿ ಗ್ರಾಮ ಪಂಚಾಯತದ ಹೈಗುಂದದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ. RDPR/2025-26/RD/WORK_INDENT24776/Call-2, ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 25000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್-ಬಿಗಳನ್ನು ಮತ್ತು Technical Bidನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 27.04.2026 ರ ಮದ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 28.04.2026 ಬೆಳಗ್ಗೆ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/55/25-27
dt. 17.04.2026

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ, ಬೆಂಗಳೂರು-560001, ಕರ್ನಾಟಕ.

ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321

E-mail: ho@kspcb.gov.in, Website: https://kspcb.karnataka.gov.in

ನಂ. PCB 280 INFRA EPH 2025/169 ದಿನಾಂಕ: 16.04.2026

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲ್ಲೂಕಿನ ಜೆ.ಐ ಅಗ್ರಹಾರ ಗ್ರಾಮದ ಸರ್ವೆ ನಂ. 1 ರಿಂದ 8, ತರಬನಹಳ್ಳಿ ಗ್ರಾಮದ ಸರ್ವೆ ನಂ.12, 14 ರಿಂದ 49 ಹಾಗೂ 66 ರಿಂದ 72 ಮತ್ತು ಹುಲಿಕುಂಟೆ ಗ್ರಾಮದ 139, 145 ರಿಂದ 160, 163 ರಿಂದ 166, 168 ರಿಂದ 183, 232 ರಿಂದ 252, 262 ರಿಂದ 293 ಹಾಗೂ 295 ರಿಂದ 306 ಗಳಲ್ಲಿ ಒಟ್ಟು 1051.01 ಎಕರೆ (425.33 ಹೆಕ್ಟೆರ್) ಪ್ರದೇಶದಲ್ಲಿ ನಾಲೆಡ್ಜ್, ವೆಲ್ಬಿಂಗ್ ಮತ್ತು ಇನೊವೇಟಿವ್ ಸಿಟಿ 3ನೇ ಹಂತ (KWIN CITY -Phase-3) ಅಭಿವೃದ್ಧಿ ಪಡಿಸಲು ಉದ್ದೇಶಿಸಿರುತ್ತಾರೆ. ಈ ಪ್ರಸ್ತಾಪಿತ ಯೋಜನೆಗೆ ಪರಿಸರ ಆಘಾತ ಅಧ್ಯಯನ ಅಧಿಸೂಚನೆ ದಿನಾಂಕ 14.09.2006ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಆದರಂತೆ ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ-ಕರ್ನಾಟಕ ಇವರಿಂದ ಯೋಜನಾದಾರರು ಉಲ್ಲೇಖಿದ ನಿಯಮಗಳನ್ನು (Terms of Reference, TOR) ಪತ್ರ ದಿನಾಂಕ: 28.01.2026 ಕಡತ ಸಂಖ್ಯೆ: SEIAA 29 IND 2025, ಪ್ರಸ್ತಾವನೆ ಸಂಖ್ಯೆ: SIA/KA/INFRA1/558538/2025 ಹಾಗೂ ದಿನಾಂಕ: 27.11.2025 ಮತ್ತು TOR Identification No: TO25B3102KA5683816N ರಂತೆ ಪಡೆದಿರುತ್ತಾರೆ. ಪ್ರವರ್ತಕರ ಪತ್ರ ಸಂಖ್ಯೆ KIADB/EE-3/3050/2025-26, ದಿನಾಂಕ: 03.02.2026 ರ ಕೋರಿಕೆಯಂತೆ ಹಾಗೂ ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ ದೊಡ್ಡಬಳ್ಳಾಪುರ ರವರ ಪತ್ರ ಸಂಖ್ಯೆ: ಕರಾಮಾನಿಮಂ/ಪ್ರಾ.ಕ(ದೊಡ್ಡಬಳ್ಳಾಪುರ)/ಪಸಾಸ/2025-26/1258, ದಿನಾಂಕ: 27.03.2026 ರಲ್ಲಿ ತಿಳಿಸಿರುವಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ದೊಡ್ಡಬಳ್ಳಾಪುರ ಜಿಲ್ಲೆ ರವರು ದಿನಾಂಕ: **20ನೇ ಮೇ 2026 ರಂದು ಬುಧವಾರ ಬೆಳಗ್ಗೆ 11.00 ಗಂಟೆಗೆ** ನಿಗಧಿಪಡಿಸಿರುತ್ತಾರೆ. ಸದರಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ವಿವರಗಳು ಈ ಕೆಳಕಂಡಂತಿವೆ.

1. **ಸಂಸ್ಥೆಯ ಹೆಸರು ಮತ್ತು ವಿಳಾಸ** : ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ, ವಲಯ ಕಛೇರಿ, ಬೆಂಗಳೂರು, #14/3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು-560001.

2. **ಉದ್ದೇಶಿತ ಯೋಜನೆಯ ಸ್ಥಳ** : ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲ್ಲೂಕಿನ ಜೆ.ಐ ಜೆ.ಐ ಅಗ್ರಹಾರ ಗ್ರಾಮದ ಸರ್ವೆ ನಂ. 1 ರಿಂದ 8, ತರಬನಹಳ್ಳಿ ಗ್ರಾಮದ ಸರ್ವೆ ನಂ.12, 14 ರಿಂದ 49 ಹಾಗೂ 66 ರಿಂದ 72 ಮತ್ತು ಹುಲಿಕುಂಟೆ ಗ್ರಾಮದ 139, 145 ರಿಂದ 160, 163 ರಿಂದ 166, 168 ರಿಂದ 183, 232 ರಿಂದ 252, 262 ರಿಂದ 293 ಹಾಗೂ 295 ರಿಂದ 306 ಗಳಲ್ಲಿ ಒಟ್ಟು 1051.01 ಎಕರೆ (425.33 ಹೆಕ್ಟೆರ್) ಪ್ರದೇಶ.

3. **ಯೋಜನೆಯ ಕಾರ್ಯಚಟುವಟಿಕೆ** : ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿರವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲ್ಲೂಕಿನ ಜೆ.ಐ ಅಗ್ರಹಾರ ಗ್ರಾಮದ ಸರ್ವೆ ನಂ. 1 ರಿಂದ 8, ತರಬನಹಳ್ಳಿ ಗ್ರಾಮದ ಸರ್ವೆ ನಂ.12, 14 ರಿಂದ 49 ಹಾಗೂ 66 ರಿಂದ 72 ಮತ್ತು ಹುಲಿಕುಂಟೆ ಗ್ರಮದ 139, 145 ರಿಂದ 160, 163 ರಿಂದ 166, 168 ರಿಂದ 183, 232 ರಿಂದ 252, 262 ರಿಂದ 293 ಹಾಗೂ 295 ರಿಂದ 306 ಗಳಲ್ಲಿ ಒಟ್ಟು 1051.01 ಎಕರೆ (425.33 ಹೆಕ್ಟೆರ್) ಪ್ರದೇಶದಲ್ಲಿ ನಾಲೆಡ್ಜ್, ವೆಲ್ಬಿಂಗ್ ಮತ್ತು ಇನೊವೇಟಿವ್ ಸಿಟಿ 3ನೇ ಹಂತ (KWIN CITY-Phase 3) ಅಭಿವೃದ್ಧಿ ಪಡಿಸುವ ಕುರಿತು.

4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ : ದಿನಾಂಕ: 20ನೇ ಮೇ 2026 ರಂದು ಬುಧವಾರ, ಸಮಯ: ಬೆಳಗ್ಗೆ 11.00 ಗಂಟೆಗೆ, ಸ್ಥಳ : ಉದ್ದೇಶಿತ ಸ್ಥಳ, ಜೆ.ಐ.ಅಗ್ರಹಾರ ಗ್ರಾಮದ ಸರ್ವೆ ನಂ.8, ದೊಡ್ಡಬೆಳವಂಗಲ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.**

5. **ಯೋಜನೆಯ ವೆಚ್ಚ** : ರೂ. 2263.38 ಕೋಟಿ (ಯೋಜನಾ ಮೊತ್ತ).

6. **ಯೋಜನೆಯ ದಾಸ್ತವೇಜುಗಳನ್ನು ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ** : (1) ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ಕಛೇರಿ ಸಂಕೀರ್ಣ, ಭೀರಸಂದ್ರ ಗ್ರಾಮ ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. (2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಛೇರಿ ಸಂಕೀರ್ಣ, ಭೀರಸಂದ್ರ ಗ್ರಾಮ ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. (3) ಜಿಲ್ಲಾ ಕೈಗಾರಿಕಾ ಕೇಂದ್ರ, ಜಿಲ್ಲಾ ಕಛೇರಿ ಸಂಕೀರ್ಣ, ಭೀರಸಂದ್ರ ಗ್ರಾಮ ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. (4) ತಹಶೀಲ್ದಾರ ಕಾರ್ಯಾಲಯ, ತಾಲ್ಲೂಕು ಕಛೇರಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. (5) ಗ್ರಾಮ ಪಂಚಾಯಿತಿ ಕಾರ್ಯಾಲಯ, ಹುಲಿಕುಂಟೆ ಗ್ರಾಮ ಪಂಚಾಯಿತಿ, ಹುಲಿಕುಂಟೆ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. (6) ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ-ಬೆಂಗಳೂರು ಉತ್ತರ ಅರ್ಬನ್ ಇಕೋ ಪಾರ್ಕ್, 1ನೇ ಮಹಡಿ, 100 ಅಡಿ ರಸ್ತೆ, 3ನೇ ಹಂತ, ಪೀಣ್ಯ ಕೈಗಾರಿಕ ಪ್ರದೇಶ, ಬೆಂಗಳೂರು-560058. (7) ಪ್ರಾದೇಶಿಕ ಕಛೇರಿ-ದೊಡ್ಡಬಳ್ಳಾಪುರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಟಿ.ಬಿ. ಸರ್ಕಲ್, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-561203. (8) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560034. (9) ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ-ಕರ್ನಾಟಕ, 4ನೇ ಗೇಟ್, 7ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560001. (10) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.

ಸೂಚನೆ : ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ (**ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ**) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ: https://kspcb.karnataka.gov.in ನಲ್ಲಿ ಪಡೆಯಬಹುದು.**

ಸಹಿ/-
ಸದಸ್ಯ ಕಾರ್ಯದರ್ಶಿ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ : ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

CHANGE OF NAME

I, **SHAGUFTA MOGALALLI** (Old Name) Resident of H No: 70 3rd Cross Adhyapak Nagar Gudihal Road Hubballi Pin - 580024 State, (address) have changed my name as **SHAGUFTA AKHTAR AHMED MOGALALLI** New Name) henceforth I will be called and recognized by new name for all future purposes, dated: 17/04/2026.

CHANGE OF NAME

I, **FARHAT PARVEEN AFTAB** (Old Name) Resident of H No 32 W No 10 Behind Tayyaba Masjid Bus Stand Road Bagalkot 587101 District Bagalkot, State Karnataka, have changed my name as **FARHAT PARVEEN** (New Name) for all purposes affidavit Dtd.: 17-04-2026 sworn before notary **S. S. Revadigar.**

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ

ನಂ2 ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು-560 001. ದೂರವಾಣಿ: 080-22220227

ವೆಬ್‌ಸೈಟ್: www.kpwd.gov.in

ಸಂಖ್ಯೆ: ಕಾನಿಇಂ/ಕವಿ2/ಸಇ-1,2,3/2026-27 ದಿನಾಂಕ: 13.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27

ಕಾರ್ಯಪಾಲಕ ಅಭಿಯಂತರರು, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ-2000ರನ್ವಯ ಕೆಡಬ್ಲ್ಯೂ-1 ಕೆಡಬ್ಲ್ಯೂ-2 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in/) ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ.

(1) ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ದಿನಾಂಕ: **16.04.2026** ರಿಂದ **24.04.2026** ಸಂಜೆ **5.30** ಗಂಟೆಯವರೆಗೆ. (2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: **24.04.2026** ಸಂಜೆ **5.30** ಗಂಟೆಯವರೆಗೆ. (3) ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ ದಿನಾಂಕ: **27.04.2026** ರಂದು ಬೆಳಗ್ಗೆ **10.30** ಕ್ಕೆ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು.

ವಾಸಾಸಂಇ/ಉನಿ-ಸಿ.ಪಿ/220/ಕೆಎಸ್‌ಎಂಸಿಎ/2026-27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಿಐಎನ್: ಯು40109ಕೆಎ1999ಎಸ್‌ಜಿಸಿ025521

ಕ್ರಸಂ:952/ಗದಗ/ಕಾನಿಇಂ(ವಿ)/ವಿ.ಸಂಖ್ಯೆ-/2026-27/192 ದಿನಾಂಕ: 16-04-2026

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಗದಗ ಕಾರ್ಯಾಚರಣೆಗಳ ವಿಭಾಗದಲ್ಲಿ ಈ ಕೆಳಕಂಡ ಕಛೇರಿಯ ಟೆಂಡರ್‌ಗಳನ್ನು ಆಹ್ವಾನಿಸಿದೆ.

(1) 110ಕೆವಿ ಡಂಬಳ ಉಪಕೇಂದ್ರದಲ್ಲಿ ವಿಫಲವಾದ ಕೆಪ್ಯಾಸಿಟರ್ ಸೆಲ್ಲನ್ನು ರೀಕಂಡೀಷನ್ ಮಾಡುವುದು. (2) 220ಕೆವಿ ಹರ್ತಿ ಉಪಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆಗೆ ಸರಕು ಸಾಮಗ್ರಿಗಳನ್ನು ಸರಬರಾಜು ಮಾಡುವುದು. (3) 220ಕೆವಿ ಹರ್ತಿ ಉಪಕೇಂದ್ರದಲ್ಲಿ ಎಬಿಬಿ ಮೇಕ್ ಆರ್‌ಇಎಲ್670 ಡಿಸ್ಟನ್ಸ್ ರಿಲೆಯ 220 ಕೆವಿ ಬಿಡನಾಳ ಲೈನ್-1 ನ್ನು ದುರಸ್ತಿ ಮಾಡುವುದು. (4) 220ಕೆವಿ ಹರ್ತಿ ಉಪಕೇಂದ್ರದಲ್ಲಿ ಟಿಎನ್‌ಸಿ ಸ್ವಿಚ್ಚನ್ನು 220ಕೆವಿ ಲೈನ್ & ಬಸ್ ಕಪ್ಲರ್‌ಗೆ ಸರಬರಾಜು ಮಾಡುವುದು. (5) 110ಕೆವಿ ಡಂಬಳ ಉಪಕೇಂದ್ರದಲ್ಲಿ ಎಲೆಕ್ಟ್ರೋ ಮೆಕ್ಯಾನಿಕಲ್ ಬ್ಯಾಕ್‌ಅಪ್ ರಿಲೇಗಳನ್ನು ಸರಬರಾಜು ಮಾಡುವುದು. (6) 110ಕೆವಿ ಶಿರಹಟ್ಟಿ ಉಪಕೇಂದ್ರದಲ್ಲಿ 10 ಎಂವಿಎ, 110/11ಕೆವಿ ಪರಿವರ್ತಕ-1 ರ ತೈಲ ಸೋರುವಿಕೆಯನ್ನು ತಡೆಗಟ್ಟುವ ಕಾಮಗಾರಿ. (7) 110ಕೆವಿ ಮುಂಡರಗಿ ಉಪಕೇಂದ್ರದಲ್ಲಿ 20 ಎಂವಿಎ, 110/33ಕೆವಿ ಪರಿವರ್ತಕ-3 ರ ತೈಲ ಸೋರುವಿಕೆಯನ್ನು ತಡೆಗಟ್ಟುವ ಕಾಮಗಾರಿ. (8) 110ಕೆವಿ ಮುಂಡರಗಿ ಉಪಕೇಂದ್ರದಲ್ಲಿ ವಿಫಲವಾದ ಕೆಪ್ಯಾಸಿಟರ್ ಸೆಲ್ಲನ್ನು ಮರು ಪರಿಶೀಲನೆ ಮಾಡುವುದು.

ವಿಚಾರಣೆಯ ವಿವರಗಳನ್ನು ದಿನಾಂಕ: **18-04-2026 ರಂದು 10:00 ಗಂಟೆಯ** ನಂತರ ಈ ಕಚೇರಿಯಿಂದ ಪಡೆಯಬಹುದು. ಕೊನೆಯ ದಿನಾಂಕ: **02-05-2026** ರಂದು ಸಂಜೆ **04:00** ಗಂಟೆಗೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯಾಚರಣೆ ವಿಭಾಗ, ಕವಿಪ್ರನಿನಿ, ಬಾಪೂಜಿನಗರ, ಗದಗ-582103.

ಜಮೀನಿನ ಖರೀದಿ ಪತ್ರ ಕಳೆದ ಬಗ್ಗೆ ಪ್ರಕಟಣೆ

ನಾನು **ತಾಯಪ್ಪಾ ದಾದು ಸುಳ್ಳ**, ಸಾ: ಸಿದ್ದಾಪೂರ, ತಾ: ತಿಕೋಟಾ, ಜಿ:ವಿಜಯಪುರ ವಿನಂತಿಸಿಕೊಳ್ಳುವದೇನಂದರೆ.

ನನ್ನ ಸ್ವಾಧೀನದಲ್ಲಿದ್ದ ಜಮೀನಿನ ಮೂಲ ಖರೀದಿ ಪತ್ರ ವಿಜಯಪುರ ನೋಂದಣಿ ಕಚೇರಿಯಲ್ಲಿ ನೋಂದಣಿಯಾದ **:ಬಿಜಿಜೆ-1727 -2002-2003** ಇದನ್ನು **ದಿನಾಂಕ17-04-2026** ರಂದು ಸಿದ್ದಾಪೂರದಲ್ಲಿ ಕಳೆದುಕೊಂಡಿರುತ್ತೇನೆ.ಸದರಿ ಖರೀದಿ ಪತ್ರವು ಯಾರಿಗಾದರು ಸಿಕ್ಕಿದಲ್ಲಿ ನನ್ನ ವಿಳಾಸಕ್ಕೆ ಅಥವಾ ವಿಜಯಪುರ ಪೋಲೀಸ್ ಠಾಣೆಗೆ ತಲುಪಿಸಬೇಕು ಅಂತಾ ವಿನಂತಿಸುತ್ತೇನೆ. ನನ್ನ ಮೋಬೈಲ್ ನಂ. **9686465509** ಇರುತ್ತದೆ. ಸದರಿ ದಾಖಲೆಗಳನ್ನು ತಂದು ಕೊಟ್ಟವರಿಗೆ ಸೂಕ್ತ ಬಹುಮಾನ ನೀಡಲಾಗುವುದು.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ

ಆಸ್ತಿ ಅಧಿಕಾರಿಗಳ ಕಛೇರಿ ವಿ.ಸಿ ಫಾರಂ, ಮಂಡ್ಯ-571405. ಕರ್ನಾಟಕ

ಇ ಮೇಲ್:eousmandya@mail.com

ಸಂಖ್ಯೆ:ಕೃ.ವಿ.ವಿ.ಮ/ಅ.ಅ/ಟೆಂಡರ್/228/2026-27 ದಿನಾಂಕ: 17.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸಂಖ್ಯೆ: NO.EO/TN/MP Hostel/18/2026-27 Dtd.15.04.2026)

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯದ ಆಧೀನದಲ್ಲಿ ಬರುವ ಕೇಂದ್ರಗಳಲ್ಲಿನ ವಸತಿ ನಿಲಯಗಳಲ್ಲಿ ಕೆಲಸ ನಿರ್ವಹಿಸಲು ಸಿಬ್ಬಂಧಿಗಳನ್ನು ನೇಮಕ ಮಾಡಿಕೊಳ್ಳಲು ಅಲ್ಪಾವದಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನೋಟಿಫಿಕೇಷನ್, ಷೆಡ್ಯೂಲ್ ಹಾಗೂ ಟೆಂಡರ್‌ನ ವಿವರಗಳು https://kppp.karnataka.gov.in ವೆಬ್ ಸೈಟ್ ನಲ್ಲಿ ಲಭ್ಯವಿರುತ್ತದೆ.

ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡತಿವೆ.

1	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	12.05.2026	ಸಂಜೆ 4.00 ಗಂಟೆಗೆ
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	14.05.2026	ಬೆಳಿಗ್ಗೆ 10.30 ಗಂಟೆಗೆ
3	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	15.05.2026	ಬೆಳಿಗ್ಗೆ 10.30 ಗಂಟೆಗೆ

ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಕೆಲಸದ ಎಲ್ಲಾ ದಿವಸಗಳಲ್ಲೂ ಮತ್ತು ಆಸ್ತಿ ಅಧಿಕಾರಿಗಳು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ, ವಿ.ಸಿ.ಫಾರಂ,ಮಂಡ್ಯ-571405 ಇವರನ್ನು ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ: 9448196321.

ಸಹಿ/-ಆಸ್ತಿ ಅಧಿಕಾರಿಗಳು
ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ

ವಾಸಾಸಂಇ/ಮಂಡ್ಯ/53/ಶಿರಡಿ ಸಾಯಿ/2026-27

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ಉಪ ವಿಭಾಗ, ಕಲಬುರಗಿ

ಪ್ರಾದೇಶಿಕ ಅರಣ್ಯ ವಿಭಾಗ ಕಛೇರಿ, ಎಸ್.ಬಿ. ದೇವಸ್ಥಾನ ರಸ್ತೆ, ಕಲಬುರಗಿ-585102

ದೂರವಾಣಿ ಸಂಖ್ಯೆ: 08472-256601, ಮಿಂಚಂಚೆ ವಿಳಾಸ : acfkalaburgit@gmail.com

ಸಂಖ್ಯೆ: ಸಅಸಂ/ಉವಿಕ/ಇ-ಟೆಂಡರ್/ಸಿಆರ್/2025-26 ದಿನಾಂಕ : 15-04-2026

:: ಅಲ್ಪಾವಧಿ ಟೆಂಡರ ಪ್ರಕಟಣೆ ::

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ನಡಿಯಲ್ಲಿ ಮಾತ್ರ)

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಪ್ರಾದೇಶಿಕ ಅರಣ್ಯ ವಿಭಾಗ ಕಲಬುರಗಿ ರವರ ಕಛೇರಿಯಿಂದ 2025-26ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ 2026-27ನೇ ಸಾಲಿಗೆ ಮುಂದುವರೆದ **ಅರಣ್ಯೀಕರಣ** ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ನಡಿಯಲ್ಲಿ **ಎರಡನೇ ಬಾರಿಗೆ** ಟೆಂಡರ್ ಅಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿವೆ.

ಕಾಮಗಾರಿಯ ವಿವರ : **ಕಲಬುರಗಿ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ಪ್ರತ್ಯಕವಾಗಿ ಟೆಂಡರ್ ಅಹ್ವಾನಿಸಲಾಗಿದೆ.**

1) ಟೆಂಡರ್‌ಗಿಟ್ಟ ಮೊತ್ತ : **ಕನಿಷ್ಠ ರೂ. 504525, ಗರಿಷ್ಠ ರೂ. 2220750,** 2) ಲೆಕ್ಕ ಶೀರ್ಷಿಕೆ : ವಿವಿಧ ಯೋಜನೆಯಡಿ 2026-27ನೇ ಸಾಲಿಗೆ ಮುಂದುವರೆದ ಕಾಮಗಾರಿ, 3) ತಾಂತ್ರಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ : **ಎರಡನೇ ದಿನಾಂಕ 24-04-2026 ಅಪರಾಹ್ನ 4.00 ಗಂಟೆವರೆಗೆ,** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಕೊನೆಯ : **ಎರಡನೇ ದಿನಾಂಕ 27-04-2026 ಅಪರಾಹ್ನ 11.00 ಗಂಟೆಯ,** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ಕೊನೆಯ : **ಎರಡನೇ ದಿನಾಂಕ : 28-04-2026 ಅಪರಾಹ್ನ 11.30 ಗಂಟೆಯ,** 6) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ಅರಣ್ಯ ಉಪ ವಿಭಾಗ ಕಲಬುರಗಿ, ಎಸ್.ಬಿ. ಟೆಂಪಲ್ ರೋಡ್, ಕಲಬುರಗಿ, 7) ಅಂತರಜಾಲ ತಾಣದ ವಿಳಾಸ : https://kppp.karnataka.gov.in

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಪ್ರಾದೇಶಿಕ ಅರಣ್ಯ ಉಪ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/40/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಕೊಪ್ಪಳ. ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2026-27/38 ದಿನಾಂಕ: 16/04/2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ನಾಲ್ಕನೇಯ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2025-26 ನೇ ಸಾಲಿನ MVS O & M Non SDP ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ http://kppp.karnataka.gov.in ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟನಲ್ಲಿ ದಿನಾಂಕ: **18/04/2026** ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ: kppp.karnataka.gov.in ನಲ್ಲಿರುವಂತೆ ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ: **18/04/2026** ಸಮಯ 10:00 ಗಂಟೆಯಿಂದ **27/04/2026** ಸಮಯ 16:00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ: **18/04/2026** ಸಮಯ 16:00 ಗಂಟೆಯಿಂದ **27/04/2026** ಸಮಯ 16:00 ಗಂಟೆವರೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **28/04/2026** ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ **30/04/2026** ರಂದು 11:00 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ

ಟಿಪ್ಪಣಿ: ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ 8 ದಿವಸದೊಳಗಾಗಿ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರ ಉಮೇದುವಾರಿಕೆಯನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/32/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯನಿವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ದೂರವಾಣಿ : 0836- 2747944(ಕ) Fax No.: 0836-2741209 E-mail: eepwddha@gmail.com

ಕ್ರಸಂಃಕಾನಿಇಂ/ಧಾವಿ/ಗುತ್ತಿಗೆ/ಪಿ.ಬಿ.1,2,3,4,5/2026-27/246 ದಿನಾಂಕ: 17-04-2026

ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆಡಬ್ಲೂ-1,2,3,4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. (**kppp.karnataka.gov.in**) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ಏಕ ಮತ್ತು ದ್ವಿ-ಲಕೋಟೆ ಪದ್ಧತಿಯಲ್ಲಿ ಲೆಕ್ಕ ಶೀರ್ಷಿಕೆ:- 2025-26ನೇ ಸಾಲಿನ CMIDP 4059-80-051-0-60-132 ಅಡಿ, 3054-04-337-1-10-200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ, 5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ, 2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ಅಡಿ, 4059-80-051-0-32-86 ನ್ಯಾಯಾಲಯ ಕಟ್ಟಡ ನಿರ್ಮಾಣ, ಯೋಜನೆಯಡಿ, 4059-80-051-0-60-423 ಟಿ.ಎಸ್.ಪಿ.,(CMIDP) 4059-80-051-0-29-386, 4059-80-051-0-60-422 SCP, 8443 Deposit ಅಡಿ ಟೆಂಡರ್ ಅಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

ಸಾಮಾನ್ಯ:- (1) PWD/2025-26/RD/WORK_INDENT34312 (2) PWD/2025-26/RD/WORK_INDENT31530 (3) PWD/2025-26/RD/WORK_INDENT30736/CALL-3 (4) PWD/2025-26/RD/WORK_INDENT22734 (5) PWD/2025-26/BD/WORK_INDENT34272 (Extension) (6) PWD/2025-26/BD/WORK_INDENT34799 (Extension) (7) PWD/2025-26/BD/WORK_INDENT34409 (8) PWD/2025-26/RD/WORK_INDENT34280 (9) PWD/2025-26/RD/WORK_INDENT35212 (10) PWD/2025-26/RD/WORK_INDENT33461 (11) PWD/2024-25/SE0244/CALL-2 (12) PWD/2026-27/RD/WORK_INDENT35487 (13) PWD/2025-26/BD/WORK_INDENT29190/CALL-3 (14) PWD/2026-27/RD/WORK_INDENT35686 (15) PWD/2026-27/BD/WORK_INDENT35481 (Single Cover) (16) PWD/2026-27/BD/WORK_INDENT35483 (Single Cover) (17) PWD/2025-26/BD/WORK_INDENT35539 (Single Cover) (18) PWD/2025-26/BD/WORK_INDENT35769 (Single Cover) ಪರಿಶಿಷ್ಟ ಜಾತಿ:- (19) PWD/2025-26/BD/WORK_INDENT35166 (20) PWD/2026-27/RD/WORK_INDENT35383 (21) PWD/2026-27/RD/WORK_INDENT35684 ಪರಿಶಿಷ್ಟ ಪಂಗಡ:- (22) PWD/2025-26/RD/WORK_INDENT35106 (23) PWD/2026-27/RD/ WORK_INDENT35384 ಪ್ರವರ್ಗ-2ಎ:- (24) PWD/2025-26/RD/WORK_INDENT33456 (25) PWD/2026- 27/RD/WORK_ INDENT35687 (26) PWD/2026-27/RD/WORK_INDENT35382 ಪ್ರವರ್ಗ-1:- (27) PWD/2025-26/RD/WORK_INDENT33455

Calander of Events:

(1) ಪ್ರಿಬಿಡ್/ಆಕ್ಷೇಪಣೆಯನ್ನು/ಸಲ್ಲಿಸುವ ಕೊನೆಯ ದಿನಾಂಕ: **24-04-2026 (ಬೆಳಿಗ್ಗೆ 12:30 ಗಂಟೆಯವರೆಗೆ).** (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **27-04-2026 (ಸಾಯಂಕಾಲ 04:00 ಗಂಟೆಯವರೆಗೆ).** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **28-04-2026 (ಸಾಯಂಕಾಲ 04:30 ಗಂಟೆಯ ನಂತರ).** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **29-04-2026 (ಸಾಯಂಕಾಲ 04:30 ಗಂಟೆಯ ನಂತರ).** ಸಾಮಾನ್ಯ:- (28) PWD/2025-26/BD/WORK_INDENT31543 (29) PWD/2025-26/RD/WORK_ INDENT31544/CALL-3 (30) PWD/2025- 26/RD/WORK_INDENT27826/Call-3 (31) PWD/2025-26/SE1108 (32) PWD/2026-27/BD/WORK_INDENT35679

Calander of Events: 2)

(1) ಪ್ರಿಬಿಡ್/ಆಕ್ಷೇಪಣೆಯನ್ನು/ಸಲ್ಲಿಸುವ ಕೊನೆಯ ದಿನಾಂಕ: **05-05-2026 (ಬೆಳಿಗ್ಗೆ 12:30 ಗಂಟೆಯವರೆಗೆ).** (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **06-05-2026 (ಸಾಯಂಕಾಲ 04:00 ಗಂಟೆಯವರೆಗೆ).** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07-05-2026 (ಸಾಯಂಕಾಲ 04:30 ಗಂಟೆಯ ನಂತರ).** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **08-05-2026 (ಸಾಯಂಕಾಲ 04:30 ಗಂಟೆಯ ನಂತರ).**

ಕಾಮಗಾರಿಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ **http://www.kppp.karnataka,gov.in** ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/69/2026-27/ದೇಶಪಾಂಡೆಪಬ್ಲಿಸಿಟಿ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕೊಪ್ಪಳ

ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ, ಕೊಪ್ಪಳ, ಇ-ಮೇಲ್ : eepredkpl@gmail.com

ಸಂಖ್ಯೆ : ಪಂ.ರಾ.ಇಂ./ವಿ.ಕೊ./ತಾ.ಶಾ./ಸ.ಇಂ./ಟೆಂಡರ್/2026-27/124 ದಿನಾಂಕ : 16-04-2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ - 1, 2, 3 ಮತ್ತು 4ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್ / ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ **"http://kppp.karnataka.gov.in ಪೋರ್ಟಲ್"** ಮುಖಾಂತರ ಈ ಕೆಳಗೆ ನಮೂಧಿಸಿದ ಅನುಬಂಧದಲ್ಲಿಯ **2025-26 ನೇ ಸಾಲಿನ ಕೆಕೆಆರಡಿಬಿ ಇನ್ನಿತರೆ ಅನುದಾನ ಯೋಜನೆಯಡಿ ಕೊಪ್ಪಳ ಜಿಲ್ಲೆಯ ವಿವಧ ತಾಲೂಕಿನ ಕಾಮಗಾರಿಗಳಿಗೆ ಟೆಂಡರ್** ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು **"http://kppp.karnataka.gov.in ಪೋರ್ಟಲ್"** ಮುಖಾಂತರ ಭಾಗವಹಿಸಬಹುದು.

1) ಕೊಪ್ಪಳ ತಾಲ್ಲೂಕಿನ ಗೊಂಡಬಾಳ ಗ್ರಾಮದಲ್ಲಿ ಅಂಗನವಾಡಿ ಕೇಂದ್ರ - 6 ಕಟ್ಟಡ ನಿರ್ಮಾಣ. SC (KPL2524211167). INDENT NO: 25967. ಟೆಂಡರ್‌ಗಿಟ್ಟ ಮೊತ್ತ ರೂ. 16.75 ಲಕ್ಷ, ಇ.ಎಂ.ಡಿ. : ರೂ. 17000.00. ಕಾಲಾವಧಿ : 06 ತಿಂಗಳು.

2) ಕೊಪ್ಪಳ ತಾಲ್ಲೂಕಿನ ಮುದ್ದಾಬಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸ್ಮಾರ್ಟ ಕ್ಲಾಸ್ ನಿರ್ಮಾಣ (UDISE CODE : 29070312801). (KPL2524213158). INDENT NO: 25964. ಟೆಂಡರ್‌ಗಿಟ್ಟ ಮೊತ್ತ : ರೂ. 8.35 ಲಕ್ಷ, ಇ.ಎಂ.ಡಿ. : ರೂ. 21000.00. ಕಾಲಾವಧಿ : 03 ತಿಂಗಳು.

3) ಕೊಪ್ಪಳ ತಾಲ್ಲೂಕಿನ ಹ್ಯಾಟಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸ್ಮಾರ್ಟ ಕ್ಲಾಸ್ ನಿರ್ಮಾಣ (UDISE CODE : 29070308901). ST (KPL2524212155). INDENT NO: 25966. ಟೆಂಡರ್‌ಗಿಟ್ಟ ಮೊತ್ತ : ರೂ. 8.60 ಲಕ್ಷ, ಇ.ಎಂ.ಡಿ. : ರೂ. 9000.00. ಕಾಲಾವಧಿ : 03 ತಿಂಗಳು.

4) ಕೊಪ್ಪಳ ತಾಲೂಕಿನ 1) ಸ. ಬಾಲಕಿಯರ ಮಾ. ಶಾಲೆ ಕೊಪ್ಪಳ (ಜಿ.ಜಿ.ಎಂ.ಎಸ್) ಶಾಲೆಗೆ ಪಿಠೋಪಕರಣಗಳ ಖರೀದಿ 29070317401. ರೂ. 4.95 ಲಕ್ಷ, 2) ಸ.ಹಿ.ಪ್ರಾ. ಶಾಲೆ ಮುಂಡರಗಿ (ಹ್ಯಾಟಿ) ಶಾಲೆಗೆ ಶಾಲೆಗಳಿಗೆ ಪಿಠೋಪಕರಣಗಳ ಖರೀದಿ 29070308901, ರೂ. 8.10 ಲಕ್ಷ, 3) ಸ. ಪ್ರೌಢ ಶಾಲೆ ಭಾಗ್ಯನಗರ ಶಾಲೆಗೆ ಗ್ರಂಥಾಲಯಕ್ಕೆ ಪಿಠೋಪಕರಣ ಪೂರೈಕೆ 29070302116, ರೂ. 1.73 ಲಕ್ಷ (KPL2524213420) INDENT NO:25973. ಟೆಂಡರ್‌ಗಿಟ್ಟ ಮೊತ್ತ : ರೂ. 5.52 ಲಕ್ಷ, ಇ.ಎಂ.ಡಿ. : ರೂ. 14000.00. ಕಾಲಾವಧಿ : 03 ತಿಂಗಳು.

5) ಕೊಪ್ಪಳ ತಾಲ್ಲೂಕಿನ ಹೊಸಲಿಂಗಾಪುರ ಗ್ರಾಮದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ನಿರ್ಮಾಣ ಹಾಗೂ ಸ್ಮಾರ್ಟ ಕ್ಲಾಸ್ ನಿರ್ಮಾಣ (UDISE CODE : 29070308402) (KPL2524213161) INDENT NO: 25968. ಟೆಂಡರ್‌ಗಿಟ್ಟ ಮೊತ್ತ : ರೂ. 20.86 ಲಕ್ಷ, ಇ.ಎಂ.ಡಿ. : ರೂ. 52000.00. ಕಾಲಾವಧಿ : 03 ತಿಂಗಳು.

6) ಕೊಪ್ಪಳ ತಾಲ್ಲೂಕಿನ ಹಿಟ್ನಾಳ ಗ್ರಾಮದ ಸರಕಾರಿ ಪ್ರೌಢಶಾಲೆ ಆವರಣದಲ್ಲಿ ಜಿಮ್ ಸಾಮಗ್ರಿಗಳನ್ನು ಅಳವಡಿಸುವುದು. (UDISE CODE:-29070307601). (KPL2524103344) INDENT NO: 25965. ಟೆಂಡರ್‌ಗಿಟ್ಟ ಮೊತ್ತ : ರೂ. 20.87 ಲಕ್ಷ, ಇ.ಎಂ.ಡಿ. : ರೂ. 52000.00. ಕಾಲಾವಧಿ : 03 ತಿಂಗಳು.

ಟೆಂಡರ ವಿವರ : 1) ಟೆಂಡರ್ ಆಕ್ಷೇಪಣೆ / ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : 17-04-2026 ಸಮಯ 10.00 ಗಂಟೆ ನಂತರ ದಿಂದ 29-04-2026 ಸಮಯ 16.00 ಗಂಟೆವರೆಗೆ, 2) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : 17-04-2026 ಸಮಯ 11.00 ಗಂಟೆ ನಂತರದಿಂದ 29-04-2026 ಸಮಯ 16.30 ಗಂಟೆವರೆಗೆ, 3) ಟೆಂಡರ್ ತೆರೆಯುವ ದಿನಾಂಕ : 30-04-2026 ಕಚೇರಿ ಸಮಯದಲ್ಲಿ, 4) ಕೆ.ಡಬ್ಲ್ಯೂ 4 ಇದ್ದಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ : ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಸಾಮಾನ್ಯ ಸೂಚನೆಗಳು : 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ **http://kppp.karnataka.gov.in** ಪೋರ್ಟಲ್‌ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಟಿಪ್ಪಣಿ : ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು. ಸೂಚನೆ:ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣವಿಲ್ಲದೇ, ಯಾವುದೇ ಹಂತದಲ್ಲಿ ತಿರಸ್ಕರಿಸುವ ಹಾಗೂ ಹಿಂತೆಗೆದುಕೊಳ್ಳುವ ಅಥವಾ ಯಾವುದೇ ಟೆಂಡರ ಅನುಮೋದಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿದ್ದಾರೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/37/ಮಣಿಹಾರ್/2026-27

ಕೈ ನಾಯಕನ ಕುಕೃತ್ಯದ ಕತ್ತಲ ಲೋಕ

2000ನೇ ಇಸ್ವಿಯಲ್ಲಿ ವಿನಯ ಕುಲಕರ್ಣಿ ಧಾರವಾಡ ಜಿಲ್ಲೆ ನಿಗದಿ ಕ್ಷೇತ್ರದಿಂದ ಮೊಟ್ಟಮೊದಲ ಬಾರಿಗೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸುವ ಮೂಲಕ ನಿಗದಿ ಜಿಲ್ಲಾ ಪಂಚಾಯತಿ ಸದಸ್ಯರಾಗಿ ಆಯ್ಕೆಯಾಗುವುದರ ಮೂಲಕ ರಾಜಕೀಯ ಜೀವನ ಪ್ರಾರಂಭಿಸಿದರು. ಜಿಪಂ ಸದಸ್ಯರಾಗಿ ಕೆಲಸ ಮಾಡಿದ ಅನುಭವದ ಆಧಾರದ ಮೇಲೆ 2004ರಲ್ಲಿ ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಜೊತೆ ಜಯಗಳಿಸಿ, ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು.



ಯಾವ ಸೆಕ್ಷನ್‌ಗೆ ಯಾವ ಶಿಕ್ಷೆ ಮತ್ತು ದಂಡ?

- ಐಪಿಸಿ ಸೆಕ್ಷನ್ 302 (ಕೊಲೆ) ಜತೆಗೆ 120-ಬಿ (ಎ-2 ಯಿಂದ ಎ-16ಮತ್ತು ಎ18)-ಜೀವಾವಧಿ ಶಿಕ್ಷೆ ಮತ್ತು ಪ್ರತಿಯೊಬ್ಬರಿಗೂ 30 ಸಾವಿರ ದಂಡ. ಇದನ್ನು ಪಾವತಿಸಲು ವಿಫಲವಾದರೆ ಹೆಚ್ಚುವರಿಯಾಗಿ ಮೂರು ತಿಂಗಳು ಜೈಲು ಶಿಕ್ಷೆ.
- ಐಪಿಸಿ ಸೆಕ್ಷನ್ 201(ಸಾಕ್ಷ್ಯ ನಾಶ) ಜತೆಗೆ 120 ಬಿ ಜತೆಗೆ 149 (ಏಕ ಉದ್ದೇಶದಿಂದ ಎಲ್ಲರೂ ಒಗ್ಗೂಡುವುದು) (ಎ-2 ಯಿಂದ ಎ-16, ಎ 18ಮತ್ತು ಎ-19 ಚನ್ನಕೇಶವ ಟಿಂಗರಿಕರ್)- ಏಳು ವರ್ಷಗಳ ಕಠಿಣ ಶಿಕ್ಷೆ ಮತ್ತು ತಲಾ 30 ಸಾವಿರ ದಂಡ.
- ಐಪಿಸಿ ಸೆಕ್ಷನ್ 218 (ಸರ್ಕಾರಿ ಅಧಿಕಾರಿ ಆರೋಪಿಗಳಿಗೆ ನೆರವಾಗಲು ಸಾಕ್ಷ್ಯ ನಾಶಪಡಿಸುವುದು) ಜತೆಗೆ 120-ಬಿ, 149 (ಎ-2 ಯಿಂದ ಎ-16, ಎ-18 ಎ-19)- ಏಳು ವರ್ಷ ಜೈಲು ಮತ್ತು ತಲಾ 20 ಸಾವಿರ ರೂ., ದಂಡ. ಜುಲ್ಮಾನೆ ಪಾವತಿಸಲು ತಪ್ಪಿದಲ್ಲಿ ಒಂದು ತಿಂಗಳು ಹೆಚ್ಚುವರಿಯಾಗಿ ಜೈಲು ವಾಸ.
- ಐಪಿಸಿ ಸೆಕ್ಷನ್ 143 ಜತೆಗೆ 120ಬಿ ಆರು ತಿಂಗಳ ಸಾಮಾನ್ಯ ಜೈಲು ಶಿಕ್ಷೆ ಮತ್ತು ತಲಾ 2,000 ರೂ.ದಂಡ. ಜುಲ್ಮಾನೆ ಪಾವತಿಸಲು ತಪ್ಪಿದಲ್ಲಿ ಒಂದು ತಿಂಗಳು ಸಾಮಾನ್ಯ ಹೆಚ್ಚುವರಿ ಜೈಲು ಶಿಕ್ಷೆ.
- ಐಪಿಸಿ ಸೆಕ್ಷನ್ 147 ಜತೆಗೆ 120-ಬಿ ಒಂದು ವರ್ಷದ ಕಠಿಣ ಕಾರಾಗೃಹ ಶಿಕ್ಷೆ ಜೊತೆಗೆ ತಲಾ 2,000 ರೂ.ಜುಲ್ಮಾನೆ. ದಂಡ ಪಾವತಿಸಲು ವಿಫಲರಾದರೆ ಒಂದು ತಿಂಗಳ ಸಾಮಾನ್ಯ ಜೈಲು ಶಿಕ್ಷೆ.
- ಐಪಿಸಿ ಸೆಕ್ಷನ್ 148 ಜತೆಗೆ 120-ಬಿ ಒಂದು ವರ್ಷದ ಕಠಿಣ ಕಾರಾಗೃಹ ಶಿಕ್ಷೆ ಜತೆಗೆ ತಲಾ 2,000 ರೂ. ಜುಲ್ಮಾನೆ. ದಂಡ ಪಾವತಿಸಲು ವಿಫಲರಾದರೆ ಒಂದು ತಿಂಗಳ ಸಾಮಾನ್ಯ ಜೈಲು ಶಿಕ್ಷೆ.
- ಐಪಿಸಿ 120ಬಿ ಜೀವಾವಧಿ ಶಿಕ್ಷೆ ಮತ್ತು ತಲಾ 30 ಸಾವಿರ ರೂ. ದಂಡ. ಜುಲ್ಮಾನೆ ಪಾವತಿಸಲು ವಿಫಲರಾದರೆ ಹೆಚ್ಚುವರಿಯಾಗಿ ಮೂರು ತಿಂಗಳು ಜೈಲು ಶಿಕ್ಷೆ.
- **ಪ್ರಕರಣದ ಇತಿಹಾಸ :** 2016ರ ಜೂನ್ 15ರಂದು ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಯೋಗೀಶ್ ಗೌಡ ಕೊಲೆ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದ್ದು, ಆರೋಪಿಗಳ ವಿರುದ್ಧ ಐಪಿಸಿ ಸೆಕ್ಷನ್120(ಬಿ) ಜತೆಗೆ 302, 217, 201, 143, 147, 148 ಹಾಗೂ 149, ಶಸ್ತ್ರಾಸ್ತ್ರ ಕಾಯ್ದೆ ಸೆಕ್ಷನ್ 25 ಜತೆಗೆ 3,5,8,29 ಮತ್ತು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಸೆಕ್ಷನ್ 13(2), 13(1)(ಡಿ) ಅಡಿ ಆರೋಪ ಪಟ್ಟಿ ಸಲ್ಲಿಸಿತ್ತು.

ಪ್ರಭಾವಿ ನಾಯಕನಾಗಿದ್ದ ಯೋಗೀಶಗೌಡ

ಧಾರವಾಡ: ತಾಲೂಕಿನ ಗೋವನಕೊಪ್ಪ ಗ್ರಾಮದ ಯೋಗೀಶಗೌಡ ಗೌಡರ ರಾಜಕಾರಣದಲ್ಲಿ ಉದಯೋನ್ಮುಖ ನಾಯಕರಾಗಿ ಬೆಳೆಯುತ್ತಿದ್ದಾಗಲೇ ಕೊಲೆಯಾಗಿರುವುದು ರಾಜ್ಯದಲ್ಲಿ ಸಂಚಲನ ಮೂಡಿಸಿತ್ತು. ಮೂಲತಃ ಕೃಷಿ ಕುಟುಂಬದ ಯೋಗೀಶಗೌಡ ಓರ್ವ ಪ್ರಭಾವಿ ಯುವ ನಾಯಕನಾಗಿ ರಾಜಕೀಯದಲ್ಲಿ ಗುರುತಿಕೊಂಡಿದ್ದರು.

ಆರಂಭಿಕ ಹಂತ-ಕುಟುಂಬ: ಧಾರವಾಡ ಜಿಲ್ಲೆ ಪ್ರಬಲ ಲಿಂಗಾಯತ ಸಮುದಾಯಕ್ಕೆ ಸೇರಿದ ಯೋಗೀಶಗೌಡ ಗೌಡರ ತಮ್ಮ ಆಕ್ರಮಣಕಾರಿ ಸಂಘಟನಾ ಚಾತುರ್ಯದಿಂದ ಯುವಕರ ನಡುವೆ ಅತ್ಯಂತ ಜನಪ್ರಿಯರಾಗಿದ್ದರು. ಅವರ ಸಹೋದರ ಗುರುನಾಥಗೌಡ ಗೌಡರ ಕೂಡ ರಾಜಕೀಯದಲ್ಲಿ ಸಕ್ರಿಯರಾಗಿದ್ದರು. 2010ರಲ್ಲಿ ಧಾರವಾಡ ತಾಲೂಕು ಪಂಚಾಯತಿ ಮಾರಡಗಿ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ಸಾಧಿಸಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿದ್ದರು.



ರಾಜಕೀಯ ಬೆಳವಣಿಗೆ: 2016ರಲ್ಲಿ ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯತಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಯೋಗೀಶಗೌಡ ಗೌಡರ ಅವರನ್ನು ರಾಜಕೀಯ ಪಿತೂರಿಯಿಂದ ಬಂಧಿಸಿ, ಜೈಲಿನಲ್ಲಿ ಇರಿಸಿತ್ತು. ಜೈಲಿನಲ್ಲಿ ಇದ್ದುಕೊಂಡೇ ಅವರು ಗೆಲುವು ಸಾಧಿಸಿ ಗಮನ ಸೆಳೆದರು. ಜಿಪಂ ಸದಸ್ಯರಾದ ಮೇಲೆ ಧಾರವಾಡದ ಗ್ರಾಮಾಂತರ ಕ್ಷೇತ್ರದಲ್ಲಿ ಪಕ್ಷದ ಬಲವರ್ಧನೆಗೆ ಶ್ರಮಿಸಿದರು. ಅಲ್ಪ ಕಾಲದಲ್ಲಿಯೇ ಈ ಭಾಗದ 'ಮಾಸ್ ಲೀಡರ್' ಆಗಿಯೂ ಹೊರಹೊಮ್ಮಿದ್ದರು.

ವಿನಯ ಅವರೊಂದಿಗೆ ಸಂಘರ್ಷ: ಧಾರವಾಡ ಗ್ರಾಮಾಂತರ ಕ್ಷೇತ್ರದಲ್ಲಿ ಪ್ರಭಾವಿ ಸಚಿವರಾಗಿದ್ದ ವಿನಯ ಕುಲಕರ್ಣಿ ಅವರಿಗೆ ಯೋಗೀಶ್‌ಗೌಡ ಅವರು ನೇರ ಸವಾಲಾಗಿದ್ದರು. ಕ್ಷೇತ್ರದಲ್ಲಿ ವಿನಯ ಕುಲಕರ್ಣಿ ವರ್ಚಸ್ಸನ್ನು ಕುಗ್ಗಿಸಲು ಯೋಗೀಶಗೌಡ ಮಾಡಿದ ಹೋರಾಟಗಳು ಮತ್ತು ಸಂಘಟನೆಗಳು ಈ ಇಬ್ಬರು ನಾಯಕರ ನಡುವೆ ರಾಜಕೀಯ ವೈಷಮ್ಯಕ್ಕೆ ಕಾರಣವಾಯಿತು. 2018ರ ವಿಧಾನಸಭಾ ಚುನಾವಣೆಯಲ್ಲಿ ಯೋಗೀಶಗೌಡ ಬಿಜೆಪಿ ಪ್ರಬಲ ಆಕಾಂಕ್ಷಿಯಾಗಿದ್ದರು.

ಭೀಕರ ಹತ್ಯೆ (ಜೂನ್ 15, 2016): ಜೂನ್ 15, 2016ರಂದು ಬೆಳಗ್ಗೆ ಧಾರವಾಡದ ಸಪ್ತಾಪುರದಲ್ಲಿರುವ ತಮ್ಮದೇ ಒಡೆತನದ ಉದಯ್ ಜಿಮ್‌ನಲ್ಲಿ ಯೋಗೀಶಗೌಡ ಅವರನ್ನು ದುಷ್ಕರ್ಮಿಗಳು ಭೀಕರವಾಗಿ ಕೊಲೆ ಮಾಡಿದರು. ಈ ಕೊಲೆ ಪ್ರಕರಣವು ರಾಜ್ಯಾದ್ಯಂತ ಸಂಚಲನ ಮೂಡಿಸಿತ್ತು. ಆರಂಭದಲ್ಲಿ ಇದೊಂದು ಆಸ್ತಿ ವಿಚಾರ ಅಥವಾ ವೈಯಕ್ತಿಕ ದ್ವೇಷದ ಕೊಲೆ ಎಂದು ಬಿಂಬಿಸಲಾಗಿತ್ತು.

ಕಾನೂನು ಹೋರಾಟ ಮತ್ತು ಸಿಬಿಐ ತನಿಖೆ: ಯೋಗೀಶಗೌಡರ ಕುಟುಂಬದವರು ಮತ್ತು ಬಿಜೆಪಿ ನಾಯಕರು ಈ ಕೊಲೆಯ ಹಿಂದೆ ರಾಜಕೀಯ ಪಿತೂರಿ ಇದೆ ಎಂದು ಆರೋಪಿಸಿ, ಪ್ರಕರಣ ಸಿಬಿಐ ತನಿಖೆಗೆ ನೀಡಲು ದೊಡ್ಡ ಮಟ್ಟದ ಪ್ರತಿಭಟನೆ ನಡೆಸಿದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ಮೇಲೆ ಈ ಪ್ರಕರಣ ಸಿಬಿಐಗೆ ವಹಿಸಲಾಯಿತು. ಸಿಬಿಐ ತನಿಖೆಯಲ್ಲಿ ಮಾಜಿ ಸಚಿವ ವಿನಯ ಕುಲಕರ್ಣಿ ಕೈವಾಡವಿರುವುದು ಸಾಬೀತಾಗಿ, ಇಂದು ಅವರಿಗೆ ಜೀವಾವಧಿ ಶಿಕ್ಷೆ ಪ್ರಕಟವಾಗಿದೆ.


ಪ್ರಮುಖಾಂಶ: ಯೋಗೀಶಗೌಡ ಗೌಡರ್ ಅವರು ಬದುಕಿದ್ದರೆ ಧಾರವಾಡ ಗ್ರಾಮಾಂತರ ಕ್ಷೇತ್ರದ ಪ್ರಬಲ ಶಾಸಕನಾಗಿ ಬೆಳೆಯುವ ಎಲ್ಲಾ ಲಕ್ಷಣಗಳನ್ನು ಹೊಂದಿದ್ದರು. ಅವರ ಹತ್ಯೆಯು ಇಂದು ಧಾರವಾಡದ ರಾಜಕೀಯ ಸಮೀಕರಣವನ್ನೇ ಬದಲಿಸಿಬಿಟ್ಟಿತು.

> **ನನ್ನ ತಮ್ಮನನ್ನು ಕಳೆದುಕೊಂಡ ನೋವು ಎಂದಿಗೂ ಮಾಸದು. ಆದರೆ, ಅವನನ್ನು ಕೊಂದವರಿಗೆ ಶಿಕ್ಷೆಯಾಗಿದೆ ಎಂಬ ಸುದ್ದಿ ಇಂದು ಅವನ ಆತ್ಮಕ್ಕೆ ನಿಜವಾದ ಶಾಂತಿ ಸಿಕ್ಕಂತಾಗಿದೆ.**
> ■ **ಅಕ್ಕಮಹಾದೇವಿ, ಯೋಗೀಶಗೌಡರ ಸಹೋದರಿ**

ಪಟಾಕಿ ಸಿಡಿಸಿ ಸಹೋದರಿ ಸಂಭ್ರಮ

ಧಾರವಾಡ: ಹತ್ತು ವರ್ಷಗಳ ಸುದೀರ್ಘ ಹೋರಾಟದ ನಂತರ ನನ್ನ ತಮ್ಮನ ಸಾವಿಗೆ ನ್ಯಾಯ ಸಿಕ್ಕಿದೆ. ಅಧರ್ಮಕ್ಕೆ ಸೋಲಾಗಿದೆ, ಧರ್ಮಕ್ಕೆ ಜಯ ಸಿಕ್ಕಿದೆ ಎಂದು ಹತ್ಯೆಗೀಡಾದ ಯೋಗೀಶಗೌಡರ ಸಹೋದರಿ ಅಕ್ಕಮಹಾದೇವಿ ಭಾವುಕರಾಗಿ ನುಡಿದರು.

ಪಟಾಕಿ ಸಿಡಿಸಿ ಹರ್ಷ: ತೀರ್ಪು ಪ್ರಕಟವಾಗುತ್ತಿದ್ದಂತೆ ಯೋಗೀಶಗೌಡ ಅವರ ಸಹೋದರಿ ಮತ್ತು ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. 'ಯೋಗೀಶಗೌಡ ಗೌಡರ ಅಮರರಾಗಲಿ' ಎಂಬ ಘೋಷಣೆಗಳು ಮೊಳಗಿದವು.



ನ್ಯಾಯಾಂಗಕ್ಕೆ ಧನ್ಯವಾದ: ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಮ್ಮ ಕುಟುಂಬದ ಮೇಲೆ ಎಷ್ಟೇ ಒತ್ತಡಗಳು ಬಂದರೂ, ಪ್ರಾಣದ ಹಂಗು ತೊರೆದು ನ್ಯಾಯಕ್ಕಾಗಿ ಕಾಯುತ್ತಿದ್ದೆವು. ಇಂದು ನ್ಯಾಯಾಲಯದ ತೀರ್ಪಿನಿಂದ ಸತ್ಯಕ್ಕೆ ಸಂದ ಜಯ ಎಂದು ಕಣ್ಣೀರು ಹಾಕಿದರು. ಹೋರಾಟಕ್ಕೆ ಸಂದ ಜಯ: ಪ್ರಕರಣವನ್ನು ಸಿಬಿಐಗೆ ವಹಿಸಲು ನಾವು ಪಟ್ಟ ಶ್ರಮ ಸಾರ್ಥಕವಾಗಿದೆ. ಅಧಿಕಾರ ಮತ್ತು ಹಣದ ಬಲದ ಮುಂದೆ ನ್ಯಾಯ ಸೋಲುವುದಿಲ್ಲ ಎಂಬುದು ಇಂದಿನ ತೀರ್ಪಿನಿಂದ ಸಾಬೀತಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕುಟುಂಬದ ದಶಕದ ನೋವು: 2016ರಲ್ಲಿ ತಮ್ಮ ಜಿಮ್‌ನಲ್ಲಿ ಹತ್ಯೆಗೀಡಾಗಿದ್ದ ಯೋಗೀಶಗೌಡರ ಕುಟುಂಬ ಅಂದಿನಿಂದಲೂ ಕಾನೂನು ಹೋರಾಟ ನಡೆಸುತ್ತ ಬಂದಿತ್ತು. ಸಿಬಿಐ ತನಿಖೆಯ ನಂತರ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿ, ಇಂದು ಅಂತಿಮ ತೀರ್ಪು ಹೊರ ಬಿದ್ದಿದೆ. ಈ ತೀರ್ಪು ಧಾರವಾಡದ ಜನತೆ ಮತ್ತು ಕಾನೂನಿನ ಮೇಲೆ ನಂಬಿಕೆ ಇಟ್ಟವರಿಗೆ ದೊಡ್ಡ ಭರವಸೆ ನೀಡಿದೆ.

» ಮಹಾಂತೇಶ ಕಣವಿ

ಧಾರವಾಡ: ರಾಜ್ಯದ ಗಮನ ಸೆಳೆದಿದ್ದ ಬಿಜೆಪಿ ಮುಖಂಡ ಹಾಗೂ ಜಿಪಂ ಸದಸ್ಯ ಯೋಗೀಶಗೌಡ ಗೌಡರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ವಿನಯ ಕುಲಕರ್ಣಿ ಸೇರಿ 17 ಜನ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸುವ ಮೂಲಕ ನ್ಯಾಯಾಲಯ ಕೊನೆಗೂ ಇತಿಶ್ರೀ ಹಾಡಿದೆ.

ಬದುಕಿನ ಹಿನ್ನೆಲೆ: ಪ್ರಭಾವಿ ರಾಜಕಾರಣಿಯಾದ ವಿನಯ ಕುಲಕರ್ಣಿ ರಾಜಕೀಯ ಜೀವನ ಹಲವು ಏರಿಳಿತಗಳಿಂದ ಕೂಡಿದೆ. ಮೂಲತಃ ಕೃಷಿ ಕುಟುಂಬದಿಂದ ಬಂದ ಅವರು, ಕೃಷಿ ಪದವೀಧರರೂ ಹೌದು. ಡೈರಿ ಫಾರ್ಮಿಂಗ್ ಕೂಡ ತೆರೆದು, ಸಾವಿರಾರು ಹಸು ಸಾಕಾಣೆ ಮಾಡಿದ್ದರು. ಕಾಲೇಜು ದಿನಗಳಿಂದಲೂ ಕೂಡ ತಮ್ಮ ಆಕ್ರಮಣಕಾರಿ ನಾಯಕತ್ವ ಹಾಗೂ ಸಂಘಟನಾ ಶಕ್ತಿಯಿಂದ ಉತ್ತರ ಕರ್ನಾಟಕದ ಲಿಂಗಾಯತ ಪಂಚಮಸಾಲಿ ಸಮುದಾಯದ ಪ್ರಬಲ ನಾಯಕರಾಗಿಯೂ ಗುರುಸಿಕೊಂಡಿದ್ದರು.

ರಾಜಕೀಯ ಪ್ರವೇಶ: 2000ನೇ ಇಸ್ವಿಯಲ್ಲಿ ವಿನಯ ಕುಲಕರ್ಣಿ ಧಾರವಾಡ ಜಿಲ್ಲೆ ನಿಗದಿ ಕ್ಷೇತ್ರದಿಂದ ಮೊಟ್ಟಮೊದಲ ಬಾರಿಗೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸುವ ಮೂಲಕ ನಿಗದಿ ಜಿಲ್ಲಾ ಪಂಚಾಯತಿ ಸದಸ್ಯರಾಗಿ ಆಯ್ಕೆಯಾಗುವುದರ ಮೂಲಕ ರಾಜಕೀಯ ಜೀವನ ಪ್ರಾರಂಭಿಸಿದರು. ಜಿಪಂ ಸದಸ್ಯರಾಗಿ ಕೆಲಸ ಮಾಡಿದ ಅನುಭವದ ಆಧಾರದ ಮೇಲೆ 2004ರಲ್ಲಿ ಧಾರವಾಡ ಗ್ರಾಮೀಣ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಜೊತೆ ಜಯಗಳಿಸಿ, ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು. ಆಯ್ಕೆಯಾದ ನಂತರ ವಿನಯ ಕುಲಕರ್ಣಿ ಕಾಂಗ್ರೆಸ್ ಪಕ್ಷ ಸೇರಿದರು.

2013ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಎರಡನೇ ಬಾರಿಗೆ ಶಾಸಕರಾದ ನಂತರ ಸಿದ್ದರಾಮಯ್ಯ ಸಂಪುಟದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಚಿವರಾಗಿ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಗ್ರಾಮ ಮಟ್ಟದಿಂದ ರಾಜಕೀಯ ಆರಂಭಿಸಿದ ಇವರು ರಾಜ್ಯದ ಗಮನ ಸೆಳೆದರು. ಅಲ್ಲದೇ, 2014ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಧಾರವಾಡ ಕ್ಷೇತ್ರದಿಂದ ಬಿಜೆಪಿಯ ಪ್ರಹ್ಲಾದ ಜೋಶಿ ವಿರುದ್ಧ ಕಾಂಗ್ರೆಸ್‌ನಿಂದ ಸ್ಪರ್ಧಿಸಿ, ಸೋಲು ಕೂಡ ಅನುಭವಿಸಿದರು.

ಲಿಂಗಾಯತ ಚಳವಳಿ: 2015ರಿಂದ 2018ರವರೆಗೂ ಸಿದ್ದರಾಮಯ್ಯ ಸರ್ಕಾರದಲ್ಲಿ ಸಚಿವರಾಗಿ ಪ್ರಭಾವಿ ಖಾತೆಗಳು ನಿಭಾಯಿಸಿದ್ದರು. ಅಲ್ಲದೇ, ಪ್ರತ್ಯೇಕ ಲಿಂಗಾಯತ ಧರ್ಮದ ಮಾನ್ಯತೆಗಾಗಿ ನಡೆದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದು, ಇದು ಆಗಿನ ಕಾಲದಲ್ಲಿ ಸಾಕಷ್ಟು ಚರ್ಚೆಗೂ ಕೂಡ ಗ್ರಾಸವಾಗಿದ್ದು ಇದೀಗ ಇತಿಹಾಸ. 2018ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಅಮೃತ ದೇಸಾಯಿ ಅವರ ವಿರುದ್ಧ ಸೋಲು ಕಂಡರು.

ಯೋಗೀಶಗೌಡರ ಕೊಲೆ: ರಾಜಕೀಯ ದುರುದ್ದೇಶದಿಂದ ಬರೋಬ್ಬರಿ 10 ವರ್ಷಗಳ ಹಿಂದೆ 2016 ಜೂನ್ 15ರಂದು ಧಾರವಾಡ ಸಪ್ತಾಪುರ ಉದಯ ಜೀವ್‌ನಲ್ಲಿ ಬಿಜೆಪಿ ಮುಖಂಡ ಹಾಗೂ ಜಿಪಂ ಸದಸ್ಯ ಯೋಗೀಶಗೌಡ ಗೌಡರ ಕೊಲೆ ನಡೆದಿತ್ತು. ಈ ಕುರಿತು ಉಪನಗರ ಠಾಣೆಯಲ್ಲಿ ಪ್ರಕರಣ ಕೂಡ ದಾಖಲಾಗಿತ್ತು. ಕೊಲೆ ನಡೆದ 48 ಗಂಟೆಯಲ್ಲಿ ಆರು ಜನ ಆರೋಪಿಗಳು ಶರಣಾಗಿದ್ದರು. ಆರಂಭದಲ್ಲಿ ಒಡೊಂದು ರಿಯಲ್ ಎಸ್ಟೇಟ್‌ಗೆ ನಡೆದ ಕೊಲೆ ಎಂದು ಬಿಂಬಿಸಿತ್ತು. ತನಿಖೆ ನಡೆಸಿದ ಉಪನಗರ ಠಾಣೆ ಪೊಲೀಸರು, ಕಾಟಾಚಾರದ ತನಿಖೆ ನಡೆಸುವ ಜೊತೆಗೆ ನೈಜ ಆರೋಪಿಗಳ ಹೆಸರು ಕೈಬಿಟ್ಟು ಮತ್ತು ವಿನಯ ಕುಲಕರ್ಣಿ ಅವರ ಹೆಸರು ಕೂಡ ಪ್ರಸ್ತಾಪಿಸಿದೆ, 2016ರ ಸೆ.9ರಂದು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಹೈಕೋರ್ಟ್‌ಗೆ ರಿಟ್ ಅರ್ಜಿ: 2017ರ ಡಿ.20ರಂದು ಕೊಲೆಯಾದ ಯೋಗೀಶಗೌಡರ ತಾಯಿ ತುಂಗವ್ವ ಮತ್ತು ಸಹೋದರ ಗುರುನಾಥ ಗೌಡರ ತಮ್ಮ ಮಗನ ಕೊಲೆ ಪ್ರಕರಣ ತನಿಖೆ ಸಮರ್ಪಕವಾಗಿಲ್ಲ, ಪೊಲೀಸರು ಶಾಸಕ ವಿನಯ ಅವರ ಅಣತಿಯಂತೆ ಕೆಲಸ ಮಾಡಿದ್ದಾರೆ. ಹೀಗಾಗಿ ಪ್ರಕರಣದ ತನಿಖೆ ಸಿಬಿಗೆ ವಹಿಸುವಂತೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. 2019 ಮಾ.1ರಂದು ವಿಚಾರಣೆ ನಡೆಸಿದ ಹೈಕೋರ್ಟ್ ರಿಟ್ ಅರ್ಜಿ ವಜಾಗೊಳಿಸಿತ್ತು. ಅಲ್ಲದೇ, ಸಾಕ್ಷನಾಶಕ್ಕೆ ಯತ್ನಿಸಿದ ವಿನಯ ಮತ್ತು ಆರೋಪಿಗಳ ವಿರುದ್ಧ ಎಫ್ಐಆರ್ ದಾಖಲಿಸಿ, ತನಿಖೆಗೆ ಸೂಚಿಸಿತ್ತು.

ಸುಪ್ರೀಂಕೋರ್ಟ್ ಮೊರೆ: ಧಾರವಾಡ ಸೆಷನ್ಸ್ ಕೋರ್ಟ್‌ನಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿರುವಾಗಲೇ, ಹೈಕೋರ್ಟ್ ಆದೇಶ ಪ್ರಶ್ನಿಸಿ ಯೋಗೀಶಗೌಡರ ತಾಯಿ ಮತ್ತು ಸಹೋದರ ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಕೊಲೆ ಪ್ರಕರಣದ ಮಹತ್ವದ ಸಾಕ್ಷಿ ಬಿಟ್ಟು ತನಿಖೆ ನಡೆಸಿದ್ದಾರೆ. ಪ್ರಕರಣ ಸಿಬಿಐ ವಹಿಸಲು ಕೋರಿದ್ದರು. ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ 2019ರ ಜು.22ರಂದು ಅರ್ಜಿ ವಜಾಗೊಳಿಸಿತ್ತು.

ಪ್ರಕರಣದಲ್ಲಿ ಸಿಬಿಐ ಎಂಟ್ರಿ:

ಅಂದಿನ ಬಿಜೆಪಿ ಸರ್ಕಾರ 2019 ಸೆ.6ರಂದು ಪ್ರಕರಣ ಸಿಬಿಗೆ ವಹಿಸಿತು. ಸೆ.24 2019ರಂದು ಪ್ರಕರಣ ದಾಖಲಿಸಿಕೊಂಡ ಸಿಬಿಐ 2019ರ ನ.20ರಂದು ಏಳು ಜನ ಆರೋಪಿಗಳನ್ನು ಬಂಧಿಸಿತ್ತು. ಸಿಬಿಐ ತನಿಖೆಗೆ 2019ರ ನ.21ರಂದು ಹೈಕೋರ್ಟ್ ನೀಡಿದ ಮಧ್ಯಂತರ ತಡೆಯಾಜ್ಞೆಯನ್ನು ಸುಪ್ರೀಂಕೋರ್ಟ್ ತೆರವುಗೊಳಿಸಿತ್ತು.

ವಿನಯ ಕುಲಕರ್ಣಿ ಬಂಧನ: 2020ರ ಫೆ.29ರಂದು ಮೊದಲು ಬಂಧಿಸಿದ ಆರೋಪಿಗಳನ್ನು ಹೊರತು ಪಡಿಸಿ, ನೈಜ ಹಾಗೂ ಸುಫಾರಿ ಕಿಲ್ಲರ್ಸ್ ಆರು ಜನರನ್ನು ಸಿಬಿಐ ಬಂದಿಸಿತ್ತು. ಮಾ.13ಕ್ಕೆ ಮತ್ತೊಬ್ಬ ಆರೋಪಿ ಬಂಧಿಸಿತ್ತು. 2020 ಮೇ 20ರಂದು ಸಿಬಿಐ ಮೊದಲ ಸಲ ದೋಷಾರೋಪಟ್ಟಿ ಸಲ್ಲಿಸಿತ್ತು. ಬಳಿಕ 2020ರ ನ.5ರಂದು ಮಾಜಿ ಸಚಿವ ವಿನಯ ಕುಲಕರ್ಣಿ ಅವರನ್ನು ಅವರ ಮನೆಯಿಂದ ಬಂಧಿಸಿ, ಮೂರು ದಿನ ವಿಚಾರಣೆ ನಡೆಸಿತ್ತು.

ಯೋಗೀಶಗೌಡ ಹತ್ಯೆಗೆ ಭೀಮಾ ತೀರದ ಹಂತಕರಿಂದ ತರಿಸಲಾಗಿದ್ದ ಮೂರು ಪಿಸ್ತೂಲ್ 2020ರ ಮೇ 8ರಂದು ಆರೋಪಿ ಬಸವರಾಜ ಮುತ್ತಗಿ ಕಡೆಯಿಂದ ಜಪ್ತಿ ಮಾಡಿತ್ತು. ಈ ಪ್ರಕರಣವನ್ನು 2020ರ ಏ.14ರಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ವರ್ಗಾವಾಣೆ ಮಾಡಿತ್ತು. 2020ರ ಡಿ.13ರಂದು ವಿನಯ ಮಾವ ಚಂದ್ರಶೇಖರ ಇಂಡಿ ಅವರನ್ನು ಬಂಧಿಸಲಾಯಿತು.

ವಿನಯಗೆ ಜಾಮೀನು ಮಂಜೂರು: 2021ರ ಜ.30ರಂದು ಸಿಬಿಐ ಎಡರನೇ ದೋಷಾರೋಪ ಪಟ್ಟಿ ಸಲ್ಲಿಸಿತು. ಈ ನಡುವೆ 2021ರ ಆ.11ರಂದು ಷರತ್ತುಬದ್ಧ ನಿರ್ಬಧ ವಿಧಿಸಿ ಸುಪ್ರೀಂಕೋರ್ಟ್ ವಿನಯ ಕುಲಕರ್ಣಿಗೆ ಜಾಮೀನು ಮಂಜೂರು ಮಾಡಿತ್ತು. 2021ರ ಸೆ.15ಕ್ಕೆ ಸಿಬಿಐ ಮೂರನೇ ಹಾಗೂ ಅಂತಿಮ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಆದರೆ, ಸಿಬಿಐಗೆ ವಹಿಸಿದ್ದು, ಎಫ್ಐಆರ್ ರದ್ದು ಕೋರಿ ವಿನಯ ಕುಲಕರ್ಣಿ ಹಾಗೂ ಇತರೆ ಆರೋಪಿಗಳ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಗಳನ್ನು ಕೂಡ ವಜಾ ಮಾಡಿತ್ತು.

ಸುದೀರ್ಘ ವಿಚಾರಣೆ ಬಳಿಕ ಸುಪ್ರೀಂ ಕೋರ್ಟ್ ನೀಡಿದ್ದ ಜಾಮೀನು ರದ್ದತಿಯೂ ಆಗಿತ್ತು. ಬಳಿಕ ವಿನಯ ಕುಲಕರ್ಣಿ ಜೈಲು ಸೇರಿದರು. ಆದರೆ, ಜನಪ್ರತಿನಿಧಿಗಳ ಕೋರ್ಟ್ ಸಾಕ್ಷಿ ವಿಚಾರಣೆ ಮುಗಿಸಿದ ಬಳಿಕ ಜಾಮೀನು ನೀಡುವಂತೆ ವಿನಯ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಕೋರ್ಟ್ 2026ರ ಫೆ.26ರಂದು ಷರತ್ತು ಬದ್ಧ ಜಾಮೀನು ನೀಡಿತ್ತು.

ಒಟ್ಟು ಮೂರು ಬಾರಿ ಶಾಸಕರಾದ ವಿನಯ ಕುಲಕರ್ಣಿ 2013ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಮೂರನೇ ಬಾರಿಗೆ ಶಾಸಕರಾಗಿ ಆಯ್ಕೆಯಾದರು. ನ್ಯಾಯಾಲಯದ ಆದೇಶದಂತೆ ಜಿಲ್ಲಾ ಪ್ರವೇಶಕ್ಕೆ ನಿಷೇಧವಿದ್ದರೂ ಸಹ ಅವರ ಅನುಪಸ್ಥಿತಿಯಲ್ಲಿ ಕುಟುಂಬಸ್ಥರು ಹಾಗೂ ಬೆಂಬಲಿಗರು ನಡೆಸಿದ ಪ್ರಚಾರದಿಂದ ಅವರು ಜಯಗಳಿಸಿದ್ದರು. ಬಿಜೆಪಿ ಮುಖಂಡ ಯೋಗೀಶಗೌಡ ಗೌಡರ ಕೊಲೆ ಪ್ರಕರಣದಲ್ಲಿ ಏಪ್ರೀಲ್ 15, 2026ಕ್ಕೆ ಬೆಂಗಳೂರಿನ ಜನಪ್ರತಿನಿಧಿಗಳು ವಿಶೇಷ ನ್ಯಾಯಾಲಯ ದೋಷಿ ಎಂದು ತೀರ್ಪು ನೀಡಿ, ಏಪ್ರಿಲ್ 17ಕ್ಕೆ ಜೀವಾವಧಿ ಶಿಕ್ಷೆ ಪ್ರಕಟಿಸಿದೆ.

---

1 ಮೊದಲ ಬಾರಿ ಬಂಧನ-ಜೈಲು ವಾಸ (2020-2021)

ಬಂಧನ: ನವೆಂಬರ್ 5, 2020ರಂದು ಸಿಬಿಐ ಅಧಿಕಾರಿಗಳು ವಿನಯ ಕುಲಕರ್ಣಿ ಅವರನ್ನು ಧಾರವಾಡದಲ್ಲಿ ಬಂಧಿಸಿದರು.

ಜೈಲು: ಸುದೀರ್ಘ ವಿಚಾರಣೆಯ ನಂತರ ಅವರನ್ನು ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿತ್ತು.

ಬಿಡುಗಡೆ (ಜಾಮೀನು): ಸುಮಾರು 9 ತಿಂಗಳ ಸೆರೆವಾಸದ ನಂತರ, ಆಗಸ್ಟ್ 11, 2021 ರಂದು ಸುಪ್ರೀಂಕೋರ್ಟ್ ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತು. ಆಗಸ್ಟ್ 20ರ ಸುಮಾರಿಗೆ ಅವರು ಜೈಲಿನಿಂದ ಹೊರಬಂದರು. (ಆದರೆ ಧಾರವಾಡ ಜಿಲ್ಲೆ ಪ್ರವೇಶಿಸಲು ಅವರಿಗೆ ನಿಷೇಧವಿತ್ತು).

2 ಎರಡನೇ ಬಾರಿ ಜೈಲು ವಾಸ (2025)

ಜಾಮೀನು ರದ್ದು: ಸಾಕ್ಷ್ಯ ನಾಶಪಡಿಸಲು ಯತ್ನಿಸಿದ ಮತ್ತು ಸಾಕ್ಷಿಗಳ ಮೇಲೆ ಪ್ರಭಾವ ಬೀರಿದ ಆರೋಪದ ಹಿನ್ನೆಲೆಯಲ್ಲಿ, ಜೂನ್ 6, 2025ರಂದು ಸುಪ್ರೀಂ ಕೋರ್ಟ್ ಅವರ ಜಾಮೀನನ್ನು ರದ್ದುಗೊಳಿಸಿತು.

ಶರಣಾಗತಿ: ನ್ಯಾಯಾಲಯದ ಆದೇಶದಂತೆ ಅವರು ಜೂನ್ 13, 2025ಕ್ಕೆ ಮತ್ತೆ ನ್ಯಾಯಾಂಗ ಬಂಧನಕ್ಕೆ ಒಳಗಾದರು.

ಮತ್ತೆ ಬಿಡುಗಡೆ: ಸಾಕ್ಷಿಗಳ ವಿಚಾರಣೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಫೆಬ್ರವರಿ 27, 2026ರಂದು ಸುಪ್ರೀಂ ಕೋರ್ಟ್ ಅವರಿಗೆ ಪುನಃ ಜಾಮೀನು ನೀಡಿತು.

3 ಪ್ರಸ್ತುತ ಸ್ಥಿತಿ (ಏಪ್ರಿಲ್ 2026)

ದೋಷಿ ಎಂದು ಘೋಷಣೆ: ಏಪ್ರಿಲ್ 15, 2026 ರಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಅವರನ್ನು ಕೊಲೆ ಪ್ರಕರಣದಲ್ಲಿ ದೋಷಿ ಎಂದು ಘೋಷಿಸಿತು.

ಶಿಕ್ಷೆ ಪ್ರಕಟ: ಏಪ್ರಿಲ್ 17, 2026 ನ್ಯಾಯಾಲಯವು ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಈ ಹಿನ್ನೆಲೆಯಲ್ಲಿ ಅವರು ಈಗ ಮತ್ತೆ ಜೈಲು ಸೇರಿದ್ದಾರೆ.

ವಿನಯ್‌ಗೆ ಶಾಸಕ ಸ್ಥಾನ ಅನರ್ಹ ಭೀತಿ

ಬೆಂಗಳೂರು: ಯೋಗೀಶ್ ಗೌಡ ಕೊಲೆ ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಲಯವು ಶುಕ್ರವಾರ ಜೀವಾವಧಿ ಶಿಕ್ಷೆ ವಿಧಿಸಿ ಮಹತ್ವದ ತೀರ್ಪು ನೀಡಿದೆ. ಜನಪ್ರತಿನಿಧಿಗಳ ಕಾಯ್ದೆ 1951ರ ಅನ್ವಯ, ಶಿಕ್ಷೆ ಪ್ರಕಟವಾದ ಕ್ಷಣದಿಂದಲೇ ವಿನಯ್ ಕುಲಕರ್ಣಿ ಅವರು ತಮ್ಮ ಶಾಸಕ ಸ್ಥಾನದಿಂದ ಅನರ್ಹಗೊಂಡಿದ್ದಾರೆ. ಜೈಲು ಶಿಕ್ಷೆಯ ಜತೆಗೆ ಮುಂದಿನ 6 ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂಧ ಹೇರಲಾಗಿದೆ.

ಜನಪ್ರತಿನಿಧಿ ಬಗ್ಗೆ ಕಾನೂನು ಏನು ಹೇಳುತ್ತೆ?: ಕಾನೂನು ಪ್ರಕಾರ ಶಿಕ್ಷೆ ಪ್ರಕಟವಾದ ದಿನದಿಂದಲೇ ಶಾಸಕ ಸ್ಥಾನದಿಂದ ತಕ್ಷಣವೇ ಅನರ್ಹವಾಗುತ್ತೆ. ಜನಪ್ರತಿನಿಧಿ ಕಾಯ್ದೆ 1951ರ ಸೆಕ್ಷನ್ 8(3) ರ ಪ್ರಕಾರ, ಯಾವುದೇ ಶಾಸಕರು 2 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಶಿಕ್ಷೆಗೆ ಗುರಿಯಾದರೆ ಅವರು ತಕ್ಷಣವೇ ತಮ್ಮ ಸ್ಥಾನವನ್ನು ಕಳೆದುಕೊಳ್ಳುತ್ತಾರೆ. 2013ರ ಲಿಲಿ ಥಾಮಸ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದು, ಈ ತೀರ್ಪಿನ ಪ್ರಕಾರ ಮೇಲ್ಮನವಿ ಸಲ್ಲಿಸಲು ನೀಡಲಾಗುತ್ತಿದ್ದ 3 ತಿಂಗಳ ಕಾಲಾವಕಾಶವನ್ನು ರದ್ದುಪಡಿಸಲಾಗಿದೆ. ಹಾಗಾಗಿ, ಶಿಕ್ಷೆಯಾದ ತಕ್ಷಣ ಅನರ್ಹತೆ ಅನ್ವಯವಾಗುತ್ತದೆ.

ಚುನಾವಣೆಗೆ ಸ್ಪರ್ಧಿಸಲು ನಿಷೇಧ: ಇನ್ನು ಜೈಲು ಶಿಕ್ಷೆಯ ಅವಧಿಯನ್ನು ಪೂರೈಸಿದ ನಂತರವೂ ಮುಂದಿನ 6 ವರ್ಷಗಳ ಕಾಲ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಲು ಅವರಿಗೆ ಅವಕಾಶವಿರುವುದಿಲ್ಲ. ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆಯಾದ ಕಾರಣ, ಉನ್ನತ ನ್ಯಾಯಾಲಯವು ಶಿಕ್ಷೆಯನ್ನು ರದ್ದುಗೊಳಿಸದ ಹೊರತು ಮತ್ತೊಮ್ಮೆ ಚುನಾವಣೆಗೆ ಸ್ಪರ್ಧಿಸುವುದು ಅಸಾಧ್ಯ. ಇನ್ನು ಶಾಸಕತ್ವ ಅಧಿಕೃತವಾಗಿ ಅನರ್ಹಗೊಂಡ ತಕ್ಷಣ ಕ್ಷೇತ್ರ ಖಾಲಿಯಾಗಲಿದೆ. ವಿಧಾನಸಭಾ ಸಚಿವಾಲಯದಿಂದ ಕ್ಷೇತ್ರ ಖಾಲಿ ಇದೆ ಎಂದು ಘೋಷಣೆಯಾಗಲಿದ್ದು, ಬಳಿಕ ಚುನಾವಣಾ ಆಯೋಗ 6 ತಿಂಗಳ ಒಳಗೆ ಉಪಚುನಾವಣೆಯನ್ನು ನಡೆಸಲಿದೆ.

ವಕೀಲರು ಹೇಳಿದ್ದೇನು?: ಕೊಲೆ ಪ್ರಕರಣದಲ್ಲಿ ಸ್ಥಳೀಯ ಪೊಲೀಸರು 6 ಜನರನ್ನು ಬಂಧಿಸಿ ರಿಯಲ್ ಎಸ್ಟೇಟ್ ಜಗಳ ಎಂಬಂತೆ ಬಿಂಬಿಸಿದ್ದರು. ತನಿಖಾಧಿಕಾರಿ ರಾಕೇಶ್ ರಂಜನ್ ಅವರ ತಂಡವು ತನಿಖೆ ನಡೆಸಿ ಶಾಸಕ ವಿನಯ್ ಕುಲಕರ್ಣಿ ಹತ್ಯೆ ಮಾಡಿಸಿದ್ದನ್ನು ಪತ್ತೆ ಮಾಡಿ, ಆರೋಪಪಟ್ಟಿ ಸಲ್ಲಿಸಿದ್ದರು. ಇದಕ್ಕೆ ಕೊಲೆಯಾದ ದಿನದ ಧಾರವಾಡ ಅಂಚೇ ಕಚೇರಿ ಹತ್ತಿರದ ಸಿಸಿಟಿವಿ ಫೂಟೇಜ್ ಮಹತ್ವದ ತಿರುವು ನೀಡಿತು. ಜೊತೆಗೆ ಟವರ್ ಲೊಕೇಶನ್, ಸಿಡಿಆರ್, ಪ್ರತ್ಯಕ್ಷ ಸಾಕ್ಷಿ ಸೇರಿದಂತೆ ಮಹತ್ವದ ಸಾಕ್ಷ್ಯಗಳನ್ನು ಕಲೆ ಹಾಕಿತ್ತು. ಮೊದಲ ಆರೋಪಿ ಬಸವರಾಜ ಮುತ್ತಗಿ ಮತ್ತು ಶಾಸಕ ವಿನಯ್ ಕುಲಕರ್ಣಿ ಭೇಟಿ ಮಾಡಿದ ಬಗೆಗೂ ಸಾಕ್ಷಿ ಸಿಕ್ಕಿವೆ. ಪರಿಣಾಮ ಆರೋಪಿಗಳಿಗೆ ನ್ಯಾಯಾಲಯ ಡಬಲ್ ಜೀವಾವಧಿ ಶಿಕ್ಷೆ ನೀಡಿದೆ ಎಂದು ಸಿಬಿಐ ಪರ ವಕೀಲ ಶಿವಾನಂದ ಪರ್ಲೆ ಪ್ರತಿಕ್ರಿಯೆ ನೀಡಿದರು.

ವಿನಯ್ ಉ.ಕ.ದ ದೊಡ್ಡ ನಾಯಕ :ಡಿಸಿಎಂ ಹೇಳಿಕೆ: ರಾಜಕೀಯವಾಗಿ ಉತ್ತರ ಕರ್ನಾಟಕದಲ್ಲಿ ವಿನಯ್ ಕುಲಕರ್ಣಿ ದೊಡ್ಡ ಶಕ್ತಿಯಾಗಿ ಬೆಳೆಯುತ್ತಾನೆ ಎಂಬ ಕಾರಣಕ್ಕೆ ಷಡ್ಯಂತ್ರ ನಡೆದಿದೆ. ಪ್ರಕರಣ ಸಿಬಿಐಗೆ ಕೊಟ್ಟಾಗಲೇ ಯಡಿಯೂರಪ್ಪ ಹೇಳಿದ್ದರು. ಅದು ಹೇಗೆ ಮುಂಚೆಯೇ ಶಿಕ್ಷೆ ಕೊಡಿಸುವೆ ಎಂದು ಹೇಳಲು ಸಾಧ್ಯ? ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದರಿಂದ ಸ್ಪಷ್ಟವಾಗಿ ರಾಜಕೀಯ ದ್ವೇಷ ಇರುವುದು ಸ್ಪಷ್ಟವಾಗುತ್ತದೆ. ಇದನ್ನು ಎದುರಿಸುತ್ತೇವೆ. ಸಮಯ ಬಂದಾಗ ಷಡ್ಯಂತ್ರ ಯಾರದು ಎಂಬುದು ಗೊತ್ತಾಗುತ್ತದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಚನ್ನಕೇಶವ ಟೆಂಗರಿಕರ್‌ಗೆ ಏಳು ವರ್ಷ ಸಜೆ

ಬೆಂಗಳೂರು : ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ರಾಜಕಾರಣಿಗಳಷ್ಟೇ ಅಲ್ಲದೆ, ಚನ್ನಕೇಶವ ಟೆಂಗರಿಕರ್ ಎಂಬ ಪೊಲೀಸ್ ಇನ್ಸ್‌ಪೆಕ್ಟರ್ ಪಾತ್ರವೂ ಬಹಳ ದೊಡ್ಡದಿದೆ. ಅಂದಿನ ಧಾರವಾಡ ಉಪನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆಗಿದ್ದ ಚನ್ನಕೇಶವ ಟೆಂಗರಿಕರ್ ಅವರ ಪಾತ್ರ ತನಿಖಾ ಸಂಸ್ಥೆಗಳ ನಿದ್ದೆಗೆಡಿಸಿತ್ತು. ಹತ್ಯೆ ನಡೆದ ಸಮಯದಲ್ಲಿ ಇವರು ಅದೇ ಠಾಣೆಯ ಅಧಿಕಾರಿಯಾಗಿದ್ದು, ಪ್ರಕರಣದ ತನಿಖೆಯ ಹಾದಿ ತಪ್ಪಿಸಲು ಇವರು ವಿನಯ್ ಕುಲಕರ್ಣಿ ಅವರ ಸೂಚನೆಯಂತೆ ಕೆಲಸ ಮಾಡಿದ್ದಾರೆ ಎಂಬುದು ಸಿಬಿಐ ತನಿಖೆ ವೇಳೆ ಬಯಲಾಗಿತ್ತು.

ತನಿಖೆಯ ಹಾದಿ ತಪ್ಪಿಸಿದ ಆರೋಪ: ಯೋಗೀಶ್ ಗೌಡ ಅವರ ಹತ್ಯೆ ನಡೆದ ತಕ್ಷಣವೇ ಅದನ್ನು ಕೇವಲ ಆಸ್ತಿ ವಿಚಾರ ಅಥವಾ ವೈಯಕ್ತಿಕ ದ್ವೇಷದ ಕೊಲೆ ಎಂಬಂತೆ ಚಿತ್ರಿಸಲು ತಿಂಗರಿಕರ್ ಮುಂದಾಗಿದ್ದರು ಎನ್ನಲಾಗಿದೆ. ನೈಜ ಆರೋಪಿಗಳನ್ನು ಬಿಟ್ಟು, ಈ ಮೊದಲೇ ಸಿದ್ಧಪಡಿಸಿದಂತೆ ನಕಲಿ ಆರೋಪಿಗಳನ್ನು ಶರಣಾಗುವಂತೆ ಮಾಡಿ, ಪ್ರಕರಣವನ್ನು ಮುಚ್ಚಿ ಹಾಕಲು ಇವರು ಮಾಸ್ಟರ್ ಪ್ಲಾನ್ ರೂಪಿಸಿದ್ದರು ಎಂಬ ಆರೋಪ ಇವರ ಮೇಲಿದೆ. ಕೊಲೆಯಾದ ಜಾಗದ ಮಹಜರು ಮತ್ತು ಸಾಕ್ಷ್ಯ ಸಂಗ್ರಹದ ವೇಳೆಯೂ ಇವರು ವಿನಯ್ ಕುಲಕರ್ಣಿ ಅವರ ಹಿತಾಸಕ್ತಿಗೆ ಅನುಗುಣವಾಗಿ ದಾಖಲೆಗಳನ್ನು ಸೃಷ್ಟಿಸಿದ್ದರು ಎನ್ನಲಾಗಿದೆ.

ಪ್ರಕರಣಕ್ಕೆ ಹೊಸ ತಿರುವು ನೀಡಿದ ಸಿಬಿಐ ಅಧಿಕಾರಿ ರಾಕೇಶ್ ರಂಜನ್

ಬೆಂಗಳೂರು : ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ ಎಲ್ಲ ಅಪರಾಧಿಗಳಿಗೆ ಬಿಜೆಪಿ ಮುಖಂಡ ಹಾಗೂ ಜಿಪಂ ಸದಸ್ಯರಾಗಿದ್ದ ಯೋಗೇಶ್‌ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಯ ನ್ಯಾಯಾಲಯ ಘೋಷಿಸಿದೆ. ಇನ್ನೇನು ಪ್ರಕರಣದಲ್ಲಿ ಶಾಸಕ ವಿನಯ್ ಪಾರಾಗಿಬಿಟ್ಟರು ಎಂಬಂತಹ ಸ್ಥಿತಿ ನಿರ್ಮಾಣವಾಗಿದ್ದಾಗ ತನಿಖಾಧಿಕಾರಿಯಾಗಿ ಬಂದ ಸಿಬಿಐ ಅಧಿಕಾರಿ ರಾಕೇಶ್ ರಂಜನ್ ಪ್ರಕರಣಕ್ಕೆ ಹೊಸ ತಿರುವು ನೀಡಿದ್ದರು! ಹೌದು, ಯೋಗೇಶ್‌ಗೌಡ ಕೊಲೆ ಪ್ರಕರಣ ತಾರ್ಕಿಕ ಅಂತ್ಯ ಕಂಡಿರುವುದರಲ್ಲಿ ಸಿಬಿಐ ಇನ್ಸ್‌ಪೆಕ್ಟರ್ ರಾಕೇಶ್ ರಂಜನ್ ಅವರ ಶ್ರಮ ಹಾಗೂ ವೃತ್ತಿ ನೈಪುಣ್ಯತೆ ಸಾಕಷ್ಟು ಕೆಲಸ ಮಾಡಿದೆ. ಈ ಪ್ರಕರಣ ತನಿಖಾಧಿಕಾರಿ ರಾಕೇಶ್ ರಂಜನ್ ವೃತ್ತಿ ಬದುಕಿನಲ್ಲೂ ಅತ್ಯಂತ ಮಹತ್ವದ್ದಾಗಿದೆ.

ಏಕೆಂದರೆ ಸಿಐಡಿ ಅಧಿಕಾರಿಗಳು ಇಡೀ ಪ್ರಕರಣವನ್ನು ತಿರುಚಿ ರಿಯಲ್ ಎಸ್ಟೇಟ್ ಸಂಬಂಧದ ಕೊಲೆ ಎಂಬಂತೆ ಬಿಂಬಿಸಲು ವೇದಿಕೆ ಸೃಷ್ಟಿಸಿದ್ದರು ಎಂಬ ಅಂಶಗಳನ್ನು ಸಿಬಿಐ ತನ್ನ ತನಿಖೆಯಲ್ಲಿ ಬಯಲಿಗೆಳೆದಿತ್ತು. ಕೊಲೆ ಪ್ರಕರಣಕ್ಕೆ ಇಂತಹ ಸ್ಫೋಟಕ ತಿರುವು ನೀಡಿದ್ದೇ ಸಿಬಿಐ ಅಧಿಕಾರಿ ರಾಕೇಶ್ ರಂಜನ್.

ರಾಕೇಶ್ ರಂಜನ್ ಯಾರು? ಬಿಹಾರ್‌ನ ರಾಜ್ಯದ ಸಾಮಾನ್ಯ ರೈತರೊಬ್ಬನ ಮಗನಾದ ರಾಕೇಶ್ ರಂಜನ್ ಪದವಿ ಮುಗಿದ ಬಳಿಕ ಬಿಎಸ್ಎಫ್ ಯೋಧರಾಗಿ ಸೇರ್ಪಡೆಗೊಂಡರು. ಅವರ ವೃತ್ತಿ ನೈಪುಣ್ಯತೆ ಪರಿಗಣಿಸಿ ಬಿಎಸ್‌ಎಫ್ ಗುಪ್ತದಳ ಅಧಿಕಾರಿಯಾಗಿ ನಿಯೋಜನೆಗೊಂಡು 5 ವರ್ಷಗಳ ಕಾಲ ಅಲ್ಲಿದ್ದರು. ರಾಜೀವ್ ಗಾಂಧಿ ಅವರಿಗೆ ಭದ್ರತಾ ಉಸ್ತುವಾರಿಯಾಗಿದ್ದ ಅಂದಿನ ನ್ಯಾಷನಲ್ ಸೆಕ್ಯೂರಿಟಿ ಗ್ರೂಪ್ ಮುಖ್ಯಸ್ಥ ಟಿ. ಮಡಿಯಾಳ್ ಅವರು ರಾಕೇಶ್ ರಂಜನ್ ಚಾಕಚಕ್ಯತೆ ಕಂಡು ಸಿಬಿಐಗೆ ಕರೆಸಿಕೊಂಡರು. ಅದಾದ ನಂತರ ರಾಕೇಶ್ ದೇಶದ ಗಮನ ಸೆಳೆದ ಹಲವು ಪ್ರಮುಖ ಪ್ರಕರಣಗಳ ತನಿಖಾ ತಂಡದ ಭಾಗವಾದರು. 2011ರಲ್ಲಿ ಬಹುಕೋಟಿ ಗಣಿ ಹಗರಣದ ರೂವಾರಿ ಗಾಲಿ ಜನಾರ್ದನ್ ರೆಡ್ಡಿ ಅವರನ್ನು ಬಂಧಿಸಿದ್ದು ಕೂಡ ಇದೇ ರಾಕೇಶ್ ರಂಜನ್. ಆಗ ಹೈದರಾಬಾದ್ ವಲಯದ ಸಿಬಿಐ ಸಬ್ ಇನ್ಸ್‌ಪೆಕ್ಟರ್ ಆಗಿದ್ದ ರಾಕೇಶ್, ಬಳ್ಳಾರಿಯ ರೆಡ್ಡಿ ನಿವಾಸದ ಮುಂದೆ ಪ್ರತ್ಯಕ್ಷರಾದ ಬಳಿಕವಷ್ಟೇ ಸ್ಥಳೀಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ, ಬಂಧಿಸುತ್ತಿರುವ ವಿಷಯ ತಿಳಿಸಿದ ಅರ್ಧ ಗಂಟೆಯಲ್ಲಿ ನೇರವಾಗಿ ರಸ್ತೆ ಮೂಲಕ ಹೈದರಾಬಾದ್‌ಗೆ ಕರೆದೊಯ್ದಿದ್ದರು. ಅದಾದ ನಂತರ ಸತತ 9 ದಿನಗಳ ತನಕ ರೆಡ್ಡಿ ವಿಚಾರಣೆ ನಡೆಸಿದ್ದು ಇದೇ ರಾಕೇಶ್ ರಂಜನ್ ರಾಕೇಶ್ ರಂಜನ್ ಈವರೆಗೆ ತಮ್ಮ ವೃತ್ತಿ ಬದುಕಿನಲ್ಲಿ ಕೇವಲ 15 ಪ್ರಕರಣಗಳ ತನಿಖಾಧಿಕಾರಿಯಾಗಿ ಕೆಲಸ ಮಾಡಿದ್ದಾರೆ. ಆ ಪೈಕಿ 12 ಪ್ರಕರಣಗಳಲ್ಲಿ ನ್ಯಾಯಾಲಯ ಆರೋಪಿಗಳಿಗೆ ಶಿಕ್ಷೆ ವಿಧಿಸಿದೆ ಇದೀಗ ಯೋಗೇಶ್‌ಗೌಡ ಕೊಲೆ ಪ್ರಕರಣದ ತನಿಖೆ ನಡೆಸಿ, ಚಾರ್ಜ್ ಶೀಟ್ ಸಲ್ಲಿಸಿದ್ದರಿಂದ ವಿನಯ್ ಕುಲಕರ್ಣಿಗೆ ಶಿಕ್ಷೆ ವಿಧಿಸಿರುವುದು 13ನೇ ಪ್ರಕರಣ. ಇನ್ನೆರಡು ಪ್ರಕರಣಗಳಲ್ಲಿ ಪ್ರಮುಖ ಆರೋಪಿಗಳ ನಿಧನ ಹೊಂದಿದ್ದರಿಂದ ಪ್ರಕರಣಗಳು ವಿಲೆಯಾಗಿವೆ ರಾಕೇಶ್ ರಂಜನ್ ಅತ್ಯುತ್ತಮ ಸೇವೆಗೆ 2020ರಲ್ಲಿ ಪ್ರತಿಷ್ಠಿತ ಕೇಂದ್ರ ಗೃಹ ಸಚಿವರ ಪದಕ ದೊರೆತಿದೆ. ಕಳೆದ 2019ರ ಸೆಪ್ಟೆಂಬರ್‌ನಲ್ಲಿ ಧಾರವಾಡದ ಬಿಜೆಪಿಯ ಮುಖಂಡ ಹಾಗೂ ಜಿಪಂ ಸದಸ್ಯ ಯೋಗೀಶ್‌ಗೌಡ ಕೊಲೆ ಪ್ರಕರಣವನ್ನು ಸಿಬಿಐಗೆ ವಹಿಸಿದಾಗ ರಾಕೇಶ್ ರಂಜನ್ ಪ್ರಕರಣದ ತನಿಖಾಧಿಕಾರಿಯಾಗಿ ನಿಯುಕ್ತಿಗೊಂಡರು. ಯೋಗೀಶ್ ಕೊಲೆ ಪ್ರಕರಣ ಇನ್ನೇನು ಮುಗಿದೇ ಹೋಗಿತ್ತು ಎಂದುಕೊಂಡಿದ್ದ ರಾಜ್ಯದ ಜನತೆಗೆ ದಿನಗಳೆದಂತೆ ಹೊರಬಿದ್ದ ಸಂಗತಿಗಳು ಹುಬ್ಬೇರಿಸುವಂತೆ ಮಾಡಿತ್ತು.

ಕೊಲೆ ಮಾಡಿದ್ದು ನಾವೇ ಎಂದು ಆರು ಮಂದಿ ಆರೋಪಿಗಳು ಕೊಲೆಯಾದ 24 ಗಂಟೆಯಲ್ಲೇ ಶರಣಾಗಿದ್ದರಾದರೂ, ಶೂಟರ್‌ಗಳು ಸ್ಥಳೀಯ ರೌಡಿಗಳಲ್ಲ, ಬದಲಾಗಿ ಹೊರಗಿನವರು ಎಂಬ ಹೊಸ ಸಂಗತಿಯನ್ನು ಬಯಲು ಮಾಡುವಲ್ಲಿ ರಾಕೇಶ್ ರಂಜನ್ ಪಾತ್ರ ಮಹತ್ವದ್ದು.

ಕೇಂದ್ರ ಸರ್ಕಾರದಿಂದ ರಂಜನ್‌ಗೆ ಶಹಭಾಷ್ ಗಿರಿ: ಕೇಂದ್ರ ಸರ್ಕಾರ ರಾಕೇಶ್ ರಂಜನ್ ಅವರ ವೃತ್ತಿ ನೈಪುಣ್ಯತೆಗೆ ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವರ ಮೆಡಲ್ ಪುರಸ್ಕಾರ ಘೋಷಿಸಿದೆ. ದೇಶದ 15 ಮಂದಿ ಸಿಬಿಐ ಅಧಿಕಾರಿಗಳಿಗೆ ಈ ಪುರಸ್ಕಾರ ನೀಡಲಾಗಿದ್ದು, ಆ ಪಟ್ಟಿಯಲ್ಲಿ ರಂಜನ್ ಹೆಸರಿದೆ. ತನಿಖಾ ಏಜೆನ್ಸಿಗಳಲ್ಲಿ ವಿಶಿಷ್ಟ ಸಾಧನೆ ಮಾಡುವ ಅಧಿಕಾರಿಗಳಿಗೆ ಈ ಪುರಸ್ಕಾರವನ್ನು ಈ ವರ್ಷದಿಂದ ಕೊಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಮೊದಲ ವರ್ಷವೇ ಈ ಪ್ರಶಸ್ತಿಯಲ್ಲಿ ರಾಕೇಶ್ ರಂಜನ್ ಪಾಲುದಾರ ಎಂಬುದು ಗಮನಾರ್ಹ.

CHANGE OF NAME

I, **BIBIJAN TURANAKAGERI** (Old Name) Resident of Plot no 10/C Sector No 30 VTC Navanagar, Bagalkot 587103 District Bagalkot, State Karnataka,, have changed my name as **BIBIJAN TURAKANAGERI** (New Name) for all purposes affidavit Dtd.: 17-04-2026 sworn before notary **S. S. Revadigar.**

CHANGE OF NAME

I, **SHRISH** (Old Name) Resident of 233, Near Laxmi Nagar 2nd Phase, Akshay Colony, Hubli, Hubballi - Dharwad City - 580030, Karnataka, India have changed my name as **SHRISH SANJEEVA MANAKESHWAR** (New Name) henceforth I will be called and recognized by new name for all future purposes, dated: 17/04/2026.

CHANGE OF NAME

I, **PRATIBHA HEGDE** (Old Name) Resident of Sumukha, Karkisaval, Siddapur, Dist: Uttara Kannada - 581355, Karnataka, India have changed my name as **PRATIBHA VASANT HEGDE** (New Name) henceforth I will be called and recognized by new name for all future purposes, dated: 17/04/2026.

CHANGE OF NAME

I, **GIREPPANAVAR FAKKEERAPPA** (Old Name) Resident of 181, Kyalakonda Road, At Panigatti, Post Kyalakonda, Tq Shiggaon, Dist; Haveri - 581126, Karnataka, India have changed my name as **FAKKIRAPPA IRAPPA GIRIYAPPANAVAR** (New Name) henceforth I will be called and recognized by new name for all future purposes, dated: 17/04/2026.

CHANGE OF NAME

I, **SUVARNA SANGANNANAVAR** (Old Name) Resident of Banagar Oni At Post: Munavalli, To Savadatti, Dist: Belagavi-591117 have changed my name as **SUVARNA BASAVANNEPPA SANGANNANAVAR** (New Name) henceforth I will be called and recognized by new name for all future purposes, dated: 17/04/2026.

ಕ್ರಿಮಿನಲ್ ಮಿಸಲೇನಿಯಸ ನಂ. 447/2026
ಮಾನ್ಯ 2ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯದೀಶರ ನ್ಯಾಯಾಲಯ ಗೋಕಾಕ ಇವರ ನ್ಯಾಯಾಲಯದಲ್ಲಿ

1) ಬಸವರಾಜ ತಂದೆ ನಿಂಗಪ್ಪ ದೊಡ್ಡಲಿಂಗಪ್ಪಗೋಳ 2) ಶ್ರೀಮತಿ. ನಾಗವ್ವ ಕೊಂ. ಅಡಿವೆಪ್ಪ ಪಟ್ಟಣಶೆಟ್ಟಿ ....ಅರ್ಜಿದಾರರು

ವಿರುದ್ಧ

1) ಜನನ ಮತ್ತು ಮರಣ ನೋಂದಣೀ ಅಧಿಕಾರಿಗಳು, ಹಾಗೂ ಮುಖ್ಯಾಧೀಕಾರಿಗಳು, ಪಟ್ಟಣ ಪಂಚಾಯತ, ಅಂಕಲಗಿ.....ಎದುರುದಾರರು

ಸಾರ್ವಜನಿಕ ನೋಟಿಸು

ಮೇಲೆ ನಮೂದಿಸಿದ ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿ ಅರ್ಜಿದಾರ ತಂದೆಯಾದ ನಿಂಗಪ್ಪ ಬಸಪ್ಪ ದೊಡ್ಡಲಿಂಗಪ್ಪಗೋಳ ಇವರು ದಿನಾಂಕ: 12/06/2013 ರಂದು ಡುಮ್ಮಉರಬಿನಹಟ್ಟಿ ಗ್ರಾಮದಲ್ಲಿ ಮೃತರಾಗಿದ್ದು, ಸದರಿಯವರ ಮರಣ ದಿನಾಂಕ ನೋಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರ ಕೊಡಲು ಆದೇಶ ಕೇಳಿ ಮೇ॥ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಸದರಿ ಮೇಲೆ ಹೇಳಿದ ಅರ್ಜಿಯ ವಿಚಾರಣೆಯು ದಿನಾಂಕ: 19-05-2026 ರಂದು ಇರುತ್ತದೆ.

ಸದರಿ ಮೃತರ ಮರಣ ಪ್ರಮಾಣ ಪತ್ರ ದಾಖಲೆಗೆ ಆದೇಶಿಸಲು ಯಾರದ್ದಾದರು ಯಾವುದೇ ರೀತಿಯ ತಕರಾರು ವಗೈರೆ ಇದ್ದಲ್ಲಿ ಅಂತವರು ದಿನಾಂಕ. 19-05-2026 ಅಂದು ಮುಂಜಾನೆ 10-30 ಘಂಟೆಗೆ ಸರಿಯಾಗಿ ಅಥವಾ ಅದರ ಒಳಗಾಗಿ, ಸ್ವತ: ತಾವಾಗಲಿ ವ ತಮ್ಮ ಪರ ನ್ಯಾಯವಾದಿಗಳ ಮುಖಾಂತರವಾಗಲಿ ಮಾನ್ಯ ನ್ಯಾಯಾಲಯ ಮುಂದೆ ಹಾಜರಾಗಿ ತಕರಾರು ಸಲ್ಲಿಸಬೇಕು. ಒಂದು ವೇಳೆ ಯಾರು ಹಾಜರಾಗದೆ ಇದ್ದಲ್ಲಿ ಕಾನೂನಿನ ಪ್ರಕಾರ ಆದೇಶಿಸಲಾಗುವಿದು ಅಂತಾ ಕೊಟ್ಟ ಜಾಹಿರ ನೋಟಿಸು.

ಈ ಹೊತ್ತು ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರದೊಂದಿಗೆ ದಿನಾಂಕ 17/04/2026 ರಂದು ಕೊಡಲಾಗಿದೆ.

ಗೋಕಾಕ
ದಿನಾಂಕ: 17/04/2026

ಮೇ॥ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಎಮ್.ಪಿ. ನಾಯಕ, ಶಿರಸ್ತೇದಾರರು
ಜೆ.ಎಮ್.ಎಫ್.ಸಿ. ನ್ಯಾಯಾಲಯ, ಗೋಕಾಕ
ಸಹಿ/- ಬೆಂಚ ಕ್ಲರ್ಕ
2ನೇ ಹೆಚ್ಚುವರಿ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಗೋಕಾಕ
ಸಹಿ/- (ಎನ್.ಎಸ್. ಗಾಣಿಗ)
ಅರ್ಜಿದಾರರ ಪರ ವಕೀಲರು

IN THE COURT OF CIVIL JUDGE & J.M.F.C. AT: MUNDARGI

Criminal Misc No: 80/2026

Petitione/s : 1) Smt: Renavva W/o. Hanamappa Uppar, Age: 48 Years Years, Occu: House wife, R/o Manktumpur Tq: Mundargi Dist: Gadag 582118
2) Smt: Fakkiravva W/o. Nagaraj Kariningappavar, Age: 43 Years, Occu: Agriculther R/o. Jalawadagi Tq: Mundargi Dist: Gadag 582118

V/S

Respondent's : The Tahashildar, Births and Deaths register, Division Mundargi Tq: Mundargi Dist: Gadag

CITATION

ALL Concerned

WHEREAS The above named petitioner has/have filed a petition seeking for directions to respondent to register date of death of deceased person by name Dyamappa S/o. Hanamappa Meti who died on 06-12-2000 at: Jalawadagi TQ: Mundargi the above claiming registration of death date before the respondent by the petitioner/s If any objections to the claim of above petitioners, they may be filed their objection on 24-4-2026 at 11:00 clock in the forenoon to objection the claim and you directed to produce on that day all the documents upon which you intend to rely in support of your defense.

Take notice that, in default of you appearance on the day before mentioned the case be heard and determined in your absence as Ex-party. Given under my hand and seal of the court of this day 16-4-2026.

Through
By the order of the Court
Sd/- Shirastedar
CIVIL JUDGE & J.M.F.C. Mundargi
Advocate for petitioner
Sd/- M.N. Belagatti, Advocate

IN THE COURT OF THE HON'BLE CIVIL JUDGE AND JMFC AT SIRUGUPPA

CRIMINAL MISC. CASE. NO 171 OF 2026

Between:
1) Peer sab son of late H.Moula sab, aged: 65 years, 2) Smt. Rasool Bee wife of late Rasool sab, aged: 40 years
3) Fathima, wife of late Abdul Sab, aged: 35 years, All are residents of ward No.3, Near Mullar Masjid, Takkalakote village Siruguppa taluk, Ballari district.
.....PETITIONERS

AND

The Registrar of Births and Deaths, Chief Officer, Pattana Panchayathi, Tekkalakote, Siruguppa taluk, Ballari District.
.....RESPONDENT

NOTICE

To ,
1. The Registrar of Births and Deaths, Chief Officer, Pattana Panchayathi, Tekkalakote, Siruguppa taluk, Ballari District.
2. Other whomsoever it may concern

Whereas the above named petitioner have filed the above case against the respondent before this Hon'ble Court for seeking the Death Certificate of petitioners' Mother / Mother in law- Smt.H.Mehaboob Bee wife of H.Moula sab, died on 06-07-1995 at Tekkalakote village Siruguppa taluk, Ballari district.

You are hereby directed to appear before this Honourable court in person or by a pleader duly instructed on 16/4/26 at about 11-00 a.m. in the fore-noon before this court to show cause against the above petition, failing which the petition will be heard and determined as ex-parte.

Given under my hand & seal of the court this 16th day of April-2026.

By Order of the court,
Sd/- Chief ministrial officer,
Civil judge & JMFC Court Siruguppa.
Sd/- B.M. Asif
Advocates for Petitioner

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು

ಸಿಆರ್‌ಎಲ್.ಎಮ್.ಸಿ. ಸಂಖ್ಯೆ : 155/2026

ಅರ್ಜಿದಾರರು : ಹರಿಜನ ಪರಶುರಾಂ ಮತ್ತು ಇತರರು

ವಿರುದ್ಧ

ಎದುರುದಾರರು : ಮಾನ್ಯ ಮುಖ್ಯಾಧಿಕಾರಿಗಳು/ ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಪುರಸಭೆ ಕುರೆಕುಪ್ಪ

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ತಂದೆಯಾದ ದುಗ್ಗಪ್ಪ ತಂದೆ ಹೊನ್ನೂರಪ್ಪ ಇವರು ದಿನಾಂಕ: 02-11-2015 ರಂದು ಕುರೆಕುಪ್ಪ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 25-05-2026 ಬೆಳಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಎಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು.

ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 10-4-2026 .ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಹಿ/- ಸೋಮಶೇಖರ ಹೆಚ್.
ಅರ್ಜಿದಾರರ ಪರ ವಕೀಲರು, ಸಂಡೂರು

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು

ಸಿಆರ್‌ಎಲ್.ಎಮ್.ಸಿ. ಸಂಖ್ಯೆ : 156/2026

ಅರ್ಜಿದಾರರು : ಹರಿಜನ ಪರಶುರಾಂ ಮತ್ತು ಇತರರು

ವಿರುದ್ಧ

ಎದುರುದಾರರು : ಮಾನ್ಯ ಮುಖ್ಯಾಧಿಕಾರಿಗಳು/ ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಪುರಸಭೆ ಕುರೆಕುಪ್ಪ

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ಅಜ್ಜಿಯಾದ ರಾಮಕ್ಕ ಗಂಡ ಹೊನ್ನೂರಪ್ಪ ಇವರು ದಿನಾಂಕ: 06-04-1992 ರಂದು ಕುರೆಕುಪ್ಪ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 25-05-2026 ಬೆಳಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಎಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು.

ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 10-4-2026 ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಹಿ/- ಸೋಮಶೇಖರ ಹೆಚ್.
ಅರ್ಜಿದಾರರ ಪರ ವಕೀಲರು, ಸಂಡೂರು

ಸಾರ್ವಜನಿಕ ನೋಟೀಸು

ನಮ್ಮ ಪಕ್ಷಗಾರರಾದ ಶ್ರೀ ವೀರನಗೌಡ ತಂದೆ ನಿಂಗನಗೌಡ ಮೇಲಿನಮನಿ ಇವರು ಕೊಟ್ಟ ಅಧಿಕಾರ ಮತ್ತು ಮಾಹಿತಿಯ ಮೇರೆಗೆ ಈ ಮೂಲಕ ಕೊಡುವ ಸಾರ್ವಜನಿಕ ನೋಟಿಸು ಏನೆಂದರೆ :

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಉಪನೋಂದಣಾಧಿಕಾರಿಗಳ ಕಛೇರಿ ವ್ಯಾಪ್ತಿಯ ಬ್ಯಾಹಟ್ಟಿ ಗ್ರಾಮದ ಜಮೀನುಗಳು, ಅವುಗಳ (I) ಬ್ಲಾಕ ನಂ.327/3 (II) ಬ್ಲಾಕ ನಂ.92/2 ಮತ್ತು (III) ಬ್ಲಾಕ ನಂ.333/2, ಸದರಿ ಜಮೀನುಗಳಿಗೆ ಸಂಬಂಧಿಸಿದ ಮೂಲ ವಾಟ್ನಿ ಪತ್ರ, ನಂ.ಎಚ್.ಬಿ.ಎನ್ - 1 - 04933-2024-25 ದಿನಾಂಕ 04-07-2024 ನೇದ್ದು ಕಳೆದಿದ್ದು, ಆ ಕುರಿತು ದಿನಾಂಕ 16-04-2026 ರಂದು ಹುಬ್ಬಳ್ಳಿ ಗ್ರಾಮೀಣ ಪೋಲೀಸ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಆದುದರಿಂದ, ಸಾರ್ವಜನಿಕರಿಗೆ ಈ ಮೂಲಕ ತಿಳಿಸುವದೇನೆಂದರೆ, ಮೇಲ್ಕಾಣಿಸಿರುವ ಜಮೀನುಗಳಿಗೆ ಸಂಬಂಧಪಟ್ಟಂತೆ ಮೇಲೆ ಹೇಳಿದ ಮೂಲ ದಾಖಲೆ ಯಾರಿಗಾದರೂ ಸಿಕ್ಕಲ್ಲಿ, ಕೆಳಗಿನ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ.

ಹುಬ್ಬಳ್ಳಿ, ದಿನಾಂಕ : 17-04-2026

ಸಹಿ/- **ಬಿ.ಎನ್. ಛಟ್ಟಿ.** ವಕೀಲರು
ನಂ.3, ಮೊದಲ ಮಹಡಿ, ಮಧುರಾ ಪ್ಲಾಜಾ,
ದಾಜಿಬಾನಪೇಟ, ಹುಬ್ಬಳ್ಳಿ-5800028.

CHANGE OF NAME

I, **DASARI SUNITHA** (Old Name) Resident of H.No 54, Vinay Colony 2nd Cross Parasawadi, BSNL, Hubli, Keshwapur, Hubli, Dharwad, Karnataka, Pin Code: 580028 have changed my name as **SUNITHA KRISHNAPUR** (New Name) henceforth I will be called and recognized by new name for all future purposes, dated: 17/04/2026.

CHANGE OF NAME

I, **ANUSHREE VIRUPAKSH HANCHINAL** (Old Name) Resident of #F-Block-001 Akshay Garden, Near Banashankari Lay Out, Vidya Nagar, Hubli Eng College, Dharwad, Karataka Pin Code: 580031 have changed my name as **ANUSHREE HANCHINAL** New Name) henceforth I will be called and recognized by new name for all future purposes, dated: 17/04/2026.

ಕರ್ನಾಟಕ ಗೃಹ ಮಂಡಳಿ

Karnataka Housing Board
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

Notification No: CE/KHB/2026-27/SE0379 Date: 16.04.2026

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಕುಂದಾಣ ಗ್ರಾಮದ ಸರ್ವೆ ನಂ. 138 ರಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಮೂಲಕ ಟೆಂಡರ್ ಕರೆಯಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 30.04.2026 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/233/ಆಕಾರ್/2026-27

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ,

"ಅಭಿವೃದ್ಧಿ ಭವನ", ಐವಾನ-ಎ-ಶಾಹಿ, ಕಲಬುರಗಿ-585 102, ದೂರವಾಣಿ: 08472-256767, 239556
ಫ್ಯಾಕ್ಸ್ (08472) 227527, ಇ-ಮೇಲ್: hkadbgulb@gmail.com, website:kkrdb.karnataka.gov.in

ಸಂಖ್ಯೆ:KKRDB/ACC/AS-2/332025-26/504 ದಿನಾಂಕ:17.04.2026

ಅಲ್ಪಾವಧಿ ಇ- ಹರಾಜು ಪ್ರಕಟಣೆ

ಕರ್ನಾಟಕ ಸರ್ಕಾರದ ಇ-ಪೋರ್ಟಲ್‌ನಲ್ಲಿ ಇ-ಹರಾಜಿನ ಮೂಲಕ ಕೆಕೆಆರ್‌ಡಿಬಿ ಹೆಚ್ಚುವರಿ ನಿಧಿಯ ಹೂಡಿಕೆ

ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಎಫ್‌ಡಿ 91 ಟಿ..ಎ.ಆರ್ 2022, ಬೆಂಗಳೂರು, ದಿ:02.07.2022 ಮತ್ತು ಸಂಬಂಧಿತ ಅನುಬಂಧಗಳು/ಸುತ್ತೋಲೆಗಳ ಪ್ರಕಾರ 365 ದಿನಗಳವರೆಗೆ ಸ್ಥಿರ ಠೇವಣಿ ಮೂಲಕ ಹೆಚ್ಚುವರಿ ನಿಧಿಯನ್ನು ಹೂಡಿಕೆ ಮಾಡಲು **ಭಾರತದ ಅರ್ಹ ಪ್ರಾದೇಶಿಕ/ವಲಯ/ಮುಖ್ಯ ಕಚೇರಿಯಿಂದ** ಸುಮಾರು 20.00 ಕೋಟಿಗಳ ರೂಪಾಯಿಗೆ ಬಡ್ಡಿದರಗಳಿಗಾಗಿ ಹರಾಜು ಮೂಲಕ ಆಹ್ವಾನಿಸಲಾಗಿದೆ.

1) ಆಸಕ್ತ ಬಿಡ್ಡರ್‌ಗಳು ದಿನಾಂಕ:17.04.2026 ರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ ಅರ್ಜಿ ಶುಲ್ಕವನ್ನು ಪಾವತಿಸುವ ಮೂಲಕ www.kppp.karnataka.gov.in ನಿಂದ ದಾಖಲೆಗಳನ್ನು ಪಡೆಯಬಹುದು. 2) ತಿದ್ದುಪಡಿ/ಅನುಬಂಧ/ಮಾರ್ಪಾಡುಗಳು/ತಿದ್ದುಪಡಿಗಳನ್ನು ವೆಬ್‌ಸೈಟ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. **ಟೆಂಡರ್ (ಇ-ಹರಾಜು) ಗಾಗಿ ವೇಳಾಪಟ್ಟಿ ಈ ಕೆಳಗಿನಂತಿದೆ:**

ಕ್ರ.ಸಂ.01, ವಿವರಣೆ : ಹರಾಜು ದಸ್ತಾವೇಜನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭ ದಿನಾಂಕ : 17.04.2026, 02) ಕ್ವೆರೀಸ್ ಸಲ್ಲಿಸುವ ದಿನಾಂಕ: 23.04.2026 ಮಧ್ಯಾಹ್ನ 01.30 ವರೆಗೆ, 03) ಪ್ರಿ-ಬಿಡ್ ಸಭೆ ದಿನಾಂಕ : 24.04.2026 ಬೆಳಿಗ್ಗೆ 10.30 ಕ್ಕೆ, 04) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 02.05.2026 ಸಾಯಂಕಾಲ 5.00ರ ವರೆಗೆ, 05) ಎವಲ್ಯೂಯೇಷನ್ ದಿನಾಂಕ : 04.05.2026 ಬೆಳಿಗ್ಗೆ 10.30 ಕ್ಕೆ, 06) ಇ-ಹರಾಜು ದಿನಾಂಕ : 08.05.2026ರಂದು ಬೆಳಿಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 01.30 ಗಂಟೆ ವರೆಗೆ, 07) ಡೆಲ್ಟಾ ಸಮಯ : 15 ಮಿನಿಟ್ಸ್

ಸಹಿ/- ಉಪ ಕಾರ್ಯದರ್ಶಿಗಳು
ಕ.ಕ.ಪ್ರ.ಅ.ಮಂಡಳಿ ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/44/ದೇಶಪಾಂಡೆ ಪಬ್ಲಿಸಿಟಿ/2026-27/

ಕ್ರಿ.ಮಿ.ನಂ: 162/2026
ಮೆ॥ ಹೆಚ್ಚುವರಿ ಸಿವ್ಹಿಲ್ ನ್ಯಾಯಾಧೀಶರು ವ ಜೆಎಮ್‌ಎಫ್‌ಸಿ ಬಸವನ ಬಾಗೇವಾಡಿ ಇವರ ನ್ಯಾಯಾಲಯದಲ್ಲಿ

1) ಪೀರಪ್ಪ ತಂ. ಮರೆಪ್ಪ ಚಲವಾದಿ ಹಾಗೂ ಇತರರು .....ಅರ್ಜಿದಾರರು

ವಿರುದ್ಧ

1) ತಹಶೀಲ್ದಾರರು, ಜನನ ಮರಣ ನೋಂದಣಾಧಿಕಾರಿಗಳು ಬಸವನ ಬಾಗೇವಾಡಿ .....ಎದುರುದಾರ

ಪತ್ರಿಕಾ ಪ್ರಕಟಣೆ

ಸದರ ಮೇಲ್ಕಾಣಿಸಿದ ಅರ್ಜಿಯಲ್ಲಿಯ 1ರಿಂದ 4ನೇ ಅರ್ಜಿದಾರರ ತಾಯಿಯಾದ 5 & 10 ನೇದವರ ಅತ್ತೆಯಾದ 6 ರಿಂದ 9 & 11ನೇದವರ ಅಜ್ಜಿಯಾದ ಗುರುಬಸವ್ವ ಗಂ. ಮರೆಪ್ಪ ಚಲವಾದಿ ಇವಳು ದಿನಾಂಕ: 13-12-2023 ರಂದು ನಿಡಗುಂದಿ ತಾಲೂಕಿನ ಅಂಗಡಗೇರಿ ಗ್ರಾಮದಲ್ಲಿ ಮೃತವಾಗಿದ್ದು, ಸದರಿಯವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ಈ ಅರ್ಜಿಯನ್ನು ದಾಖಲಿಸಿರುತ್ತಾರೆ. ಆದ್ದರಿಂದ ಸದರಿ 1ರಿಂದ 4ನೇ ಅರ್ಜಿದಾರರ ತಾಯಿಯ 5 & 10ನೇ ಅರ್ಜಿದಾರರ ಅತ್ತೆಯ 6 ರಿಂದ 9 & 11ನೇ ಅರ್ಜಿದಾರರ ಅಜ್ಜಿಯ ಮರಣದ ಬಗ್ಗೆ ಮರಣ ನೋಂದಣಾಧಿಕಾರಿಗಳ ರಜಿಸ್ಟರ್‌ದಲ್ಲಿ ದಾಖಲಿಸುವ ಕುರಿತು. ಯಾರದರೂ ಯಾವುದೇ ರೀತಿಯ ತಂಟೆ, ವ ತಕರಾರು ಇದ್ದಲ್ಲಿ ಅಂತವರು ಹಾಜರಾಗಲು ಮಾನ್ಯ ನ್ಯಾಯಾಲಯದವರು ದಿನಾಂಕ: 18-06-2026 ರಂದು ಬೆಳಿಗ್ಗೆ 11 ಘಂಟೆಗೆ ಮುದ್ದತ್ ನೇಮಿಸಿದ್ದು ಇರುತ್ತದೆ. ತಾವಾಗಲೀ ತಮ್ಮ ವಕೀಲರ ಮುಖಾಂತರವಾಗಲೀ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರ ಹಾಜರಾತಿಯಲ್ಲಿ ನಿರ್ಣಯಿಸಲಾಗುವದು. ಈ ಹೊತ್ತು ದಿನಾಂಕ : 17-04-2026 ರಂದು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮುದ್ರೆಯೊಂದಿಗೆ ಕೊಡಲ್ಪಟ್ಟಿತು.

ಬಸವನಬಾಗೇವಾಡಿ
ದಿನಾಂಕ: 16-04-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು, (ಆಡಳಿತ)
ಮೆ॥ ಹೆಚ್ಚುವರಿ ಸಿವ್ಹಿಲ್ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ನ್ಯಾಯಾಲಯ ಬಸವನಬಾಗೇವಾಡಿ.
ಸಹಿ/- ಶ್ರೀ ಎ.ಜಿ. ನದಾಫ
ಅರ್ಜಿದಾರರ ಪರ ವಕೀಲರು

IN THE COURT OF THE 3rd ADDITIONAL CIVIL JUDGE & JMFC AT BALLARI

Crl. M.C. No. 142/2026

Between :-
1) SANNA KALLAPPA S/O LATE.DODDA HONNURAPPA, aged abou 68 years,
2) THIPPANNA S/O LATE.DODDA DUGYAPPA, aged about 43 years
3) RUDRAPPA S/O LATE.DODDA DUGYAPPA, aged about 41 years
4) DUGYAPPA S/O LATE.DODDA DUGYAPPA, aged about 39 years all are, R/o, Janekunte village, Ballari taluk and district. .....Petitioners

And

RESPONDENT
The Register of Births & Death's, Thasildhar, Taluk office, Ballari .....Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 mother by name HONNURAMMA W/O LATE DODDA HONNURAPPA was died on 10-08-1994 at Janekunte village, Ballari taluk and District in the above mentioned address.

Therefore, If any persons are interested you are hereby directed to appear in this court in person or by a pleader duly instructed on 21-05-2026 at about 11.00 a.m to show cause against the above suit, failing which the suit will be heard and determined ex-parte against you.

Given under my hand and seal of the court on this 17th day of April 2026.

By Order of the court.
Sd/- Shirestedar,
3rd Addl Civil Judge and JMFC Ballari.
Sd/- D. Basavaraj Patil
Advocate for the petitioner

IN THE COURT OF THE HON'BLE I ADDITIONAL DISTRICT AND SESSIONS JUDGE, AT BALLARI

R.A No.1 OF 2025

Between :
Sri J Krishna Murthy .....Appellant

And

Smt. Vishalakshamma and others .....Respondents

NOTICE TO RESPONDENT No. R 3(a), (d) and (e):-

3(a). C M Virupakshaiah s/o Late Sri G Pampathayya, Hindu, aged about 71 years, R/o Challekudluru Village, Sirguppa Taluk, Ballari District.
3(d). C M Gnanadeva S/o Late Sri G Pampathayya, Hindu, aged about 48 years. R/o Ward No.4 Potanhal Village, Manvi Taluk, Main road, Potanhal Post, Raichur District-584 143.
3(e). Smt. J Pushpa W/o J Siddalingayya D/o Sri G Pampathayya, W.No.17, Sadashiva Nagar, Siruguppa, Ballari,

WHEREAS the appellants have filed the above appeal challenging the Judgment & Decree passed in O.S no. 270/2015 Dated 27-07-2024 passed by the Hon'ble II Additional Senior Civil Judge, Ballari, sitting at Sirguppa you are hereby required to appear before this Court in person or through a pleader who shall be instructed and liable to answer all material questions on 02nd day of June 2026 at 11 'O' Clock in the forenoon to show cause.

Take notice that in default of your appearance on the day above mentioned, the above suit will be heard and determind in your absence.

Given under my hand and seal of this court this 15th day of april 2026.

B. O. C.
Sd/- Shirastedar
I Addl District & Session Judge, Ballari
Sd/- Anilkumar Kulkarni
Advocate for Appellant

IN THE COURT OF HON'BLE SENIOR CIVIL JUDGE AND JMFC AT HARIHARA

O.S. No 39/2025

Between:

Smt.Annapurna Devi.V, D/o Late Bogeshwar Rao, W/o V.Srinivas Rao, Aged about 50 years,Resident of No.13, Ground Floor, Sri Sai Nilayam,5th 'A' Cross, Sir M.V.Nagar, Ramamurthy Nagar, Bengaluru-16 **... Plaintif**

And

1)Sri.K.Venkateshwar Rao, S/oLate Bogeshwar Rao, Aged about 60 years, 2)Sri.Karthick,S/o K.Venkateshwar Rao, Aged about 30 years, 3.)Sri. Nikhil, S/o K.Venkateshwar Rao, Aged about 28 years, 4)Smt.Sridevi,W/o K.Venkateshwar Rao,Aged about 54years,Above Sl.No.1 to 4are residing at Harihara Taluk,Gulladahalli, Davanagere District-577530. 5)Smt.K.Subhashini,D/oLate BogeshwarRao,Aged about 54 years,R/at No.flat No.21, ward No.21,Moka Road, Opp Water Booster,Bellary-583101.6)Corporation Bank,Rep by its manager,Having its head office at mangalore,The branch by name Sarathi,At Davanagere-577002. 7)ICICI Bank, Rep by its manager,Off at No.150/4,Aradhya Enclave, PB Road, Davanagere-577002. **.Defendants**

To,

Address to Service of Defendant No.1 to 5: 1) Sri.K. Venkateshwar Rao,S/o Late Bogeshwar Rao,Aged about 60 years, 2)Sri.Karthick, S/o K.Venkateshwar Rao, Aged about 30 years, 3) Sri.Nikhil, S/o K.Venkateshwar Rao, Aged about 28 years, 4) Smt.Sridevi,W/o K.Venkateshwar Rao,Aged about 54 years, Above Sl.No.1 to 4 are residing at Harihara Taluk, Gulladahalli Village, Davanagere District -577530, 5) Smt. K.Subhashini, D/o Late Bogeshwar Rao, Aged about 54 years, R/at No.flat No.21, ward No.21, Moka Road, Opp Water Booster,Bellary-583101. **...Defendants**

PAPER PUBLICATION DRAFT

Whereas the above Plaintiff's have filed suit for Specific performance and deliver vacant possession under order VII rule 1 of the code of civil procedure. Interested parties are her by warned to appear in this court in person or by pleader duly instructed on **12th day of June 2026 at 11 '0' clock** in forenoon to showcause against petition.

SUIT SCHEDULE PROPERTIES SCHEDULE "A" PROPERTY

All that piece and parcel of the property bearing Site No 9, situated at Nitturu Village, Telagi Hobli, Harapanahalli Taluk, Vijaya Nagar District, measuring 1125 Sq.ft, Situated at Door No.3706/9, comes under the Davanagere Municipal Limits, East by : Sy.No.19/6, West by: 9.14 meter road, North by : Site No.8, South by: Sy.No.190/10.

Schedule "B" Property: All that piece and parcel of the property bearing Sy.No.19/1p27, situated at Harihara Taluk, Malebennuru Hobli, AAdhapura Village measuring to an extent of 13.08 guntas, bonded on. East by : Property of Sri. Bogeshwar rao, West by : Road, North by: property of Sri. Venkateshwar rao, South by: Property of Sri. Bogeshwar rao.

Schedule "C" Property: All that peace and parcel of the property bearing Sy.No.26/p, measuring to an extent of 28 guntas, situated at Harihara Taluk, Malebennuru Hobli, Aadhapura Village. East by : Private Property, West by: Private Property, North by: Private Property, South by : Private Property.

Schedule 'D' Property: 1) All that peace and parcel of the property bearing Sy.No.24/2, measuring to an extent of 3 acre 15 guntas, situated at Harihara Taluk, Malebennuru Hobli, Aadhapura Village. East by : Private Property,West by: Private Property,North by: Private Property,South by: Private Propert. **2)** All that peace and parcel of the property bearing Sy.No.26/7,measuring to an extent of 2 acre 05 guntas, situated at Harihara Taluk, Malebennuru Hobli, Aadhapura Village. East by : Private Property, West by : Private Property, North by: Private Property, South by: Private Property. **3)** All that peace and parcel of the property bearing Sy.No.28/2, measuring to an extent of 3 acre 02 guntas, situated at Harihara Taluk, Malebennuru Hobli, Aadhapura Village. East by : Private Property, West by : Private Property, North by : Private Property, South by: Private Property. **4)** All that peace and parcel of the property bearing Sy.No.26/P14, measuring to an extent of 04 guntas, situated at Harihara Taluk, Malebennuru Hobli, Aadhapura Village. East by: Private Property, West by: Private Property, North by: Private Property, South by: Private Property. **5)** All that peace and parcel of the property bearing Sy.No.26/3, measuring to an extent of 07 guntas, situated at Harihara Taluk, Malebennuru Hobli, Aadhapura Village. East by Private Property, West by Private Property, North by : Private Property,South by: Private Property.

Schedule "E" Property: **1)** All that peace and parcel of the property bearing Sy.No. 78/1 measuring to an extent of 1 acre, situated at Nitturu Village, Telagi Hobli, Harapanahalli taluk, Vijaya Nagar District. East by: Property of Sri. Bogeshwar rao, West by Panchayath Road, North by: Property of Sri. Bogeshwar rao, South by: Panchayath Road. **2)** All that peace and parcel of the property bearing Sy.No. 78/3 measuring to an extent of 3 acre situated at Nitturu Village, Telagi Hobli, Harapanahalli taluk, Vijaya Nagar District, and bounded on, East by: Property of Sri. Bogeshwar rao, West by House, North by: Property of Smt. Jansirani, South by: Panchayath Road. **3)** All that peace and pareel of the property bearing ay.no. 78/5 measuring to an extent of 3 acre, altuated at Nitturu Village, Telagi Hobli, Harapanahalll taluk, Vijaya Nagar District, and bounded on, East by: Property of Smt. Janslrani, West by: Panchayath Road, North by : Property of Sri. Bogeshwar rao, South by : Panchayath Road. **4)** All that peace and parcel of the property bearing sy.no.78/6 measuring to an extent of 2 acre, situated at Nitturu Village, Telagi Hobli, Harapanahalli taluk, Vijaya Nagar District, and bounded on, East by: Property of Smt. Jansirani, West by : House, North by: Property of Sri. Bogeshwar rao, South by: Property of Smt. Jansirani. **5)** All that peace and parcel of the property bearing sy.no.7/8 measuring to an extent of 1 acre 5 guntas, situated at Nitturu Village, Telagi Hobli, Harapanahalli taluk, Vijaya Nagar District, and bounded on, East by: Property of Sri. Bogeshwar rao, West by: House, North by: Property of Sri. Bogeshwar rao, South by: Property of Smt. Jansirani. **6)** All that peace and parcel of the property bearing sy.no.78/10 measuring to an extent of 1 acre 50 Cents, situated at Nitturu Village, Telagi Hobli, Harapanahalli taluk, Vijaya Nagar District, and bounded on,East by: Property of Sri. Bogeshwar rao, West by : Panchayath Road, North by: Houses, South by: Panchayath Road. **7)** All that peace and parcel of the property bearing sy.no.78/11 measuring to an extent of 1 acre, situated at Nitturu Village, Telagi Hobli, Harapanahalli taluk, Vijaya Nagar District, and bounded on, East by: Private Property, West by: Private Property, North by: Private Property, South by : Private Property. **8)** All that peace and parcel of the property bearing sy.no.78/12 measuring to an extent of 1 Acre 50 Cents, situated at Nitturu Village,Telagi Hobli, Harapanahalli taluk, Vijaya Nagar District, bounded on, East by : Property of Sri. Bogeshwar rao, West by : Houses, North by: Property of Smt. Jansirani, South by: Panchayath Road. **9)** All that peace and parcel of the property bearing 78/13 measuring to an extent of 1 Acre 50 Cents, situated at Nitturu Village, Telagi Hobli, Harapanahalli taluk, Vijaya Nagar District, and bounded on, East by: Private Property, West by :Private Property, North by: Private Property, South by :Private Property. **10)** All that peace and parcel of the property bearing 78/14 measuring to an extent of 1 Acre 50 guntas situated at Nitturu Village, Telagi Hobli, Harapanahalli taluk, Vijaya Nagar District, and bounded on, East by :Private Property, West by Private Property, North by: Private Property, South by : Private Property.

Schedule 'F' Property: 1) All that peace and parcel of the property bearing sy.no.78/4 measuring to an extent of 3 acre, situated at Nitturu Village,Telagi Hobli, Harapanahalli taluk, Vijaya Nagar District, and bounded on, East by : Panchayath Road, West by :Houses, North by: Property of Sri. Bogeshwar rao, South by: Panchayath Road. 2) All that peace and parcel of the property bearing Sy.No.20/2B, measuring to an extent of 5 Acers, situated at Harihara Taluk, Malebennuru Hobli, Aadhapura Village. East by : Private Property, West by : Private Property, North by: Private Property, South by : Private Property. Given under my hand and seal of the court on this the 8th day of April month 2026.

Advocate for Petitioners
Eagle's Eye Law Associate
AVINASH.V
HEMALATHA.D
Office at No.55, New Police Station Road,K.R.Puram, Bengaluru-36

By the order of the Court
Chief Ministerial officer
Senior Civil Judge Court Harihara

ಕರ್ನಾಟಕ ಸರ್ಕಾರ

(ತೋಟಗಾರಿಕೆ ಇಲಾಖೆ)
ಜಿಲ್ಲಾ ಪಂಚಾಯತ್, ಹಾವೇರಿ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ಜಿ.ಪಂ) ರಾಣೇಬೆನ್ನೂರ

ಸಂಖ್ಯೆ: ಹಿ.ಸ.ತೋ.ನಿ./ಜಿ.ಪಂ/ರಾಬೆ/ಹ/2026-27/11 ದಿ: 17-04-2026

ಚಿಕ್ಕು ಫಸಲಿನ ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿ.ಪಂ) ರಾಣೇಬೆನ್ನೂರು ರವರ ಕಾರ್ಯಾಲಯದ ಅಧೀನದಲ್ಲಿ ಬರುವ ಈ ಕೆಳಗೆ ನಮೂದಿಸಿರುವ ತೋಟಗಾರಿಕಾ ಕ್ಷೇತ್ರದ ಫಸಲಿನ ಟೆಂಡರ್ ಕಂ ಬಹಿರಂಗ ಹರಾಜು ಮಾಡುವ ವಿವರ ಈ ಕೆಳಗೆ ಕಾಣಿಸಿದ ಪ್ರಕಾರ ಇರುತ್ತದೆ.

ಅ. ನಂ.	ತೋಟಗಾರಿಕೆ ಕ್ಷೇತ್ರದ ಹೆಸರು	ಫಸಲಿನ ವಿವರ	ಗಿಡಗಳ ಸಂಖ್ಯೆ	ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	ಫಸಲಿನ ಟೆಂಡರ್/ ಬಹಿರಂಗ ಹರಾಜು ಅವಧಿ	ಟೆಂಡರ್ ತೆರೆಯುವ/ ಬಹಿರಂಗ ಹರಾಜಿನ ಸ್ಥಳ ಹಾಗೂ ದಿನಾಂಕ
1	ಹನುಮನಮಟ್ಟಿ ತೋಟಗಾರಿಕೆ ಕ್ಷೇತ್ರ ತಾ॥ ರಾಣೇಬೆನ್ನೂರು	ಚಿಕ್ಕು ಫಸಲು	158	29-04-2026	ಟೆಂಡರ್ ಕಂ ಬಹಿರಂಗ ಹರಾಜು ಆದ ದಿನಾಂಕದಿಂದ 30-06-2026 ರ ವರೆಗೆ	30-04-2026 ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ರಾಣೇಬೆನ್ನೂರ ರವರ ಕಚೇರಿ ಬೆಳಿಗ್ಗೆ 11.30 ಘಂಟೆಗೆ

ಷರತ್ತುಗಳು :-

1) ಟೆಂಡರ್ ಫಾರ್ಮಗಳನ್ನು ರೂ. 100/-ಗಳನ್ನು ತುಂಬಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿ.ಪಂ) ರಾಣೇಬೆನ್ನೂರು ರವರ ಕಛೇರಿಯಿಂದ ಪಡೆಯುವುದು.
2) ಟೆಂಡರಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು 2500-00 ರೂ. ಮೊತ್ತದ ಮುಂಗಡ ಠೇವಣಿ ಹಣವನ್ನು ಹಾಗೂ ಟೆಂಡರ್ ಫಾರಂನಲ್ಲಿ ನಮೂದಿಸಿರುವ ಶೇ. 75ರ ಭಾಗದ ಹಣವನ್ನು ಡಿ.ಡಿ. ರೂಪದಲ್ಲಿ KSHDA Bangalore ರ ಹೆಸರಲ್ಲಿ ತುಂಬಿ ಟೆಂಡರಿನಲ್ಲಿ ಭಾಗವಹಿಸತಕ್ಕದ್ದು.
3) ಹರಾಜಿನಲ್ಲಿ ಭಾಗವಹಿಸುವವರು ರೂ. 2500-00 ಠೇವಣಿ ಹಣವನ್ನು ತುಂಬಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. ಯಶಸ್ವಿ ಹರಾಜುದಾರರು ಅದೇ ದಿನ ತಕ್ಷಣ ಶೇ. 75ರ ಭಾಗದ ಹಣವನ್ನು ತುಂಬಬೇಕು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ಸಮಯದಲ್ಲಿ ಕೆಳ ಸಹಿದಾರರ ಕಛೇರಿ / ಕ್ಷೇತ್ರದಲ್ಲಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/-
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
(ಜಿ.ಪಂ) ರಾಣೇಬೆನ್ನೂರು.

G & W No : 48/2026
ಮಾನ್ಯ ಹಿರಿಯ ದಿವಾಣಿ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ಕಲಘಟಗಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಶ್ರೀಮತಿ ಸರಸ್ವತಿ ಕೋಂ ಉಮೇಶ ಬಾಬಜಿ, ಹಾಗೂ ಇನ್ನೊಬ್ಬರು

ವಿರುದ್ಧ

ಎದುರುದಾರರು : ಯಾರೂ ಇಲ್ಲಾ

ಸೈಟೇಶನ

ಮೇಲ್ಕಾಣಿಸಿದ ಪ್ರಕರಣದಲ್ಲಿ 1ನೇ ಅರ್ಜಿದಾರರು ಮಾನ್ಯ ನ್ಯಾಯಾಲಯಕ್ಕೆ ಅಲ್ಪವಯಿ ಮಗನಾದ ಅರ್ಜಿದಾರ ನಂ. 2 ನೇದವರಾದ ಭರತ ತಂದೆ ಉಮೇಶ ಬಾಬಜಿ, ಇವರ ಅಲ್ಪವಯಿ ಸಂರಕ್ಷಣಾದಾರರು ಅಂತಾ ನೇಮಿಸಲು ಮನವಿ ಮಾಡಿದ್ದು ಮತ್ತು ಧಾರವಾಡ ಜಿಲ್ಲಾ ಕಲಘಟಗಿ ತಾಲೂಕ ಪೈಕಿ ರಾಮನಾಳ ಗ್ರಾಮದ ಹದ್ದಿಯ ಶೇತ್ಕಿ ಜಮೀನು ರಿ.ಸ.ನಂ. 16/1 ಕ್ಷೇತ್ರ 2 ಎಕರೆ 00 ಗುಂಟೆ, ನೇದ್ದರ ಜಮೀನನ್ನು ವಿಲೇವಾರಿ (ಮಾರಾಟ) ಮಾಡಲು ಸದರಿ ಜಿ.ಆ್ಯಂಡ್.ಡಬ್ಲ್ಯೂ ಅರ್ಜಿಯನ್ನು ದಾಖಲಿಸಿದ್ದು ಇರುತ್ತದೆ. ಸದರಿ ಅರ್ಜಿಗೆ ಯಾರದ್ದಾದರೂ ಯಾವುದೇ ರೀತಿಯ ತಕರಾರು ಇದ್ದಲ್ಲಿ ದಿನಾಂಕ : 27/04/2026 ರಂದು ಬೆಳಿಗ್ಗೆ 11-00 ಘಂಟೆಗೆ ತಮ್ಮ ತಕರಾರುಗಳನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರಪಡಿಸಬಹುದು. ಒಂದು ವೇಳೆ ಯಾವುದೇ ರೀತಿಯ ತಕರಾರುಗಳು ಇಲ್ಲದೇ ಇದ್ದ ಪಕ್ಷದಲ್ಲಿ ಯಾರದು ತಕರಾರು ಇಲ್ಲವೆಂದು ಸದರಿ ಪ್ರಕರಣವನ್ನು ಇತ್ಯರ್ಥ ಪಡಿಸಲಾಗುವುದು.

ಸ್ಥಳ : ಕಲಘಟಗಿ
ದಿನಾಂಕ : 08/04/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶೀರಸ್ತೆದಾರರು
(ಹಿರಿಯ ದಿವಾಣಿ ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ಕಲಘಟಗಿ)
ಸಹಿ/- (ಶ್ರೀ ಬಿ. ಎ. ಚಿಕ್ಕಮಠ)
ವಕೀಲರು, ಕಲಘಟಗಿ

ಕ್ರಿ. ಮಿ. ನಂ : 50/2026
ಮಾನ್ಯ ದಿವಾಣಿ ನ್ಯಾಯಾಧೀಶರು, ಜೆ.ಎಮ್.ಎಫ್.ಸಿ ನ್ಯಾಯಾಲಯ ಕಲಘಟಗಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಶ್ರೀ ಸಚಿನ ತಂದೆ ಸಂಗಯ್ಯ ಹಿರೇಮಠ

ವಿರುದ್ಧ

ಎದುರುಗಾರರು : ಮೇ॥ ತಹಶೀಲ್ದಾರರು, ಹಾಗೂ ಜನನ ವ ಮರಣ ನೋಂದಣಿ ಅಧಿಕಾರಿಗಳು, ಕಲಘಟಗಿ ಹಾಗೂ ಇನ್ನೊಬ್ಬರು

ಸೈಟೇಶನ

ಮೇಲ್ಕಾಣಿಸಿದ ಪ್ರಕರಣವನ್ನು ಅರ್ಜಿದಾರನ ತಾಯಿಯಾದ ಶ್ರೀಮತಿ ದ್ರಾಕ್ಷಾಯಿಣಿ ಕೋಂ ಸಂಗಯ್ಯ ಹಿರೇಮಠ, ಇವರು ದಿನಾಂಕ : 15/09/1997 ರಂದು ಕಲಘಟಗಿ ತಾಲೂಕ ಹಿಂಡಸಗೇರಿ ಗ್ರಾಮದಲ್ಲಿ ಮರಣ ಹೊಂದಿದ್ದು ಇರುತ್ತದೆ ಸದರಿಯವರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಸದರಿ ಪ್ರಕರಣವನ್ನು ದಾಖಲ ಮಾಡಿದ್ದು ಇರುತ್ತದೆ. ಪೋತಿಯವರಿಗೆ ಯಾರಾದರೂ ಸರಳ ವ ಸಮೀಪದ ವಾರಸುದಾರರು ಹಾಗೂ ಇತರರಿಗೆ ಯಾವುದೇ ರೀತಿಯ ತಕರಾರು ಇದ್ದಲ್ಲಿ ದಿನಾಂಕ : 29/04/2026 ರಂದು ಬೆಳಿಗ್ಗೆ 11-00 ಗಂಟೆಗೆ ತಮ್ಮ ತಮ್ಮ ತಕರಾರನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರಪಡಿಸಬಹುದು ಇಲ್ಲದೇ ಹೋದಲ್ಲಿ ಯಾರದ್ದು ತಕರಾರು ಇಲ್ಲವೆಂದು ಸದರಿ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು.

ಸ್ಥಳ : ಕಲಘಟಗಿ
ದಿನಾಂಕ : 10/04/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶೀರಸ್ತೆದಾರರು
(ದಿವಾಣಿ (ಕಿ.ವಿ.) ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ ಕಲಘಟಗಿ)
ಸಹಿ/- (ಶ್ರೀ ಆರ್. ವಾಯ್. ರೊಳ್ಳಿ)
ಅರ್ಜಿದಾರರ ಪರ ವಕೀಲರು

ಪಿ. ಆಂಡ್ ಎಸ್.ಸಿ. ನಂ: 2/2026
ಮೆ॥ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನವಲಗುಂದ ಇವರ ನ್ಯಾಯಾಲಯದಲ್ಲಿ ನವಲಗುಂದ

ಅರ್ಜಿದಾರರು : 1) ಶ್ರೀಮತಿ ಸವಿತಾ ಕೋಂ. ಮಹಾಂತೇಶ ಶಲವಡಿ ಹಾಗೂ ಇತರರು

ವಿರುದ್ಧ

ಎದುರುಗಾರರು : ಯಾರೂ ಇಲ್ಲಾ

ದಿವಾಣಿ ಪ್ರಕ್ರಿಯಾ ಸಂಹಿತೆ 1908 ರ ಆದೇಶ 5, ನಿಯಮ 20(1ಎ) ಅಡಿಯಲ್ಲಿ ಸಾರ್ವಜನಿಕ ನೋಟೀಸು

1ನೇ ಅರ್ಜಿದಾರಳ ಗಂಡ ಹಾಗೂ 2ನೇ ಅರ್ಜಿದಾರನ ತಂದೆಯಾದ ಮಹಾಂತೇಶ ಬಸವರಾಜ ಶಲವಡಿ ಇವರು ದಿ. 29/09/2025 ರಂದು ಪೋತಿಯಾಗಿದ್ದು, ಸದರಿಯವರಿಗೆ ಅರ್ಜಿದಾರರು ಕಾನೂನುಬದ್ಧ ಉತ್ತರಾಧಿಕಾರಿಗಳು ಇರುವುದಾಗಿ ಉತ್ತಾರಾಧಿಗಳ ಪ್ರಮಾಣ ಪತ್ರವನ್ನು ಪಡೆಯಲು ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ಯಾರದಾದರೂ ತಂಟೆ ತಕರಾರು ಇದ್ದಲ್ಲಿ ಪ್ರಕರಣದ ಮುದ್ದತ್ತಿನ ದಿನಾಂಕವಾದ 17/06/2026 ರಂದು ಬೆಳಿಗ್ಗೆ 10-30 ಗಂಟೆಗೆ ಸ್ವತಃ ವ ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಯಾರದೂ ತಕರಾರು ಬರದೇ ಇದ್ದಲ್ಲಿ ಪ್ರಕರಣವನ್ನು ಏಕತರ್ಫಿ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಈ ಹೊತ್ತು ನ್ಯಾಯಾಲಯದ ಮೊಹರನೊಂದಿಗೆ ಹಾಗೂ ಆದೇಶದೊಂದಿಗೆ ಕೊಡಲ್ಪಟ್ಟಿರುತ್ತದೆ.

ನವಲಗುಂದ
ದಿನಾಂಕ: 16/04/2026

ಸಹಿ/- ಶಿರಸ್ತೇದಾರರು,
ದಿವಾಣಿ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ನವಲಗುಂದ
ಸಹಿ/- (ಶ್ರೀ ಆರ್.ಎಮ್. ರಮಜೀನಿ)
ಅರ್ಜಿದಾರರ ಪರ ನ್ಯಾಯವಾದಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ, ತಾಲೂಕು ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ.

ಸಂಖ್ಯೆ: ತಾಸಾಆ/ಗುಂ/ನಾ.ಕ್ಲಿ.ಟೆಂ/01/2026-27. ದಿನಾಂಕ :08-04-2026

ಟೆಂಡರ್ ಆಧಿಸೂಚನೆ

(ಇ-ಪ್ರೊಕ್ಯೂಮೆಂಟ್ ಮುಖಾಂತರ-**kppp.karnataka.gov.in**)

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ ಇಲ್ಲಿ ಖಾಲಿಯಿರುವ 47 ಗ್ರೂಪ್ ಡಿ ಹುದ್ದೆಗಳಲ್ಲಿ ಶೇ 40% ರಷ್ಟು ಅಂದರೆ 18 ನಾನ್ಕ್ಲಿನಿಕ್ ಹುದ್ದೆಗಳ ಸೇವೆಯನ್ನು 2026-27 ನೇ ಸಾಲಿಗಾಗಿ ಟೆಂಡರು ಕಾರ್ಯಾದೇಶ ನೀಡಿದ ದಿನಾಂಕ ದಿಂದ 31-03-2027ರ ವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರಂತೆ ನೊಂದಾಯಿತ ಸಂಸ್ಥೆಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ವಿವರಗಳು ಈ ಕೆಳಕಂಡಂತಿರುತ್ತವೆ.

ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಸಂಖ್ಯೆ:ತಾಸಾಆ/ಗುಂ/ನಾ.ಕ್ಲಿ.ಟೆಂ/01/2026-27. ದಿನಾಂಕ: 08-04-2026
ಅ. ಟೆಂಡರ್ ಸೇವೆಯ ಅಂದಾಜು ಮೌಲ್ಯ	ರೂ 47,27,687/- (ನಲವತ್ತಾ ಏಳು ಲಕ್ಷದ ಇಪ್ಪತ್ತೇಳು ಸಾವಿರದ ಆರು ನೂರ ಎಂಬತ್ತೇಳು ರೂಪಾಯಿಗಳು ಮಾತ್ರ).
ಆ. ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ 2%	ರೂ. 94,554/- (ತೊಂಬತ್ತ ನಾಲ್ಕು ಸಾವಿರದ ಐದು ನೂರ ಐವತ್ತ ನಾಲ್ಕು ರೂಪಾಯಿಗಳು ಮಾತ್ರ)
ಟೆಂಡರ್ ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ	13-04-2026
ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	27-04-2026 ಸಂಜೆ 4.00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	29-04-2026 ಬೆಳಗ್ಗೆ 11.00 ಗಂಟೆಗೆ
ಹಣಕಾಸು ಬಿಡ್ ತೆರೆಯುವ ದಿನಾಂಕ	06-05-2026 ಬೆಳಗ್ಗೆ 11.00 ಗಂಟೆಗೆ
ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ:	ಮುಖ್ಯ ವೈದ್ಯಾಧಿಕಾರಿ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ- 571111. e-mail: tlhgundlupet@gmail.com Phone: 08229-222205

ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ರಜಾ ದಿನಗಳನ್ನು ಹೊರತು ಪಡಿಸಿ ಮಾಹಿತಿಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/-
ಮುಖ್ಯ ವೈದ್ಯಾಧಿಕಾರಿಗಳು
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ.

ಸಂ: ವಾ.ಸ.ಸಂ.ಇ:ಚಾ.ನಗರ:48:2026-27.

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು

ಸಿಆರ್‌ಎಲ್.ಎಮ್.ಸಿ. ಸಂಖ್ಯೆ : 152/2026

ಅರ್ಜಿದಾರರು : ಹರಿಜನ ಪರಶುರಾಂ ಮತ್ತು ಇತರರು

ವಿರುದ್ಧ

ಎದುರುದಾರರು : ಮಾನ್ಯ ಮುಖ್ಯಾಧಿಕಾರಿಗಳು/ ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಪುರಸಭೆ ಕುರೆಕುಪ್ಪ

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ಮುತ್ತಜ್ಜಿಯಾದ ಹನುಮಕ್ಕ ಗಂಡ ಹರಿಜನ ದೊಡ್ಡಪ್ಪ ಇವರು ದಿನಾಂಕ: 06-09-1970 ರಂದು ಕುರೆಕುಪ್ಪ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 25-05-2026 ಬೆಳಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಎಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು.

ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 10-4-2026 .ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಹಿ/- ಸೋಮಶೇಖರ ಹೆಚ್.
ಅರ್ಜಿದಾರರ ಪರ ವಕೀಲರು, ಸಂಡೂರು

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು

ಸಿಆರ್‌ಎಲ್.ಎಮ್.ಸಿ. ಸಂಖ್ಯೆ : 153/2026

ಅರ್ಜಿದಾರರು : ಹರಿಜನ ಪರಶುರಾಂ ಮತ್ತು ಇತರರು

ವಿರುದ್ಧ

ಎದುರುದಾರರು : ಮಾನ್ಯ ಮುಖ್ಯಾಧಿಕಾರಿಗಳು/ ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಪುರಸಭೆ ಕುರೆಕುಪ್ಪ

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ಅಜ್ಜನಾದ ಹೊನ್ನೂರಪ್ಪ ತಂದೆ ಹರಿಜನ ದೊಡ್ಡಪ್ಪ ಇವರು ದಿನಾಂಕ: 14-08-1989 ರಂದು ಕುರೆಕುಪ್ಪ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 25-05-2026 ಬೆಳಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಎಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು.

ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 10-4-2026 .ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಹಿ/- ಸೋಮಶೇಖರ ಹೆಚ್.
ಅರ್ಜಿದಾರರ ಪರ ವಕೀಲರು, ಸಂಡೂರು

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು

ಸಿಆರ್‌ಎಲ್.ಎಮ್.ಸಿ. ಸಂಖ್ಯೆ : 154/2026

ಅರ್ಜಿದಾರರು : ಹರಿಜನ ಪರಶುರಾಂ ಮತ್ತು ಇತರರು

ವಿರುದ್ಧ


ಎದುರುದಾರರು : ಮಾನ್ಯ ಮುಖ್ಯಾಧಿಕಾರಿಗಳು/ ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಪುರಸಭೆ ಕುರೆಕುಪ್ಪ

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ಮುತ್ತಜ್ಜನಾದ ಹರಿಜನ ದೊಡ್ಡಪ್ಪ ತಂದೆ ಗಂಗಪ್ಪ ಇವರು ದಿನಾಂಕ: 24-05-1988 ರಂದು ಕುರೆಕುಪ್ಪ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರಾದರು ಯಾವುದೇ ರೀತಿಯ ತಂಟೆ-ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 25-05-2026 ಬೆಳಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಎಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು.

ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 10-4-2026 .ರಂದು ಕೊಡಲ್ಪಟ್ಟಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಸಹಿ/- ಸೋಮಶೇಖರ ಹೆಚ್.
ಅರ್ಜಿದಾರರ ಪರ ವಕೀಲರು, ಸಂಡೂರು



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	5	4	0	1	9	+1.067
ಆರ್‌ಸಿಬಿ	5	4	1	0	8	+1.503
ರಾಜಸ್ಥಾನ	5	4	1	0	8	+0.889
ಹೈದರಾಬಾದ್	5	2	3	0	4	+0.576
ದಿಲ್ಲಿ	4	2	2	0	4	+0.322
ಗುಜರಾತ್	4	2	2	0	4	-0.029
ಲಖನೌ	5	2	3	0	4	-0.804
ಚೆನ್ನೈ	5	2	3	0	4	-0.846
ಮುಂಬೈ	5	1	4	0	2	-1.076
ಕೆಕೆಆರ್	5	0	4	1	1	-1.383

ಹಸಿರು ಜೆರ್ಸಿಯಲ್ಲಿ ಆರ್‌ಸಿಬಿ | ಭರವಸೆಯಲ್ಲಿ ರಜತ್ ಪಡೆ | ದಿಲ್ಲಿಗೆ ಗೆಲುವಿನ ತವಕ

ಇಂದು ಕ್ಯಾಪಿಟಲ್ಸ್ Vs ಆರ್‌ಸಿಬಿ

ಬೆಂಗಳೂರು: ವಿಜಯದ ಓಟದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತನ್ನ ನಾಗಾಲೋಟವನ್ನು ಹಸಿರು ಜೆರ್ಸಿ ಪಂದ್ಯಕ್ಕೆ ವಿಸ್ತರಿಸುವ ವಿಶ್ವಾಸದಲ್ಲಿದೆ. ಸೋಲಿನಿಂದ ಹೊರಬರಲು ಯತ್ನಿಸುತ್ತಿರುವ ದಿಲ್ಲಿ ಕ್ಯಾಪಿಟಲ್ಸ್ ತಂಡವು ರಜತ್ ಪಡೆಯನ್ನು ಶನಿವಾರದ ಸೂಪರ್ ಕದನಗಳ ಮೊದಲ ಪಂದ್ಯದಲ್ಲಿ ಎದುರಿಸಲಿದೆ.

ಈಗಾಗಲೇ ಪಂದ್ಯಾವಳಿಯಲ್ಲಿ ಭಾರೀ ಮುನ್ನಡೆ ಸಾಧಿಸಿರುವ ಬೆಂಗಳೂರು ಅಗ್ರ ಎರಡರಲ್ಲೇ ಕಾಣಿಸಿಕೊಂಡಿದೆ. ದಿಲ್ಲಿ ಕ್ಯಾಪಿಟಲ್ಸ್ ಸತತ ಸೋಲಿನೊಂದಿಗೆ ಹಿನ್ನಡೆ ಅನುಭವಿಸಿದೆ. ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡರಲ್ಲೂ ಅಲ್ಪ ಹಿನ್ನಡೆ ಅನುಭವಿಸಿರುವ ದಿಲ್ಲಿ ಕ್ಯಾಪಿಟಲ್ಸ್ ಸಮತೋಲಿತ ಬೆಂಗಳೂರು ತಂಡವನ್ನು ಎದುರಿಸಲು ಸಜ್ಜಾಗಿದೆ.

ಶುಕ್ರವಾರದಂದು ಯಥಾಪ್ರಕಾರ ಅಭ್ಯಾಸ ಜರುಗಿತು. ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್ ಮತ್ತೊಮ್ಮೆ ಅಬ್ಬರದ ಬ್ಯಾಟಿಂಗ್ ಮಾಡಿದರು. ಇತ್ತ ದಿಲ್ಲಿ ಪರ ಕೆಎಲ್ ರಾಹುಲ್ ಬ್ಯಾಟಿಂಗ್ ಮಾಡುತ್ತಿದ್ದರು. ಕಳೆದ ಬಾರಿ ಬೆಂಗಳೂರಲ್ಲಿ ಪಂದ್ಯ ನಡೆದಾಗ ರಾಹುಲ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಪಂದ್ಯ ಗೆಲ್ಲಿಸಿದ್ದರು.

ಆರ್‌ಸಿಬಿಗೆ ಆತ್ಮವಿಶ್ವಾಸ: ಹೈದರಾಬಾದ್, ಚೆನ್ನೈ, ಲಖನೌ ಹೀಗೆ ಬಂದ ತಂಡಗಳನ್ನೆಲ್ಲಾ ತವರಿನಲ್ಲಿ ಸೋಲಿಸಿರುವ ಬೆಂಗಳೂರು ಎಲ್ಲಾ ಪಂದ್ಯಗಳಲ್ಲಿ ಏಕಪಕ್ಷೀಯವಾಗಿ ಮೇಲುಗೈ ಸಾಧಿಸಿದೆ. ರಾಜಸ್ಥಾನ ಪಂದ್ಯದ ನಂತರ ಪುಟಿದೆದ್ದಿರುವ ರಜತ್ ಪಡೆ ಬಲಿಷ್ಠ ಬ್ಯಾಟಿಂಗ್ ಹಾಗೂ ಅನುಭವಿ ಬೌಲಿಂಗ್ ಬಳಗವನ್ನು ಹೊಂದಿದೆ. ರಜತ್ ಪಾಟಿದಾರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವಾಸ ಹೆಚ್ಚಿಸಿದ್ದಾರೆ. ಸಾಲ್ಟ್ ಕೈಜೋಡಿಸಬೇಕಿದೆ. ವಿರಾಟ್ ಕೊಹ್ಲಿ ಮೊದಲ ಪಂದ್ಯದಿಂದಲೂ ಆಕ್ರಮಣಕಾರಿ ಬ್ಯಾಟಿಂಗ್ ಮಾಡುತ್ತಿರುವುದು ತಂಡಕ್ಕೆ ಆನೆ ಬಲ. ತಂಡದಲ್ಲಿ ಹೆಚ್ಚುವರಿ ಬ್ಯಾಟರ್‌ಗಳಿದ್ದಾರೆ. 7 ವಿಕೆಟ್ ಬಿದ್ದರೂ ಸಿಕ್ಸರ್ ಬಾರಿಸುವ ಸಾಮರ್ಥ್ಯ ಹೊಂದಿರುವುದೇ ತಂಡದ ದೊಡ್ಡ ಬಲ.



ಪಿಚ್

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಿಚ್ ಸಿದ್ಧವಾಗಿತ್ತು. ಬೌಂಡರಿಗಳ ರೇಖೆ ಅಲ್ಪ ಹತ್ತಿರ ಇರುವುದರಿಂದ ಚಿನ್ನಸ್ವಾಮಿ ಕ್ರೀಡಾಂಗಣ ಯಾವಾಗಲೂ ಬ್ಯಾಟಿಂಗ್ ಸ್ನೇಹಿ ಪಿಚ್. ಹೆಚ್ಚಿನ ಬೌನ್ಸ್ ಇರುತ್ತೆ, ಬ್ಯಾಟ್‌ಗೆ ನೇರವಾಗಿ ಬರುತ್ತದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಅಲ್ಪ ಲಾಭ ಪಡೆಯಬಹುದು. ಇಬ್ಬನಿ ಕಾಟವೂ ಹೆಚ್ಚು ಇರಲ್ಲ, ಹೀಗಾಗಿ ಮೊದಲು ಬೌಲಿಂಗ್ ಮಾಡುವ ತಂಡ ಗೆಲ್ಲುವ ಸಾಧ್ಯತೆ ಹೆಚ್ಚು ಅನ್ನುತ್ತಾರೆ ಎಕ್ಸಪರ್ಟ್‌ಗಳು.

ಬೌಲಿಂಗ್‌ನಲ್ಲಿ ಕೃಣಾಲ್, ಸುಯಶ್ ಸ್ಪಿನ್ ವಿಭಾಗದಲ್ಲಿ ಮಿಂಚಿದರೆ, ಡಫಿ, ಭುವನೇಶ್ವರ್ ಕುಮಾರ್ ಸೇರಿದಂತೆ ಪ್ರಮುಖರು ವಿಶ್ವಾಸ ಹೆಚ್ಚಿಸಿದ್ದಾರೆ. ಕಳೆದ ಪಂದ್ಯದಲ್ಲಿ ಹ್ಯಾಜೆಲ್ವುಡ್ ಮಾರಕ ಬೌಲಿಂಗ್ ದಾಳಿ ಮಾಡಿದ್ದರು. ತವರಲ್ಲಿ ಯುವ ವೇಗಿ ರಸಿಖ್ ಸಲಾಂ ಕೂಡ ಮಿಂಚಿರುವುದು ವಿಶ್ವಾಸ ಹೆಚ್ಚಿಸಿದೆ.

ದಿಲ್ಲಿಗೆ ಗೆಲುವಿನ ಆಸೆ: ಇತ್ತ ದಿಲ್ಲಿ ತಂಡ ಲಯಕ್ಕಾಗಿ ಪರದಾಡುತ್ತಿದೆ. ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸುತ್ತಿದೆ. ನಟರಾಜನ್, ಮುಖೇಶ್ ಮಿಂಚಿದ್ದಾರೆ. ಸ್ಪಿನ್ನರ್‌ಗಳು ಅಲ್ಪ ದುಬಾರಿಯಾಗಿದ್ದಾರೆ. ರಾಹುಲ್ ಒಂದು ಪಂದ್ಯದಲ್ಲಿ ಅತ್ಯುತ್ತಮ ಬ್ಯಾಟಿಂಗ್ ಮಾಡಿದ್ದಾದರೂ ನಿರೀಕ್ಷಿತ ಪ್ರದರ್ಶನ ಪ್ರತಿ ಪಂದ್ಯದಲ್ಲೂ ಬಂದಿಲ್ಲ. ನಿಸ್ಸಂಕಾ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದ್ದಾರೆ. ಸಮೀರ್ ರಿಜ್ವಿ, ಅಕ್ಷರ್ ಪಟೇಲ್ ಕೂಡ ಅಲ್ಪ ಕೊಡುಗೆ ನೀಡಿದ್ದಾರೆ. ಆದರೆ ಫಿನಿಶಿಂಗ್‌ನಲ್ಲಿ ದಿಲ್ಲಿ ಹಿನ್ನಡೆ ಅನುಭವಿಸಿದೆ. ಎರಡು ಪಂದ್ಯಗಳಲ್ಲಿ ಕೊನೆಯ ಕ್ಷಣದ ಸೋಲು ಕಂಡಿದೆ. ಎರಡು ಗೆಲುವು ಹಾಗೂ ಎರಡು ಸೋಲುಗಳೊಂದಿಗೆ ದಿಲ್ಲಿ ಸಮಾನ ಫಲಿತಾಂಶ ಹೊಂದಿದ್ದು, ಚೇತರಿಸಿಕೊಳ್ಳುವ ತವಕದಲ್ಲಿದೆ.

ಹಸಿರು ಜೆರ್ಸಿಯಲ್ಲಿ ಆರ್‌ಸಿಬಿ: ಪಂದ್ಯದಲ್ಲಿ ಆರ್‌ಸಿಬಿ ತನ್ನ ಪ್ರಸಿದ್ಧ ಹಸಿರು ಜೆರ್ಸಿಯನ್ನು ಧರಿಸುವ ಮೂಲಕ ಗ್ರೀನ್ ಇನಿಶಿಯೇಟಿವ್' ಸಂದೇಶವನ್ನು ಹರಡಲಿದೆ. ಈಗಾಗಲೇ 8 ಅಂಕಗಳೊಂದಿಗೆ ಉತ್ತಮ ಪ್ರದರ್ಶನ ನೀಡುತ್ತಿರುವ ಆರ್‌ಸಿಬಿ, ಟೂರ್ನಿಯಲ್ಲಿ ತನ್ನ ಪ್ರಾಬಲ್ಯವನ್ನು ಮತ್ತಷ್ಟು ಬಲಪಡಿಸಲು ಎದುರು ನೋಡುತ್ತಿದೆ. ಹೀಗಿರುವಾಗ ಪ್ರತಿ ವರ್ಷದಂತೆ ಈ ಬಾರಿಯೂ ಮಧ್ಯಾಹ್ನದ ಪಂದ್ಯಕ್ಕೆ ಆರ್‌ಸಿಬಿ ಹಸಿರು ಜೆರ್ಸಿಯಲ್ಲಿ ಕಾಣಿಸಿಕೊಳ್ಳಲಿದೆ.

ಮತ್ತೆ ಮಿಂಚಿದ್ದು ಖುಷಿ ವಿಚಾರ: ಜೋಶ್

ಗಾಯದ ಬಳಿಕ ಮತ್ತೆ ತಂಡಕ್ಕೆ ಮರಳಿ ಕೊಡುಗೆ ನೀಡುವುದು ಸಂತೋಷಕರ. ಆ ಸಮಯದಲ್ಲಿ ರಿಕವರಿ ಪ್ರಕ್ರಿಯೆಯ ಮಹತ್ವವನ್ನು ಅರಿತುಕೊಂಡೆ, ಎಂದು ತಂಡದ ಪ್ರಮುಖ ವೇಗಿ ಜೋಶ್ ಹ್ಯಾಜೆಲ್ವುಡ್ ಹೇಳಿದರು. ಪಂದ್ಯಕ್ಕೂ ಮುನ್ನ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ತಂಡದ ನಾಯಕ ರಾಜತ್ ಪಾಟಿದಾರ್ ನಾಯಕತ್ವದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪಾಟಿದಾರ್ ಶಾಂತವಾಗಿ ಆಟವನ್ನು ನಿಯಂತ್ರಿಸುತ್ತಿದ್ದಾರೆ ಮತ್ತು ದಿನದಿಂದ ದಿನಕ್ಕೆ ಉತ್ತಮ ನಾಯಕನಾಗಿ ಬೆಳೆದಿದ್ದಾರೆ, ಎಂದರು.

ಕೊಹ್ಲಿ ನಮಗೆ ಬಲ ತರುತ್ತಾರೆ

ಹಿಂದಿನ ಪಂದ್ಯದಲ್ಲಿ ಮೊದಲ ಬಾರಿ ಇಂಪ್ಯಾಕ್ಟ್ ಆಟಗಾರನಾಗಿ ಆಡಿದ ವಿರಾಟ್ ಕೊಹ್ಲಿ ಕುರಿತು ಮಾತನಾಡಿದ ಅವರು, ಅವರು ಖಂಡಿತ ಆಡುತ್ತಾರೆ. ಮೈದಾನದಲ್ಲಿ ಅವರ ಎನರ್ಜಿ ಮತ್ತು ಫೀಲ್ಡಿಂಗ್ ತಂಡಕ್ಕೆ ಮಹತ್ವದ ಬಲ, ಎಂದರು. ಟಿ20 ಕ್ರಿಕೆಟ್‌ನಲ್ಲಿ ಯಶಸ್ಸಿನ ಮಂತ್ರದ ಬಗ್ಗೆ ಮಾತನಾಡಿದ ಜೋಶ್, ನನ್ನ ಶಕ್ತಿ ಎಂದರೆ ನಿರಂತರವಾಗಿ ಕಠಿಣ ಲೆಂತ್‌ನಲ್ಲಿ ಬೌಲಿಂಗ್ ಮಾಡುವುದು. ಒತ್ತಡದ ಸಂದರ್ಭದಲ್ಲಿಯೂ ನಿಖರವಾಗಿ ಅನುಷ್ಠಾನಗೊಳಿಸುವುದು ಮುಖ್ಯ ಎಂದು ಹೇಳಿದರು.

ಪಂದ್ಯದ ವಿವರ

ಆರ್‌ಸಿಬಿ-ದಿಲ್ಲಿ ಕ್ಯಾಪಿಟಲ್ಸ್
ಯಾವಾಗ: ಶನಿವಾರ, **ಎಲ್ಲಿ:** ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು, **ಸಮಯ:** ಮಧ್ಯಾಹ್ನ 3:30

ಕಿರುಸುದ್ದಿ

ಬ್ಯಾಡ್ಮಿಂಟನ್: ಉಬರ್ ಕಪ್‌ಗಿಲ್ಲ ತ್ರಿಸಾ ಜಾಲಿ-ಗಾಯತ್ರಿ



ಹೊಸದಿಲ್ಲಿ: ಭಾರತದ ಪ್ರಮುಖ ಮಹಿಳಾ ಡಬಲ್ಸ್ ಜೋಡಿ ತ್ರಿಸಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಮುಂಬರುವ ಉಬರ್ ಕಪ್ ಫೈನಲ್ಸ್‌ನಲ್ಲಿ ಭಾಗವಹಿಸುವುದಿಲ್ಲ ಎಂದು ಭಾರತೀಯ ಬ್ಯಾಡ್ಮಿಂಟನ್ ಸಂಘ ಘೋಷಿಸಿದೆ.

ಇತ್ತೀಚಿನ ಬಿ ಡಬ್ಲ್ಯು ಎಫ್ ರ‍್ಯಾಂಕಿಂಗ್‌ನಲ್ಲಿ 30ನೇ ಸ್ಥಾನದಲ್ಲಿರುವ ಈ ಜೋಡಿ, ಸ್ವಿಸ್ ಓಪನ್ ವೇಳೆ ಟ್ರಿಸಾ ಭುಜದ ಗಾಯಕ್ಕೆ ಒಳಗಾದ ನಂತರದಿಂದ ಆಡುತ್ತಿಲ್ಲ. ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಶಿಪ್‌ಗೆ ಸಿದ್ಧರಾಗಿದ್ದರೂ, ಸ್ಪರ್ಧೆಗೆ ಮುನ್ನವೇ ತ್ರಿಸಾ ಮತ್ತೆ ಗಾಯಗೊಂಡರು. ಈ ಬಗ್ಗೆ ಮಾತನಾಡಿರುವ ಭಾರತದ ಡಬಲ್ಸ್ ಕೋಚ್ ಬಿ ಸುಮೀತ್ ರೆಡ್ಡಿ, ತ್ರಿಸಾ ಅಭ್ಯಾಸದ ವೇಳೆ ಸಂಗಾತಿಯ ಕಾಲಿಗೆ ತಗುಲಿ ಕಾಲಿಗೆ ಗಾಯ ಮಾಡಿಕೊಂಡಿದ್ದಾರೆ. ಇದು ದೊಡ್ಡ ಗಾಯವಲ್ಲ, ನಾಲ್ಕು ವಾರಗಳಲ್ಲಿ ಚೇತರಿಸಿಕೊಳ್ಳುವ ಸಾಧ್ಯತೆ ಇದೆ. ಅವರ ಬದಲಿಗೆ ಶ್ರುತಿ ಮಿಶ್ರಾ ಮತ್ತು ಪ್ರಿಯಾ ಕೊಂಜೆಂಗ್ಬಾಮ್ ಜೋಡಿಯನ್ನು ತಂಡಕ್ಕೆ ಸೇರಿಸಲಾಗಿದೆ. ಈ ಸ್ಪರ್ಧೆ ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ಏಪ್ರಿಲ್ 24ರಿಂದ ಮೇ 3ರವರೆಗೆ ನಡೆಯಲಿದೆ. ಇನ್ನೊಂದು ಡಬಲ್ಸ್ ಜೋಡಿಯಾಗಿ ಕವಿಪ್ರಿಯಾ ಸೆಲ್ವಂ ಮತ್ತು ಸಿಮ್ರಾನ್ ಸಿಂಗ್ ಕೂಡ ತಂಡದಲ್ಲಿದ್ದಾರೆ.

ಭಾರತ ತಂಡದಲ್ಲಿ ಯಾರ‍್ಯಾರು?: ತಂಡದ ನಾಯಕತ್ವವನ್ನು ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಪಿ ವಿ ಸಿಂಧು ವಹಿಸಲಿದ್ದಾರೆ. ಜೊತೆಗೆ ಯುವ ಆಟಗಾರ್ತಿಯರಾದ ಉನ್ನತಿ ಹೂಡಾ, ತನ್ವಿ ಶರ್ಮಾ, ದೇವಿಕಾ ಸಿಹಾಗ್ ಮತ್ತು ಇಶಾರಾಣಿ ಸಿಂಗಲ್ಸ್ ವಿಭಾಗದಲ್ಲಿ ತಂಡಕ್ಕೆ ಬಲ ತುಂಬಲಿದ್ದಾರೆ. ಇನ್ನೂ ಅನುಭವದ ದೃಷ್ಟಿಯಿಂದ ತನಿಷಾ ಕ್ರಾಸ್ಟೊ ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಹ್ಯಾಂಬರ್ಗ್ ಓಪನ್: ವೀರ ಚೋಟ್ರಾನಿ ಕ್ವಾರ್ಟರ್‌ಗೆ

ಹೊಸದಿಲ್ಲಿ: ಜರ್ಮನಿಯ ಹ್ಯಾಂಬರ್ಗ್‌ನಲ್ಲಿ ನಡೆಯುತ್ತಿರುವ ಸ್ಕ್ವ್ಯಾಶ್ ಹ್ಯಾಂಬರ್ಗ್ ಓಪನ್‌ನಲ್ಲಿ ಭಾರತದ ವೀರ ಚೋಟ್ರಾನಿ ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ್ದಾರೆ. ಪುರುಷರ ದ್ವಿತೀಯ ಸುತ್ತಿನಲ್ಲಿ ಜರ್ಮನಿಯ ಎಂಟನೇ ಸೀಡ್ ರಫೇಲ್ ಕ್ಯಾಂಡ್ರಾ ಅವರನ್ನು 11-8, 11-7, 11-7 ಅಂತರದಲ್ಲಿ ಸೋಲಿಸಿ ವೀರ ಮುಂದಿನ ಹಂತಕ್ಕೇರಿದರು. ಆದರೆ ಇತರ ಭಾರತೀಯ ಆಟಗಾರರಿಗೆ ಈ ಸುತ್ತಿನಲ್ಲಿ ನಿರಾಸೆ ಎದುರಾಯಿತು. ಐದನೇ ಸೀಡ್ ಅಭಯ್ ಸಿಂಗ್ ಇಂಗ್ಲೆಂಡ್‌ನ ಸ್ಯಾಮ್ ಟಾಡ್ ವಿರುದ್ಧ 9-11, 11-7, 4-11, 2-11 ಅಂತರದಲ್ಲಿ ಸೋತರು. ಏಳನೇ ಸೀಡ್ ರಮಿತ್ ಟಂಡನ್ ಹಂಗೇರಿಯ ಬಲಾಝು ಫಾರ್ಕಾಸ್ ವಿರುದ್ಧ 10-12, 11-4, 5-11, 9-11 ಅಂತರದಲ್ಲಿ ಸೋಲು ಕಂಡರು. ಮಹಿಳಾ ವಿಭಾಗದಲ್ಲಿ ಭಾರತದ ಮಾಜಿ ವಿಶ್ವ ನಂ.10 ಜೋಷ್ನಾ ಚಿನ್ನಪ್ಪ ನ್ಯೂಜಿಲ್ಯಾಂಡ್‌ನ ಎಂಟನೇ ಸೀಡ್ ಜೊಯೆಲ್ ಕಿಂಗ್ ವಿರುದ್ಧ 11-9, 11-7, 9-11, 11-4 ಅಂತರದಲ್ಲಿ ಸೋತು ಟೂರ್ನಿಯಿಂದ ಹೊರಬಂದರು.

ಪಂಜಾಬ್‌ಗೆ ಸತತ ನಾಲ್ಕನೇ ಗೆಲುವು | ಶ್ರೇಯಸ್ ಅಯ್ಯರ್ ಆರ್ಭಟ | ಮುಂಬೈಗೆ ಮತ್ತೆ ಸೋಲು

ಪ್ರಭಸಿಮ್ರನ್ ಪ್ರಾಬಲ್ಯದ ಮುಂದೆ ಮಂಕಾದ ಮುಂಬೈ



ಮುಂಬೈ: ಬಾನೆತ್ತರದ ಸಿಕ್ಸರ್‌ಗಳ ಮೂಲಕ ಮುಂಬೈ ಬೌಲರ್‌ಗಳ ಬೆವರಿಳಿಸಿದ ಪ್ರಭಸಿಮ್ರನ್ ಸಿಂಗ್ ಮತ್ತು ಶ್ರೇಯಸ್ ಅಯ್ಯರ್ ತವರಲ್ಲಿ ಹಾರ್ದಿಕ್ ಪಡೆಯನ್ನು ಸೋಲಿಸಿದರು.

ಆರಂಭಿಕ ಆಟಗಾರ(ಡಿಕಾಕ್) V/S ಆರಂಭಿಕ ಆಟಗಾರ (ಪ್ರಭಸಿಮ್ರನ್) ಪಂದ್ಯದಲ್ಲಿ ಪಂಜಾಬ್ 8 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ. ಇದರೊಂದಿಗೆ ಆರ್‌ಸಿಬಿ ತಂಡವನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿರುವ ಶ್ರೇಯಸ್ ಪಡೆ ಗೆಲುವಿನೋಟ ಮುಂದುವರಿಸಿದೆ. ಶುಕ್ರವಾರದ ಪಂದ್ಯದಲ್ಲಿ ಟಾಸ್ ಗೆದ್ದ ಬ್ಯಾಟಿಂಗ್ ಆಹ್ವಾನ ಕೊಟ್ಟ ಪಂಜಾಬ್ ಮುಂಬೈ ತಂಡವನ್ನು 195 ರನ್‌ಗೆ ತಡೆಯಿತು. ಡಿಕಾಕ್ ಶತಕ ಬಾರಿಸಿದರು. ನಮನ್ ಅರ್ಧಶತಕ ಬಾರಿಸಿದರು. ಅರ್ಶದೀಪ್ ಸಿಂಗ್ 3 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಪಂಜಾಬ್ 16.3 ಓವರ್‌ಗಳಲ್ಲೇ ಪಂದ್ಯ ಮುಗಿಸಿತು. ಪ್ರಭಸಿಮ್ರನ್ ಅಜೇಯ 80 ರನ್ ಬಾರಿಸಿದರೆ, ಶ್ರೇಯಸ್ ಅಯ್ಯರ್ 66 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಮುಂಬೈ ಪರ ಘಾಜ್ನೀಫರ್ 2 ವಿಕೆಟ್ ಪಡೆದುಕೊಂಡರು.

ಪ್ರಭಸಿಮ್ರನ್ ಸಿಂಗ್ ಪಂದ್ಯದ ಹೀರೋ ಅನ್ನಿಸಿಕೊಂಡರು. ಶ್ರೇಯಸ್ ಅಯ್ಯರ್ ಕುಡ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿದರು. ಇತ್ತ ಡಿಕಾಕ್ ಶತಕದಾಟವಾಡಿದರು. ಅರ್ಶದೀಪ್ ಗೆಲುವಿನಲ್ಲಿ ಮಿಂಚಿದರು.

ಪಂಜಾಬ್ ಅಬ್ಬರ: ಪಂಜಾಬ್ ಪವರ್‌ಪ್ಲೇನಲ್ಲಿ ಅಬ್ಬರಿಸಿತು. ಪ್ರಿಯಾಂಶ್ ಆರ್ಯ ಹಾಗೂ ಪ್ರಭಸಿಮ್ರನ್ ಸಿಂಗ್ ಬೌಂಡರಿ ಬಾರಿಸುವತ್ತ ಸಾಗಿದರು. ಆದಾಗ್ಯೂ ಘಾಜ್ನೀಫರ್ ಪ್ರಿಯಾಂಶ್‌ಗೆ ಪೆವಿಲಿಯನ್ ಹಾದಿ ತೋರಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಕೂಪರ್ ಕೊನೊಲಿ ಸೆಟ್ ಆಗಿ ಇನ್ನೇನು ಸ್ಫೋಟಕ ಹೊಡೆತಕ್ಕೆ ಮುಂದಾಗುವಷ್ಟರಲ್ಲಿ ಎರಡನೇ ವಿಕೆಟ್ ಪಡೆದರು ಘಾಜ್ನೀಫರ್. ಇಷ್ಟಾದರೂ ಪ್ರಭಸಿಮ್ರನ್ ಸಿಂಗ್ ಆರ್ಭಟ ನಿಲ್ಲಲಿಲ್ಲ. ಇಬ್ಬರ ಆಟದೊಂದಿಗೆ ಪಂಜಾಬ್ ಪವರ್‌ಪ್ಲೇನಲ್ಲಿ 60 ರನ್ ಗಳಿಸಿತು.

ಮಧ್ಯಮ ಓವರ್‌ಗಳಲ್ಲಿ: ಮಧ್ಯಮ ಕ್ರಮಾಂಕದಲ್ಲಿ ಬಂದ ಶ್ರೇಯಸ್ ಅಯ್ಯರ್ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. ಆದರೆ ಇನ್ನೊಂದು ಬದಿಯಲ್ಲಿ ಪ್ರಭಸಿಮ್ರನ್ ಆಟವೇ ನಡೆಯಿತು. ಬೌಂಡರಿಗಳೊಂದಿಗೆ ಅಬ್ಬರಿಸಿದ ಅವರು, ಪಂದ್ಯದ ಗತಿ ತಮ್ಮ ತಂಡದ ಪರ ಇಟ್ಟರು. 23 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿ ಅಬ್ಬರ ಮುಂದುವರಿಸಿದರು. ಕಳಪೆ ಫೀಲ್ಡಿಂಗ್ ಮಾಡಿದ ಮುಂಬೈ ಹಿನ್ನಡೆ ಅನುಭವಿಸಿತು. ಇತ್ತ ಸೆಟ್ ಆಗಿದ್ದ ಶ್ರೇಯಸ್ ಅಯ್ಯರ್ ಕೂಡ ಬೌಂಡರಿ ಬಾರಿಸುವತ್ತ ಸಾಗಿದರು. ಪ್ರಭಸಿಮ್ರನ್ ಬಾನೆತ್ತರದ ಸಿಕ್ಸರ್‌ಗಳೊಂದಿಗೆ ಮುಂಬೈಗೆ ಗೆಲುವಿನಿಂದ ದೂರ ಮಾಡಿದರು. ಶ್ರೇಯಸ್ ಅವರದ್ದೂ ಮಿಂಚಿನಾಟ. ಬೂಮ್ರಾ ಸೇರಿದಂತೆ ಪ್ರಮುಖ ಬೌಲರ್‌ಗಳನ್ನು ದಂಡಿಸಿ ಈ ಜೋಡಿ ಪಂದ್ಯವನ್ನು ಗೆಲ್ಲಿಸಿತು. ಪ್ರಭಸಿಮ್ರನ್ ಹಾಗೂ ಶ್ರೇಯಸ್ ಡೆತ್ ಓವರ್ ವರೆಗೂ ಪಂದ್ಯವನ್ನು ಬಿಡಲೇ ಇಲ್ಲ. ಶ್ರೇಯಸ್ 64ಕ್ಕೆ ವಿಕೆಟ್ ಕಳೆದುಕೊಂಡರೂ ಪ್ರಭಸಿಮ್ರನ್ ಪಂದ್ಯವನ್ನು ಗೆಲ್ಲಿಸಿದರು. ಒಟ್ಟು 39 ಎಸೆತ ಎದುರಿಸಿದ ಅವರು, 2 ಸಿಕ್ಸರ್ ಮತ್ತು 11 ಸ್ಫೋಟಕ ಬೌಂಡರಿಗಳೊಂದಿಗೆ ಮಿಂಚಿದರು.

ಸಂಕ್ಷಿಪ್ತ ಸ್ಕೋರ್:

ಮುಂಬೈ 20 ಓವರ್‌ಗಳಲ್ಲಿ 195/6: ಡಿಕಾಕ್ 112*, ನಮನ್ 50; ಅರ್ಶದೀಪ್ 22/3
ಪಂಜಾಬ್ 16.3 ಓವರ್‌ಗಳಲ್ಲಿ 198/3: ಪ್ರಭಸಿಮ್ರನ್ 80*, ಶ್ರೇಯಸ್ 66; ಘಾಜ್ನೀಫರ್ 31/2

ಕೊನೆಗೂ ಮಿಂಚಿದ ಕ್ಯಾಮರೋನ್ ಗ್ರೀನ್

ಅಹಮದಾಬಾದ್: ಕುಸಿದ ಕೆಕೆಆರ್‌ಗೆ ಕ್ಯಾಮರೋನ್ ಗ್ರೀನ್ ಆಸರೆ ಸಿಕ್ಕ ನಂತರ ಕೆಕೆಆರ್ ಸ್ಪರ್ಧಾತ್ಮಕ ಗುರಿ ನಿರ್ಮಿಸಲು ಸಾಧ್ಯವಾಯಿತು. ಗುಜರಾತ್ ತಂಡವನ್ನು ಎದುರಿಸಿದ್ದ ರಹಾನೆ ಪಡೆ ಸತತ ಸೋಲುಗಳ ನಂತರ ಕೊನೆಗೂ ಗ್ರೀನ್ ಆಸರೆ ಪಡೆಯಿತು. ಆದಾಗ್ಯೂ ದೊಡ್ಡ ಸ್ಕೋರ್‌ನತ್ತ ಸಾಗುತ್ತಿದ್ದ ತಂಡವನ್ನು ವೇಗಿಗಳು ತಡೆದ ನಂತರ 20 ಓವರ್‌ಗಳಲ್ಲಿ 180 ರನ್‌ಗಳಿಗೆ ಆಲೌಟ್ ಆಯಿತು.

ಅಹಮದಾಬಾದ್‌ನಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ಭಾರೀ ಆಘಾತಕ್ಕೊಳಗಾಯಿತು. ಕಳೆದ ಪಂದ್ಯಗಳಲ್ಲಿ ತೀರಾ ಹಿನ್ನಡೆ ಅನುಭವಿಸಿದ್ದ ಗ್ರೀನ್ (79, 55ಎ, 7ಬೌ, 4ಸಿ) ಉತ್ತಮ ಬ್ಯಾಟಿಂಗ್ ಮಾಡಿದ ನಂತರ ಸ್ಪರ್ಧೆ ನೀಡಬಹುದಾದ ಸ್ಕೋರ್ ನಿರ್ಮಿಸಿದೆ.

ಆರಂಭಿಕ ಕುಸಿತ: ಬ್ಯಾಟಿಂಗ್ ಆಹ್ವಾನ ಪಡೆದ ಕೋಲ್ಕತ್ತಾ ನೈಟ್ ರೈಡರ್ಸ್ ಆರಂಭಿಕ ಆಘಾತ ಎದುರಿಸಿತು. ಫಿನ್ ಆಲೆನ್ ಬದಲಿಗೆ ಕಣಕ್ಕಿಳಿದ ಸೈಫರ್ಟ್ ಸ್ಫೋಟಕ ಬ್ಯಾಟಿಂಗ್ ಮಾಡಲೆತ್ನಿಸಿದರು. ಆದರೆ ನಾಯಕ ರಹಾನೆ ಮಾತ್ರ ಮೊದಲ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಭರವಸೆಯ ಬ್ಯಾಟರ್ ರಘುವಂಶಿ ಬೌಂಡರಿಗಳೊಂದಿಗೆ ಅಬ್ಬರಿಸುವ ವಿಶ್ವಾಸ ತೋರಿಸಿದರೂ ಅವರಾಟ 8 ರನ್‌ಗೆ ಮಾತ್ರ ಸೀಮಿತವಾಗಿತ್ತು. ಸೈಫರ್ಟ್ ಆಟ 19 ರನ್‌ಗೆ ನಿಂತಿತು. ಮಧ್ಯಮ ಕ್ರಮಾಂಕದಲ್ಲಿ ಬಂದ ಗ್ರೀನ್ ಸೆಟ್ ಆಗುವತ್ತ ಸಾಗಿದರು. ಅಲ್ಲಿಗೆ ಪವರ್‌ಪ್ಲೇ ಮುಗಿಯಿತು. ಕೆಕೆಆರ್ 3 ವಿಕೆಟ್ ಕಳೆದುಕೊಂಡು 37 ರನ್‌ಗಳಿಸಿತ್ತು.

ಗ್ರೀನ್ ಆಸರೆ: ಮಧ್ಯಮ ಓವರ್‌ಗಳಲ್ಲಿ ಗ್ರೀನ್ ನಾನ್‌ಸ್ಟ್ರೈಕ್‌ನಲ್ಲಿ ನಿಲ್ಲುವಷ್ಟರಲ್ಲಿ ರೋಮನ್ ಪೊವೆಲ್, ಅಂಕುಲ್ ರಾಯ್ ಮತ್ತು ರಿಂಕು ಸಿಂಗ್ ಕೂಡ ವಿಕೆಟ್ ಒಪ್ಪಿಸಿದರು. ಸೆಟ್ ಆದ ಗ್ರೀನ್ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಸ್ಟ್ರೈಕ್‌ರೇಟ್ ಹಿಗ್ಗಿಸಿಕೊಂಡರು. ಗಗನದೆತ್ತರದ ಸಿಕ್ಸರ್ ಹಾಗೂ ಅಬ್ಬರದ ಬೌಂಡರಿಗಳೊಂದಿಗೆ ಮಿಂಚಿದರು. ಅಲ್ಲಿಗೆ ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು. ಕೆಕೆಆರ್ 120 ರನ್‌ಗಳಿಸಿತು.

ದಿಢೀರ್ ಕುಸಿತ: ಗ್ರೀನ್ ಸೆಟ್ ಆಗಿದ್ದರು. ರಮಣ್‌ದೀಪ್ ಬಂದ ತಕ್ಷಣಕ್ಕೆ ಬೌಂಡರಿಗಳೊಂದಿಗೆ ಅಬ್ಬರಿಸಿದರು. ಇನ್ನೇನು ಕೆಕೆಆರ್ ಡೆತ್ ಓವರ್‌ಗಳಲ್ಲಿ ರನ್ ಹೊಳೆ ಹರಿಸುತ್ತದೆ ಅನ್ನುವಷ್ಟರಲ್ಲಿ ಗುಜರಾತ್ ವೇಗಿಗಳು ಕಡಿವಾಣ ಹಾಕಿದರು. ಸಿರಾಜ್ ರಮಣ್‌ದೀಪ್ ವಿಕೆಟ್ ಪಡೆದರು. ಸುನಿಲ್ ನರೈನ್‌ಗೂ ಖೆಡ್ಡಾ ತೋಡಿದರು. ಬಂದ ಬ್ಯಾಟರ್‌ಗಳೆಲ್ಲರೂ ಕ್ಯಾಚ್ ಆದರು. ಗ್ರೀನ್‌ಗೆ ಅವಕಾಶ ಸಿಕ್ಕಾಗ ಒಂದೆರಡು ಬೌಂಡರಿಗಳನ್ನು ಬಾರಿಸಿದರು. ಕೊನೆಯ ಎರಡು ಓವರ್‌ಗಳಲ್ಲಿ 7 ರನ್ ಮಾತ್ರ ಬಂದವು. ಪವರ್‌ಪ್ಲೇನಲ್ಲಿ ಕೆಕೆಆರ್ 23 ರನ್‌ಗಳಿಸಿತು 4 ವಿಕೆಟ್ ಕಳೆದುಕೊಂಡಿತು.

ಗ್ರ್ಯಾಂಡ್‌ಮಾಸ್ಟರ್ ಸಾಧನೆ ಮೆಟ್ಟಿಲಲ್ಲಿದೆ ಸ್ಫೂರ್ತಿದಾಯಕ ಕತೆ

ವೈಶಾಲಿಯ ವಿಜಯದ ಕತೆ

ಚೆನ್ನೈ: ಮನೆಯಲ್ಲಿ ಕೂತು ಟಿವಿ ನೋಡುತ್ತಿದ್ದ ಬಾಲಕಿಯೊಬ್ಬಳಿಗೆ ಪಾಲಕರು ಚೆಸ್ ಕ್ಲಾಸಿಗೆ ಕಳುಹಿಸುತ್ತಾರೆ. ಚೆಸ್ ಎಂಬ ಚಾಣರಾಟಕ್ಕೆ ಬಿದ್ದ ಆಕೆ, ಮುಂದೊಂದು ದಿನ ಅತ್ಯುತ್ತಮ ಆಟಗಾರ್ತಿ ಆಗುತ್ತಾಳೆ. ಚದುರಂಗದಾಟದಲ್ಲಿ ದೊಡ್ಡ ಇತಿಹಾಸ ಹೊಂದಿದ ಭಾರತದಲ್ಲಿ ಅತ್ಯುತ್ತಮ ಆಟಗಾರ್ತಿ ಎಂಬ ಪಟ್ಟ ಕೂಡ ಪಡೆಯುತ್ತಾರೆ. ಇದು ಕ್ಯಾಂಡಿಡೇಟ್ಸ್ ಪಂದ್ಯಾವಳಿ ಗೆದ್ದ ಆರ್. ವೈಶಾಲಿ ಕತೆ!.

ಇತ್ತೀಚೆಗೆ ಮುಕ್ತಾಯಗೊಂಡ ಕ್ಯಾಂಡಿಡೇಟ್ಸ್ ಪಂದ್ಯಾವಳಿಯಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ಗೆಲುವು ಸಾಧಿಸಿದರು. ಚೆಸ್ ಲೋಕದಲ್ಲಿ ಭಾರತದ ಸಾರ್ವಭೌಮತ್ವ ಎತ್ತಿಹಿಡಿದ ಅವರು, ಈಗ ವಿಶ್ವ ಚಾಂಪಿಯನ್‌ಶಿಪ್ ಅರ್ಹತೆ ಗಿಟ್ಟಿಸಿಕೊಂಡರು. ಇದರೊಂದಿಗೆ ಡಿ. ಗುಕೇಶ್‌ನೊಂದಿಗೆ ವಿಶ್ವಚಾಂಪಿಯನ್ ಎಂಬ ಪಟ್ಟ ಕಟ್ಟಿಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ.

ವೈಶಾಲಿ ಗೆಲುವು, ಗೆಲುವಿಗೆ ಮಾತ್ರ ಸೀಮಿತವಲ್ಲ: ಚೆಸ್ ಆಟದ ರೋಚಕತೆ ಅರಿತ ವೈಶಾಲಿ, ಇತಿಹಾಸದ ಪುಟಗಳಲ್ಲಿ ಸೇರಿದ್ದಾರೆ. ಕ್ಯಾಂಡಿಡೇಟ್ಸ್ ಗೆಲುವು ಅವರ ವೈಯಕ್ತಿಕ ಸಾಧನೆಗೆ ಮಾತ್ರ ಸೀಮಿತವಾಗಿರಲಿಲ್ಲ, ಇದು ಲಕ್ಷಾಂತರ ಮಹಿಳಾ ಪಟುಗಳಿಗೆ ಪ್ರೇರಣೆ. ಭಾರತಕ್ಕೆ ಹೆಮ್ಮೆ ಮತ್ತು ವಿಶ್ವ ಚಾಂಪಿಯನ್‌ಶಿಪ್ ಗೆಲುವಿನ ನಿರೀಕ್ಷೆಯಾಗಿದೆ. ಕ್ಯಾಂಡಿಡೇಟ್ಸ್ ಗೆದ್ದ ಮೊದಲ ಭಾರತದ ಮಹಿಳೆ ಎಂಬ ಪಟ್ಟಕ್ಕೆ ತಕ್ಕಂತೆ ರೋಚಕ ಕಹಾನಿ ಹೊಂದಿದ್ದಾರೆ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ.

ಪ್ರಜ್ಞಾನಂದ ಅವರ ಅಕ್ಕನಿಂದ ಚಾಂಪಿಯನ್‌ವರೆಗೆ: ಚೆಸ್ ಲೋಕಕ್ಕೆ ಕಾಲಿಟ್ಟಾಗ ವೈಶಾಲಿ ಅವರನ್ನು ಭಾರತದ ಪುರುಷ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರ ಅಕ್ಕನಾಗಿ ಪರಿಚಯ ಪಡೆದವರು.



ತಾಳ್ಮೆಯೇ ಗೆಲುವಿನ ಸೂತ್ರ


ಆರ್. ವೈಶಾಲಿಯ ತಾಳ್ಮೆ ಮಾದರಿ. ಪಂದ್ಯದಲ್ಲಿರುವ ಅವರ ಶಾಂತತೆಯೇ ಶ್ರೇಷ್ಠರನ್ನು ಸೋಲಿಸುತ್ತಾ ಬಂದಿದೆ. ಸೋತಾಗ ಕುಗ್ಗದೆ, ಗೆದ್ದಾಗ ಹಿಗ್ಗದೆ ಜಾಣತೆಯನ್ನು ಪ್ರದರ್ಶಿಯೇ ವೈಶಾಲಿ ಯಶಸ್ಸನ್ನು ಪಡೆದಿದ್ದಾರೆ. ಇದಕ್ಕೆ ಹಲವಾರು ಉದಾಹರಣೆಗಳಿವೆ. ಕ್ಯಾಂಡಿಡೇಟ್ಸ್ ಪಂದ್ಯಾವಳಿಯಲ್ಲೇ ಅವರು ಮಧ್ಯಮ ಸುತ್ತಿನ ಒಂದು ಪಂದ್ಯದಲ್ಲಿ ಸೋತಿದ್ದರು. ಅಲ್ಲಿಗೆ ನಿಲ್ಲದ ಅವರ ಛಲ ಗೆಲುವಿನ ಹಾದಿಗೆ ತಂದಿತು. ಅವರ ತಾಳ್ಮೆ ಚಾಂಪಿಯನ್ ಸ್ಥಾನದಲ್ಲಿ ನಿಲ್ಲಿಸಿತು. ಇದಕ್ಕೂ ಮುನ್ನವೇ ಅವರು ಹೆಚ್ಚಿನ ತಾಳ್ಮೆ ಹೊಂದಿದ್ದರು ಎಂಬ ವಿಚಾರ ಅವರ ಕೋಚ್ ತ್ಯಾಗರಾಜನ್ ಮಾಧ್ಯಮದೊಂದಿಗೆ ಮಾತನಾಡುತ್ತಾ ಈ ಹಿಂದೆ ತಿಳಿಸಿದ್ದರು.ವೈಶಾಲಿಗೆ ತಾಳ್ಮೆಯಿದೆ. ಹೆಚ್ಚಿನ ಹೊತ್ತು ಒಂದೇ ಕಡೆ ಕೂಡುವ ಮತ್ತು ಒಂದೇ ಕೆಲಸದ ಮೇಲೆ ಗಮನ ಹರಿಸುವ ಶಕ್ತಿ ಇದೆ. ಇಂತಹ ಶಕ್ತಿ ಸಾಮಾನ್ಯ ಜನರಲ್ಲಿರುವುದಿಲ್ಲ. ಅವರು 5 ಗಂಟೆಯ ವರೆಗೂ ಒಂದೇ ಕಡೆ ಕೂಡುವ ಸಾಮರ್ಥ್ಯ ಹೊಂದಿದ್ದರು. ಬೇಕಾದರೆ ಹೆಚ್ಚಿನ ಸಮಯವನ್ನೂ ಚೆಸ್‌ಗೆ ನೀಡಲು ಸಿದ್ಧರಿದ್ದರು ಎಂದಿದ್ದಾರೆ.

ಚೆನ್ನೈ-ಹೈದರಾಬಾದ್ ಸೆಣಸು ಇಂದು

ಹೈದರಾಬಾದ್: ಗೆಲುವಿಗಾಗಿ ಹುಡುಕಾಟ ನಡೆಸುತ್ತಿರುವ ಹೈದರಾಬಾದ್ ಮತ್ತು ಇತ್ತೀಚೆಗಷ್ಟೇ ಲಯಕ್ಕೆ ಮರಳಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಶನಿವಾರದ ಎರಡನೇ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಸೂಪರ್ ವೀಕೆಂಡ್‌ನ ಎರಡನೇ ಪಂದ್ಯಕ್ಕೆ ಹೈದರಾಬಾದ್ ಆತಿಥ್ಯ ನೀಡಲಿದ್ದು, ಗೆಲುವಿಗಾಗಿ ಎರಡು ಬಲಿಷ್ಠ ತಂಡಗಳು ಸಿದ್ಧವಾಗಿವೆ. ಮೊದಲಿಗೆ ಮೂರು ಪಂದ್ಯಗಳಲ್ಲಿ ಸತತ ಸೋಲನುಭವಿಸಿದ್ದ ಚೆನ್ನೈ ದಿಲ್ಲಿ ಹಾಗೂ ಕೋಲ್ಕತ್ತಾ ತಂಡಗಳನ್ನು ಸೋಲಿಸಿ ನಿಟ್ಟುಸಿರಿಟ್ಟಿದೆ. ಇತ್ತ ಹೈದರಾಬಾದ್ ಕೂಡ ಮೂರು ಸೋಲು ಮತ್ತು ಎರಡು ಗೆಲುವಿನೊಂದಿಗೆ ಕಣಕ್ಕಿಳಿಯುತ್ತಿದೆ. ಚೆನ್ನೈ ತಂಡಕ್ಕೆ ಧೋನಿ ಬಲ ಸಿಗುವ ಸಾಧ್ಯತೆ ಇದೆ. ಇತ್ತ ಹೈದರಾಬಾದ್ ತವರಿನ ಬೆಂಬಲ ಪಡೆಯಲಿದೆ.

ಚೆನ್ನೈ ತಂಡಕ್ಕೆ ವಿಶ್ವಾಸ: ಸಂಜು ಸ್ಯಾಮ್ಸನ್ ಲಯಕ್ಕೆ ಮರಳಿರುವುದು ತಂಡಕ್ಕೆ ಬಲ ತಂದಿದೆ. ಒಂದು ಶತಕ ಬಾರಿಸಿರುವ ಅವರು, ಕಳೆದ ಪಂದ್ಯದಲ್ಲೂ ಮಿಂಚಿದ್ದಾರೆ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ಆಯುಷ್ ಮಾತ್ರೆ ವಿಸ್ಫೋಟಕ ಬ್ಯಾಟಿಂಗ್ ಮಾಡುತ್ತಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಸರ್ಫರಾಜ್ ಖಾನ್, ಡೇವಾಲ್ಡ್ ಬ್ರೇವಿಸ್ ಕೂಡ ಅಬ್ಬರದ ಬ್ಯಾಟಿಂಗ್ ಮಾಡಿದ್ದಾರೆ. ಫಿನಿಶಿಂಗ್‌ನಲ್ಲಿ ದುಬೆ ಸಿದ್ಧರಾಗಿದ್ದಾರೆ. ಇತ್ತ ಬೌಲಿಂಗ್‌ನಲ್ಲಿ ಓವರ್‌ಟನ್ ಲಯದಲ್ಲಿದ್ದಾರೆ. ಕಳೆದೆರಡು ಪಂದ್ಯಗಳಲ್ಲಿ ಪರಿಣಾಮಕಾರಿ ಬೌಲಿಂಗ್ ಮಾಡಿರುವ ಅವರು, ಮಿಂಚಲು ಸಜ್ಜಾಗಿದ್ದಾರೆ. ಖಲೀಲ್ ಬದಲಿಗೆ ಯಾರು ಕಣಕ್ಕಿಳಿಯಲಿದ್ದಾರೆ ಎಂಬುದು ಖಾತ್ರಿಯಾಗಿಲ್ಲ. ಸ್ಪಿನ್ ವಿಭಾಗದಲ್ಲಿ ನೂರ್ ಅಹ್ಮದ್ ಮಿಂಚಿರುವುದು ವಿಶ್ವಾಸ ಹಿಗ್ಗಿಸಿದೆ.




ಪಿಚ್

ಹೈದರಾಬಾದ್‌ನ ಬ್ಯಾಟಿಂಗ್ ಪಿಚ್‌ನಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಮೇಲುಗೈ ಸಾಧಿಸಿದ್ದಾರೆ. ಫ್ಲಾಟ್ ಪಿಚ್ ಇರುವುದು ಬ್ಯಾಟರ್‌ಗಳಿಗೆ ಲಾಭ ತಂದುಕೊಡಲಿದೆ. ಸ್ಪಿನ್ನರ್‌ಗಳಿಗೂ ಅಲ್ಪ ಸಹಾಯ ಮಾಡಲಿದೆ.

ಹೈದರಾಬಾದ್‌ಗೆ ಬ್ಯಾಟಿಂಗ್ ಬಲ: ಹೆಡ್, ಅಭಿ, ಕ್ಲಾಸೆನ್, ಕಿಶನ್ ಹೀಗೆ ಸಾಲು ಸಾಲು ಬಲಿಷ್ಠ ಬ್ಯಾಟರ್‌ಗಳನ್ನು ಹೊಂದಿರುವ ಹೈದರಾಬಾದ್ ಗೆಲುವಿನ ಹಳಿಗೆ ಮರಳುವ ಹಂಬಲದಲ್ಲಿದೆ. ಹೆಡ್-ಅಭಿ ಲಯಕ್ಕೆ ಮರಳುವುದು ತಂಡಕ್ಕೆ ಬಲ. ಇನ್ನು ನಾಯಕ ಇಶಾನ್ ಕಿಶನ್ ಕೂಡ ಅಬ್ಬರದ ಬ್ಯಾಟಿಂಗ್ ಮಾಡಲು ಸಿದ್ಧರಾಗಿದ್ದಾರೆ. ಕ್ಲಾಸೆನ್ ಪ್ರಸ್ತುತ ಆರೆಂಜ್ ಕ್ಯಾಪ್ ರೇಸ್‌ನಲ್ಲಿದ್ದು ಇನ್ನಷ್ಟು ಬಲ ತಂದಿದ್ದಾರೆ. ಬೌಲಿಂಗ್ ವಿಚಾರದಲ್ಲಿ ಅನುಭವದ ಕೊರತೆ ತಂಡಕ್ಕಿದೆ. ಉನಾಡ್‌ಕಟ್ ಒಬ್ಬರನ್ನು ಬಿಟ್ಟರೆ ಇನ್ನಿಳಿದವರು, ಅನುಭವ ಹೊಂದಿಲ್ಲ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5957

5956 ಉತ್ತರ

ಎಡದಿಂದ ಬಲಕ್ಕೆ:
5.ಮನೋಬಲ
6.ಹಗೆತನ 7.ಮದನ
8.ತಟವಟ 10.ತರುಲತೆ
12.ಮಹಾರಾಜ
14.ದಾಸವಾಳ
15.ಲಗೋರಿ
16.ಅನುಪಮ
17.ಹೋಮಕುಂಡ
ಮೇಲಿನಿಂದ ಕೆಳಕ್ಕೆ :
1.ಧಾಮ 2.ಬಾಲನಟ
3.ಸಹಮತ 4. ಜ್ಞಾನ
9.ವಜೀರಾ 11.ಸವರು
13.ಜಲಮಯ
14.ದಾರಿಹೋಕ 16.ಅಡ್ಡಿ
18.ತಡ

ಎಡದಿಂದ ಬಲಕ್ಕೆ
2.ಧಾರಾಳ ದಾನ ಮಾಡುವ ಹಸ್ತ (3)
5.ಅಮೂಲ್ಯ ಮುತ್ತುಗಳ ಆಶ್ರಯತಾಣ (4)
6.ನಿರ್ದಿಷ್ಟ ಪ್ರದೇಶ ಪ್ರವೇಶಿಸಲು ಬೇಕಾದ ಅನುಮತಿ (4)
7.ಪುನಃ ತರಿಸಿದ ಕಟುವಾಸನೆಯ ಸೊಪ್ಪು (3)
9.ಸಮರ್ಥನೆ ಮಾಡುವ ಪ್ರಮಾಣ (3)
10.ನೀರಿನಲ್ಲಿ ಮುಳುಗದಂತೆ ಮಾಡು (3)
11.ಕನ್ನಡದಲ್ಲಿ ಸೊಳ್ಳೆಯಾದರೆ ಸಂಸ್ಕೃತದಲ್ಲಿ? (3)
15.ಸಲಹೆಯನ್ನು ಉಲ್ಲಂಘಿಸು (4)
16.ಬಾಗಿದ ಸೊಂಡಿಲುಳ್ಳವನು-ಗಣಪ (4)
17.ರಾತ್ರಿಯ ವಿರುದ್ಧ ಅವಧಿ (3)
ಮೇಲಿನಿಂದ ಕೆಳಕ್ಕೆ
1.ದೇವತೆಗಳ ಶತ್ರು-ದಾನವ (4)
2.ಒಣಗಿದ ಮರದ ತುಂಡಿದು (3)
3.ಘನತೆ-ಸ್ವಾಭಿಮಾನದ ವಿಶೇಷ ನಡೆಯಿದು (3)
4.ದಾವಣಗೆರೆ ಜಿಲ್ಲೆಯ ಐತಿಹಾಸಿಕ ನಗರ (4)
8.ನಿಜವಾಗಿ ಸಂಭವಿಸುವುದು-ಸತ್ಯ (3)
9.ಸಮಸ್ಯೆ-ವಿಷಯವನ್ನು ನೋಡುವ ವಿಭಿನ್ನ ರೀತಿ (3)
10.ಇವು ಹಾರಿಕೆಯ ನುಡಿಗಳು (3)
12.ದೃಷ್ಟಿದೋಷಕ್ಕಾಗಿ ಬಳಸುವ ಸಾಧನ (3)
13.ಹರ್ಷದ ತದ್ಭವರೂಪ ತಲೆಕೆಳಗಾಗಿದೆ (3)
14.ಎರಡಾಗಿ ಚಿಸಿಲೊಡೆದದ್ದು (3)

ಕಿರುಸುದ್ದಿ

ಶಿಲಾಮಂದಿರ ಲೋಕಾರ್ಪಣೆ

• **ಗದಗ:** ರೋಣ ತಾಲೂಕಿನ ಮಲ್ಲಾಪೂರ ಗ್ರಾಮದಲ್ಲಿ ಏ.21 ರಿಂದ 27 ರವರೆಗೆ ಸಿದ್ಧಾರೂಢ ವಿವಿಧೋದ್ದೇಶಗಳ ಟ್ರಸ್ಟ್ ಕಮಿಟಿ ಸಹಯೋಗದಲ್ಲಿ ಸಿದ್ಧಾರೂಢರ ನೂತನ ಶಿಲಾಮಂದಿರ ಲೋಕಾರ್ಪಣೆ, ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ, ಪಲ್ಲಕ್ಕಿ ಉತ್ಸವ ಹಾಗೂ ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಏ.21ರಂದು ಬೆಳಗ್ಗೆ 10ಕ್ಕೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕುಂಭ, ಆರುತಿ, ಡೊಳ್ಳು ವಿವಿಧ ವಾದ್ಯಗಳೊಂದಿಗೆ ಸಿದ್ಧಾರೂಢರ ಮೂರ್ತಿ ಹಾಗೂ ವಿವಿಧ ಶರಣರ ಮೂರ್ತಿಗಳ ಭವ್ಯ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಏ.22ರಂದು ಸಂಜೆ 6ಕ್ಕೆ ಸಿದ್ಧಾರೂಢರ ಜಲವಾಸ, ದಾನ್ಯವಾಸ, ವಸ್ತ್ರವಾಸ, ಹೋಮ ಹವನದ ತಯಾರಿ ಮಾಡಲಾಗುತ್ತಿದೆ. ಏ.23ರಂದು ಬೆಳಗ್ಗೆ 6ಕ್ಕೆ ಸಿದ್ಧಾರೂಢರ ನೂತನ ಶಿಲಾಮಂದಿರ ಲೋಕಾರ್ಪಣೆ, ಸಿದ್ಧಾರೂಢರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಸಿದ್ಧಾರೂಢರ ಗೋಪುರ ಕಳಸಾರೋಹಣ, ವಿವಿಧ ಶರಣರ ಮೂರ್ತಿ ಪ್ರತಿಷ್ಠಾಪನೆ, ಮಲ್ಲಾಪೂರದ ಶಾಸ್ತ್ರಿಗಳಿಂದ ಹೋಮ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಏ.24 ರಂದು ಸಂಜೆ 6ಕ್ಕೆ ಸಿದ್ಧಾರೂಢರ ಭಕ್ತರ ಪಲ್ಲಕ್ಕಿ ಭವ್ಯ ಅರ್ಚನೆ, ಪ್ರವಚನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಏ.25ಕ್ಕೆ ಸಂಜೆ 6ಕ್ಕೆ ಮುತ್ತೈದೆಯರ ಭಾಗ್ಯಕ್ಕಾಗಿ ಕುಂಕುಮ ದಿನ ಕಾರ್ಯಕ್ರಮ ಮಾಡಲಾಗುತ್ತಿದೆ. ಏ.26 ರಂದು ಸಂಜೆ 6ಕ್ಕೆ ತಾಯಿಂದಿರಿಗೆ ಉಡಿ ತುಂಬುವ ಕಾರ್ಯಕ್ರಮ ಮಾಡಲಾಗುತ್ತಿದೆ. ಏ.27 ರಂದು ಬೆಳಗ್ಗೆ 9ಕ್ಕೆ ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರಮ ಹಾಗೂ ಸಿದ್ಧಾರೂಢರ ಕಡಿ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಸಾನ್ನಿಧ್ಯ ಘೋರೇಶ್ವರ ಶಿವಾಯೋಗಿ ಸ್ವಾಮೀಜಿ ವಹಿಸುವರು. ಅಭಿನವ ಮೃತ್ಯುಂಜಯ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸುವರು. ಡಾ.ಶಿವಕುಮಾರ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ನೀಲಮ್ಮತಾಯಿ ಅಸುಂಡಿ, ಶಾಂತವೀರ ಶರಣರು ಭಾಗವಹಿಸುವರು. ಬಿ.ಟಿ. ರಬ್ಬನಗೌಡ್ರ, ವೀರಭದ್ರಪ್ಪ ಸರುವರ, ಬಸಯ್ಯ ಹೂಗಾರ, ರವಿ ದಾನರಡ್ಡಿ, ಆಡೇಶ ಉಗಲಾಟ, ಬಾವುಗೌಡ ಭರಮಗೌಡ ಭಾಗವಹಿಸುವರು ಎಂದು ಸಿದ್ಧಾರೂಢರ ವಿವಿಧೋದ್ದೇಶಗಳ ಟ್ರಸ್ಟ್ ಕಮಿಟಿ ಪದಾಧಿಕಾರಿಗಳು ತಿಳಿಸಿದ್ದಾರೆ.

ವಿವಿಧ ಸೌಲಭ್ಯ

• **ಗದಗ:** ಅಂಚೆ ಇಲಾಖೆಯಿಂದ ಹಲವಾರು ಜನಪರ ಯೋಜನೆಗಳಿದ್ದು, ಅವುಗಳ ಲಾಭವನ್ನು ಪ್ರತಿಯೊಬ್ಬರೂ ಪಡೆದುಕೊಳ್ಳಬೇಕು ಎಂದು ಗದಗ ಅಂಚೆ ಅಧೀಕ್ಷಕ ಮಣ್ಣಾಪು ಶಿರಹಟ್ಟಿ ಹೇಳಿದರು. ತಾಲೂಕಿನ ಮುಳಗುಂದ ಪಟ್ಟಣದಲ್ಲಿ ಪ್ರಗತಿ ಪತ್ತಿನ ಸೌಹಾರ್ದ ನಿ. ಹಾಗೂ ಭಾರತೀಯ ಅಂಚೆ ಇಲಾಖೆ ಗದಗ ವಿಭಾಗದ ಸಹಯೋಗದಲ್ಲಿ ನಡೆದ ಅಂಚೆ ಜನ ಸಂಪರ್ಕ ಅಭಿಯಾನ ಶಿಬಿರ ಉದ್ಘಾಟಿಸಿ ಮಾತನಾಡಿದರು. ವರ್ಷಕ್ಕೆ 550 ಅಂಚೆ ಜೀವ ವಿಮೆ ತುಂಬಿದರೆ ಅಂತಹ ಸಂದರ್ಭದಲ್ಲಿ 10 ಲಕ್ಷ ರೂ.ವರೆಗೆ ಪರಿಹಾರ ದೊರೆಯುತ್ತದೆ. ಕೇಂದ್ರ ಸರ್ಕಾರ ಅಂಚೆ ಇಲಾಖೆ ಮೂಲಕ ಇಂತಹ ಹಲವಾರು ಆಕರ್ಷಕ ಯೋಜನೆಗಳನ್ನು ತಂದಿದೆ. ಹತ್ತಿರದ ಅಂಚೆ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಬೇಕು ಎಂದರು. ಎಸ್. ಆರ್.ಜಾಧವ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿ ಅಧ್ಯಕ್ಷ ಕೆ.ಎಲ್.ಕರಿಗೌಡ್ರ ಅಧ್ಯಕ್ಷತೆ ವಹಿಸಿದ್ದರು.

ಪ್ರತಿಬಂಧಕಾಜ್ಞೆ ಜಾರಿ

• **ಗದಗ:** ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಾಮಾನ್ಯ ಪ್ರವೇಶ ಪರೀಕ್ಷೆ-2026ನ್ನು ಏ.23 ಮತ್ತು 24ರಂದು ನಡೆಸಲಿದೆ. ಜಿಲ್ಲೆಯಲ್ಲಿ ಒಟ್ಟು 10 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಏ.23 ಮತ್ತು ಏ.24ರಂದು ಬೆಳಗ್ಗೆ 8.30ರಿಂದ ಸಂಜೆ 5 ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾರ್ಥಿಗಳ ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ, ಐದು ಅಥವಾ ಐದಕ್ಕಿಂತ ಹೆಚ್ಚು ಜನರು ಗುಂಪುಕೂಡುವುದು ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಬರುವ ಝೆರಾಕ್ಸ್ ಅಂಗಡಿ, ಬುಕ್‌ಸ್ಟಾಲ್ ಫೋಟೋ ಕಾಪಿಯರ್‌ಗಳನ್ನು ಬಂದ್ ಮಾಡಲು ಆದೇಶಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಕೈ ಗಡಿಯಾರ, ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ರೀತಿಯ ಕೈಗಡಿಯಾರವನ್ನು ಕಟ್ಟಿಕೊಂಡು ತೆಗೆದುಕೊಂಡು ಹೋಗುವಂತಿಲ್ಲ. ಅಭ್ಯರ್ಥಿಗಳು ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೊಠಡಿಯ ಒಳಗೆ ಯಾವುದೇ ಆಧುನಿಕ ಎಲೆಕ್ಟ್ರಾನಿಕ್ ಉಪಕರಣಗಳು, ಮೊಬೈಲ್ ಫೋನ್, ಬ್ಲೂಟೂತ್, ಸ್ಲೈಡ್ ರೂಲ್ಸ್, ಕ್ಯಾಲ್ಕುಲೇಟರ್, ವೈಟ್ ಫ್ಲ್ಯುಯಿಡ್, ವೈರ್‌ಲೆಸ್ ಸೆಟ್ಸ್, ಪೇಪರ್ ಚೀಟಿ, ಬುಕ್ ಮುಂತಾದವುಗಳನ್ನು ತರುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಘಾತ: ಓರ್ವ ಸಾವು

• **ನರಗುಂದ:** ಶುಕ್ರವಾರ ಮದಗುಣಕಿ ಗ್ರಾಮದ ಹತ್ತಿರದ ಹೆದ್ದಾರಿಯಲ್ಲಿ ದ್ವಿಚಕ್ರ ವಾಹನಗಳ ಮಧ್ಯ ಡಿಕ್ಕಿ ಸಂಭವಿಸಿ ಸುರಕೋಡ ಗ್ರಾಮದ ವೆಂಕಪ್ಪ ಹನುಮಪ್ಪ ಸುಗ್ಗಿ(73) ಸಾವನ್ನಪ್ಪಿರುವ ಘಟನೆ ಜರುಗಿದೆ. ಈ ಅಪಘಾತದಲ್ಲಿ ನರಗುಂದ ತಾಲೂಕಿನ ಸುರಕೋಡ ಗ್ರಾಮದ ಗದಿಗೆಪ್ಪ ಭೀಮಪ್ಪ ತಳವಾರ(70) ಹಾಗೂ ರೋಣ ತಾಲೂಕಿನ ಕೌಜಗೇರಿ ಗ್ರಾಮದ ಸಂತೋಷ ಶರಣಪ್ಪ ಮಡಿವಾಳರ (24) ಗಾಯಗೊಂಡಿದ್ದಾರೆ. ಗಾಯಗೊಂಡವರು ಚಿಕಿತ್ಸೆಗಾಗಿ ಹುಬ್ಬಳ್ಳಿ ಕಿಮ್ಸ್ ದಾಖಲಾಗಿದ್ದಾರೆ. ಈ ಪ್ರಕರಣ ನರಗುಂದ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.



ನರಗುಂದ: ಪಟ್ಟಣದ ವೀರಕ್ತಮಠದ ಕರ್ತೃ ಚನ್ನಬಸವ ಮಹಾಶಿವಯೋಗಿಗಳ 157ನೇ ಪುಣ್ಯಸ್ಮರಣೋತ್ಸವದ ನಿಮಿತ್ತ ಹುಬ್ಬಳ್ಳಿಯ ರಾಷ್ಟ್ರೋತ್ಥಾನ ರಕ್ತಭಂಡಾರ ಕೇಂದ್ರ ಸಹಯೋಗದಲ್ಲಿ ಹಮ್ಮಿಕೊಂಡ ರಕ್ತದಾನ ಶಿಬಿರಕ್ಕೆ ವೀರಕ್ತಮಠದ ಶಿವಕುಮಾರ ಸ್ವಾಮೀಜಿ ರಕ್ತದಾನ ಮಾಡುವ ಮೂಲಕ ಚಾಲನೆ ನೀಡಿದರು. ಮಂಜುನಾಥ ಬೆಳಗಾವಿ, ವಿರೇಶ ಮಹಾಲಿನಮಠ, ಶಿವಾಜಿ ಸೂರ್ಯವಂಶಿ, ಶಿವಪುತ್ರ ಅಂಗಡಿ, ಮಲ್ಲಿಕಾರ್ಜುನ ಅಣ್ಣಿಗೇರಿ, ಬಸು ಪೂಜಾರ, ಪ್ರವೀಣ ಗಡೇಕಾರ, ಪ್ರವೀಣ ಅಣ್ಣಿಗೇರಿ, ಯಲ್ಲಪ್ಪ ಪೂಜಾರ, ಆನಂದ ಮೋಟೆ ಇತರರಿದ್ದರು.

ಗಾಯಕಿ ಆಶಾ ಭೋಸ್ಲೆಗೆ ಸ್ವರಾಂಜಲಿ

• **ನರಗುಂದ:** ಇತ್ತೀಚೆಗೆ ನಿಧನರಾದ ಬಾಲಿವುಡ್ ಖ್ಯಾತಿಯ ಹಿನ್ನೆಲೆ ಗಾಯಕಿ ಆಶಾ ಬೋಸ್ಲೆ ಅವರಿಗೆ ಪಟ್ಟಣದ ಭಾರತೀಯ ಸಂಗೀತ ವಿದ್ಯಾಲಯದಲ್ಲಿ ಭಾವಪೂರ್ಣ ಸ್ವರಾಂಜಲಿ ಸಲ್ಲಿಸಲಾಯಿತು.

ಪ್ರಾಚಾರ್ಯ ಪಂ. ಶ್ರೀನಿವಾಸ ಇನಾಮದಾರ ಮಾತನಾಡಿ, ಎಂಟು ದಶಕಗಳ ಸುದೀರ್ಘ ವೃತ್ತಿ ಜೀವನದಲ್ಲಿ ಸುಮಾರು 12000ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ ಆಶಾ ಭೋಸ್ಲೆಯವರು ಪದ್ಮವಿಭೂಷಣ ಪ್ರಶಸ್ತಿ, ದಾದಾಸಾಹೇಬ ಫಾಲ್ಕೆ ಪ್ರಶಸ್ತಿ, ಮಹಾರಾಷ್ಟ್ರ ಭೂಷಣ, ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಅವರ ಅಗಲುವಿಕೆ ಹಿರಿಯ ಸಂಗೀತ ರತ್ನವೊಂದನ್ನು ಕಳೆದುಕೊಂಡಂತಾಗಿದೆ ಎಂದರು.

ನಂತರ ಸಂಗೀತ ವಿದ್ಯಾಲಯದ ವಿದ್ಯಾರ್ಥಿನಿಯರಾದ ಮಂಜುಳಾ ಮಿಕ್ಕಲ, ವೈಷ್ಣವಿ ಮುಳ್ಳೂರ, ಪ್ರೇರಣಾ ಪೂಜಾರ, ಆಶಾ ಭೋಸ್ಲೆ ಅವರ ಭಾವಚಿತ್ರಕ್ಕೆ ಪೂಜೆಸಲ್ಲಿಸಿ ಪುಷ್ಪ ಸಮರ್ಪಿಸಿದರು. ರಾಷ್ಟ್ರ ಪ್ರಶಸ್ತಿ ವಿಜೇತ ಯುವ ಕಲಾವಿದ ಪಂ.ಚಂದ್ರಕಾಂತ ಇನಾಮದಾರ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದ ಮುಲ್ತಾನಿ ರಾಗ ಪ್ರಸ್ತುತ ಪಡಿಸಿ ಸ್ವರಾಂಜಲಿ ಸಲ್ಲಿಸಿದರು. ಅನ್ವಿತಾ ಅಡ್ಡಣಗಿ, ತನಿಷ್ಕಾ ತಡಸದ, ಸಿರಿ ಬೆಂತೂರ, ಆರೋಹಿ ಗುಜಮಾಗಡಿ, ವೈಷ್ಣವಿ ಸಜ್ಜನ, ವೇದಶ್ರೀ ಸಜ್ಜನ, ಅಪೇಕ್ಷಾ ಕರ್ಕಿಕಟ್ಟಿ, ಅದ್ವಿತಾ ಕರ್ಕಿಕಟ್ಟಿ, ಚೇತನ ಬಿ., ನಿತಿನ್ ಬಿ . ಗೀತ ಗಾಯನದಿಂದ ಸ್ವರ ನಮನ ಸಲ್ಲಿಸಿದರು.



ನರಗುಂದ: ಇತ್ತೀಚೆಗೆ ನಿಧನರಾದ ಬಾಲಿವುಡ್ ಖ್ಯಾತಿಯ ಹಿನ್ನೆಲೆ ಗಾಯಕಿ ಆಶಾ ಬೋಸ್ಲೆ ಅವರಿಗೆ ಪಟ್ಟಣದ ಭಾರತೀಯ ಸಂಗೀತ ವಿದ್ಯಾಲಯದಲ್ಲಿ ಭಾವಪೂರ್ಣ ಸ್ವರಾಂಜಲಿ ಸಲ್ಲಿಸಲಾಯಿತು.

ತಂಪು ಪಾನೀಯಗಳ ಮೊರೆ | ಸಾರ್ವಜನಿಕರಿಗೆ ಹೆಚ್ಚಿದ ಆತಂಕ

ಬಿಸಿಲಿನ ತಾಪಕ್ಕೆ ಜನರು ಹೈರಾಣ!



▸ ಸೀತಲ ಓಲೇಕಾರ

ದಿಗಂತ ವಿಶೇಷ

• **ಗಜೇಂದ್ರಗಡ:** ಈ ವರ್ಷ ಯುಗಾದಿಯ ಮುಂಚೆಯಿಂದಲೂ ಬೇಸಿಗೆಯ ಶಾಖ ಹೆಚ್ಚಾಗಿದೆ. ಬಿಸಿಲಿನ ಪ್ರಕರತೆಯು ಮಾರ್ಚ್ ತಿಂಗಳಲ್ಲಿ 25ಲಿ ರಿಂದ 30ಲಿ ಡಿಗ್ರಿ ಸೆ. ಉಷ್ಣಾಂಶ ಕಂಡು ಬಂದಿದ್ದು ಶುಕ್ರವಾರ ಹಾಗೂ ಶನಿವಾರ ಗಜೇಂದ್ರಗಡದಲ್ಲಿ 36 ಡಿ. ಸೆ. ಉಷ್ಣಾಂಶ ಬಂದು ದಾಖಲೆ ನಿರ್ಮಿಸಿದೆ. ಏಪ್ರಿಲ್ 20ರ ನಂತರ ಬಿಸಿಲಿನ ತಾಪಮಾನ ಇನ್ನೂ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಈಗಾಗಲೇ ಆರೋಗ್ಯ ಇಲಾಖೆ ಸೂಚನೆ ನೀಡಿದೆ. ಬಿಸಿಲಿನ ಶಾಖ ಇನ್ನೂ ಹೆಚ್ಚಾದರೆ ಜೀವನ ಹೇಗೆ ಎಂಬ ದಿಗಿಲು ಜನರಿಗೆ ಎದುರಾಗಿದೆ.

ಪಟ್ಟಣದಲ್ಲಿ ಬೇಸಿಗೆಯ ಬಿಸಿ ಗಾಳಿಗೆ ಜನರು ತತ್ತರಿಸಿದ್ದು, ಮನೆಯಿಂದ ಹೊರ ಹೋಗದಂಥ ಪರಿಸ್ಥಿತಿ ಉಲ್ಬಣವಾಗಿದೆ. ಸೂರ್ಯನ ಶಾಖದ ತೀವ್ರತೆ ಹೆಚ್ಚಾಗಿದ್ದು ಜನರ ನೆತ್ತಿ ಸುಡುತ್ತಿದೆ. ಜನರು ನೆಲದ ಮೇಲೆ ಬರಿ ಕಾಲಿನಲ್ಲಿ ಓಡಾಡುವುದಿರಲಿ, ಪಾದರಕ್ಷೆಗಳನ್ನು ಧರಿಸಿ ನಡೆಯುವದು ಕಷ್ಟ ಸಾಧ್ಯದ ವಿಷಯವಾಗಿದೆ. ತಂಪು ಪಾನೀಯಗಳ ಮೊರೆ ಹೋದ ಜನತೆ ಬಿಸಿಲಿನ ತಾಪಮಾನಕ್ಕೆ ಜನ ತತ್ತರಿಸಿದ್ದು ಕಚೇರಿಗಳಿಗೆ, ಅಂಗಡಿ ಮುಗ್ಗಟ್ಟುಗಳಿಗೆ, ಇನ್ನಿತರ ಕೆಲಸಕ್ಕೆ ಹೋಗುವ ಜನರು ಕಲ್ಲಂಗಡಿ, ಎಳನೀರು, ಐಸ್ ಕ್ರೀಮ್, ಕರಭುಜ, ಜ್ಯೂಸ್ ಸೆಂಟರಗಳತ್ತ ಮುಖಮಾಡುತ್ತಿದ್ದಾರೆ. ಜನರು ತಮ್ಮ ದೇಹವನ್ನು ತಂಪಾಗಿಸಿಕೊಳ್ಳಲು ತಂಪು ಪಾನೀಯಗಳಾದ ಸೋಡಾ, ಮಜ್ಜಿಗೆ, ಎಳನೀರು ಐಸ್ ಕ್ರೀಮ್, ಕಲ್ಲಂಗಡಿ ಹಣ್ಣುಗಳಿಗೆ ಭಾರಿ ಬೇಡಿಕೆಯಾಗಿದ್ದು ಅದರಂತೆಯೇ ಬೆಲೆ ಏರಿಕೆಯಾಗಿವೆ ಇದರ ಬೇಡಿಕೆ ಬಿಸಿಲಿಗಿಂತ ಜನರ ಜೇಬಿಗೆ ಶಾಖ ಹೆಚ್ಚಾಗಿದೆ. ಬಿಸಿಲಿನ ತಾಪಮಾನಕ್ಕೆ ರಸ್ತೆಗಳು ಕಾದು ಕೆಂಡದಂತಾಗಿವೆ. ಹೀಗಾಗಿ ಕೈಯಲ್ಲಿ ಕೊಡೆ, ಕಾಲಲ್ಲಿ ಪಾದರಕ್ಷೆಗಳಿಲ್ಲದೆ ಮನೆಯಿಂದ ಹೊರಹೋಗಲು ಯೋಚಿಸುವಂತಾಗಿದೆ. ಮನೆಯಿಂದ ಹೊರಬಂದರೆ ಬಿಸಿ ಗಾಳಿ ಮುಖಕ್ಕೆ ರಾಚುತ್ತದೆ. ಡಾಂಬರ ಹಾಗೂ ಮಣ್ಣಿನ ರಸ್ತೆಗಳಲ್ಲಿ ನಡೆದುಕೊಂಡು ಹೋಗುವದು ಕೆಂಡದ ಮೇಲೆ ನಡೆದು ಹೋಗುವಂತಹ ಅನುಭವ ನೀಡುತ್ತದೆ. ಬಿಸಿಲಿನ ಬೇಗೆಗೆ ರಸ್ತೆ ಮೇಲೆ ನಿಂತು ಮಾತನಾಡುವ ಜನರು ನೆರಳು ಹುಡುಕಿಕೊಂಡು ಗಿಡದ ಕೆಳಗೆ ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

> ಏಪ್ರಿಲ್ ತಿಂಗಳ ಮೊದಲ ವಾರದಲ್ಲಿ ತಾಪಮಾನ ಗರಿಷ್ಠ 35ಲಿ ಡಿಗ್ರಿಗಿಂತಲೂ ಹೆಚ್ಚು ತಲುಪಿದೆ. ಇನ್ನು ಮುಂದೆ ಉಷ್ಣಾಂಶ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಮಕ್ಕಳು, ವೃದ್ಧರು ಮತ್ತು ಮಹಿಳೆಯರು ಹೊರಗಡೆ ಹೋಗುವಾಗ ಸುರಕ್ಷಿತಾ ಕ್ರಮಗಳನ್ನು ಕೈಗೊಳ್ಳಬೇಕು.
> ■ **ಅನಿಲ ತೋಟದ, ವೈದ್ಯಾಧಿಕಾರಿ,** ತಾಲೂಕು ಆಸ್ಪತ್ರೆ, ಗಜೇಂದ್ರಗಡ

> ಬಿಸಿಲಿನ ಬೇಗೆಯಿಂದ ತತ್ತರಿಸಿರುವ ಜನ ತಂಪು ಪಾನೀಯಗಳನ್ನು ಕುಡಿಯಲು ಮುಂಜಾನೆ 10 ಗಂಟೆಯಿಂದಲೆ ನಮ್ಮ ಅಂಗಡಿಗೆ ಬರುತ್ತಿದ್ದಾರೆ. ಮಜ್ಜಿಗೆ, ಪೆಪ್ಸಿ, ಕೋಕೋಕೋಲಾ ದಂತಹ ಪಾನೀಯ ಹೆಚ್ಚಾಗಿ ಮಾರಾಟವಾಗುತ್ತಿವೆ.
> ■ **ರಾಜೂ ಮಾಳೋತ್ತರ,** ಜ್ಯೂಸ್ ಅಂಗಡಿ ಮಾಲೀಕ

> ಬಿಸಿಲು ಹೆಚ್ಚುತ್ತಿದ್ದು, ಗ್ರಾಹಕರು ದಿನದಿಂದ ದಿನಕ್ಕೆ ಅಂದರೆ ಬೆಳಗ್ಗೆಯಿಂದ 12-1 ಗಂಟೆಯವರೆಗೆ ಸಂಜೆ 4-6 ಗಂಟೆಯ ವರೆಗೆ ಬಿಸಿಲಿನ ಹೊಡೆತಕ್ಕೆ ಜನರು ಸೋಡಾ, ಜ್ಯೂಸ್, ಮಜ್ಜಿಗೆ, ಐಸ್ ಕ್ರೀಮ್ ಸೇವನೆಗೆ ಮುಂದಾಗಿದ್ದಾರೆ. ತಂಪಾದ ಪಾನೀಯಾ ಹೆಚ್ಚಾಗಿ ವ್ಯಾಪಾರ ನಡೆಯುತ್ತಿದೆ.
> ■ **ವಿಜಯಕುಮಾರ ಕಾಟವಾ,** ವಿಜಯ ಕೋಲ್ಡ್ರಿಂಕ್ಸ್ ಮಾಲೀಕ



ಶಿಷ್ಯರ ಸಾಧನೆಯಿಂದ ಗುರು ಜೀವನ ಸಾರ್ಥಕ



• **ಶಿರಹಟ್ಟಿ:** ಗುರುಗಳು ಕಲಿಸಿದ ಅಕ್ಷರ ಜ್ಞಾನದಿಂದ ಶಿಷ್ಯಂದಿರು ಸಮಾಜದಲ್ಲಿ ಸಾಧನೆಯ ಶಿಖರ ಏರಿ, ಗುರುವಿಗಿಂದ ಉನ್ನತ ಹುದ್ದೆ ಅಲಂಕರಿಸಿದರೇ ಅಂದೇ ಗುರುವಿನ ಜೀವನ ಸಾರ್ಥಕವಾಗುತ್ತದೆ ಎಂದು ನಿವೃತ್ತ ಶಿಕ್ಷಕ ಎಸ್.ಬಿ. ಹೊಸೂರ ಹೇಳಿದರು.

ಸ್ಥಳೀಯ ಹರಿಪೂರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2003-04ನೇ ಸಾಲಿನಲ್ಲಿ ಕಲಿತ ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮನುಷ್ಯ ಗಳಿಸಿದ ಹಣ, ಆಸ್ತಿ, ಸಂಪತ್ತು ಯಾವುದು ಶಾಶ್ವತವಲ್ಲ, ಆದರೆ ತಂದೆ-ತಾಯಿ ಕಲಿಸಿದ ಸಂಸ್ಕಾರ, ಗುರು ಕಲಿಸಿದ ವಿದ್ಯೆ ಅಜರಾಮರ ಎಂದರು.

ಮುಖ್ಯಶಿಕ್ಷಕ ಎಚ್.ಎಂ. ಜಾಲಿಹಾಳ ಮಾತನಾಡಿ, ಗುರು-ಶಿಷ್ಯರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಗುರು ತನ್ನ ಸಂಪೂರ್ಣ ಜ್ಞಾನವನ್ನು ಶಿಷ್ಯರಿಗೆ ಧಾರೆ ಎರೆಯಲು ಸದಾ ಸಿದ್ದವಿರುತ್ತಾರೆ. ಗುರುಗಳು ಕಲಿಸುವ ಜ್ಞಾನವನ್ನು ಯಾವ ಶಿಷ್ಯ ತಾಳ್ಮೆ,ಸಹನೆ,ಏಕಾಗ್ರತೆಯಿಂದ ಹೆಚ್ಚು ಕಲಿಯುತ್ತಾರೇ ಅವರು ಸಮಾಜದಲ್ಲಿ ಸಾರ್ಥಕ ಬದುಕು ಕಾಣುತ್ತಾರೆ. ಇಂದು ಸಮಾಜದಲ್ಲಿ ಹಣಕ್ಕಿಂತ ಮನುಷ್ಯನ ಜ್ಞಾನಕ್ಕೆ ಹೆಚ್ಚು ಬೇಡಿಕೆಯಿದೆ. ವಿಜ್ಞಾನ, ತಂತ್ರಜ್ಞಾನ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಕಂಪ್ಯೂಟರ್ ವೇಗಕ್ಕಿಂತ ಮನುಷ್ಯನ ಮೈಂಡ್ ಸ್ಪೀಡ್ ಕೆಲಸ ಮಾಡುತ್ತಿದೆ. ಹೀಗಾಗಿ ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು ಮತ್ತು ಬಡವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಸಹಾಯ ಮಾಡಬೇಕು. 22 ವರ್ಷಗಳ ನಂತರ ಗುರುವಿನ ನೆನಪಿನ ಬುತ್ತಿಯನ್ನು ತೆರಯಲು ಒಂದೇ ವೇದಿಕೆಯಡಿ ಎಲ್ಲ ಶಿಕ್ಷಕರನ್ನು ಆಹ್ವಾನಿಸಿ ಸನ್ಮಾನಿಸಿರುವುದು ಶ್ಲಾಘನೀಯ ಎಂದರು.

ನಿವೃತ್ತ ಶಿಕ್ಷಕರಾದ ಎಚ್.ಆರ್. ಬೆನಹಾಳ, ಆರ್.ಬಿ. ಪವಾರ, ಎಸ್.ಎಚ್. ಭಜಂತ್ರಿ, ಎನ್.ಎನ್. ತಹಶೀಲ್ದಾರ, ಎ.ಎನ್. ಕುಲಕರ್ಣಿ, ಎಂ.ಜಿ. ಮಾಂಡ್ರೆ, ಎಫ್.ಎನ್. ಹಮ್ಮಿಗಿ, ಜಿ.ಎ. ಬೇವಿನಗಿಡದ ಹಾಗೂ 2003-04ನೇ ಸಾಲಿನ ಹಳೆ ವಿದ್ಯಾರ್ಥಿಗಳು ಇದ್ದರು.

ದೊರೆಯದ ಗಣತಿ ಕಿಟ್: ಶಿಕ್ಷಕರ ಪ್ರತಿಭಟನೆ

• **ಗದಗ:** ಕರ್ನಾಟಕ ಸೇರಿದಂತೆ ದೇಶದ್ಯಾಂತ ಮೊದಲ ಹಂತದ ಮನೆ ಪಟ್ಟಿ ಮತ್ತು ವಸತಿ ಗಣತಿ ಪ್ರಕ್ರಿಯ ಆರಂಭವಾಗಿದೆ. ಆದರೆ ತಾಲೂಕಿನ ಮುಳಗುಂದ ಪಟ್ಟಣದಲ್ಲಿನ ಗಣತಿಗೆ ಬೇಕಾಗುವ ಕಿಟ್ ನೀಡದೆ ಇರುವುದಕ್ಕೆ ಶಿಕ್ಷಕರು ಪಪಂ ಎದುರು ಪ್ರತಿಭಟನೆ ಮಾಡಿ ಆಕ್ರೋಶ ಹೊರ ಹಾಕಿದ್ದಾರೆ.

ಮುಳಗುಂದ ಪಪಂ ವ್ಯಾಪ್ತಿಯಲ್ಲಿ ಒಟ್ಟು 32 ಜನ ಗಣತಿ ಸಿಬ್ಬಂದಿ 5 ಜನ ಕಾಯ್ದಿರಿಸಲ್ಪಟ್ಟ ಸಿಬ್ಬಂದಿ, ಗಣತಿದಾರರು 6 ಜನ ಸುಪರ್‌ವೈಜರ್‌ಗಳು ಕಾರ್ಯ ನಿರ್ವಹಿಸಲು ನೇಮಕ ಮಾಡಿದ್ದು, ಮನೆ ಪಟ್ಟಿಗೆ ಬೇಕಾಗುವ ಚಕ್‌ಬಂದಿ ಮ್ಯಾಪ್, ಮಾರ್ಕರ್ ಪೆನ್, ಕ್ಯಾಪ್, ಬ್ಯಾಗ್, ಮನೆಗೆ ನಂಬರ ಹಾಕದೇ ಕೇವಲ ಗೂಗಲ್ ಮ್ಯಾಪ್ ಹಾಕಿ ಚಾಕ್‌ಪೀಸ್ ನೀಡಿ ಗಣತಿ ಕಾರ್ಯ ಮಾಡಲು ಪಪಂ ಮುಖ್ಯಾಧಿಕಾರಿ ಶಿಕ್ಷಕರಿಗೆ ಆದೇಶ ಮಾಡಿರುವುದರಿಂದ ಶಿಕ್ಷಕರು ಬೆಳಗ್ಗೆಯಿಂದ ಪಪಂ ಮುಂದೆ ಕಾಯ್ದು ಕುಳಿತರೂ ಪಪಂನಿಂದ ಕಿಟ್ ನೀಡದೆ ಶಿಕ್ಷಕರು ಹೈರಾಣಾಗಿದ್ದಾರೆ. ಗಣತಿ ಸಿಬ್ಬಂದಿಗೆ ಮನೆ ಹಂಚಿಕೆಯಲ್ಲಿ ತಾರತಮ್ಯ ಮಾಡಿದ್ದು, ಕೆಲವು ಶಿಕ್ಷಕರಿಗೆ 200 ಮನೆಗಳು, ಕೆಲವರಿಗೆ 250 ಮನೆಗಳು, ಇನ್ನು ಕೆಲವರಿಗೆ 50 ರಿಂದ 60 ಮನೆಗಳ ಹಂಚಿಕೆ ಮಾಡಿದ್ದು ಮಾಹಿತಿ ಕೇಳಿದರೆ ಸರಿಯಾದ ಮಾಹಿತಿ ನೀಡಿಲ್ಲ. ಮೇಲಾಧಿಕಾರಿಗಳು ಸಕಾಲಕ್ಕೆ ಕಿಟ್ ಹಾಗೂ ಮಾಹಿತಿ ಮತ್ತು ಸಿಬ್ಬಂದಿ ನೀಡದೇ ನಿರ್ಲಕ್ಷ್ಯ ತೋರುತ್ತಿದ್ದು ಕೂಡಲೇ ಮೇಲಾಧಿಕಾರಿಗಳು ಇದರ ಬಗ್ಗೆ ಗಮನ ನೀಡಿ ತಕ್ಷಣವೇ ಪರಿಹಾರ ಮಾಡಬೇಕು ಎಂದು ಶಿಕ್ಷಕರು ಆಗ್ರಹಿಸಿದರು.

> ಪಪಂಗೆ ಒಟ್ಟು 11 ಕಿಟ್‌ಗಳು ಬಂದಿದ್ದು ಅವುಗಳು ಮಾರ್ಕರ ಪೆನ್ ಹಾಗೂ ಕಾರ್ಡ್ ಸೀಟ್, ಪೇಪರ್, ಪೆನ್ ಸಿಸ ರಬ್ಬರ್, ಬ್ಯಾಗ್ ಒಳಗೊಂಡಿವೆ. ಅವುಗಳನ್ನು ಈಗಾಗಲೇ 6 ಸೂಪರ್ ವೈಜರ್‌ಗಳಿಗೆ ಹಾಗೂ 5 ಗಣತಿದಾರರಿಗೆ ನೀಡಿದ್ದು, ಇನ್ನುಳಿದ ಗಣತಿದಾರರ ಕಿಟ್ ಇಂದು ಬೆಂಗಳೂರಿಗೆ ಬಂದಿದ್ದು ನಾಳೆ ಬಂದ ತಕ್ಷಣ ಎಲ್ಲರಿಗೂ ವಿತರಿಸಲಾಗುವುದು.
> ■ **ಮಂಜುನಾಥ ಗುಳೇದ,** ಮುಖ್ಯಾಧಿಕಾರಿ, ಪಪಂ ಮುಳಗುಂದ



ಗಜೇಂದ್ರಗಡ ನಗರಕ್ಕೆ ಸ್ನಾತಕೋತ್ತರ ಪದವಿ ಕೇಂದ್ರ ಪ್ರಾರಂಭಿಸಲು ಆಗ್ರಹ

• **ಗಜೇಂದ್ರಗಡ:** ನಗರದ ಸರ್ಕಾರಿ ಪ್ರಥಮ ದರ್ಜೆ ಪದವಿ ಮಹಾವಿದ್ಯಾಲಯ ಆವರಣದಲ್ಲಿ ಎಸ್ ಎಫ್ಐ ಸಂಘಟನೆ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ನಗರದಲ್ಲಿ ಸ್ನಾತಕೋತ್ತರ ಪದವಿ ಕೇಂದ್ರ ಪ್ರಾರಂಭಿಸಬೇಕೆಂದು ಮನವಿ ಮಾಡಿದರು.



ಎಸ್‌ಎಫ್ಐ ಜಿಲ್ಲಾಧ್ಯಕ್ಷ ಚಂದ್ರು ರಾಠೋಡ ಮಾತನಾಡಿ, ನಗರಕ್ಕೆ ಸುಮಾರು ನಾಲ್ಕು ತಾಲೂಕುಗಳಿಂದ ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಬರುತ್ತಾರೆ. ಪದವಿ ನಂತರದ ಶಿಕ್ಷಣ ಸ್ನಾತಕೋತ್ತರ ಪದವಿ ಕೇಂದ್ರ ವಿದ್ಯಾಭ್ಯಾಸ ಮಾಡಲು ಗಜೇಂದ್ರಗಡದಲ್ಲಿ ಪದವಿ ಕೇಂದ್ರವಿಲ್ಲ. ದೂರ ದೂರದ ಊರುಗಳಿಗೆ ಹೋಗಿ ಕೆಲವು ವಿದ್ಯಾರ್ಥಿಗಳು ಪಿಜಿ ಓದುತ್ತಿದ್ದಾರೆ. ಇನ್ನೂ ಕೆಲವು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದಿಂದ ವಂಚಿತರನ್ನಾಗಿ ಮಾಡುತ್ತಿದೆ ಇದನ್ನು ಎಸ್‌ಎಫ್ಐ ಖಂಡಿಸುತ್ತದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕೋತ್ತರ ಪದವಿ ಕೇಂದ್ರ ಪ್ರಾರಂಭಿಸಬೇಕೆಂದು ಆಕ್ರೋಶ ವ್ಯಕ್ತಪಡಿಸಿದರು.

ಚಂದ್ರು ರಾಠೋಡ, ಗಣೇಶ ರಾಠೋಡ, ಅನಿಲ್ ಆರ್, ವಿಶ್ವನಾಥ, ಪವಾಡಗೌಡ ಮಾಲಿಪಾಟೀಲ, ಗುರುಕಿರಣ್, ಶರಣು ಮಾಟರಂಗಿ, ಪ್ರಸನ್ನ ಮೂರ್ತಿ, ಗೌತಮ್, ಕೀರಣ್ ರಾಠೋಡ, ಲಕ್ಷ್ಮೀ ಕಬ್ಬರಿಗೆ, ಭೀಮವ್ವ, ಕಾವ್ಯ, ಅಕ್ಷತಾ ,ಕಿರಣ್ ಪಮ್ಮಾರ್ ,ಪರಶುರಾಮ್ ಜಾದವ್, ವಿನಾಯಕ್ ರಾಥೋಡ್ ,ದ್ಯಾಮಣ್ಣ ತೆಂಗುಂಟಿ, ಮಂಜುನಾಥ್, ಹರೀಶ, ಮಂಜುನಾಥ್, ಭಾಗ್ಯ ಸೇರಿದಂತೆ ಅನೇಕರು ಇದ್ದರು.

ಮನೆಗೊಂದು ಗ್ರಂಥಾಲಯ ಅಭಿಯಾನಕ್ಕೆ ಡಾ. ಮಾನಸ ಚಾಲನೆ

• **ಗದಗ:** ಜ್ಞಾನವೇ ಸಮಾಜದ ಪ್ರಗತಿಯ ಮೂಲವಾಗಿದ್ದು, ಮನೆಮನೆಗೂ ಅರಿವಿನ ಬೆಳಕು ತಲುಪಿಸುವ ಉದ್ದೇಶದಿಂದ ಮನೆಗೊಂದು ಗ್ರಂಥಾಲಯ ಯೋಜನೆ ಜಾರಿಗೊಳ್ಳುತ್ತಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮನೆಗೊಂದು ಗ್ರಂಥಾಲಯ ಜಿಲ್ಲಾ ಜಾಗೃತಿ ಸಮಿತಿ ಸಹಯೋಗದಲ್ಲಿ ನಗರದ ಅಭಿನವ ನಿವಾಸದಲ್ಲಿ ಮನೆಗೊಂದು ಗ್ರಂಥಾಲಯ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಅಧ್ಯಕ್ಷ ಡಾ.ರವಿ ಗುಂಜೀಕರ ಅಧ್ಯಕ್ಷತೆ ವಹಿಸಿ ಮಾತನಾಡಿ, ಜ್ಞಾನದ ವಿಸ್ತರಣೆ ಮತ್ತು ವೈಚಾರಿಕ ಬೆಳವಣಿಗೆಗೆ ಗ್ರಂಥಗಳು ಪೂರಕವಾಗಿದ್ದು, ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಸಾಹಿತ್ಯ ಪ್ರಮುಖ ಪಾತ್ರವಹಿಸುತ್ತದೆ ಎಂದರು. ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ.ಬಸವರಾಜ ಬಳ್ಳಾರಿ ಮಾತನಾಡಿ, ನಾವು ಮನೆಯಲ್ಲಿ ದೇವರಿಗಾಗಿ ಪ್ರತ್ಯೇಕವಾಗಿ ಹೇಗೆ ದೇವರ ಕೋಣೆಯನ್ನು ಮೀಸಲಿಡುತ್ತೇವೆಯೋ, ಹಾಗೆಯೇ ಮನೆಯಲ್ಲಿ ಐದೋ ಹತ್ತೋ ಪುಸ್ತಕಗಳನ್ನಿಟ್ಟುಕೊಂಡು ಒಂದು ಪುಟ್ಟ ಗ್ರಂಥಾಲಯ ಮಾಡಿಕೊಳ್ಳಬೇಕು. ಅದು ನಮ್ಮ ಪಾಲಿನ ಜ್ಞಾನದ ದೇವಾಲಯವಾಗಲಿದೆ ಎಂದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿವೇಕಾನಂದ ಗೌಡ ಪಾಟೀಲ ಮಾತನಾಡಿ, ಪುಸ್ತಕ ಓದುವ ಹವ್ಯಾಸ ಕೇವಲ ವ್ಯಕ್ತಿಯ ಬೆಳವಣಿಗೆಯಲ್ಲದೆ, ಸಮಾಜದ ಪ್ರಗತಿಗೂ ಪೂರಕ ಎಂದರು. ಜಿಲ್ಲಾ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ. ಶಿವಪ್ಪ ಕುರಿ, ಸಂಚಾಲಕ ಸಂತೋಷ ಅಂಗಡಿ ಮಾತನಾಡಿದರು. ಸಂಚಾಲಕ ಎ.ಎಸ್. ಮಕಾಂದಾರ, ಜಾನಪದ ಸಾಹಿತ್ಯ ಪರಿಷತ್ ಸದಸ್ಯ ಶಂಕ್ರಣ್ಣ ಸಂಕಣ್ಣವರ, ಕೆ.ಎಫ್. ಹಳ್ಯಾಳ, ಎಚ್. ಎಂ. ಶರೀಪನವರ, ಅಶೋಕ ಬರಗುಂಡಿ, ಮುತ್ತು ಬಳಿಯಲಿ, ನಿವೃತ್ತ ಶಿಕ್ಷಕ ಕೆ.ಎಫ್.ಬಳ್ಳಾರಿ, ಜಿಪಂ ಮಾಜಿ ಕೋಶಾಧ್ಯಕ್ಷ ಆರ್.ಎಂ.ನಿಂಬನಾಯ್ಕರ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ವಸಂತ ಮಡ್ಲೂರ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ ವಿಭೂತಿ, ಪೋತಬಾಳ, ನೌಕರರ ಸಂಘದ ಪದಾಧಿಕಾರಿಗಳಾದ ಎಂ.ಎಂ. ನಿಟ್ಟಾಲಿ, ಸಿದ್ದಪ್ಪ ಲಿಂಗದಾಳ, ಲಕ್ಷ್ಮಣರೆಡ್ಡಿ ಮುದಗಣ್ಣವರ, ರಾಜು ಕಂತಿಗೊಣ್ಣವರ, ರಾಜಕುಮಾರ ಸೊಪಡ್ಲ ಸೇರಿದಂತೆ ಅನೇಕ ಸಾಹಿತ್ಯ ಅಭಿಮಾನಿಗಳು ಉಪಸ್ಥಿತರಿದ್ದರು.



ನಾಳೆ ಮಹಾರಥೋತ್ಸವ

• **ನರಗುಂದ:** ಪಟ್ಟಣದ ವೀರಕ್ತಮಠದಲ್ಲಿ ಜರಗುತ್ತಿರುವ ಕರ್ತೃ ಚನ್ನಬಸವ ಮಹಾಶಿವಯೋಗಿಗಳ 157ನೇ ಪುಣ್ಯಸ್ಮರಣೋತ್ಸವದ ಪುರಾಣ ಪ್ರವಚನವು ಶನಿವಾರ ಮಂಗಲವಾಗಲಿದೆ. ಏ.19ಕ್ಕೆ ಫಲ್ಲಕ್ಕಿ ಉತ್ಸವ ಹಾಗೂ ಸಂಜೆ 5 ಗಂಟೆಗೆ ಮಹಾರಥೋತ್ಸವವು ಸಕಲ ವಾದ್ಯಮೇಳದೊಂದಿಗೆ ವಿಜೃಂಭಣೆಯಿಂದ ಜರುಗಲಿದೆ.

ಕಾರ್ಯಕ್ರಮದಲ್ಲಿ ಹುಬ್ಬಳ್ಳಿ ಮೂರುಸಾವಿರ ಮಹಾಸಂಸ್ಥಾನ ಮಠದ ಮಹಾರಾಜ ನಿರಂಜನ ಜಗದ್ಗುರು ಡಾ.ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ, ಮುನವಳ್ಳಿ ಸೋಮಶೇಖರ ಮಠದ ಮುರಘೇಂದ್ರ ಸ್ವಾಮೀಜಿ, ಹುಕ್ಕೇರಿ ಶಿವಬಸವ ಸ್ವಾಮೀಜಿ, ಮೂಲೇಗದ್ದಿ ಅಭಿನವ ಚನ್ನಬಸವ ಸ್ವಾಮೀಜಿ, ಅರಳಿಕಟ್ಟಿ ಶಿವಮೂರ್ತಿ ಸ್ವಾಮೀಜಿ, ಕೂಡಲ ಗುರುನಂದೇಶ್ವರ ಮಠದ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ, ಬಂಗರಗ ಹಿರೇಮಠದ ವಾಮದೇವ ಶಿವಾನಂದ ಶಿವಾಚಾರ್ಯರು, ಕೊಣ್ಣೂರಿನ ಡಾ.ಚನ್ನವೀರೇಶ್ವರ ಸ್ವಾಮೀಜಿ, ಅತಿಥಿಗಳಾಗಿ ಶಾಸಕ ಸಿ.ಸಿ. ಪಾಟೀಲ ಸೇರಿದಂತೆ ಅನೇಕರಿರುವರು.

ಲಕ್ಷ್ಮೀ ಅವಧೂತಗೆ ಕಾಲೇಜಿನಿಂದ ಸನ್ಮಾನ

• **ಗಜೇಂದ್ರಗಡ:** ನಗರದ ಜೆ.ಟಿ.ಪಿ.ಯು.ಕಾಲೇಜಿನ ಪ್ರಾಚಾರ್ಯರು ಹಾಗೂ ಉಪನ್ಯಾಸಕರು ವೀರಾಪೂರು ಗ್ರಾಮಕ್ಕೆ ಭೇಟಿ ನೀಡಿ ಗ್ರಾಮದ ಲಕ್ಷ್ಮೀ ಸುರೇಶ ಅವಧೂತಗೆ ಸನ್ಮಾನ ನೇರವೇರಿಸಿದರು. ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇ 93ರಷ್ಟು ಫಲಿತಾಂಶ ಗಳಿಸಿ ತೃತೀಯ ಸ್ಥಾನ ಪಡೆದಿದ್ದಕ್ಕೆ ಶಾಲಾ ಆಡಳಿತ ಮಂಡಳಿ ಹಾಗೂ ಸರ್ವ ಸಿಬ್ಬಂದಿ ಗ್ರಾಮಕ್ಕೆ ತೆರಳಿ ಸನ್ಮಾನ ಮಾಡಿದರು.

ಬಳಿಕ ಪ್ರಾಚಾರ್ಯ ಸಂಗಮೇಶ ಬಾಗೂರ ಮಾತನಾಡಿ, ಈ ಶೈಕ್ಷಣಿಕ ವರ್ಷದಲ್ಲಿ ನಮ್ಮ ಕಾಲೇಜಿನಿಂದ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಿಂದ 108 ವಿದ್ಯಾರ್ಥಿಗಳು ಹಾಜರಾಗಿದ್ದರು. 19 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 54 ಪ್ರಥಮ,12 ದ್ವಿತೀಯ, 3 ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದರು ಹಾಗೂ ಕಾಲೇಜಿನ ಒಟ್ಟು ಫಲಿತಾಂಶ ಶೇ.82ರಷ್ಟಾಗಿದೆ ಎಂದರು.

ನ್ಯಾಯವಾದಿ ಮುತ್ತು ಅವಧೂತ ಮಾತನಾಡಿ, ಬೆಳೆಯುವ ಸಿರಿ ಮೊಳಕೆಯಲ್ಲಿ ಎನ್ನುವಂತೆ ನಮ್ಮ ಮನೆ ಮಗಳು ಕಾಲೇಜಿಗೆ 3 ನೇ ಸ್ಥಾನ ಬಂದಿದ್ದು ಹೆಮ್ಮೆಯಾಗಿದೆ ಎಂದರು. ಈ ಸಂದರ್ಭದಲ್ಲಿ ಆನಂದ ಜೂಚನಿ,ಅಭಿಲಾಷಾ ಗಂಜಿಹಾಳ, ಸಿದ್ದು ಕರಬಾಶೆಟ್ಟರ, ಮಾಧುರಿ ನಾಡಗೇರ, ಮುತ್ತಪ್ಪ ಮಾರನಬಸರಿ, ಹನಮಂತ ನಡಕಟ್ಟಿನ, ಪ್ರವೀಣ ಚಿತ್ರಗಾರ, ಶರಣು ಅಂಗಡಿ, ಮಹೇಶ ಇಟಗಿ, ಶಿಲ್ಪಾ ಸಿಂದೂರ ಸೇರಿದಂತೆ ಅನೇಕರು ಇದ್ದರು.



ಉಚ್ಚಾಟನೆ ನಿರ್ಧಾರ ಸರಿಯಿದೆ: ಮುಧೋಳ

• **ಮುಂಡರಗಿ:** ಹರಿಹರ ಪೀಠದ ಸಂಘಟನೆಯಲ್ಲಿ ಯಾವುದೇ ಸಹಕಾರವನ್ನು ಇವರು ನೀಡಲಿಲ್ಲ. ಪ್ರತಿ ಜಿಲ್ಲೆಯಲ್ಲಿ ಪ್ರವಾಸಕ್ಕೆ ಹೋದಾಗ ರಾಜ್ಯ, ಜಿಲ್ಲೆ, ತಾಲೂಕು ಯುವ ಘಟಕದ ಪದಾಧಿಕಾರಿಗಳಿಗೆ ಯಾವುದೇ ರೀತಿಯ ಸಹಕಾರ ನೀಡೋದು ಇರಲಿ ನಮ್ಮ ನಮ್ಮ ಒಳಗೆ ಒಡಕು ಮೂಡಿಸಿ ಹೋಗುತ್ತಿದ್ದರು. ಇಂತಹ ಸ್ವಾಮೀಜಿ ವಚನಾನಂದ ಶ್ರೀಗಳನ್ನು ಉಚ್ಚಾಟನೆ ಮಾಡಿದ್ದು ಸರಿಯಾದ ನಿರ್ಧಾರ ಎಂದು ರಾಜ್ಯ ಯುವ ಘಟಕದ ಪ್ರಧಾನ ಕಾರ್ಯದರ್ಶಿ ಮಂಜುನಾಥ ಮುಧೋಳ ಹೇಳಿದ್ದಾರೆ.



ಅವರು ಈ ಕುರಿತು ಪ್ರಕಟಣೆ ನೀಡಿ, ಸಮಾಜದ ಯಾವುದೇ ಕಾರ್ಯಕ್ರಮವಿರಲಿ ಕೊನೆಗೆ ಆಶೀರ್ವಚನ ಮಾಡಿ ಅಂದರೆ ಸಮುದಾಯದ ಹಿರಿಯರು , ಸಂಘಟನೆ ಮಾಡಿದವರು ಮಾತನಾಡಲು ಅವಕಾಶ ಕೊಡದೆ ತಾವೇ ಮೊದಲು ಮಾತನಾಡಿ ಹೋಗಿ ಬಿಡುತ್ತಿದ್ದರು. ಇಲ್ಲಿ ಸಂಘಟನೆ ಮಾಡಿದವರ ಗತಿಯೇನು, ನಮಗೆ ಕಾರ್ಯಕ್ರಮಕ್ಕೆ ಸಹಕಾರ ಮಾಡದವರು ಇಂತಹ ಸ್ವಾಮಿ ನಮಗೆ ಬೇಕಾ ಅಂತಾ ಪ್ರಶ್ನೆ ಮಾಡುತ್ತಿದ್ದರು. ಇದರಿಂದ ಸಂಘಟನೆ ಮಾಡೋದೇ ಸವಾಲಾಗಿತ್ತು. ಕಳೆದ ಐದು ವರ್ಷದ ಹಿಂದೆಯೇ

ಸುಮಾರು 500 ಜನ ಯುವಕರು ಸೇರಿದ ಸಭೆಯಲ್ಲಿ ಶ್ರೀಗಳ ನಡೆಯನ್ನು ಖಂಡಿಸಿದ್ದರು. ಹರಿಹರ ಪೀಠದಲ್ಲಿ ವೀರರಾಣಿ ಕಿತ್ತೂರ ಚನ್ನಮ್ಮನವರ ಒಂದೆ ಒಂದು ದೊಡ್ಡ ಫೋಟೋ ಇಲ್ಲ. ಕೇವಲ ಶ್ರೀಗಳ ಫೋಟೋ ನೋಡಿ ಇದು ಪಂಚಮಸಾಲಿ ಪೀಠನಾ ಅಥವಾ ವಚನಾನಂದ ಸ್ವಾಮಿಗಳ ದರ್ಬಾರ್ ಪೀಠ ಎಂದು ಎಲ್ಲರೂ ತಮ್ಮ ತಮ್ಮ ಮಾತುಗಳ ಮೂಲಕ ಇವರ ಮುಂದೆನೇ ಹೇಳಿದ್ದರು. ಪೀಠದಲ್ಲಿ ಶ್ರೀಗಳ ಫೋಟೋ ಸಾಕಷ್ಟಿವೆ. ಉಚ್ಚಾಟನೆಗೆ ವಿರೋಧ ವ್ಯಕ್ತಪಡಿಸಿ ಹೋರಾಟ ಮಾಡುತ್ತಿರುವುದು ಹಾಸ್ಯಾಸ್ಪದವಾಗಿದೆ. ಹಿರಿಯರ ನಿರ್ಧಾರ ಸರಿಯಿದೆ. ಶೀಘ್ರ ಪೀಠಬಿಟ್ಟು ತೆರಳಿ. ಇಲ್ಲದಿದ್ದರೆ ರಾಜ್ಯದಲ್ಲಿರುವ ಯುವಕರು ಸೇರಿ ನಿಮ್ಮನ್ನು ಹೊರಗೆ ಹಾಕಬೇಕಾಗುತ್ತದೆ. ಇದಕ್ಕೆ ಅವಕಾಶ ನೀಡದೆ ಗೌರವಿತವಾಗಿ ಪೀಠ ಬೀಡಿ ಇರೋ ಮರ್ಯಾದೆ ಉಳಿಸಿಕೊಳ್ಳಿ ಎಂದಿದ್ದಾರೆ.

ನಿರ್ಮಲಾಗೆ ರಾಷ್ಟ್ರೀಯ ಬಸವಶ್ರೀ ಪ್ರಶಸ್ತಿ



• **ಗದಗ:** ಬೆಂಗಳೂರಿನ ವಚನ ಟ್ರಸ್ಟ್ ಹಾಗೂ ಧಾರವಾಡದ ಚೇತನ್ ಫೌಂಡೇಶನ್ ಸಹಯೋಗದಲ್ಲಿ ದಾವಣಗೆರೆಯ ರೋಟರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ವರ್ಣರಂಜಿತ ಸಮಾರಂಭದಲ್ಲಿ ಗದುಗಿನ ಪ್ರಾಥಮಿಕ ಶಾಲಾ ಶಿಕ್ಷಕಿ ನಿರ್ಮಲಾ ಚಿತ್ತಾಮೂರ ರಾಷ್ಟ್ರೀಯ ಬಸವಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬಸವ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ ಸಾಧಕರನ್ನು ಗುರುತಿಸಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಬಸವ ಚೇತನ, ಬಸವಶ್ರೀ ಪ್ರಶಸ್ತಿಯೊಂದಿಗೆ ಸ್ಮರಣಿಕೆ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಕೆ.ಬಿ.ಪರಮೇಶ್ವರಪ್ಪ ಉದ್ಘಾಟಿಸಿದರು. ವಚನ ವೈಭವ ಕುರಿತು ಸಾಹಿತಿ ಬಿ.ರಂಗಸ್ವಾಮಿ ಉಪನ್ಯಾಸ ನೀಡಿದರು. ಅಧ್ಯಕ್ಷತೆಯನ್ನು ಪರಮೇಶ್ವರಪ್ಪ ಸಿರಗೇರಿ ವಹಿಸಿದ್ದರು.

ಕೂಡಲಗಿಯ ಎನ್.ಎಂ.ರವಿಕುಮಾರ, ಧಾರವಾಡದ ಎಲ್.ಐ.ಲಕ್ಕಮ್ಮನವರ, ಬೆಂಗಳೂರಿನ ಸಾಹಿತಿ ಯಾಸ್ಮಿನ್‌ಭಾನು ಬಿ. ಇದ್ದರು.

ಧಾರವಾಡದ ಚೇತನ್ ಫೌಂಡೇಶನ್‌ನ ಅಧ್ಯಕ್ಷ ಡಾ.ಚಂದ್ರಶೇಖರ ಮಾಡಲಗೇರಿ ಮಾತನಾಡಿ, ಬಸವ ಜಯಂತಿಯ ಅಂಗವಾಗಿ ಸಾಧಕರನ್ನು ಸನ್ಮಾನಿಸುವದು ಫೌಂಡೇಶನ್‌ದ ಉದ್ದೇಶವಾಗಿದ್ದು ಬರಲಿರುವ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಎಲ್ಲ ಜಿಲ್ಲೆಗಳಲ್ಲೂ ಹಮ್ಮಿಕೊಳ್ಳುವ ಮೂಲಕ ಹಿರಿಯ ಸಾಧಕರನ್ನು ಗೌರವಿಸಲಾಗುವುದು ಎಂದರು.

ಕಿರುಸುದ್ದಿ

ಏ.28 ರಂದು ಸಿರಿ ಸಿಂಗಾರ ಕೋಲ

ತೀರ್ಥಹಳ್ಳಿ: ಇಲ್ಲಿಯ ಕರುಣಾಪುರ-ಮೇಗರವಳ್ಳಿಯ ವೀರಕಲ್ಲುಕುಟಿಕ ದೈವಸ್ಥಾನದಲ್ಲಿ ವರ್ತೆ ವೀರ ಕಲ್ಲುಕುಟಿಕ ಮತ್ತು ಶ್ರೀ ಚೌಡೇಶ್ವರಿ ಅಮ್ಮನವರ 28ನೇ ವರ್ಷದ ಸಿರಿ ಸಿಂಗಾರ ಕೋಲ ಏ.28 ರಂದು ಜರುಗಲಿದೆ.



ಏ.27 ರಂದು ರಾತ್ರಿ 7 ಗಂಟೆಗೆ ವರ್ತೆ ವೀರ ಕಲ್ಲುಕುಟಿಕ ಮತ್ತು ಶ್ರೀ ಚೌಡೇಶ್ವರಿ ಅಮ್ಮನವರಿಗೆ ಕಲಹೋಮ ನಡೆಯಲಿದೆ. ಏ.28 ರಂದು ಬೆಳಿಗ್ಗೆ 8.30 ಗಂಟೆಗೆ ನಾಗದೇವರಿಗೆ ಕಲಹೋಮ, ಸಾಮೂಹಿಕ ಆಶ್ಲೇಷ ಪೂಜೆ, ಮಧ್ಯಾಹ್ನ ಅನ್ನಸಂತರ್ಪಣೆ ಜರುಗಲಿದೆ. ಏ.28 ರಂದು ಮಧ್ಯಾಹ್ನ 2 ಗಂಟೆಯಿಂದ ತುಲಾಭಾರ ಹೊರಸೇವೆ ನಡೆಯಲಿದೆ ಎಂದು ಪ್ರಧಾನ ಪಾತ್ರಿಯವರಾದ ಕೆ.ಎಲ್.ಚಂದ್ರಶೇಖರ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಬಸ್‌ಗೆ ಏಕಾಏಕಿ ಬೆಂಕಿ: 23 ಪ್ರಯಾಣಿಕರು ಪಾರು

ಭಟ್ಕಳ: ಮುರ್ಡೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ಮಧ್ಯಾಹ್ನ ಸಾರಿಗೆ ಸಂಸ್ಥೆಯ ಬಸ್‌ಗೆ ಏಕಾಏಕಿ ಬೆಂಕಿ ತಗುಲಿದ್ದು, ಚಾಲಕನ ಸಮಯೋಚಿತ ಕ್ರಮದಿಂದ 23 ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ.

ಕುಮಟಾದಿಂದ ಭಟ್ಕಳಕ್ಕೆ ಬರುತ್ತಿದದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ರಾಷ್ಟ್ರೀಯ ಹೆದ್ದಾರಿ 66ರಿಂದ ಮುರುಡೇಶ್ವರ ನಾಕೆಯಿಂದ ಬಸ್ ನಿಲ್ದಾಣದತ್ತ ತೆರಳುವ ವೇಳೆ ಜನತಾ ವಿದ್ಯಾಲಯ ಸಮೀಪ ಬಸ್ಸಿನ ಮುಂದಿನ ಎಡ ಚಕ್ರ ಜಾಮ್ ಆಗಿದೆ.

ಇದನ್ನು ಗಮನಿಸಿದ ಚಾಲಕ ಗಣಪತಿ ಚಿದಾನಂದ ಚೌಡಕಿ ಅವರು ತಕ್ಷಣ ಬಸ್ಸನ್ನು ನಿಲ್ಲಿಸಿ ಪರಿಶೀಲನೆ ನಡೆಸುವಾಗ ಇಂಜಿನ್ ಭಾಗದಿಂದ ಹೊಗೆ ಕಾಣಿಸಿಕೊಂಡು ಕೆಲವೇ ಕ್ಷಣಗಳಲ್ಲಿ ಬೆಂಕಿ ಹೊತ್ತಿಕೊಂಡಿತು. ಪರಿಸ್ಥಿತಿ ಗಂಭೀರವಾಗುತ್ತಿರುವುದನ್ನು ಅರಿತ ಚಾಲಕ ಹಾಗೂ ನಿರ್ವಾಹಕ ಶ್ರೀಪಾದ್ ಹನುಮಂತ ಮಡಿವಾಳ ಅವರು ಬಸ್ಸಿನಲ್ಲಿದ್ದ ಪ್ರಯಾಣಿಕರನ್ನು ತಕ್ಷಣ ಸುರಕ್ಷಿತವಾಗಿ ಕೆಳಗಿಳಿಸಿದರು. ನಂತರ ಸ್ಥಳೀಯ, ಆಟೋ ಚಾಲಕ ಮಂಜುನಾಥ ಮೊಗೇರ, ಬಸ್ ಸಿಬ್ಬಂದಿ ಹಾಗೂ ಅಗ್ನಿಶಾಮಕ ದಳದ ಸಹಕಾರದಿಂದ ಬೆಂಕಿಯನ್ನು ನಂದಿಸಲಾಯಿತು. ಭಟ್ಕಳ ಡಿಪೋದಿಂದ ಮೆಕಾನಿಕ್‌ಗಳು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದರು. ಪ್ರಾಥಮಿಕ ಮಾಹಿತಿಯಂತೆ ಚಕ್ರದ ಲೈನರ್ ಜಾಮ್ ಆಗಿರುವುದೇ ಬೆಂಕಿಗೆ ಕಾರಣವಾಗಿರಬಹುದು ಎಂದು ಶಂಕಿಸಲಾಗಿದೆ. ಸುಮಾರು ಐದು ವರ್ಷ ಹಳೆಯದಾದ ಈ ಬಸ್‌ನಲ್ಲಿ ಸಂಭವಿಸಿದ ಘಟನೆಯಿಂದ ಯಾರಿಗೂ ಏನೂ ಆಗಿಲ್ಲ.

ಹಣ ಹೂಡಿಕೆ ನೆಪ: 22.92ಲಕ್ಷ ರೂ.ವಂಚನೆ

ಹುಬ್ಬಳ್ಳಿ: ಹೂಡಿಕೆ ಮಾಡಿದರೆ ಹೆಚ್ಚು ಹಣ ಗಳಿಸಬಹುದು ಎಂದು ನಂಬಿಸಿದ ಅಪರಿಚಿತ ವ್ಯಕ್ತಿ ಧಾರವಾಡ ನಿವಾಸಿಯೊಬ್ಬರಿಗೆ 22,92 ಲಕ್ಷ ರೂ. ವಂಚಿಸಿದ ಪ್ರಕರಣ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಧಾರವಾಡ ಸೈದಾಪುರ ಹೊಸ ಓಣಿಯ ನಿವಾಸಿ ಪುನೀತ್ ಅಂಬಣ್ಣವರ ಹಣ ಕಳೆದುಕೊಂಡವರು. ಪುನೀತ್ ಅವರು ಇನ್‌ಸ್ಟಾಗ್ರಾಂನಲ್ಲಿ ಕ್ರಿಪ್ಟೋ ಕರೆನ್ಸಿ ಟ್ರೇಡಿಂಗ್ ಕುರಿತು ಸಂದೇಶ ನೋಡಿದ್ದಾರೆ. ಬಳಿಕ ಟೆಲಿಗ್ರಾಮ್ ಲಿಂಕ್ ಕಳುಹಿಸಿ ಅಪರಿಚಿತರು ಕ್ರಿಪ್ಟೋ ಕರೆನ್ಸಿ ಟ್ರೇಡಿಂಗ್ ಹಣ ಗಳಿಸಬಹುದು ಎಂದು ನಂಬಿಸಿ ಹಂತ ಹಂತವಾಗಿ ಹಣ ವರ್ಗಾಯಿಸಿಕೊಂಡು ವಂಚಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ವಿನಯ ಕುಲಕರ್ಣಿ ಸೇರಿ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ಪ್ರಕಟ

ಕೊರವರ-ಮುತ್ತಗಿ ಮನೆಗೆ ಭದ್ರತೆ

ಧಾರವಾಡ: ಯೋಗೀಶಗೌಡರ ಕೊಲೆ ಪ್ರಕರಣದಲ್ಲಿ ಮಾಜಿ ಸಚಿವ ವಿನಯ ಕುಲಕರ್ಣಿ ಸೇರಿ ಇತರ ಆರೋಪಿಗಳಿಗೆ ನ್ಯಾಯಾಲಯವು ಜೀವಾವಧಿ ಶಿಕ್ಷೆ ಪ್ರಕಟಿಸಿದ ಹಿನ್ನೆಲೆ ಮುನ್ನೆಚ್ಚರಿಕಾ ಕ್ರಮವಾಗಿ ಪ್ರಮುಖರ ಮನೆಗಳಿಗೆ ಪೊಲೀಸ್ ಭದ್ರತೆ ತೀವ್ರಗೊಳಿಸಿದೆ.

ಈ ಪ್ರಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹೋರಾಟಗಾರ ಮತ್ತು ಜನಜಾಗೃತಿ ಸಂಘದ ಅಧ್ಯಕ್ಷ ಬಸವರಾಜ ಕೊರವರ ಹಾಗೂ ಮಾಫಿ ಸಾಕ್ಷಿಯಾದ ಬಸವರಾಜ ಮುತ್ತಗಿ ಅವರ ನಿವಾಸಗಳಿಗೆ ಜಿಲ್ಲಾ ಪೊಲೀಸ್ ಇಲಾಖೆಯು ಹೆಚ್ಚಿನ ರಕ್ಷಣೆ ಒದಗಿಸಿದೆ.

ಭದ್ರತೆಗೆ ಕಾರಣವೇನು? ನ್ಯಾಯಾಲಯದ ತೀರ್ಪು ಪ್ರಕಟವಾದ ನಂತರ ನಗರದಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಮತ್ತು ಭದ್ರತಾ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಬಸವರಾಜ ಕೊರವರ: ಯೋಗೀಶಗೌಡ ಕೊಲೆ ಪ್ರಕರಣದ ಆರಂಭದಿಂದಲೂ ಕಾನೂನು ಹೋರಾಟದಲ್ಲಿ ಸಕ್ರಿಯರಾಗಿದ್ದವರು.

ಬಸವರಾಜ ಮುತ್ತಗಿ: ಪ್ರಕರಣದಲ್ಲಿ ಮಾಫಿ ಸಾಕ್ಷಿಯಾಗುವ ಮೂಲಕ ತನಿಖೆಗೆ ಮಹತ್ವದ ತಿರುವು ನೀಡಿದವರು. ಈ ಇಬ್ಬರಿಗೂ ಬೆದರಿಕೆ ಇರುವ ಸಾಧ್ಯತೆಯನ್ನು ಮನಗಂಡು ಪೊಲೀಸರು ಅವರ ಮನೆಗಳ ಸುತ್ತಮುತ್ತ ಹಗಲು-ರಾತ್ರಿ ಕಾವಲು ಹಾಕಿದ್ದಾರೆ.

ನಗರದಾದ್ಯಂತ ಬಂದೋಬಸ್ತ್: ತೀರ್ಪಿನ ಹಿನ್ನೆಲೆ ಧಾರವಾಡ ನಗರದ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸರು ಪಥಸಂಚಲನ ನಡೆಸಿದ್ದು, ಕೆ.ಎಸ್.ಆರ್.ಪಿ ಹಾಗೂ ಡಿ.ಎ.ಆರ್ ತುಕಡಿಗಳನ್ನು ಪ್ರಮುಖ ವೃತ್ತಗಳಲ್ಲಿ ನಿಯೋಜಿಸಲಾಗಿದೆ.



ಯೋಗೀಶಗೌಡ ಕೊಲೆ ಪ್ರಕರಣ

> ಯಾವುದೇ ವ್ಯಕ್ತಿ ಅಥವಾ ಗುಂಪು ಕಾನೂನು ಕೈಗೆತ್ತಿಕೊಳ್ಳಲು ಪ್ರಯತ್ನಿಸಿದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಶಾಂತಿ ಕಾಪಾಡುವ ನಿಟ್ಟಿನಲ್ಲಿ ಪ್ರಮುಖರ ಮನೆಗಳಿಗೆ ಭದ್ರತೆ ಒದಗಿಸಲಾಗಿದೆ.
>
> ■ **ಎನ್.ಶಶಿಕುಮಾರ** ಹು-ಧಾ ಪೊಲೀಸ್ ಆಯುಕ್ತರು

ಕೋರ್ಟ್ ತೀರ್ಪು ಸ್ವಾಗತ: ಬಸವರಾಜ ಕೊರವರ

ಧಾರವಾಡ: ಇಂದು ಐತಿಹಾಸಿಕ ತೀರ್ಪು ಬಂದಿದ್ದು, ಯೋಗೀಶಗೌಡ ಕೊಲೆ ಪ್ರಕರಣದಲ್ಲಿ ಭಾಗಿಯಾದ ಅಪರಾಧಿಗಳಿಗೆ ಶಿಕ್ಷೆಯಾಗಿದೆ ಎಂದು ಜನಜಾಗೃತಿ ಸಂಘದ ಅಧ್ಯಕ್ಷ ಬಸವರಾಜ ಕೊರವರ ಹೇಳಿದರು.



ಶುಕ್ರವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಶಾಸಕ ವಿನಯ ಕುಲಕರ್ಣಿ ಸೇರಿ 16 ಅಪರಾಧಿಗಳಿಗೆ ಶಿಕ್ಷೆಯಾಗಿದೆ. ಜತೆಗೆ ಅದರಲ್ಲಿ ಚನ್ನಕೇಶವ ಹೊರತು ಪಡಿಸಿ ಉಳಿದವರಿಗೆ ಜೀವಾವಧಿ ಶಿಕ್ಷೆಯಾಗಿರುವುದು ಸ್ವಾಗತಾರ್ಹ ಎಂದರು. ಈ ಆದೇಶದಿಂದ ನನಗೆ ಸಂತೋಷ ದುಃಖ ಯಾವುದು ಆಗಿಲ್ಲ. ಆದರೆ, ಇಂತಹ ಐತಿಹಾಸಿಕ ಪ್ರಕರಣವನ್ನು ಸಿಬಿಐಗೆ ಕೊಡಿಸುವುದರಲ್ಲಿ ನಾನು ಮುಂಚೂಣಿಯಲ್ಲಿ ನಿಂತು ಹೋರಾಟ ಮಾಡಿದ್ದೇನೆ ಎನ್ನುವ ಹೆಮ್ಮೆ ನನಗಿದೆ ಎಂದು ಹೇಳಿದರು.

ಭವಿಷ್ಯದಲ್ಲಿ ಇಂತಹ ಪ್ರಕರಣಗಳು ನಡೆಯದಂತೆ ಸರ್ಕಾರ ತಕ್ಷಣವೇ ಶಿಫಾರಸು ಪತ್ರಗಳನ್ನು ಶಾಸಕ, ಮಂತ್ರಿಗಳಿಂದ ಪಡೆದು ಪೊಲೀಸರನ್ನು ಠಾಣೆಗೆ ನಿಯುಕ್ತಿ ಮಾಡುವುದನ್ನು ನಿಲ್ಲಿಸಬೇಕು. ಅಂದಾಗ ಪೊಲೀಸರು ಸ್ವತಂತ್ರವಾಗಿ ಕೆಲಸ ಮಾಡಲು ಸಾಧ್ಯ ಎಂದರು. ಐತಿಹಾಸಿಕ ಹೋರಾಟದಲ್ಲಿ ಪಾಲ್ಗೊಂಡು, ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಿರುವುದಕ್ಕೆ ನನಗೆ ಖುಷಿ ಇದೆ. ನ್ಯಾಯಾಲಯ ಎಲ್ಲ ಅಪರಾಧಿಗಳಿಗೆ ದಂಡ ಕೂಡ ವಿಧಿಸಿದೆ. ಯೋಗೀಶಗೌಡರ ಮಕ್ಕಳಿಗೆ ಪರಿಹಾರ ನೀಡಲು ಸೂಚಿಸಿದೆ ಎಂದು ಹೇಳಿದರು.

ಪಟಾಕಿ ಸಿಡಿಸಿ ಸಹೋದರಿ ಸಂಭ್ರಮ

ಧಾರವಾಡ: ಹತ್ತು ವರ್ಷಗಳ ಸುದೀರ್ಘ ಹೋರಾಟದ ನಂತರ ನನ್ನ ತಮ್ಮನ ಸಾವಿಗೆ ನ್ಯಾಯ ಸಿಕ್ಕಿದೆ. ಅಧರ್ಮಕ್ಕೆ ಸೋಲಾಗಿದೆ, ಧರ್ಮಕ್ಕೆ ಜಯ ಸಿಕ್ಕಿದೆ ಎಂದು ಹತ್ಯೆಗೀಡಾದ ಯೋಗೀಶಗೌಡರ ಸಹೋದರಿ ಅಕ್ಕಮಹಾದೇವಿ ಭಾವುಕರಾಗಿ ನುಡಿದರು. ತೀರ್ಪು ಪ್ರಕಟವಾಗುತ್ತಿದ್ದಂತೆ ಯೋಗೀಶಗೌಡ ಅವರ ಸಹೋದರಿ ಮತ್ತು ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. 'ಯೋಗೀಶಗೌಡ ಗೌಡರ ಅಮರರಾಗಲಿ' ಎಂಬ ಘೋಷಣೆಗಳು ಮೊಳಗಿದವು. ಪ್ರಕರಣವನ್ನು ಸಿಬಿಐಗೆ ವಹಿಸಲು ನಾವು ಪಟ್ಟ ಶ್ರಮ ಸಾರ್ಥಕವಾಗಿದೆ. ಅಧಿಕಾರ ಮತ್ತು ಹಣದ ಬಲದ ಮುಂದೆ ನ್ಯಾಯ ಸೋಲುವುದಿಲ್ಲ ಎಂಬುದು ಇಂದಿನ ತೀರ್ಪಿನಿಂದ ಸಾಬೀತಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಪಂಪ್ಡ್ ಸ್ಟೋರೇಜ್ ಯೋಜನೆ ತಡೆಗೆ 'ಜನಾಂದೋಲನ'

ಹುಬ್ಬಳ್ಳಿ: ಕೇಂದ್ರ ಹಾಗೂ ರಾಜ್ಯ ಸರ್ಕಾರ ಶರಾವತಿ ಕಣಿವೆಯಲ್ಲಿ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಗೆ ತರಬಾರದು ಎಂದು ಜನಾಂದೋಲನ ಹಮ್ಮಿಕೊಳ್ಳಲಾಗುತ್ತಿದೆ ಎಂದು ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನದಿತಿರುವು ಯೋಜನೆಗಳಿಂದ ಪಶ್ಚಿಮ ಘಟ್ಟದಲ್ಲಿ ಒಂದು ಲಕ್ಷ ಎಕರೆ ಅರಣ್ಯ ನಾಶವಾಗಲಿದೆ. ಭಾರೀ ಭೂ ಕುಸಿತಗಳು ಸಂಭವಿಸಲಿವೆ. ಲಕ್ಷ ರೈತರು, ಮೀನುಗಾರರು ನಿರಾಶ್ರಿತರಾಗಲಿದ್ದಾರೆ. ಇದಲ್ಲದೇ ಲಕ್ಷಾಂತರ ಜೀವರಾಶಿಗಳು ಅಳಿಸಿ ಹೋಗಲಿವೆ. ಅಳಿವಿನಂಚಿನಲ್ಲಿರುವ ಸಿಂಗಳಿಕ ಸಂತತಿಗೆ ಧಕ್ಕೆ ಬರಲಿದೆ.

ಬೇಡ್ತಿ ಅನಾಶಿನಿ ನದಿ ತಿರುವು ಯೋಜನೆಗಳು ಪಶ್ಚಿಮ ಘಟ್ಟಕ್ಕೆ ಮಾರಕ. ನೀರಿಲ್ಲದ ಬೇಡ್ತಿ ವರದಾ ಯೋಜನೆಯ ಡಿಪಿಆರ್ ತಯಾರಿಕೆಗೆ ತಡೆ ನೀಡಬೇಕು ಎಂದು ಆಗ್ರಹಿಸಿದರು. ಯಲ್ಲಾಪುರ ಭಾಗದಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ಕೈಗಾ ಯೋಜನೆ ಜಾರಿಯಾದ ನಂತರ ಹೆಚ್ಚಾಗಿದೆ. ಜಿಲ್ಲೆಗೆ ಬೇಡದ ಇಂತಹ ಅನೇಕ ಯೋಜನೆಗಳನ್ನು ತರಲಾಗಿದೆ. ಜಿಲ್ಲೆಯ ಧಾರಣ ಶಕ್ತಿ ಮುಗಿದು ಹೋಗಿದೆ ಎಂದು ಅನೇಕ ತಜ್ಞರು ವರದಿ ನೀಡಿದಾಗ್ಯೂ ಹೊಸ ಯೋಜನೆಗಳನ್ನು ಸರ್ಕಾರ ತರಲು ಹೊರಟಿರುವುದು ಸರಿಯಲ್ಲ ಎಂದು ಹೇಳಿದರು.

ಕೇಂದ್ರ ವನ್ಯಜೀವಿ ಮಂಡಳಿಯ ತಜ್ಞರ ಸಮಿತಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಸ್ಥಳ ಸಮೀಕ್ಷೆ ನಡೆಸಿ ನೀಡಿರುವ ಶಿಫಾರಸು ಜಾರಿ ಮಾಡಬೇಕು. ಪಶ್ಚಿಮ ಘಟ್ಟದ ನದಿ ಕಣಿವೆಗಳ ಸಂರಕ್ಷಣೆಗೆ ಸುಸ್ಥಿರ ಅಭಿವೃದ್ಧಿ ಯೋಜನೆಗಳನ್ನು ಘೋಷಿಸಬೇಕು ಎಂದು ಆಗ್ರಹಿಸಿದರು. ವನ್ಯ ಜೀವಿ ಕಾನೂನು ತಜ್ಞ ಗಿರಿಧರ ಕುಲಕರ್ಣಿ ಮಾತನಾಡಿ, ಪಶ್ಚಿಮ ಘಟ್ಟ ಸೂಕ್ಷ್ಮ ಪ್ರದೇಶವಾಗಿದೆ. ಅಂತಹ ಅರಣ್ಯ ಎಲ್ಲಿಯೂ ಇಲ್ಲ. ಇಂತಹ ವಿರಳ ಕಾಡು ಉಳಿಸಿಕೊಳ್ಳಬೇಕೆಂಬ ಕಾನೂನುಗಳೇ ಇವೆ. ಹೀಗಿರುವಾಗ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಸರ್ಕಾರಗಳು ಅನುಮತಿ ನೀಡಿದರೆ ಅನಿವಾರ್ಯವಾಗಿ ಕೋರ್ಟ್ ಮೊರೆ ಹೋಗಬೇಕಾಗುತ್ತದೆ ಎಂದರು.

ಪರ್ಯಾವರಣ ಅಧ್ಯಕ್ಷ ಪ್ರೊ.ಬಿ.ಎಂ. ಕುಮಾರಸ್ವಾಮಿ, ಪಶ್ಚಿಮ ಘಟ್ಟದ ಸರ್ವನಾಶಕ್ಕೆ ರಾಜ್ಯ ಸರ್ಕಾರ ಪಣ ತೊಟ್ಟಂತೆ ಕಾಣುತ್ತಿದೆ. ರಾಜಕಾರಣಿಗಳು ವಿಜ್ಞಾನಿಗಳಿಗಿಂತ ಬುದ್ಧಿವಂತರು ಎಂದು ಕೊಂಡಿದ್ದಾರೆ. ಅರಣ್ಯ ನಾಶ ಮಾಡಬಾರದು ಎಂದು ಎಷ್ಟೇ ಹೇಳಿದರೂ ಅದರ ವಿರುದ್ಧವಾಗಿ ಕೆಲಸ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ಅಧ್ಯಕ್ಷ ಬಸವರಾಜ ಪಾಟೀಲ, ವರದ ಶ್ರೀ ಫೌಂಡೇಷನ್ ಅಧ್ಯಕ್ಷ ಮಲ್ಲಿಕಾರ್ಜುನ ರಡ್ಡೇರ ಇದ್ದರು.



ಅಪಘಾತದಲ್ಲಿ ಒಂಬತ್ತು ಜನ ದುರ್ಮರಣ

ಮುಗಿಲು ಮುಟ್ಟಿದ ಆಕ್ರಂದನ

ರಾಯಚೂರು: ರಸ್ತೆ ಅಪಘಾತದಲ್ಲಿ ಜಿಲ್ಲೆಯ ಸಿರವಾರ ಪಟ್ಟಣ ಪಂಚಾಯಿತಿಯ ಸದಸ್ಯ ಕೃಷ್ಣಾ ನಾಯಕ, ಪತ್ನಿ, ಮೂವರು ಮೊಮ್ಮಕ್ಕಳು ಸೇರಿದಂತೆ ಕುಟುಂಬದ ಒಂಬತ್ತು ಜನ ಮೃತಪಟ್ಟ ಹೃದಯ ವಿದ್ರಾವಕ ಘಟನೆ ಕುಟುಂಬ ವರ್ಗಕ್ಕೆ ಹಾಗೂ ಸಿರವಾರ ತಾಲೂಕಿನ ಜನತೆಗೆ ಆಘಾತವನ್ನುಂಟು ಮಾಡಿದೆ.

ಕೃಷ್ಣಾ ನಾಯಕ ಅವರ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಪಟ್ಟಣ ಹಾಗೂ ತಾಲೂಕಿನ ಜನತೆ ತಂಡೋಪ ತಂಡವಾಗಿ ಆಗಮಿಸಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳುತ್ತಿದ್ದ ಸಂದರ್ಭದಲ್ಲಿ ಕುಟುಂಬಸ್ಥರ ಹಾಗೂ ಸಾರ್ವಜನಿಕರ ಆಕ್ರಂದನ ಎಂತಹ ಹೃದಯಗಳನ್ನು ಕರಗಿಸುವಂತಿತ್ತು.

ಖಾಸಗಿ ಬಸ್ ಲಿಂಗಸುಗೂರಿನಿಂದ ಕಲಬುರ್ಗಿ ಕಡೆಗೆ ಹೊರಟಿತ್ತು. ಲಿಂಗಸುಗೂರ ಕಡೆಗೆ ಕೃಷ್ಣಾ ನಾಯಕ ಅವರ ಕುಟುಂಬ ಲಿಂಗಸೂಗೂರು ಕಡೆಗೆ ಹೊರಟಿದ್ದ ಕಿಯಾ ಕಾರಿನಲ್ಲಿದ್ದ ಹತ್ತು ಜನರಲ್ಲಿ ಆರು ಜನರು ಸುಟ್ಟು ಕರಕಲಾಗಿದ್ದಾರೆ. ಕಾರ್ ಹಾಗೂ ಬಸ್ ಮುಖಾಮುಖಿ ಡಿಕ್ಕಿ ಸಂಭವಿಸಿದಾಗ ಕಾರಿನ ಎಸಿ ಸಿಲೆಂಡರ್ ಸ್ಫೋಟಗೊಂಡ ಪರಿಣಾಮ ತಕ್ಷಣದಲ್ಲಿ ಬೆಂಕಿ ಹೊತ್ತಿಕೊಂಡಿದೆ. ಇದರಿಂದ ಕೃಷ್ಣಾ ನಾಯಕ ಕುಟುಂಬ ಕಾರಿನಿಂದ ಹೊರ ಬರುವುದಕ್ಕೆ ಸಾಧ್ಯವಾಗಿಲ್ಲ ಎಂದು ಸ್ಥಳೀಯರು ಪತ್ರಿಕೆಗೆ ತಿಳಿಸಿದರು.

ಶುಕ್ರವಾರ ಬೆಳಗ್ಗೆ ಯಾದಗಿರಿ ಜಿಲ್ಲೆಯ ಸುರಪುರದ ತಾಲೂಕಿನ ಶಾಂತಪುರ ಹತ್ತಿರ ಕಾರ್ ಹಾಗೂ ಖಾಸಗಿ ಬಸ್ ನಡುವೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಕಾರಿನಲ್ಲಿದ್ದ ಸಿರವಾರ ಪಟ್ಟಣದ ಪಟ್ಟಣ ಪಂಚಾಯಿತಿ ಸದಸ್ಯ ಕೃಷ್ಣಾ ನಾಯಕ (55), ಪತ್ನಿ ಅನಂತಕಲಾ(48) ಮಗಳು ನಿಸರ್ಗ(28) ಅಳಿಯ ಶರಣಬಸವ(38), ಅಣ್ಣನ ಮಗಳು ಶಶಿಕಲಾ(30), ಮೊಮ್ಮಕ್ಕಳಾದ ಚಂದನ(4), ಅದ್ವಿಕ್ (5), ಸಿದ್ಧಾರ್ಥ (3) ಹಾಗೂ ಶ್ರೀನಿಧಿ(1.5) ಮೃತಪಟ್ಟಿದ್ದು, ವಿರಾಟ್ ಅವರಿಗೆ ಗಂಭೀರ ಗಾಯಗಳಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಲಿಂಗಸುಗೂರು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಇವರಲ್ಲಿ ಓರ್ವನ ಸ್ಥಿತಿ ಗಂಭೀರವಾಗಿದೆ ಎಂದು ಕುಟುಂಬದ ವರ್ಗದವರು ತಿಳಿಸಿದ್ದಾರೆ.



ಸಚಿವರ ಸಂತಾಪ: ಕೃಷ್ಣ ನಾಯಕ್ ಸೇರಿ ಅವರ ಕುಟುಂಬದ ಒಂಬತ್ತು ಸದಸ್ಯರ ಸಾವು ನೋವು ತಂದಿದೆ ಎಂದು ಸಚಿವ ಎನ್.ಎಸ್.ಬೋಸರಾಜು ಸಂತಾಪ ವ್ಯಕ್ತಪಡಿಸಿದ್ದಾರೆ.

ಕಲಬುರಗಿಯಲ್ಲಿ ಗರಿಷ್ಠ 45.3 ಡಿಗ್ರಿ ಸೆಲ್ಸಿಯಸ್ ದಾಖಲೆ

ಕಲಬುರಗಿ: ರಾಜ್ಯದ ವಿವಿಧ ಭಾಗಗಳಲ್ಲಿ ಬಿಸಿಗಾಳಿ ತೀವ್ರವಾಗಿದ್ದು, ಕಲಬುರಗಿ ಜಿಲ್ಲೆಯಲ್ಲಿ ಉಷ್ಣಾಂಶ ದಿನೇ ದಿನೇ ಏರಿಕೆಯಾಗುತ್ತಿದೆ. ಕಲಬುರಗಿ ಜಿಲ್ಲೆಯ ಫರಹತಾಬಾದ್ ಹೋಬಳಿಯಲ್ಲಿ ಶುಕ್ರವಾರ ರಾಜ್ಯದಲ್ಲೇ ಅತಿ ಹೆಚ್ಚು 45.3 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಕಲಬುರಗಿ ತಾಲೂಕಿನ ಫರಹತಾಬಾದ್ ಹೋಬಳಿಯಲ್ಲಿ 45.3 ಡಿಗ್ರಿ ಸೆಲ್ಸಿಯಸ್, ತಾಲೂಕಿನ ಔರಾದ್‌ನಲ್ಲಿ 44.7 ಡಿಗ್ರಿ ಸೆಲ್ಸಿಯಸ್, ಆಳಂದ ತಾಲೂಕಿನ ಮಾದನ ಹಿಪ್ಪರಗಾ ಗ್ರಾಮದಲ್ಲಿ 44.2 ಡಿಗ್ರಿ ಸೆಲ್ಸಿಯಸ್, ಅಫಜಲಪುರ ತಾಲೂಕಿನ ಅತನೂರದಲ್ಲಿ 44 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಏಪ್ರಿಲ್ 17ರಂದು ಕಲಬುರಗಿ, ರಾಯಚೂರು, ಬೀದರ, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಗಳ ಅನೇಕ ಕಡೆಗಳಲ್ಲಿ 42 ರಿಂದ 45.3 ನಡುವೆ ಗರಿಷ್ಠ ತಾಪಮಾನ ದಾಖಲಾಗಿದೆ. ಅಲ್ಲದೆ, ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಕೊಪ್ಪಳ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳ ಕೆಲವೇ ಪ್ರದೇಶಗಳಲ್ಲಿಯೂ ಇದೇ ಮಟ್ಟದ ಬಿಸಿಗಾಳಿ ಕಂಡುಬಂದಿದೆ.



ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ ಮಾಹಿತಿ ಪ್ರಕಾರ, ಕಲಬುರಗಿ ಜಿಲ್ಲೆಯಲ್ಲಿ 26 ಸ್ಥಳಗಳಲ್ಲಿ, ರಾಯಚೂರು ಜಿಲ್ಲೆಯಲ್ಲಿ 23, ಬೀದರ ಜಿಲ್ಲೆಯಲ್ಲಿ 17, ಯಾದಗಿರಿ ಜಿಲ್ಲೆಯಲ್ಲಿ 13 ಹಾಗೂ ವಿಜಯಪುರ ಜಿಲ್ಲೆಯಲ್ಲಿ 11 ಸ್ಥಳಗಳಲ್ಲಿ 42 ಡಿಗ್ರಿ ಸೆಲ್ಸಿಯಸ್‌ಕ್ಕಿಂತ ಹೆಚ್ಚು ತಾಪಮಾನ ದಾಖಲಾಗಿದೆ. ಬಾಗಲಕೋಟೆ ಜಿಲ್ಲೆಯಲ್ಲಿ 4, ಬಳ್ಳಾರಿ, ಬೆಳಗಾವಿ ಮತ್ತು ಕೊಪ್ಪಳ ಜಿಲ್ಲೆಗಳ ತಲಾ 2 ಸ್ಥಳಗಳಲ್ಲಿ ಹಾಗೂ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ತಲಾ 1 ಸ್ಥಳದಲ್ಲಿ 42 ಡಿಗ್ರಿ ಸೆಲ್ಸಿಯಸ್‌ಕ್ಕಿಂತ ಹೆಚ್ಚು ತಾಪಮಾನ ದಾಖಲಾಗಿದೆ.

ಆಂಜನೇಯ ಸ್ವಾಮಿ ದರ್ಶನ ಸಮಯ ಬದಲಾವಣೆ

ಕೊಪ್ಪಳ: ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬೇಸಿಗೆ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿರುವುದರಿಂದ, ಭಕ್ತರು ಆರೋಗ್ಯದ ಹಿತದೃಷ್ಟಿಯಿಂದ ಜಿಲ್ಲೆಯ ಗಂಗಾವತಿ ತಾಲೂಕಿನ ಚಿಕ್ಕರಾಂಪೂರ ಗ್ರಾಮದ ಅಂಜನಾದ್ರಿ ಬೆಟ್ಟದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳಿಗೆ ದರ್ಶನ ಸಮಯ ಬದಲಾವಣೆ ಮಾಡಿ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ.ಇಟ್ನಾಳ ಆದೇಶ ಹೊರಡಿಸಿದ್ದಾರೆ.

ಗಂಗಾವತಿ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯ ಚಿಕ್ಕರಾಂಪೂರದ ಅಂಜನಾದ್ರಿ ಬೆಟ್ಟದಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಕೊಪ್ಪಳ ಜಿಲ್ಲೆ ಮತ್ತು ಹೊರ ಜಿಲ್ಲೆ, ಹೊರ ರಾಜ್ಯಗಳಿಂದ ಭಕ್ತರು ಆಗಮಿಸುತ್ತಾರೆ. ವಿಶೇಷವಾಗಿ ಪ್ರತಿ ಶನಿವಾರ ಮತ್ತು ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದು, ಕಳೆದ 2ರಿಂದ 3ತಿಂಗಳಿನಲ್ಲಿ ಇಬ್ಬರು ಭಕ್ತರು ದೇವಸ್ಥಾನದ 575 ಮೆಟ್ಟಿಲುಗಳನ್ನು ಏರಿ ಮೇಲೆ ಹೋದ ನಂತರ ಉಸಿರಾಡಲು ತೊಂದರೆಯಾಗಿ ಮೃತಪಟ್ಟಿದ್ದಾರೆ.

ಅಲ್ಲದೇ ಏ.1ರಂದು ಮದ್ಯಾಹ್ನ 1 ಗಂಟೆಯ ಸುಮಾರಿಗೆ ಆಂಜನೇಯ ದೇವಸ್ಥಾನಕ್ಕೆ ಆಗಮಿಸಿದ್ದ ಭಕ್ತನೊಬ್ಬ ಗರ್ಭಗುಡಿಯಲ್ಲಿ ಕುಳಿತು ದರ್ಶನ ಮುಗಿಸುತ್ತಿದ್ದಂತೆ ಬಿಸಿಲಿನ ತಾಪಕ್ಕೆ ಕುಸಿದು ಬಿದ್ದು ಮೃತಪಟ್ಟ ಘಟನೆ ಜರುಗಿದ್ದು, ಮೃತನನ್ನು ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ಗುಳ್ಳದಳ್ಳಿ ಗ್ರಾಮದ ನಿವಾಸಿ ಕೃಷ್ಣ ರಾಜಪ್ಪ (57) ಗುರುತಿಸಲಾಗಿದೆ. ಈತನು ಮಧ್ಯಾಹ್ನದ ವೇಳೆಯಲ್ಲಿ ಅಂಜನೇಯ ದೇವಸ್ಥಾನದ ಮೆಟ್ಟಿಲುಗಳನ್ನು ಏರಿದ ಬಳಿಕ ದೇವಸ್ಥಾನದ ಒಳಗೆ ಉಸಿರಾಟದ ಸಮಸ್ಯೆಯಾಗಿ ಮೃತಪಟ್ಟಿರುವ ಘಟನೆ ಜರುಗಿದೆ.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬೇಸಿಗೆಯ, ಬಿಸಿಲಿನ ತಾಪ ಹೆಚ್ಚಾಗುತ್ತಿರುವುದರಿಂದ ದೇವಸ್ಥಾನಕ್ಕೆ ಆಗಮಿಸುವ ಭಕ್ತರಿಗೆ ಬೆಳಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆಯ ಅವಧಿಯಲ್ಲಿ ದೇವಸ್ಥಾನದ ಮೆಟ್ಟಿಲು ಏರಿ ಹೋಗಿ ದರ್ಶನ ಪಡೆಯಲು ನಿಷೇಧ ಮಾಡುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರು ಕೋರಿದ್ದಾರೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಚಿಕ್ಕರಾಂಪೂರ ಗ್ರಾಮದ ಅಂಜನಾದ್ರಿ ಬೆಟ್ಟದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ದರ್ಶನಕ್ಕೆ ರಾಜ್ಯ-ಹೊರ ರಾಜ್ಯಗಳಿಂದ ಭಕ್ತಾದಿಗಳು ಆಗಮಿಸುತ್ತಿದ್ದು, ಏಪ್ರಿಲ್-ಮೇ ತಿಂಗಳಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿದ್ದು, ಭಕ್ತಾದಿಗಳಿಗೆ ಬೆಟ್ಟ ಹತ್ತುವಾಗ ಮತ್ತು ಇಳಿಯುವಾಗ ಹೆಚ್ಚಿನ ಬಿಸಿಲಿನ ತಾಪಮಾನದಿಂದ ಆರೋಗ್ಯದಲ್ಲಿ ಏರುಪೇರಾಗುವ ಸಂಭವಿಸಿರುತ್ತರಿಂದ ದೇವಸ್ಥಾನಕ್ಕೆ ಆಗಮಿಸುವ ಭಕ್ತರಿಗೆ ಬೆಳಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆಯ ಅವಧಿಯಲ್ಲಿ ದೇವಸ್ಥಾನದ ಮೆಟ್ಟಿಲು ಏರಿ ಹೋಗಿ ದರ್ಶನ ಪಡೆಯಲು ನಿಷೇಧ ಮಾಡಲಾಗಿದ್ದು, ಅಂಜನೇಯಸ್ವಾಮಿ ದೇವಸ್ಥಾನದ ದರ್ಶನದ ವೇಳೆಯನ್ನು ಭಕ್ತಾದಿಗಳ ಹಿತದೃಷ್ಟಿಯಿಂದ ಬೆಳಿಗ್ಗೆ 6 ಗಂಟೆಯಿಂದ 11 ಗಂಟೆಯವರೆಗೆ ಮತ್ತು ಸಾಯಂಕಾಲ 4 ಗಂಟೆಯಿಂದ 6 ಗಂಟೆಯವರೆಗೆ ಮಾತ್ರ ದೇವರ ದರ್ಶನಕ್ಕೆ ಸಮಯವನ್ನು ನಿಗಧಿಪಡಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಲಂಚ ಪಡೆಯುತ್ತಿದ್ದ ಡಿಸಿ ಕಚೇರಿ ಸಿಬ್ಬಂದಿ ಲೋಕಾ ಬಲೆಗೆ





ವಿಜಯಪುರ: ನಗರದ ಜಿಲ್ಲಾಧಿಕಾರಿ ಕಚೇರಿಯ ಸಿಬ್ಬಂದಿಗಳಿಬ್ಬರು 15,000 ಸಾವಿರ ರೂ.ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಬಲೆಗೆ ಬಿದ್ದಿರುವ ಘಟನೆ ನಡೆದಿದೆ. ಇಲ್ಲಿನ ಎಸ್‌ಡಿಸಿ ಅರವಿಂದ ಪವಾರ್, ಕಂಪ್ಯೂಟರ್ ಆಪರೇಟರ್ ಅಯೂಬ್ ತೊನಶ್ಯಾಳ ಲೋಕಾ ಬಲೆಗೆ ಬಿದಿದ್ದು, ಪೆಟ್ರೋಲ್ ಬಂಕ್ ನಕಾಶೆ ತಯಾರಿಸಿ ಜಿಲ್ಲಾಧಿಕಾರಿ ಸಹಿ ಮಾಡೋಕೆ 15 ಸಾವಿರ ರೂ. ಬೇಡಿಕೆ ಇಟ್ಟಿದ್ದರು. ಸುಶೀಲ್ ವಗ್ಗನ್ನವರ್ ದೂರಿನ ಮೇರೆಗೆ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿದ್ದು, 15 ಸಾವಿರ ಲಂಚ ಪಡೆಯುವಾಗಲೇ ಇಬ್ಬರು ಸಿಕ್ಕಿ ಬಿದಿದ್ದಾರೆ.

ಹಿರಿಯ ಸಾಹಿತಿ ದೇವನೂರು ಮಹಾದೇವ ಅವರಿಗೆ ಪಂಪ ಪ್ರಶಸ್ತಿ

ಬನವಾಸಿಯಲ್ಲೇ ಪ್ರದಾನವಾಗಲಿ ಪಂಪ ಪ್ರಶಸ್ತಿ

▸ **ಸುಧೀರ ನಾಯರ್**

ದಿಗಂತ ವಿಶೇಷ

ಬನವಾಸಿ: ಈ ನಾಡಿನ ಜೀವಪರ ಬರಹಗಾರರಾಗಿರುವ, ಹಿರಿಯ ಸಾಹಿತಿ ದೇವನೂರು ಮಹಾದೇವ ಅವರಿಗೆ ಪ್ರಸಕ್ತ ಸಾಲಿನ ಪಂಪ ಪ್ರಶಸ್ತಿಯ ಗೌರವ ಒಲಿದಿರುವುದು ಅತ್ಯಂತ ಅಭಿಮಾನ ಮತ್ತು ಹೆಮ್ಮೆಯ ಸಂಗತಿಯಾಗಿದೆ.

ಇದೇ ಸಂದರ್ಭದಲ್ಲಿ ಪಂಪ ಪ್ರಶಸ್ತಿಯನ್ನು ಬೆಂಗಳೂರಿನಲ್ಲಿ ನೀಡಬಹುದೆಂದು ಬರುತ್ತಿರುವ ಸುದ್ದಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಿರುವ ಸಾಹಿತಿಗಳು ಹಾಗೂ ಸ್ಥಳೀಯರು, ಪಂಪ ನಡೆದಾಡಿದ ಈ ನಾಡಿನ ಮೊದಲ ರಾಜಧಾನಿಯಾದ ಬನವಾಸಿಯಲ್ಲಿಯೇ ಪಂಪ ಪ್ರಶಸ್ತಿಯನ್ನು ಪ್ರದಾನ ಮಾಡುವಂತಾಗಬೇಕು ಎಂದು ಒತ್ತಾಯಿಸುತ್ತಿದ್ದಾರೆ.

ನಾಡಿನಲ್ಲಿ ಸರ್ಕಾರ ಈ ವರ್ಷ ಕೂಡಾ ಅನೇಕ ಉತ್ಸವಗಳನ್ನು ನಡೆಸಿದೆ. ಕೋಟಿ ಕೋಟಿ ರೂ. ಖರ್ಚು ಮಾಡಿದೆ. ಆದರೆ, ಈ ಬಾರಿಯ ಕದಂಬೋತ್ಸವವನ್ನು ಬನವಾಸಿಯಲ್ಲಿ ನಡೆಸದಿರುವ ಬಗ್ಗೆ, ಸರ್ಕಾರ ಅದಕ್ಕೆ ಅಗತ್ಯ ಕ್ರಮವನ್ನು ಕೈಗೊಳ್ಳದೆ ಇರುವ ಬಗ್ಗೆ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಈಗಲೂ ಕೂಡ ಬನವಾಸಿಯಲ್ಲಿ ಕದಂಬೋತ್ಸವ ಆಚರಿಸಲು ಸಮಯವಿದೆ. ಸರ್ಕಾರ ತಕ್ಷಣ ಕದಂಬೋತ್ಸವ ಆಚರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.



ಹಾಗೂ ಆ ಕದಂಬೋತ್ಸವದಲ್ಲಿಯೇ ಪ್ರಸಕ್ತ ಸಾಲಿನ ಪ್ರತಿಷ್ಠಿತ ಪಂಪ ಪ್ರಶಸ್ತಿ ಪುರಸ್ಕೃತರಾದ ದೇವನೂರು ಮಹಾದೇವ ಅವರಿಗೆ ಪ್ರಶಸ್ತಿ ಪ್ರದಾನ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಬಿಸಿಲಿನ ನೆಪ ಅಥವಾ ಇನ್ನಾವುದೋ ಕಾರಣವನ್ನು ನೀಡಿ ಬನವಾಸಿಯಲ್ಲಿ ಈ ಬಾರಿಯ ಕದಂಬೋತ್ಸವ ನಡೆಸಲಾಗದು ಎಂಬ ಕಾರಣವನ್ನು ಸರ್ಕಾರ ನೀಡಿದರೆ ಅದು ಅರ್ಥ ರಹಿತವಾದುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ ಬನವಾಸಿಯಲ್ಲಿ ಕದಂಬೋತ್ಸವ ನಡೆಸಿ, ಆ ವೇದಿಕೆಯಲ್ಲಿಯೇ ಪಂಪ ಪ್ರಶಸ್ತಿ ನೀಡಿ ಗೌರವಿಸಿದರೆ ಆದಿ ಕವಿ ಪಂಪ ನಡೆದಾಡಿದ ಕನ್ನಡದ ಪ್ರಥಮ ರಾಜಧಾನಿ ಬನವಾಸಿಯ ಅಸ್ಮಿತೆಯನ್ನು ಎತ್ತಿ ಹಿಡಿದಂತಾಗುತ್ತದೆ ಎನ್ನುವುದು ಬನವಾಸಿಗರ ಆಶಯವಾಗಿದೆ.

ಶೀಘ್ರವಾಗಿ ಕದಂಬೋತ್ಸವ ನಡೆಸುವ ಮತ್ತು ಪಂಪ ಪ್ರಶಸ್ತಿಯನ್ನು ಕದಂಬೋತ್ಸವದಲ್ಲಿಯೇ ಪ್ರದಾನ ಮಾಡುವ ಕುರಿತು ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಮುಖ್ಯಮಂತ್ರಿಗಳಿಗೆ ಒತ್ತಾಯಿಸಬೇಕು. ರಾಜ್ಯ ಸರ್ಕಾರ ಕದಂಬೋತ್ಸವ ನಡೆಸದೇ ಇದ್ದರೆ ಮುಂದಿನ ದಿನಗಳಲ್ಲಿ ಬನವಾಸಿಗರು ಹೋರಾಟ ಮಾಡುವುದರಲ್ಲಿ ಸಂದೇಹವಿಲ್ಲ.

> ಕದಂಬೋತ್ಸವ ಆಚರಣೆಯ ದಿನಾಂಕ ನಿಗದಿಪಡಿಸದೇ ಸರ್ಕಾರ ಪಂಪ ಪ್ರಶಸ್ತಿಯನ್ನು ಆಯ್ಕೆ ಮಾಡಿರುವುದು ಸರಿಯಲ್ಲ. ಪ್ರತಿಷ್ಠಿತ ಪಂಪ ಪ್ರಶಸ್ತಿಯನ್ನು ಕದಂಬೋತ್ಸವ ನಡೆಸದೇ ಬೆಂಗಳೂರಿನಲ್ಲಿ ಪ್ರದಾನ ಮಾಡಿದರೆ ತಾಲೂಕು ಹೋರಾಟ ಸಮಿತಿ ಬಲವಾಗಿ ವಿರೋಧಿಸುತ್ತದೆ.
>
> ■ **ಉದಯಕುಮಾರ್ ಕಾನಳ್ಳಿ**, ಬನವಾಸಿ ತಾಲೂಕು ಹೋರಾಟ ಸಮಿತಿ ಅಧ್ಯಕ್ಷ

> ರಾಜ್ಯ ಸರ್ಕಾರ ಪಂಪ ಪ್ರಶಸ್ತಿಯನ್ನು ಪಂಪನಿಗೆ ಪ್ರಿಯವಾದ ಬನವಾಸಿಯಲ್ಲಿ ಪ್ರದಾನ ಮಾಡುವುದು ಸೂಕ್ತ. ಬನವಾಸಿಯಲ್ಲಿಯೇ ಪಂಪ ಪ್ರಶಸ್ತಿ ಪ್ರದಾನವಾಗುವುದರಿಂದ ಬನವಾಸಿ ಪರಿಸರದ ಜನರಿಗೆ ಕನ್ನಡದ ಹಿರಿಯ ಸಾಹಿತಿಗಳನು ಕಾಣುವ, ಅವರ ಸಾಹಿತ್ಯಾಭಿಮಾನದ ನುಡಿಗಳನು ಕೇಳುವ ಸದಾವಕಾಶ ದೊರೆಯುತ್ತದೆ.
>
> ■ **ಡಾ.ಬಿ.ಎ.ವಿವೇಕ ರೈ**, 2024-25ನೇ ಸಾಲಿನ ಪಂಪ ಪ್ರಶಸ್ತಿ ಪುರಸ್ಕೃತರು

ಐಪಿಎಲ್ ಬೆಟ್ಟಿಂಗ್ ದಂಧೆ ಜೋರು

ಆರು ಕಡೆ ದಾಳಿ, 10ಕ್ಕೂ ಹೆಚ್ಚು ಜನರ ಬಂಧನ

ಗದಗ: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ ಆರಂಭವಾದಾಗಿನಿಂದ ಜಿಲ್ಲೆಯಾದ್ಯಂತ ಅವ್ಯಾಹತವಾಗಿ ನಡೆಯುತ್ತಿದ್ದ ಅಕ್ರಮ ಬೆಟ್ಟಿಂಗ್ ಜಾಲದ ಮೇಲೆ ಜಿಲ್ಲಾ ಪೊಲೀಸರು ಸರಣಿ ದಾಳಿ ನಡೆಸಿದ್ದಾರೆ.

ಏ.13 ರಿಂದ 15ರ ಅವಧಿಯಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಒಟ್ಟು ಆರು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಪ್ರಕರಣಗಳು ದಾಖಲಾಗಿದ್ದು, ಹತ್ತಕ್ಕೂ ಹೆಚ್ಚು ಆರೋಪಿತರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಬೆಟ್ಟಿಂಗ್ ದಂಧೆ ಮೇಲೆ ಗದಾಪ್ರಹಾರ ನಡೆಸಿದ್ದಾರೆ.

ಶಹರ ಠಾಣೆ ವ್ಯಾಪ್ತಿಯಲ್ಲಿ ಹಳೆ ಬಸ್ ನಿಲ್ದಾಣದ ಬಳಿ ರಾಜಸ್ಥಾನ ರಾಯಲ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ಪಂದ್ಯದ ಮೇಲೆ ಬೆಟ್ಟಿಂಗ್ ಕಟ್ಟಿಸುತ್ತಿದ್ದ ಶ್ರೀಶೈಲ ಹರ್ತಿ ಮತ್ತು ಪ್ರವೀಣ್ ತೇರದಾಳ ಎಂಬುವವರನ್ನು ಬಂಧಿಸಲಾಗಿದೆ. ಗ್ರಾಮೀಣ ಠಾಣೆ ವ್ಯಾಪ್ತಿಯ ಆರ್.ಕೆ.ನಗರ ಬಸ್ ನಿಲ್ದಾಣದ ಬಳಿ ಆರ್‌ಸಿಬಿ ಮತ್ತು ಲಕ್ನೋ ಸೂಪರ್ ಜೈಂಟ್ಸ್ ಪಂದ್ಯದ ವೇಳೆ ಬೆಟ್ಟಿಂಗ್ ಆಡಿಸುತ್ತಿದ್ದ ಗಣೇಶ ಬದಿ ಎಂಬಾತನನ್ನು ಬಂಧಿಸಿ 800 ರೂ.ನಗದು ಜಪ್ತಿ ಮಾಡಲಾಗಿದೆ. ಗಜೇಂದ್ರಗಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪುರ್ತಗೇರಿ ಕ್ರಾಸ್ ಬಳಿ ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತಿದ್ದ ಮಾಂತೇಶ ಗರೇಬಾಳ ಎಂಬಾತ ಪೊಲೀಸರ ಬಲೆಗೆ ಬಿದ್ದಿದ್ದಾನೆ.

> ಜಿಲ್ಲೆಯಲ್ಲಿ ಐಪಿಎಲ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದವರನ್ನು ವಶಕ್ಕೆ ಪಡೆದು, ವಿವಿಧ ಕಲಂ ಅಡಿ ಪ್ರಕರಣಗಳನ್ನು ದಾಖಲಿಸಲಾಗಿದೆ. ಎಲ್ಲಾ ಠಾಣೆಗಳ ಪಿಎಸ್‌ಐಗಳು ಮತ್ತು ಸಿಬ್ಬಂದಿ ಆಯಾ ವ್ಯಾಪ್ತಿಯಲ್ಲಿ ಯಶಸ್ವಿ ದಾಳಿ ನಡೆಸಿ ದಂಧೆಗೆ ಬ್ರೇಕ್ ಹಾಕಿದ್ದಾರೆ.
>
> ■ **ರೋಹನ ಜಗದೀಶ**, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಲಕ್ಷ್ಮೇಶ್ವರ ಪೊಲೀಸ್ ಠಾಣೆ ವ್ಯಾಪ್ತಿಯ ಶಿಗ್ಲಿ ರಸ್ತೆಯ ಮೆಟ್ಟೇರಿ ದೇವಸ್ಥಾನದ ಬಳಿ ಬೆಟ್ಟಿಂಗ್‌ನಲ್ಲಿ ತೊಡಗಿದ್ದ ಅನಿಲ ಮೆಥೇರಿ, ಅನ್ವರಭಾಷಾ ಮತ್ತು ವಿಜಯ ಗಜಾಕೋಶ ಎಂಬುವವರನ್ನು ಬಂಧಿಸಲಾಗಿದ್ದು, ಮೊಬೈಲ್ ಹಾಗೂ ನಗದು ಜಪ್ತಿ ಮಾಡಲಾಗಿದೆ. ಗದಗ ತಾಲೂಕಿನ ಮುಳಗುಂದ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಚಿಂಚಲಿ ಕ್ರಾಸ್ ಬಳಿ ವಾಟ್ಸ್ ಆಪ್ ಮತ್ತು ಫೋನ್ ಪೇ ಮೂಲಕ ಡಿಜಿಟಲ್ ಬೆಟ್ಟಿಂಗ್ ನಡೆಸುತ್ತಿದ್ದ ಸಿದ್ದಪ್ಪ ಸುಂಕದ ಮತ್ತು ಶಿವಾನಂದ ಕರಿಗಾರ ಎಂಬುವವರನ್ನು ಬಂಧಿಸಿದ್ದಾರೆ. ಶಿರಹಟ್ಟಿ ತಾಲೂಕಿನ ಹೆಬ್ಬಾಳ ಗ್ರಾಮದಲ್ಲಿ ಸಾರ್ವಜನಿಕ ರಸ್ತೆಯಲ್ಲೇ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದ ರಾಜೇಸಾಬ ನದಾಫ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಎ.23ಕ್ಕೆ ಉಚಿತ ಉಪನಯನ ಕಾರ್ಯಕ್ರಮ

ಹೊನ್ನಾವರ: ಉಕ ಜಿಲ್ಲೆಯ ಹೊನ್ನಾವರ ತಾಲೂಕಿನ ಕರ್ಕಿ ಯಲ್ಲಿರುವ ದೈವಜ್ಞ ಬ್ರಾಹ್ಮಣ ಸಮಾಜದ ಜ್ಞಾನೇಶ್ವರಿ ಮಠದಲ್ಲಿ ಏ.23ರಂದು ದೈವಜ್ಞ ಬ್ರಾಹ್ಮಣ ಸಮಾಜದ ವಟುಗಳಿಗಾಗಿ ಉಚಿತ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಮಠದಲ್ಲಿ ಉಪನಯನವನ್ನು ಮಾಡಲು ಇಚ್ಛಿಸುವ ಆಸ್ತಕರು ಈ ಕೂಡಲೇ ಕರ್ಕಿ ಮಠವನ್ನು ಸಂಪರ್ಕಿಸಿ, ಅಗತ್ಯ ಮಾಹಿತಿಗಳನ್ನು ಒದಗಿಸಿ ನೊಂದಣಿ ಮಾಡಿಕೊಳ್ಳಬೇಕೆಂದು ಜ್ಞಾನೇಶ್ವರಿ ಮಠದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎ.23ಕ್ಕೆ ಸಾರಿಗೆ ಅದಾಲತ್

ಕಾರವಾರ: ಹೊನ್ನಾವರ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗೆ ಸಂಬಂಧಪಟ್ಟಂತೆ ಸಾರ್ವಜನಿಕರ ಕುಂದು-ಕೊರತೆ ಹಾಗೂ ಸಮಸ್ಯೆಗಳ ಬಗ್ಗೆ ಸಾರಿಗೆ ಅದಾಲತ್‌ನ್ನು ಏ.23ರಂದು ಮಧ್ಯಾಹ್ನ 3.30 ಗಂಟೆಗೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಎಪಿಎಮ್‌ಸಿ ಕಟ್ಟಡ ರಾಮತೀರ್ಥ ರೋಡ್ ಹೊನ್ನಾವರ ಇಲ್ಲಿನ ಸಭಾಂಗಣದಲ್ಲಿ ನಡೆಸಲಿದ್ದು, ಸಾರ್ವಜನಿಕರು ಸಾರಿಗೆ ಅದಾಲತ್‌ಗೆ ಹಾಜರಾಗಿ ತಮ್ಮ ಅಹವಾಲುಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸುವಂತೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ರವೀಂದ್ರ ಕೆ. ಎಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎ.21ಕ್ಕೆ ವಿನಾಯಕ ದೇವರ ರಥೋತ್ಸವ

ಶಿರಸಿ: ತಾಲೂಕಿನ ಓಣೀ ವಿಘ್ನೇಶ್ವರದ ವಾಣೀ ವಿನಾಯಕ ದೇವರ ರಥೋತ್ಸವ ಏ.21ರಂದು ಜರುಗಲಿದೆ.ಅಂದು ಬೆಳಿಗ್ಗೆ 11ಗಂಟೆಗೆ ದೇವರ ರಥಾರೋಹಣ, ಸಂಜೆ 7 ಗಂಟೆಗೆ ರಥೋತ್ಸವ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಆಡಳಿತ ಮಂಡಳಿ ವಿನಂತಿಸಿದೆ.

ಎ.20ಕ್ಕೆ ಕನಕಾಂಗಿ ಕಲ್ಯಾಣ ಯಕ್ಷಗಾನ ಬಯಲಾಟ

ಶಿರಸಿ: ತಾಲೂಕಿನ ಹುಳಗೋಳದ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಏ.20ರಂದು ವಾರ್ಷಿಕದೇವಕಾರ್ಯದ ಅಂಗವಾಗಿ ರಾತ್ರಿ 9 ಗಂಟೆಯಿಂದ ಶಬರ ಸಂಸ್ಥೆಯವರಿಂದ ನಿತ್ಯಾನಂದ ಅವಧೂತ ವಿರಚಿತ ಕನಕಾಂಗಿ ಕಲ್ಯಾಣ ಸಮಯಮಿತಿ ಯಕ್ಷಗಾನ ಬಯಲಾಟ ಪ್ರದರ್ಶನ ನಡೆಯಲಿದೆ.ಈ ಕಾರ್ಯಕ್ರಮದ ಹಿಮ್ಮೇಳದಲ್ಲಿ ಭಾಗವತರಾಗಿ ಕೇಶವ ಹೆಗಡೆ ಕೊಳಗಿ, ಮದ್ದಳೆ ವಾದಕರಾಗಿ ಮಂಜುನಾಥ ಗುಡ್ಡೆದಿಂಬ ಹಾಗೂ ಚಂಡೆಯಲ್ಲಿ ಪ್ರಸನ್ನ ಭಟ್ ಹೆಗ್ಗಾರ್, ಶ್ರೀವತ್ಸ ಗುಡ್ಡೆದಿಂಬ ಸಹಕರಿಸಲಿದ್ದಾರೆ. ಮುಮ್ಮೇಳದಲ್ಲಿ ಅಶೋಕ್ ಭಟ್ ಸಿದ್ದಾಪುರ, ಸದಾಶಿವ ಮಲವಳ್ಳಿ, ನಿರಂಜನ ಜಾಗನಳ್ಳಿ, ಸಂತೋಷ್ ಹುಳಸೆಮಕ್ಕಿ, ಪ್ರವೀಣ ತಟ್ಟೀಸರ, ಸುಜಯ್, ತನ್ಮಯ್ ಹೆಗಡೆ ಸೇರಿದಂತೆ ಹಲವಾರು ಕಲಾವಿದರು ಭಾಗವಹಿಸಲಿದ್ದಾರೆ.ಈ ಕಾರ್ಯಕ್ರಮವನ್ನು ನಾಗರಾಜ ಜೋಶಿ, ಸೋಂದಾ ಸಂಯೋಜಿಸಿದ್ದು, ಯಕ್ಷಗಾನ ಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಹುಳಗೋಳದ ಸಿದ್ಧಿವಿನಾಯಕ ದೇವಸ್ಥಾನದ ಆಡಳಿತ ಮಂಡಳಿ ಹಾರ್ದಿಕವಾಗಿ ಆಹ್ವಾನಿಸಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61199	70099
ಬಿಳಿಗೋಟು	27899	39600
ಕೆಂಪುಗೋಟು	28121	39599
ಬೆಟ್ಟೆ	41099	52993
ರಾಶಿ	50699	55899
ಚಾಲಿ	44599	48891
ಬಿ.ಕಾಳುಮೆಣಸು	90969	91299

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	62119	75865
ರಾಶಿ	48900	58799
ಬೆಟ್ಟೆ	38761	51899
ಕೆಂಪುಗೋಟು	18000	37969
ಬಿಳಿಗೋಟು	17312	42399
ಚಾಲಿ	37892	50189
ಕೋಕಾ	15000	37499
ಕಾಳುಮೆಣಸು	51519	69500



ಗೋಕರ್ಣ: ಇಲ್ಲಿನ ಲಯನ್ಸ್ ಕ್ಲಬ್, ಪ್ರಾಥಮಿಕ ಆರೋಗ್ಯ ಕೇಂದ್ರ, ಲಯನ್ಸ್ ಚಾರಿಟೇಬಲ್ ಟ್ರಸ್ಟ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರಾಷ್ಟ್ರೀಯ ಅಂಧತ್ವ ನಿವಾರಣಾ ಘಟಕ, ಕುಮಟಾದ ಲಯನ್ಸ ಹ್ಯುಮೆನಿಟೇರಿಯನ್ ಸರ್ವೀಸ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಇಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಕಣ್ಣಿನ ಪೊರೆ ತಪಾಸಣೆ-ಶಸ್ತ್ರಚಿಕಿತ್ಸಾ ಶಿಬಿರ ನಡೆಯಿತು.

ಶಿಕ್ಷಕರ ಸಂಘದ ಚುನಾವಣೆ: ಏ.21ಕ್ಕೆ ಸ್ಥಾನ ನಿಗದಿ

ಮುಂಡಗೋಡ: ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರತಿನಿಧಿಗಳ ಆಯ್ಕೆಗೆ ಚುನಾವಣಾ ಪ್ರಕ್ರಿಯೆ ಆರಂಭಗೊಂಡಿದೆ.

ಪ್ರತಿ ಐವತ್ತು ಶಿಕ್ಷಕರಿಗೆ ಒಬ್ಬರಂತೆ ಆರು ಪ್ರತಿನಿಧಿಗಳ ಸ್ಥಾನಕ್ಕೆ ಚುನಾವಣಾ ಏ.19ರಂದು ನಿಗದಿಯಾಗಿದೆ. ಮತದಾನ ಬೆಳಗ್ಗೆ 8.30 ರಿಂದ ಸಂಜೆ 4.30ರವರೆಗೆ ಜರುಗಲಿದ್ದು, ಶಿಕ್ಷಕರು ಮತದಾನ ಮೂಲಕ ಆಯ್ಕೆ ಮಾಡಲಿದ್ದಾರೆ.

ಚುನಾವಣಾ ಅಧಿಕಾರಿಯಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಸುಮಾ ಜಿ., ಸಹಾಯಕ ಚುನಾವಣಾ ಅಧಿಕಾರಿಯಾಗಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವಾಸುದೇವ ನಾಯಕ ಕಾರ್ಯ ನಿರ್ವಹಿಸಲಿದ್ದಾರೆ. ಈ ಮಧ್ಯೆ ಶಿಕ್ಷಕರಿಗೆ ಬೇಸಿಗೆ ರಜೆ ಮತ್ತು ಮನೆ ಪಟ್ಟಿ ಕಾರ್ಯಾಚರಣೆ ನಡೆಯಲಿದ್ದು, ಕಡಿಮೆ ಪ್ರಮಾಣದಲ್ಲಿ ಮತದಾನ ನಡೆಯಬಹುದು ಎಂದು ಅಭ್ಯರ್ಥಿಗಳು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಚುನಾವಣೆಯಲ್ಲಿ ಆರು ಸ್ಥಾನಗಳಿಗೆ ಎರಡು ಬಣಗಳಿಂದ ತಲಾ ಆರು ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಆರು ಸ್ಥಾನಗಳಲ್ಲಿ ನಾಲ್ಕು ಸ್ಥಾನ ಸಾಮಾನ್ಯ ವರ್ಗಕ್ಕೆ ಇದ್ದರೆ ಎರಡು ಸ್ಥಾನ ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿವೆ.

ಪ್ರತಿಯೊಬ್ಬ ಮತದಾರರಿಗೆ ನಾಲ್ಕು ಮತಗಳು ಸಾಮಾನ್ಯ ವರ್ಗಕ್ಕೆ ಎರಡು ಮತಗಳು ಮಹಿಳೆಯರಿಗೆ ಮೀಸಲಿವೆ ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕದ ಅಧ್ಯಕ್ಷ ಪ್ರದೀಪ ಕುಲಕರ್ಣಿ ತಿಳಿಸಿದ್ದಾರೆ.



ಸಿದ್ದಾಪುರ: ಇಲ್ಲಿಯ ಎಂಜಿಸಿ ಕಲಾ,ವಾಣಿಜ್ಯ ಹಾಗೂ ಗಣೇಶ ಹೆಗಡೆ ದೊಡ್ಮನೆ ವಿಜ್ಞಾನ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ರೆಡ್‌ಕ್ರಾಸ್ ಸಂಸ್ಥೆಯ ಸಹಯೋಗದೊಂದಿಗೆ ಶುಕ್ರವಾರ ರಕ್ತದಾನ ಶಿಬಿರ ನಡೆಯಿತು. ತಾಲೂಕಾ ಆಸ್ಪತ್ರೆಯ ಕೌನ್ಸಿಲರ ಜಗದೀಶ ನಾಯ್ಕ, ಪ್ರಾ.ಜಗನ್ನಾಥ ಮೊಗೇರ, ರಾಷ್ಟ್ರೀಯ ಸೇವಾ ಯೋಜನಾ ಘಟಕದ ಕಾರ್ಯಕ್ರಮಾಧಿಕಾರಿ ಪ್ರೊ.ಚೇತನಾ ಎಂ.ಎಚ್, ರೆಡ್‌ಕ್ರಾಸ್ ಸಂಚಾಲಕ ಡಾ. ಸುಲೋಚನಾ ಸುಖಸಾರೆ ಉಪಸ್ಥಿತರಿದ್ದರು.

ಪ್ರತಿಪಕ್ಷಗಳಿಂದ ಮಹಿಳಾ ವಿರೋಧಿ ನಿಲುವು: ರೂಪಾಲಿ ಕಿಡಿ

ಮಹಿಳಾ ಮಸೂದೆಗೆ ನಿರಂತರ ಹೋರಾಟ

ಕಾರವಾರ: ಬಹುಕಾಲದಿಂದ ಮಹಿಳೆಯರು ನಿರೀಕ್ಷಿಸುತ್ತಿದ್ದ ಮಹಿಳಾ ಮೀಸಲಾತಿ ಮಸೂದೆಯ ವಿರುದ್ಧ ಮತದಾನ ಮಾಡುವ ಮೂಲಕ ಪ್ರತಿಪಕ್ಷಗಳು ಲೋಕಸಭೆಯಲ್ಲಿ ಮಸೂದೆ ಸೋಲುವಂತೆ ಮಾಡುವ ಮೂಲಕ ಮಹಿಳಾ ವಿರೋಧಿ ನಿಲುವು ಪ್ರದರ್ಶಿಸಿದ್ದು, ಮುಂದಿನ ದಿನಗಳಲ್ಲಿ ಮಸೂದೆಯ ಪರವಾಗಿ ಹೋರಾಟ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಸಂಸತ್ತಿನಲ್ಲಿ ವಿಪಕ್ಷಗಳ ನಡೆಯ ವಿರುದ್ಧ ಹರಿಹಾಯ್ದಿದ್ದಾರೆ.

ಕಾಂಗ್ರೆಸ್ ಪಕ್ಷ ಇದುವರೆಗೂ ಮಹಿಳಾ ಮೀಸಲಾತಿ ಮಸೂದೆ ತರಲು ಯಶಸ್ವಿಯಾಗಲಿಲ್ಲ. ಈಗ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಶಾಸನ ಸಭೆಗಳಲ್ಲಿ ಶೇ.33ರಷ್ಟು ಮೀಸಲಾತಿ ತರುವ ಐತಿಹಾಸಿಕ ಮಸೂದೆ ತರಲು ಉದ್ದೇಶಿಸಿ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆದು ಸಂಸತ್ತಿನಲ್ಲಿ ಮಂಡಿಸಿದರೂ. ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಈ ಮಸೂದೆಯ ವಿರುದ್ಧ ಮತ ಚಲಾಯಿಸುವ ಮೂಲಕ ಮಹಿಳಾ ವಿರೋಧಿ ನಿಲುವು ಪ್ರದರ್ಶಿಸಿದ್ದಾರೆ. ಮಹಿಳೆಯರ ಬಗ್ಗೆ ಪ್ರತಿಪಕ್ಷಗಳ



ಕಾಳಜಿ ಎಷ್ಟಿದೆ ಎನ್ನುವುದು ಜಗಜ್ಜಾಹೀರಾಗಿದೆ. ಮಹಿಳಾ ವಿರೋಧಿ ನಿಲುವು ತಾಳಿದ ಪ್ರತಿಪಕ್ಷಗಳಿಗೆ ಬರಲಿರುವ ಎಲ್ಲ ಚುನಾವಣೆಗಳಲ್ಲೂ ಮಹಿಳೆಯರೇ ತಕ್ಕ ಪಾಠ ಕಲಿಸಲಿದ್ದಾರೆ.

ಬೇರೆ ಸಂದರ್ಭಗಳಲ್ಲಿ ಮಹಿಳೆಯರ ಪರವಾಗಿ ಇದ್ದಂತೆ ನಟಿಸುವ ಕಾಂಗ್ರೆಸ್ ಹಾಗೂ ಪ್ರತಿಪಕ್ಷಗಳ ನಿಜವಾದ ಬಣ್ಣ ಈಗ ಬಯಲಾಗಿದೆ. ಕಾಂಗ್ರೆಸ್‌ನ ಮಹಿಳಾ ವಿರೋಧಿ ನಿಲುವಿಗೆ ಅದೇ ಕಾಂಗ್ರೆಸ್ ಪಕ್ಷದಲ್ಲಿರುವ ಮಹಿಳೆಯರೂ ಕೈಕಟ್ಟಿಕೊಂಡು ಇರುವಂತಹ ಪರಿಸ್ಥಿತಿ ಉಂಟಾಗಿದೆ. ನಾರಿಶಕ್ತಿ ವಂದನ್ ವಿಧೇಯಕದ ವಿರುದ್ಧ ನಿಂತು ಮಹಿಳಾ

> ಇಡಿ ದೇಶದ ಸಮಸ್ತ ಮಹಿಳೆಯರಿಗೆ ಪ್ರತಿಪಕ್ಷಗಳು ಮಾಡಿದ ಅನ್ಯಾಯ, ದ್ರೋಹವಾಗಿದೆ. ಮಹಿಳೆಯರು ಮುಂದೆ ಬರುವುದನ್ನು ಸಹಿಸಲಾರದೆ ಈ ನಡೆ ಕೈಗೊಂಡಿವೆ. ಈ ಐತಿಹಾಸಿಕ ಮಹಿಳಾ ಮೀಸಲಾತಿ ಮಸೂದೆಗಾಗಿ ನಾವು ನಿರಂತರವಾಗಿ ಹೋರಾಟ ನಡೆಸುತ್ತೇವೆ.
>
> ■ ರೂಪಾಲಿ.ಎಸ್.ನಾಯ್ಕ, ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ

ವಿರೋಧಿಯಾದ ಕಾಂಗ್ರೆಸ್‌ಗೆ ಜನತೆ ಮುಂಬರುವ ದಿನಗಳಲ್ಲಿ ಸೂಕ್ತ ಉತ್ತರ ಹೇಳಲಿದ್ದಾರೆ. ಎಲ್ಲ ಪಕ್ಷಗಳೂ ಈ ಮಸೂದೆ ಮಂಡನೆಗೆ ಕೈ ಜೋಡಿಸುವ ಮೂಲಕ ಮಹಿಳೆಯರಿಗೆ ನ್ಯಾಯ, ಪ್ರಾತಿನಿಧ್ಯ ಒದಗಿಸಲು ಮುಂದಾಗಬೇಕಿತ್ತು. ಆದರೆ ಕೇವಲ ರಾಜಕೀಯಕ್ಕಾಗಿ ಈ ಮಸೂದೆಯ ವಿರುದ್ಧ ನಿಲುವು ತಳೆದು ಮಹಿಳಾ ಮೀಸಲಾತಿ ಸೋಲುವಂತೆ ಪ್ರತಿಪಕ್ಷಗಳು ನೋಡಿಕೊಂಡಿವೆ. ಇದು ಭಾರತೀಯ ಜನತಾ ಪಕ್ಷಕ್ಕೆ ಆದ ಸೋಲಲ್ಲ ಎಂದು ರೂಪಾಲಿ.ಎಸ್.ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಇಟಿ ಪರೀಕ್ಷೆ ಪಾರದರ್ಶಕವಾಗಿರಲಿ: ಮುಲ್ಲಾ

ಕಾರವಾರ: ಸಾಮಾನ್ಯ ಪ್ರವೇಶ ಪರೀಕ್ಷೆಗಳು ಏ.23 ಮತ್ತು 24ರಂದು ನಡೆಯಲಿದ್ದು, ಈ ಪರೀಕ್ಷೆಗಳಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ, ಅತ್ಯಂತ ಪಾರದರ್ಶಕ ಮತ್ತು ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಕರ್ತವ್ಯ ನಿರ್ವಹಿಸಬೇಕು ಎಂದು ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿರುವ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ಸೂಚನೆ ನೀಡಿದರು.ಅವರು ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ, ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಗಳು ಒಟ್ಟು 14 ಕೇಂದ್ರಗಳಲ್ಲಿ ನಡೆಯಲಿದ್ದು, 4498 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಎಲ್ಲಾ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಆಸನ ವ್ಯವಸ್ಥೆ, ವಿದ್ಯುತ್, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದಂತಹ ಮೂಲ ಸೌಕರ್ಯ ಇರುವುದನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಮುಂಚಿತವಾಗಿ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳಬೇಕು ಎಂದರು. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆ ಸಾಗಾಟದ ವಾಹನಗಳಿಗೆ ಹಾಗೂ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಭದ್ರತೆ ಒದಗಿಸುವಂತೆ ಪೊಲೀಸ್ ಇಲಾಖೆಗೆ ಸೂಚಿಸಿದ ಅವರು, ಎಲ್ಲಾ ಕೇಂದ್ರಗಳಿಗೆ ಸಿಸಿಟಿವಿ ಅಳವಡಿಸುವುದರ ಜೊತೆಗೆ ಜಿಪಂ ನಲ್ಲಿ ವೆಬ್ ಕಾಸ್ಟಿಂಗ್ ಮೂಲಕ ವೀಕ್ಷಣೆ ಮಾಡಲಾಗುವುದು ಎಂದರು.

> ▸▸ ಪರೀಕ್ಷಾ ಕೇಂದ್ರದಲ್ಲಿ ಮೊಬೈಲ್, ಬ್ಲೂಟೂಥ್, ಕ್ಯಾಲ್ಕುಲೇಟರ್ ಸೇರಿದಂತೆ ಎಲೆಕ್ಟ್ರಾನಿಕ್ ಸಾಧನಗಳ ಸಂಪೂರ್ಣ ನಿಷೇಧ.

ಕೇಂದ್ರಗಳ 200 ಮೀಟರ್ ನಿಷೇದಾಜ್ಞೆ ವಿಧಿಸಲಾಗುವುದು. ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಮುನ್ನೆಚ್ಚರಿಕೆ ಕ್ರಮವಾಗಿ ಆರೋಗ್ಯ ಇಲಾಖೆಯಿಂದ ಸಿಬ್ಬಂದಿ ನಿಯೋಜಿಸುವಂತೆ ಸೂಚಿಸಿದ ಅವರು, ಪರೀಕ್ಷಾ ದಿನಗಳಂದು ವಿದ್ಯಾರ್ಥಿಗಳಿಗೆ ಬಸ್ ಸೇವೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಎಚ್ಚರವಹಿಸುವಂತೆ ಮತ್ತು ಬೇಡಿಕೆಗನುಗುಣವಾಗಿ ಬಸ್ ವ್ಯವಸ್ಥೆ ಮತ್ತು ನಿಲುಗಡೆ ವ್ಯವಸ್ಥೆ ಕಲ್ಪಿಸುವಂತೆ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿರುವ ಎಲ್ಲಾ ಅಧಿಕಾರಿಗಳು ತಮಗೆ ವಹಿಸಿರುವ ಜವಾಬ್ದಾರಿಯಲ್ಲಿ ಯಾವುದೇ ಲೋಪಗಳು ಕಂಡುಬರದಂತೆ, ಪರಸ್ಪರ ಸಮನ್ವಯದಿಂದ ಕರ್ತವ್ಯ ನಿರ್ವಹಿಸುವಂತೆ ತಿಳಿಸಿದರು.

ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸತೀಶ್ ನಾಯ್ಕ, ಜಿಪಂ ಯೋಜನಾ ನಿರ್ದೇಶಕ ಕರೀಂ ಅಸಾದಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಇದ್ದರು.



ಇಂದು ಪೌಂಡ್ರಕ ವಧೆ ಯಕ್ಷಗಾನ

ಸಿದ್ದಾಪುರ: ಯಕ್ಷಚಂದನ ದಂಟಕಲ್ ಇವರಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು-ಕಾರವಾರ ಇವರ ಸಹಕಾರದಲ್ಲಿ ಹಾರ್ಸಿಕಟ್ಟಾ ಗಜಾನನೋತ್ಸವ ಸಮಿತಿಯಲ್ಲಿ ಪೌಂಡ್ರಕ ವಧೆ ಯಕ್ಷಗಾನ ಏ.18ರಂದು ಸಂಜೆ 6.30ಕ್ಕೆ ನಡೆಯಲಿದೆ.ಟಿಎಸ್‌ಎಸ್ ನಿರ್ದೇಶಕ ರವೀಂದ್ರ ಹೆಗಡೆ ಹಿರೇಕೈ ಕಾರ್ಯಕ್ರಮ ಉದ್ಘಾಟಿಸುವರು. ಯಕ್ಷಚಂದನ ದಂಟಕಲ್ ಸಂಸ್ಥೆಯ ಅಧ್ಯಕ್ಷೆ ಸುಜಾತಾ ಎಸ್.ಹೆಗಡೆ ಅಧ್ಯಕ್ಷತೆವಹಿಸುವರು. ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಮಂಗಲಾ ನಾಯ್ಕ, ಕಲಾ ಪೋಷಕ ಅಶೋಕ ಹೆಗಡೆ ಹಿರೇಕೈ, ವರ್ತಕ ಶ್ರೀಕಾಂತ ಶಾನಭಾಗ, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಮೇಶ ಹೆಗಡೆ ಹಾರ್ಸಿಮನೆ, ನಾಟಿ ವೈದ್ಯ ಕೆ.ಟಿ.ಗೌಡ ಮಾದಲಮನೆ ಉಪಸ್ಥಿತರಿರಲ್ಲಿದ್ದಾರೆ. ಮುಮ್ಮೇಳದಲ್ಲಿ ಮಹಾಬಲೇಶ್ವರ ಭಟ್ಟ ಇಟಗಿ, ನಿರಂಜನ ಜಾಗನಳ್ಳಿ, ನಿತಿನ್ ಹೆಗಡೆ ದಂಟಕಲ್, ವೆಂಕಟರಮಣ ಹೆಗಡೆ ಮಾದನಕಳ್ ಇವರು ವಿವಿಧ ಪಾತ್ರನಿರ್ವಹಿಸಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

ಪೊಲೀಸ್ ಸಿಬ್ಬಂದಿಗಳಲ್ಲಿ ಕರ್ತವ್ಯ ಪ್ರಜ್ಞೆಯಿರಲಿ



ಕಾರವಾರ: ಪೊಲೀಸ್ ಸಿಬ್ಬಂದಿಗಳಲ್ಲಿ ಕರ್ತವ್ಯ ಪ್ರಜ್ಞೆ ಸದಾ ಕಾಲ ಜಾಗೃತವಾಗಿರಬೇಕು ಮತ್ತು ಯಾವುದೇ ತುರ್ತು ಸಂದರ್ಭದಲ್ಲಿ ತಕ್ಷಣ ಸೇವೆಗೆ ಲಭ್ಯರಿರಬೇಕು ಎಂದು ಡಿಐಜಿಪಿ (ತರಬೇತಿ) ಡಿ.ದೇವರಾಜ ಹೇಳಿದರು.

ಅವರು ಶುಕ್ರವಾರ ಕಾರವಾರದ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ 15 ನೇ ತಂಡದಲ್ಲಿ 101 ಸಶಸ್ತ್ರ ಪೊಲೀಸ್ ಕಾನ್ಸಟೇಬಲ್ ಪ್ರಶಿಕ್ಷಣಾರ್ಥಿಗಳ ಬುನಾದಿ ತರಬೇತಿಯ ನಿರ್ಗಮನ ಪಥಸಂಚಲನದಲ್ಲಿ ಕವಾಯತು ಪರಿವೀಕ್ಷಣೆ ಹಾಗೂ ಬಹುಮಾನ ವಿತರಿಸಿ ಮಾತನಾಡಿದರು.

ಪೊಲೀಸ್ ಇಲಾಖೆಯಲ್ಲಿ ಶಿಸ್ತಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಮಹತ್ತರ ಜವಾಬ್ದಾರಿ ಇಲಾಖೆಗಿದ್ದು, ಯಾವುದೇ ಸಂದರ್ಭದಲ್ಲಿ ಕರೆ ಬಂದರೂ ಕರ್ತವ್ಯಕ್ಕೆ ಹಾಜರಾಗಿ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರು-1 ಹಾಗೂ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲ ಕೃಷ್ಣಮೂರ್ತಿ ಜಿ, ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.

ತರಬೇತಿಯಲ್ಲಿ ಹೊರಾಂಗಣದಲ್ಲಿ ಉತ್ತಮ ಸಾಧನೆ ತೋರಿದ, ದೋಂಟಿರಾಂ ಪರ್ಸೆ, ರಂಗನಾಥ್, ಶಿವರಾಜ್ ಹಾಗೂ ಒಳಾಂಗಣದಲ್ಲಿ ಉತ್ತಮ ಸಾಧನೆ ತೋರಿದ ಮುರಳಿ, ಅನಿಲ್ ಕುಮಾರ್, ಅನ್ವರ್‌ಸಾಬ್ ನದಾಫ್ ಮತ್ತು ಫೈರಿಂಗ್‌ನಲ್ಲಿ ಉತ್ತಮ ಸಾಧನೆ ತೋರಿದ ಶಿವಪ್ಪ ದೇವರಮನಿ, ವೀರೇಶ್ ಮಡಿವಾಳ, ದೋಂಟಿರಾಂ ಪರ್ಸೆ ಅವರಿಗೆ ಬಹುಮಾನ ವಿತರಿಸಲಾಯಿತು.

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪ ವಿಭಾಗದ ವ್ಯಾಪ್ತಿಯಲ್ಲಿ ತುರ್ತು ಕಾಮಗಾರಿ ಇರುವುದರಿಂದ ಏ.18ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 12 ಗಂಟೆಯವರಗೆ ಕೆ.ಎಚ್.ಬಿ, ತೇಲಂಗರೋಡ ಸುಂಕೇರಿ, ನಂದನಗದ್ದಾ ಫೀಡರಿನ ಎಲ್ಲಾ ಪ್ರದೇಶಗಳಲ್ಲಿ ಹಾಗೂ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಶಿರವಾಡ ಫೀಡರಿನ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲ್ಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನಗಣತಿ: ಮನೆಪಟ್ಟಿ ಕಾರ್ಯಾಚರಣೆಗೆ ಚಾಲನೆ

ದಾಂಡೇಲಿ: ಭಾರತ ಸರ್ಕಾರದ ನಿರ್ದೇಶನದಂತೆ ದೇಶಾದ್ಯಂತ ನಡೆಯುತ್ತಿರುವ ಭಾರತದ ಜನಗಣತಿ 2027ರ ಪ್ರಕ್ರಿಯೆಯು ದಾಂಡೇಲಿ ನಗರ ಸಭೆಯ ವ್ಯಾಪ್ತಿಯಲ್ಲಿ ಇಂದು ಗುರುವಾರ ಬೆಳಗ್ಗೆ 10 ಗಂಟೆ ಸುಮಾರಿಗೆ ಅಧಿಕೃತವಾಗಿ ಆರಂಭಗೊಂಡಿದೆ. ಈ ಮಹತ್ವದ ಜನಗಣತಿ ಕಾರ್ಯವು ಒಟ್ಟು ಎರಡು ಹಂತಗಳಲ್ಲಿ ನಡೆಯಲಿದ್ದು, ಪ್ರಸ್ತುತ ಮೊದಲ ಹಂತದ ಮನೆಪಟ್ಟಿ ಕಾರ್ಯಾಚರಣೆಗೆ ಗುರುವಾರ ಚಾಲನೆ ನೀಡಲಾಯಿತು.

ಮೊದಲ ಹಂತದಲ್ಲಿ ಮನೆಪಟ್ಟಿ ಕಾರ್ಯಾಚರಣೆಯು ಮೇ 15ರವರೆಗೆ ನಡೆಯಲಿದೆ. ಎರಡನೇ ಹಂತದ ಜನಗಣತಿ ಕಾರ್ಯಾಚರಣೆಯು ಮುಂದಿನ ವರ್ಷ ಅಂದರೆ 2027ರ ಫೆಬ್ರವರಿ ತಿಂಗಳಿನಲ್ಲಿ ನಡೆಯಲಿದೆ. ಸ್ವಯಂ ಗಣತಿಯು ಸರ್ಕಾರದ ಸೂಚನೆಯಂತೆ ಏ.1ರಿಂದ 15 ರವರೆಗೆ



ಸಾರ್ವಜನಿಕರಿಗೆ ಸ್ವಯಂ ಗಣತಿ ಮಾಡಿಕೊಳ್ಳಲು ಅವಕಾಶ ನೀಡಲಾಗಿತ್ತು, ಇದಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು.ನಗರಸಭೆಯ ಆವರಣದಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪೌರಾಯುಕ್ತ ವಿವೇಕ ಬನ್ನೆ ಅವರು ಗಣತಿದಾರರು, ಮೇಲ್ವಿಚಾರಕರು ಮತ್ತು ನಗರಸಭೆ ಸಿಬ್ಬಂದಿ ವರ್ಗದವರಿಗೆ ಅಗತ್ಯ ಸೂಚನೆಗಳನ್ನು ನೀಡಿದರು.

ನಗರದ ಒಟ್ಟು 31 ವಾರ್ಡ್‌ಗಳನ್ನು ಜನಸಂಖ್ಯೆಗೆ ಅನುಗುಣವಾಗಿ ಸಣ್ಣ ಬ್ಲಾಕ್‌ಗಳನ್ನಾಗಿ ವಿಂಗಡಿಸಲಾಗಿದೆ. ಒಟ್ಟು 99 ಬ್ಲಾಕ್‌ಗಳನ್ನು ರಚಿಸಲಾಗಿದ್ದು, ಪ್ರತಿ 6 ಬ್ಲಾಕ್‌ಗಳಿಗೆ ಒಬ್ಬರಂತೆ ಒಟ್ಟು 16 ಜನ ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಈ ಕಾರ್ಯಕ್ಕಾಗಿ ವಿವಿಧ ಶಾಲೆಗಳ ಶಿಕ್ಷಕರು, ಉಪನ್ಯಾಸಕರು ಹಾಗೂ ಸರ್ಕಾರಿ ಇಲಾಖೆಗಳ ನುರಿತ ಅಧಿಕಾರಿಗಳನ್ನು ಗಣತಿದಾರರನ್ನಾಗಿ ನಿಯೋಜಿಸಲಾಗಿದೆ ಎಂದ ವಿವೇಕ ಬನ್ನೆ ಅವರು ಈ ಮನೆಪಟ್ಟಿ ಕಾರ್ಯಾಚರಣೆಯಲ್ಲಿ ಒಟ್ಟು 32 ವಿವಿಧ ಪ್ರಶ್ನೆಗಳನ್ನು ಕೇಳಲಾಗುತ್ತದೆ. ದೇಶದ ನಿಖರವಾದ ದತ್ತಾಂಶ ಸಿದ್ದಪಡಿಸುವಲ್ಲಿ ಸಾರ್ವಜನಿಕರ ಸಹಕಾರ ಅತ್ಯಗತ್ಯ. ಆದ್ದರಿಂದ, ಮನೆ ಮನೆಗೆ ಭೇಟಿ ನೀಡುವ ಗಣತಿದಾರರಿಗೆ ದಾಂಡೇಲಿ ನಗರದ ಸಮಸ್ತ ಸಾರ್ವಜನಿಕರು ನಿಖರವಾದ ಮಾಹಿತಿಯನ್ನು ನೀಡಿ ಸಹಕರಿಸಬೇಕೆಂದು ಮನವಿ ಮಾಡಿದರು.

ಸ್ವಚ್ಛತೆಗೆ ಆದ್ಯತೆ ನೀಡಿ: ಶಾಸಕ ದೇಶಪಾಂಡೆ

ಜೋಯಿಡಾ: ಜೋಯಿಡಾ ತಾಲೂಕಿನ ಡಿಗ್ರಿ ಕಾಲೇಜಿನಲ್ಲಿ ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ,ಜೋಯಿಡಾ ಶಾಸಕ ಆರ್.ವಿ.ದೇಶಪಾಂಡೆ ಅವರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಸ್ವಚ್ಛತೆಗೆ ಎಲ್ಲರೂ ಆದ್ಯತೆ ನೀಡಬೇಕು, ಎಲ್ಲಾ ಕಚೇರಿ ಮತ್ತು ನಮ್ಮ ಪರಿಸರ ಸ್ವಚ್ಛವಾಗಿಡಬೇಕು, ಗ್ರಾಪಂ ಹಾಗೂ ತಾಲೂಕು ಆಡಳಿತ ನಿರಂತರ ಸ್ವಚ್ಛತೆಗೆ ಆದ್ಯತೆ ನೀಡಬೇಕು, ಹಳಿಯಾಳ ಕ್ಷೇತ್ರದಲ್ಲಿ ಸ್ವಚ್ಛತೆಗೆ ರಾಜ್ಯದಲ್ಲಿಯೇ ಹೆಚ್ಚಿನ ಆಧ್ಯತೆ ನೀಡಲಾಗಿದೆ. ಪ್ರತಿಯೊಬ್ಬ ವ್ಯಕ್ತಿ ಸ್ವಚ್ಛತೆ ಜೊತೆಗೆ ಆರೋಗ್ಯಕ್ಕೂ ಹೆಚ್ಚಿನ ಮಹತ್ವ ನೀಡಬೇಕು ಎಂದರು.

ಬೇಸಿಗೆ ಆರಂಭವಾಗಿದೆ ಜೋಯಿಡಾ ತಾಲೂಕಿನಲ್ಲಿ ಎಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಆಗಬಾರದು, ಜೋಯಿಡಾದ ಆದ ನೀರಿನ ಸಮಸ್ಯೆಯನ್ನು ತಹಶೀಲ್ದಾರ್ ಮುಂದಾಳತ್ವದಲ್ಲಿ ಸಮಸ್ಯೆ ಬಗೆಹರಿಸಿ, ಕುಂಬಾರವಾಡಾ ಮತ್ತು ನಂದಿಗದ್ದೆ, ರಾಮನಗರ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಲಕ್ಷ್ಯವಹಿಸಿ, ಜೆಜೆಎಮ್ ಕೆಲಸ ಕಳಪೆ ಆದ ಬಗ್ಗೆ ಮಾಹಿತಿ ಇದೆ ಸರಿಪಡಿಸಿ. ಎಲ್ಲಿಯೂ ನೀರಿನ ಸಮಸ್ಯೆ ಆಗದಂತೆ



ನೋಡಿಕೊಳ್ಳಿ ಎಂದರು. ಎಚ್‌ಪಿವಿ ವ್ಯಾಕ್ಸಿನೇಷನ್‌ನ್ನು 14 ರಿಂದ 15 ವರ್ಷ ವಯಸ್ಸಿನ ಹೆಣ್ಣು ಮಕ್ಕಳು ಮಾಡಿಸಿಕೊಳ್ಳಿ, ಇದು ಗರ್ಭಕೋಶದ ಕ್ಯಾನ್ಸರ್ ಬರುವುದನ್ನು ತಡೆಯುತ್ತದೆ ಎಂದು ತಾಲೂಕು ವೈದ್ಯಾಧಿಕಾರಿ ಸುಜಾತಾ ಉಕ್ಕಲಿ ತಿಳಿಸಿದರು.

ಗಣೇಶಗುಡಿಯಲ್ಲಿ ಅಂಬ್ಯುಲೆನ್ಸ ವ್ಯವಸ್ಥೆ ಆಗುವಂತೆ ಸಭೆಯಲ್ಲಿ ತಿಳಿಸಲಾಯಿತು. ಆರೋಗ್ಯ ಇಲಾಖೆಯಿಂದ ಸಾರ್ವಜನಿಕರಿಗೆ ಸರಿಯಾದ ಮಾಹಿತಿ ದೊರೆಯುತ್ತಿಲ್ಲ ಎಂದು ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು.

ಹೆಸ್ಕಾಂ ಇಲಾಕೆಯಿಂದ ಕುಂಬಾರವಾಡಾದಲ್ಲಿ ವಿದ್ಯುತ್ ಸಿಗದವರಿಗೆ ಸಿಗುವಂತೆ ಮಾಡಿ ಎಂದು ಸೂಚಿಸಲಾಯಿತು, ಲೋಕೋಪಯೋಗಿ ಇಲಾಕೆಯಿಂದ ಗುಂದ -ಉಳವಿ ರಸ್ತೆ, ಸೇರಿದಂತೆ ಎಲ್ಲ ಕಡೆಗಳಲ್ಲಿ ರಸ್ತೆ ಸರಿಪಡಿಸುವಂತೆ ಸೂಚಿಸಲಾಯಿತು.

ವಿವಿಧ ಜಯಂತಿಗಳ ಪೂರ್ವಭಾವಿ ಸಭೆ



ಯಲ್ಲಾಪುರ: ತಾಲೂಕಡಳಿತ ಸಭಾ ಭವನದಲ್ಲಿ ತಹಶೀಲ್ದಾರ್ ಚಂದ್ರಶೇಖರ ಹೊಸಮನಿ ಅಧ್ಯಕ್ಷತೆಯಲ್ಲಿ ಬಸವೇಶ್ವರ, ಶಂಕರಾಚಾರ್ಯರ, ಭಗೀರಥ ಜಯಂತಿ ಆಚರಣೆ ಕುರಿತು-ಪೂರ್ವ ಭಾವಿ ಸಭೆ ನಡೆಯಿತು.

ತಾಲೂಕಡಳಿತ ಸೌಧದ ಸಭಾಭವನದಲ್ಲಿ ಏ.21ರಂದು ಬೆಳಗ್ಗೆ 11ಗಂಟೆಗೆ ಬಸವೇಶ್ವರ ಜಯಂತಿ, ಏ.26ರಂದು ಶಂಕರಾಚಾರ್ಯರ ಜಯಂತಿ, ಏ.23ರಂದು ಭಗೀರಥ ಜಯಂತಿ ಆಚರಿಸಲು ತೀರ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಗ್ರೇಡ್ 2ತಹಶೀಲ್ದಾರ್ ಸಿ.ಜಿ.ನಾಯ್ಕ, ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ, ಶಿವಲಿಂಗಯ್ಯ ಅಲ್ಲಯ್ಯನವರಮಠ, ವಿವಿಧ ಇಲಾಖೆ ಅಧಿಕಾರಿಗಳಾದ ಡಾ.ಸುಬ್ರಾಯ ಭಟ್, ಜ್ಯೋತಿ ನರೋಟ್ಬಿ, ರೇಖಾ ನಾಯ್ಕ, ದಾಕ್ಷಾಯಣಿ ನಾಯ್ಕ, ಗೀತಾ ಜಾಧವ, ಶಿವು, ವೀರಶೈವ ಲಿಂಗಾಯತ ಸಮಾಜದ ಪ್ರಮುಖರಾದ ಮಂಜುನಾಥ ಹಿರೇಮಠ, ಜಯರಾಜ್ ಗೋವಿ, ಸಿದ್ಧಾರ್ಥನಂದೊಳ್ಳಿ ಮಠ ಇತರರು ಇದ್ದರು.

ಸಿಬಿಎಸ್‌ಇ ಫಲಿತಾಂಶ: ವಿದ್ಯಾರ್ಥಿಗಳ ಸಾಧನೆ

ಹಳಿಯಾಳ: ಪಟ್ಟಣದ ಪ್ರತಿಷ್ಠಿತ ಆರ್.ಡಿ.ಎಮ್ ಟ್ರಸ್ಟ್‌ನ ವಿಮಲ ವಿ. ದೇಶಪಾಂಡೆ ಸ್ಕೂಲ್ ಆಫ್ ಎಕ್ಸಲೆನ್ಸ ಶಾಲೆಯ 2025-26ರ ಶೈಕ್ಷಣಿಕ ವರ್ಷದ (ಸಿಬಿಎಸ್‌ಇ ಪಠ್ಯಕ್ರಮದ) ಹತ್ತನೇಯ ತರಗತಿಯ ಫಲಿತಾಂಶ ಪ್ರಕಟಗೊಂಡಿದ್ದು, ಶಾಲೆಯ ಹತ್ತನೇ ತರಗತಿಯ ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿದ್ದಾರೆ.

ಶಾಲೆಯ ಒಟ್ಟು ಫಲಿತಾಂಶ ಶೇ.100ರಷ್ಟಾಗಿದ್ದು. ಪರೀಕ್ಷೆಗೆ ಹಾಜರಾದ 39 ವಿದ್ಯಾರ್ಥಿಗಳಲ್ಲಿ 13 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 23 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಹಾಗೂ 3 ವಿದ್ಯಾರ್ಥಿಗಳು ದ್ವಿತೀಯ ಸ್ಥಾನದಲ್ಲಿ ಉತ್ತೀರ್ಣರಾಗಿದ್ದಾರೆ.

ವರ್ಷಾ ತುಕಾರಾಮ ಗೌಡಾ 487 ಅಂಕಗಳೊಂದಿಗೆ ಶೇ.97.4ರಷ್ಟು ಅಂಕ ಪಡೆದು ಶಾಲೆಗೆ ಪ್ರಥಮ, ಸಮರ್ಥ ಜಗದೀಶ ಜುಟ್ಟಲ 477 ಅಂಕಗಳೊಂದಿಗೆ ಶೇ.95.4ರಷ್ಟು ದ್ವಿತೀಯ, ಆಸ್ತಾ ಸಂಜು ರೋಸುರ್ 471 ಶೇ. 94.2ರಷ್ಟು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಶ್ರಾವಣಿ ಸೋಮೇಶ ಹುಂಡೇಕರ ಶೇ.93.8ರಷ್ಟು ಹಾಗೂ ಅಂಕಿತಾ ಗಣಪತಿ ನಾಯ್ಕ ,ಅಭಿರಾಜ ನಿಂಗಪ್ಪಾ ಕುಕಡೊಳ್ಳಿ ಶೇ.92.8 ರಷ್ಟು ಅಂಕಗಳೊಂದಿಗೆ ಕ್ರಮವಾಗಿ 4 ಮತ್ತು 5ನೇ ಸ್ಥಾನ ಪಡೆದು ಶಾಲೆಗೆ ಹಾಗೂ ಹಳಿಯಾಳ ತಾಲೂಕಿಗೆ ಕೀರ್ತಿಯನ್ನು ತಂದಿರುತ್ತಾರೆ.

ವಿದ್ಯಾರ್ಥಿಗಳ ಈ ಅಭೂತಪೂರ್ವ ಸಾಧನೆಗೆ ಶಾಲೆಯ ಅಧ್ಯಕ್ಷ ಪ್ರಶಾಂತ ಆರ್. ದೇಶಪಾಂಡೆ, ವಿ.ಆರ್.ಡಿ.ಎಮ್ ಟ್ರಸ್ಟ್‌ನ ಆಡಳಿತಾಧಿಕಾರಿ ಪ್ರಕಾಶ ಪ್ರಭು, ಶಾಲೆಯ ಪ್ರಾಂಶುಪಾಲ ಬಸವರಾಜ ಎಚ್.ಎಮ್, ಶಿಕ್ಷಕ ಶಿಕ್ಷಕೇತರ ವೃಂದದವರು ಅಭಿನಂದಿಸಿದ್ದಾರೆ.

ಹೆಚ್ಚುವರಿ ವಿಶೇಷ ಬಸ್ ಸೌಲಭ್ಯ

ಕಾರವಾರ: ಪ್ರಸಕ್ತ ಸಾಲಿನ ಬಸವೇಶ್ವರ ಜಯಂತಿ ಹಾಗೂ ವಾರಂತ್ಯದ ಪ್ರಯುಕ್ತ ಸಾರ್ವಜನಿಕರು ತಮ್ಮ ಸ್ವಂತ ಊರುಗಳಿಗೆ ತೆರಳುವುದರಿಂದ, ವಾ.ಕ.ರ.ಸಾ. ಸಂಸ್ಥೆಯ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಏ.18ರಂದು ಶನಿವಾರ, ಏ.19ರಂದು ಭಾನುವಾರ ಹಾಗೂ ಏ.20 ರಂದು ಸೋಮವಾರ ಬಸವೇಶ್ವರ ಜಯಂತಿ ಇರುವುದರಿಂದ ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಪ್ರಯಾಣಿಕರು ತಮ್ಮ ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು. ಬೆಂಗಳೂರಿನಿಂದ ರಾಜ್ಯ-ಅಂತರರಾಜ್ಯದ ವಿವಿಧ ಸ್ಥಳಗಳಿಗೆ ತೆರಳಲು ಏ.17 ಹಾಗೂ ಏ.18 ವರೆಗೆ ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಸದರಿ ವಿಶೇಷ ಸಾರಿಗೆಗಳ ಸದುಪಯೋಗ ಪಡಿಸಿಕೊಳ್ಳುವುದರೊಂದಿಗೆ, ಸುಖಕರ ಹಾಗೂ ಸುರಕ್ಷಿತ ಪ್ರಯಾಣಕ್ಕಾಗಿ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸುವಂತೆ ಮತ್ತು ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಹೋಟೆಲ್‌ಗಳ ಮೇಲೆ ಅಧಿಕಾರಿಗಳ ದಿಢೀರ್ ದಾಳಿ



ಮುಂಡಗೋಡ: ಮಾಂಸಾಹಾರಿ ಹಾಗೂ ಸಸ್ಯಹಾರಿ ಹೋಟೆಲ್‌ಗಳ ಮೇಲೆ ಗುರುವಾರ ತಾಲೂಕಾ ಆರೋಗ್ಯಾಧಿಕಾರಿಗಳ ನೇತೃತ್ವದ ತಂಡ ದಿಢೀರನೆ ದಾಳಿ ನಡೆಸಿ ಮಾಲೀಕರಿಗೆ ಮತ್ತು ಅಡುಗೆ ಸಿಬ್ಬಂದಿಗಳಿಗೆ ಎಚ್ಚರಿಕೆ ನೀಡಿದರು.

ಅಧಿಕಾರಿಗಳ ತಂಡ ಪಟ್ಟಣದ ಬನ್ನಿಕಟ್ಟಿ ಬಳಿ ಇರುವ ಮಾಂಸಾಹಾರಿ, ಸಸ್ಯಹಾರಿ ಹೋಟೆಲ್ ಮತ್ತು ಟಿಬೇಟಿಯನ್ ಕ್ಯಾಂಪ್ 3 ರಲ್ಲಿ ಮೂರು ಹೋಟೆಲಗಳ ಮೇಲೆ ದಾಳಿ ಮಾಡಿದ ತಂಡ ವೈಯಕ್ತಿಕ ಸ್ವಚ್ಛತೆ, ಅಡುಗೆ ಕೋಣೆ ಸ್ವಚ್ಛತೆ, ಆಹಾರ ಸುರಕ್ಷತೆಯ ಅಡಿಯಲ್ಲಿ ಪರಿಶೀಲನೆ ನಡೆಸಿದರು.

ಹೋಟೆಲ್ ಅಡಿಗೆ ಸಿಬ್ಬಂದಿ ಮತ್ತು ಮಾಲೀಕರಿಗೆ ವೈಯಕ್ತಿಕ ಸ್ವಚ್ಛತೆ, ರಕ್ಷಣೆ, ವೈದ್ಯಕೀಯ ಪರೀಕ್ಷೆ ಸೇರಿ ಮುಂತಾದವುಗಳಿಗೆ ಸೂಚನೆ ನೀಡಿದರು.

ತಂಬಾಕು ಮಾರಾಟ ಮಾಡುವ ಅಂಗಡಿಗಳ ಮೇಲೆಯೂ ದಾಳಿ ಮಾಡಿ ಎರಡು ಸಾವಿರ ದಂಡ ವಿಧಿಸಿ ಎಚ್ಚರಿಕೆ ನೀಡಿದರು.

ತಾಲೂಕ ಆರೋಗ್ಯ ಅಧಿಕಾರಿ ಡಾ. ನರೇಂದ್ರ ಪವಾರ, ಆಡಳಿತ ವೈದ್ಯಾಧಿಕಾರಿ ಭರತ್ ಡಿ ಟಿ, ಕಂದಾಯ ಇಲಾಖೆಯ ಆಹಾರ ನಿರೀಕ್ಷಕ ಸಂಜು ಕುಮಾರ್ ಲಮಾಣಿ, ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಎಸ್.ಪಟ್ಟಣ್ ಶೆಟ್ಟಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎನ್.ಹೆಚ್. ಹಿರೇಮಠ ಆರೋಗ್ಯ ನಿರೀಕ್ಷಣಾಧಿಕಾರಿ ಪ್ರಸಾದ್, ಸತೀಶ್.ಬಿ ಕಾರ್ಯಾಚರಣೆಯಲ್ಲಿದ್ದರು.

ಕಿರುಸುದ್ದಿ

ನಾಳೆ ಜಿಲ್ಲೆಗೆ ಸಿಎಂ ಸಿದ್ದರಾಮಯ್ಯ

ಹಾವೇರಿ: ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಏ. 19ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಏ.19ರಂದು ಬೆಳಗ್ಗೆ 10.30ಕ್ಕೆ ಬೆಂಗಳೂರು ಎಚ್ಎಎಲ್ ವಿಮಾನ ನಿಲ್ದಾಣದಿಂದ ಹೊರಟು, ಬೆಳಿಗ್ಗೆ 11.30ಕ್ಕೆ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವರು. ಬೆಳಿಗ್ಗೆ 11.40ಕ್ಕೆ ಹೆಲಿಕಾಪ್ಟರ್ ಮೂಲಕ ಹೊರಟು, ಮಧ್ಯಾಹ್ನ 12.15ಕ್ಕೆ ರಾಣೇಬೆನ್ನೂರು ತಾಲೂಕು ಕ್ರೀಡಾಂಗಣ ಹೆಲಿಪ್ಯಾಡ್‌ಗೆ ಆಗಮಿಸುವರು. ಮಧ್ಯಾಹ್ನ 12.25ಕ್ಕೆ ದೊಡ್ಡಕೆರೆಯಲ್ಲಿ ರಾಣೇಬೆನ್ನೂರು ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಮಧ್ಯಾಹ್ನ 1 ಗಂಟೆಗೆ ದೊಡ್ಡಕೆರೆಯಿಂದ ಹೊರಟು, 1.15ಕ್ಕೆ ನಿಟ್ಟೂರ ಗ್ರಾಮಕ್ಕೆ ತೆರಳಿ, ಬೀರಲಿಂಗೇಶ್ವರ ಸ್ವಾಮಿ ದೇವಸ್ಥಾನದ 50ನೇ ವರ್ಷದ ಸುವರ್ಣ ಮಹೋತ್ಸವ, ಭಕ್ತ ಕನಕದಾಸರ ಮಹಾದ್ವಾರ ಉದ್ಘಾಟನೆ ಹಾಗೂ ಧರ್ಮಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂಜೆ 4 ಗಂಟೆಗೆ ನಿಟ್ಟೂರ ಗ್ರಾಮದಿಂದ ಹೊರಟು, 4.15ಕ್ಕೆ ರಾಣೇಬೆನ್ನೂರು ತಾಲೂಕು ಕ್ರೀಡಾಂಗಣಕ್ಕೆ ಆಗಮಿಸಿ, ಹುಬ್ಬಳ್ಳಿಗೆ ಪ್ರಯಾಣ ಬೆಳೆಸಲಿದ್ದಾರೆ.

ಹೆಚ್ಚುವರಿ ವಿಶೇಷ ಬಸ್ ಸೌಲಭ್ಯ

ಹಾವೇರಿ: ಬಸವೇಶ್ವರ ಜಯಂತಿ ಹಾಗೂ ವಾರಾಂತ್ಯದ ಪ್ರಯುಕ್ತ ಸಾರ್ವಜನಿಕರ ಅನುಕೂಲಕ್ಕಾಗಿ, ವಾ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ಏ.18, 19 ಹಾಗೂ ಏ.20 ಬಸವೇಶ್ವರ ಜಯಂತಿ ಇರುವುದರಿಂದ ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ಹೆಚ್ಚಿನ ಪ್ರಯಾಣಿಕರು ತಮ್ಮ ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು. ಬೆಂಗಳೂರಿನಿಂದ ರಾಜ್ಯ, ಅಂತರರಾಜ್ಯದ ವಿವಿಧ ಸ್ಥಳಗಳಿಗೆ ತೆರಳಲು ಏ.17 ಹಾಗೂ ಏ.18ರವರೆಗೆ ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸಾರ್ವಜನಿಕರು ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.22ರಂದು ಹೋರಿಕರುಗಳ ಹರಾಜು

ಹಾವೇರಿ: ಬಂಕಾಪುರ ಖಿಲಾರ್ ತಳಿ ಗೋವು ಸಂವರ್ಧನಾ ಕೇಂದ್ರದಿಂದ ಎರಡು ಹೋರಿಕರುಗಳನ್ನು ಸರ್ಕಾರದಿಂದ ಮಾನ್ಯತೆ ಪಡೆದ ಗೋಶಾಲೆಗಳು, ಜಾನುವಾರುಗಳ ಸಂರಕ್ಷಣೆಯಲ್ಲಿ ತೊಡಗಿರುವ ಸ್ವಯಂ ಸೇವಾ ಸಂಘಗಳು, ಕ್ಷೇಮಾಭಿವೃದ್ಧಿ ಸಂಸ್ಥೆಗಳಿಗೆ ಏ.22ರಂದು ಬೆಳಗ್ಗೆ 10.30ಕ್ಕೆ ಹರಾಜಿನ ಮೂಲಕ ವಿಲೇವಾರಿ ಮಾಡಲಾಗುವುದು ಎಂದು ಬಂಕಾಪುರ ಖಿಲಾರ್ ತಳಿ ಗೋವು ಸಂವರ್ಧನಾ ಕೇಂದ್ರದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಲಾಮಂದಿರ ಲೋಕಾರ್ಪಣೆ

ಗದಗ: ರೋಣ ತಾಲೂಕಿನ ಮಲ್ಲಾಪೂರ ಗ್ರಾಮದಲ್ಲಿ ಏ.21 ರಿಂದ 27 ರವರಿಗೆ ಸಿದ್ಧಾರೂಢರ ವಿವಿದೋದ್ದೇಶಗಳ ಟ್ರಸ್ಟ್ ಕಮೀಟಿ ಸಹಯೋಗದಲ್ಲಿ ಸಿದ್ಧಾರೂಢರ ನೂತನ ಶಿಲಾಮಂದಿರ ಲೋಕಾರ್ಪಣೆ, ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ, ಪಲ್ಲಕ್ಕಿ ಉತ್ಸವ ಹಾಗೂ ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಏ.21ರಂದು ಬೆಳಗ್ಗೆ 10ಕ್ಕೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕುಂಭ, ಆರುತಿ, ಡೊಳ್ಳು ವಿವಿಧ ವಾದ್ಯಗಳೊಂದಿಗೆ ಸಿದ್ಧಾರೂಢರ ಮೂರ್ತಿ ಹಾಗೂ ವಿವಿಧ ಶರಣರ ಮೂರ್ತಿಗಳ ಭವ್ಯ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಏ.22ರಂದು ಸಂಜೆ 6ಕ್ಕೆ ಸಿದ್ಧಾರೂಢರ ಜಲವಾಸ, ದಾನ್ಯವಾಸ, ವಸ್ತ್ರವಾಸ, ಹೋಮ ಹವನದ ತಯಾರಿ ಮಾಡಲಾಗುತ್ತಿದೆ. ಏ.23ರಂದು ಬೆಳಗ್ಗೆ 9ಕ್ಕೆ ಸಿದ್ಧಾರೂಢರ ನೂತನ ಶಿಲಾಮಂದಿರ ಲೋಕಾರ್ಪಣೆ, ಸಿದ್ಧಾರೂಢರ ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಸಿದ್ಧಾರೂಢರ ಗೋಪುರ ಕಳಸಾರೋಹಣ, ವಿವಿಧ ಶರಣರ ಮೂರ್ತಿ ಪ್ರತಿಷ್ಠಾಪನೆ, ಮಲ್ಲಾಪೂರದ ಶಾಸ್ತ್ರಿಗಳಿಂದ ಹೋಮ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಸಾನ್ನಿಧ್ಯ ಫಕೀರೇಶ್ವರ ಶಿವಾಚಾರ್ಯ ಸ್ವಾಮೀಜಿ ವಹಿಸುವರು. ಅಭಿನವ ಮೃತ್ಯುಂಜಯ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸುವರು. ಡಾ.ಶಿವಕುಮಾರ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ನೀಲಮ್ಮತಾಯಿ ಅಸುಂಡಿ, ಶಾಂತವೀರ ಶರಣರು ಭಾಗವಹಿಸುವರು. ಬಿ.ಟಿ. ರಬ್ಬನಗೌಡ್ರ, ವೀರಭದ್ರಪ್ಪ ನರಿಯವರ, ಬಸುರಡ್ಡೆಪ್ಪ ಹೊನ್ನೂರ, ರವಿ ದಾನರಡ್ಡಿ, ಅಶೋಕ ಉಗಲಾಟ, ಬಾಪುಗೌಡ ಭರಮಗೌಡ ಭಾಗವಹಿಸುವರು ಎಂದು ಸಿದ್ಧಾರೂಢರ ವಿವಿದೋದ್ದೇಶಗಳ ಟ್ರಸ್ಟ್ ಕಮಿಟಿ ಪದಾಧಿಕಾರಿಗಳು ತಿಳಿಸಿದ್ದಾರೆ.



ಬ್ಯಾಡಗಿ : ವಿಶ್ವ ಣಮೋಕಾರ ಮಂತ್ರ ದಿವಸ ಆಚರಣೆ ಅಂಗವಾಗಿ ಬ್ಯಾಡಗಿಯ ವಿಮಲನಾಥ್ ಜೈನ ಸೇತಾಬಂರ ಸಂಘ ಬ್ಯಾಡಗಿ ಮಹಿಳಾ ಮತ್ತು ಪುರುಷ ಸಮಾಜ, ಭಾರತೀಯ ಜೈನ ಮೀಲನ್ ವಿಶ್ವಶಾಂತಿಗಾಗಿ ಬ್ಯಾಡಗಿ ನಗರದ ದಿಗಂಬರ ಜೈನ ಮಂದಿರದಲ್ಲಿ ಗುರುವಾರ ಬೆಳಗ್ಗೆ 8 ರಿಂದ 9:30 ಗಂಟೆವರೆಗೆ ಸತತ ಒಂದು ಗಂಟೆ ಕಾಲ ನಿರಂತರ ಣಮೋಕಾರ ಮಂತ್ರ ಪಠಣೆ ಮಾಡಲಾಯಿತು. ಣಮೋಕಾರ ಮಂತ್ರ ಪಠಣೆಯಲ್ಲಿ ಸಮಸ್ತ ಶ್ರಾವಕ ಮತ್ತು ಶ್ರಾವಕಿಯರ, ಮಕ್ಕಳು ಭಾಗವಹಿಸಿದ್ದರು.

ಶಂಭು ಮಲಕಣ್ಣನವರ ಕಾಂಗ್ರೆಸ್‌ಗೆ ಸೇರ್ಪಡೆ

ಹಾನಗಲ್ಲ: ತಾಲೂಕಿನ ಶಂಕರಿಕೊಪ್ಪ ಗ್ರಾಮದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಶಂಭು ಮಲಕಣ್ಣನವರ, ವಿಎಸ್ಎಸ್ ಬ್ಯಾಂಕಿನ ಮಾಜಿ ನಿರ್ದೇಶಕ ಶಿವಬಸಪ್ಪ ಮಲಕಣ್ಣನವರ ಸೇರಿದಂತೆ ಹಲವರು ತಮ್ಮ ಬೆಂಬಲಿಗರೊಂದಿಗೆ ಶಾಸಕ ಶ್ರೀನಿವಾಸ ಮಾನೆ ಸಮ್ಮುಖದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಶಾಸಕ ಮಾನೆ ಮಾತನಾಡಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ಬಡವರು, ಜನಸಾಮಾನ್ಯರ ಪರವಾದ ಕಾರ್ಯಕ್ರಮ ಜಾರಿಗೆ ತಂದಿದೆ. ಇದೀಗ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಜನರ ಸಂಕಷ್ಟಕ್ಕೆ ಸ್ಪಂದಿಸುತ್ತಿದೆ. ಅತಂತ್ರ ಸ್ಥಿತಿಯಲ್ಲಿದ್ದ 13 ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಹಕ್ಕುಪತ್ರ ದೊರಕಿಸಿ ಸ್ವತಂತ್ರಗೊಳಿಸಲಾಗುತ್ತಿದೆ. ರಸ್ತೆಗಳ ನಿರ್ಮಾಣ, ಕುಡಿಯುವ ನೀರಿನ ಯೋಜನೆ, ಏತ ನೀರಾವರಿ ಯೋಜನೆ ಸೇರಿದಂತೆ ಜನಪರ ಯೋಜನೆಗಳಿಗೆ ನೂರಾರು ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ ಎಂದರು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಭರಮಣ್ಣ ಶಿವೂರ, ಅನಿತಾ ಶಿವೂರ, ಮಲ್ಲಪ್ಪ ಕೋರಿ, ಪ್ರಕಾಶ ನಂದಿಹಳ್ಳಿ, ಬಾನಪ್ಪ ಬಿದರಿ, ಗುಡ್ಡಪ್ಪ ಗಡಿಯಂಕನಹಳ್ಳಿ, ನಿಂಗಪ್ಪ ತಳವಾರ, ನಿಂಗಪ್ಪ ಜಾಡಬಡಿಗೇರ, ಗಂಗಪ್ಪ ಗುಳಪಣ್ಣನವರ, ಚನ್ನಬಸಪ್ಪ ಬೆನಕಣ್ಣನವರ, ಸಿದ್ದಪ್ಪ ಕಾಳಂಗಿ, ಬಾಬಪ್ಪ ಕೆರಿಮತ್ತಿಹಳ್ಳಿ ಸೇರಿದಂತೆ ಹಲವರು ಇದ್ದರು.



ಹಾನಗಲ್ಲ: ತಾಲೂಕಿನ ಶಂಕರಿಕೊಪ್ಪ ಗ್ರಾಮದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಶಂಭು ಮಲಕಣ್ಣನವರ, ವಿಎಸ್‌ಎಸ್ ಬ್ಯಾಂಕಿನ ಮಾಜಿ ನಿರ್ದೇಶಕ ಶಿವಬಸಪ್ಪ ಮಲಕಣ್ಣನವರ ಸೇರಿದಂತೆ ಹಲವರು ತಮ್ಮ ಬೆಂಬಲಿಗರೊಂದಿಗೆ ಶಾಸಕ ಶ್ರೀನಿವಾಸ ಮಾನೆ ಸಮ್ಮುಖದಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ನಗರಸಭೆಗೆ ಲೋಕಾಯುಕ್ತ ಅಧಿಕಾರಿಗಳ ದಿಢೀರ್ ಭೇಟಿ
ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿ

ಹಾವೇರಿ: ನಗರಸಭೆಯಲ್ಲಿ ತೆರಿಗೆ ಭರಣಾ ಮಾಡಲು ಖಾಸಗಿ ವ್ಯಕ್ತಿಗಳು ಹಣ ಪಡೆದುಕೊಳ್ಳುತ್ತಿದ್ದಾರೆ, ಇಸ್ವತ್ತು ಮತ್ತಿತರ ಕೆಲಸಗಳಿಗೆ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ ಎಂಬ ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ನಗರ ಸಭೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿ, ಅಲ್ಲಿನ ಸಿಬ್ಬಂದಿಗಳಿಗೆ ಪ್ರಾಮಾಣಿಕ ಸೇವೆ ನೀಡುವಂತೆ ಸಲಹೆ ಮಾಡಿದ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಏಪ್ರೀಲ್ ತಿಂಗಳಲ್ಲಿ ಬಹುತೇಕ ನಗರಸಭೆಯ ಆಸ್ತಿಗಳ ವಿವಿಧ ತೆರಿಗೆ ಸಂಗ್ರಹಣೆಯ ಅಭಿಯಾನ ನಡೆಯುತ್ತದೆ, ಈ ವೇಳೆ ಶೇ.5ರಷ್ಟು ರಿಬೇಟ್ ನೀಡುವ ಮೂಲಕ ಸಾರ್ವಜನಿಕ ತೆರಿಗೆ ಸಂಗ್ರಹಕ್ಕೆ ಪ್ರೋತ್ಸಾಹ ನೀಡಲಾಗುತ್ತಿದೆ. ಇದರ ಭಾಗವಾಗಿ ನಗರಸಭೆಯಲ್ಲಿ ತೆರಿಗೆ ಭರಣಾ ಮಾಡಲು ದಿನನಿತ್ಯ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಬಂದು ಸರದಿಯಲ್ಲಿ ಕುಳಿತು ತಮ್ಮ ಆಸ್ತಿಗಳ ತೆರಿಗೆ ಭರಣಾ ಮಾಡುತ್ತಿದ್ದಾರೆ. ಆದರೆ ಈ ತೆರಿಗೆ ಭರಣಾ ಮಾಡುವ ಅರ್ಜಿಯನ್ನು ಪರಿಣಿತ ವ್ಯಕ್ತಿಯೇ ಭರ್ತಿ ಮಾಡಬೇಕಾಗಿದ್ದು, ಪ್ರಸ್ತುತ ನಗರಸಭೆಗೆ ಸಿಬ್ಬಂದಿ ಕೊರತೆ ಇದ್ದು, ಈ ಹಿನ್ನೆಲೆಯಲ್ಲಿ ಅದಕ್ಕಾಗಿ ಸಿಬ್ಬಂದಿ ನಿಯೋಜನೆ ಅಸಾಧ್ಯವಾಗಿದೆ. ಅಲ್ಲದೇ ತೆರಿಗೆ ಭರಣಾ ಮಾಡುವ ಅರ್ಜಿಯ ಪ್ರಕ್ರಿಯೆ ಪೂರ್ಣಗೊಳಿಸಲು ಇದನ್ನು ಬಹು ಹಿಂದಿನಿಂದ ಖಾಸಗಿ ವ್ಯಕ್ತಿ ಅಥವಾ ಏಜೆನ್ಸಿಗೆ ವಹಿಸಿಕೊಡಲಾಗುತ್ತ ಬರುತ್ತಿದೆ. ಇದು ಗೊಂದಲಕ್ಕೆ ಕಾರಣವಾಗಿದ್ದು, ಅರ್ಜಿ ಭರ್ತಿ ಮಾಡಿಕೊಡಲು ಖಾಸಗಿ ವ್ಯಕ್ತಿಗಳು ಹಣ ಪಡೆದುಕೊಳ್ಳುತ್ತಿದ್ದಾರೆ ಎಂಬ ಆರೋಪ ಲೋಕಾಯುಕ್ತ ಕಚೇರಿಗೆ ತಲುಪಿದ ಹಿನ್ನೆಲೆಯಲ್ಲಿ ಅದರ ವಿಚಾರಣೆ ನಡೆಸಿ ವಾಪಸಾದರು ಎನ್ನಲಾಗಿದೆ.



ಅಧಿಕಾರಿಗಳ ಭೇಟಿ

ಸುಮಾರು 15 ಜನ ಲೋಕಾಯುಕ್ತ ಅಧಿಕಾರಿಗಳ ತಂಡ ನಗರಸಭೆಗೆ ಬೆಳಗ್ಗೆ 10.40ಗಂಟೆಗೆ ಆಗಮಿಸಿ, ಆಸ್ತಿ ತೆರಿಗೆ ಕೌಂಟರ್, ಅಲ್ಲಿ ಅರ್ಜಿ ಸಲ್ಲಿಸುವವರ ಹಾಗೂ ಫಾರ್ಮ್ ಭರ್ತಿ ಮಾಡುವವರ ವಿಚಾರಣೆ ನಡೆಸಿದರು. ಅಲ್ಲದೇ ವಿವಿಧ ವಿಭಾಗಗಳಿಗೆ ತೆರಳಿ ಅಲ್ಲಿ ಕಾರ್ಯಚಟುವಟಿಕೆಗಳ ಮಾಹಿತಿ ಪಡೆದುಕೊಂಡರಲ್ಲದೇ ಪೌರಾಯುಕ್ತರ ಜತೆಗೆ ಕೆಲಹೊತ್ತು ಚರ್ಚಿಸಿ ಸುಮಾರು ಮೂರ್‍ನಾಲ್ಕು ಗಂಟೆಗಳ ನಂತರ ಮಧ್ಯಾಹ್ನ ವಾಪಸಾದರು.

ಅಲ್ಲದೇ ಈಗಾಗಲೇ ಸಿಬ್ಬಂದಿ ಕೊರತೆಯಿಂದ ನಗರಸಭೆ ನಲುಗುತ್ತಿದ್ದು, ಪ್ರತಿ ಅಧಿಕಾರಿ ಎರಡು ಇಲ್ಲವೇ ಹೆಚ್ಚುವರಿ ಜವಾಬ್ದಾರಿಗಳನ್ನು ನಿಭಾಯಿಸಿಕೊಂಡು ಹೋಗುವುದು ಅನಿವಾರ್ಯ ಎಂಬಂತಾಗಿದೆ. ಇದರ ಬೆನ್ನಲ್ಲೇ ನಗರಸಭೆಯಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಿದ್ದು, ಪ್ರತಿ ಕೆಲಸಕ್ಕೂ ಮಧ್ಯವರ್ತಿಗಳು ಅವಲಂಬಿಸಲೇ ಬೇಕೆಂಬ ಸ್ಥಿತಿ ನಿರ್ಮಾಣವಾಗಿದ್ದು, ಈ ಕುರಿತೂ ಸಹ ದೂರು ಬಂದ ಹಿನ್ನೆಲೆಯಲ್ಲಿ ಲೋಕಾಯುಕ್ತರು ನಗರಸಭೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ನಗರಸಭೆಯ ಲೆಕ್ಕಪತ್ರ, ತಾಂತ್ರಿಕ, ಕಂಪ್ಯೂಟರ್, ಜನನ-ಮರಣ ಪ್ರಮಾಣಪತ್ರ ವಿಭಾಗ ಸೇರಿದಂತೆ ಹಲವು ವಿಭಾಗಗಳಿಗೆ ಭೇಟಿ ನೀಡಿ ಪಾರದರ್ಶಕ ಸೇವೆಗೆ ಸೂಚನೆ ನೀಡಿದ್ದಾರೆ.

> ನಗರಸಭೆಯ ಆಸ್ತಿ ತೆರಿಗೆ ಪಾವತಿಗೆ ನಿಗದಿತ ಅರ್ಜಿ ಇದ್ದು ಅದನ್ನು ನಮ್ಮ ಸಿಬ್ಬಂದಿ ಭರ್ತಿ ಮಾಡಲು ಸಮಯಾವಕಾಶ ಇರಲ್ಲ, ಹೀಗಾಗಿ ಇದನ್ನು ಬಹು ಹಿಂದಿನಿಂದಲೂ ಖಾಸಗಿ ಏಜೆನ್ಸಿ, ಸಂಸ್ಥೆ ಇಲ್ಲವೆ ವ್ಯಕ್ತಿಗೆ ಟೆಂಡರ್ ಮಾದರಿಯಲ್ಲಿ ನೀಡಲಾಗುತ್ತಿದೆ. ಪ್ರತಿ ಆಸ್ತಿಯ ವಿವರ ಭರ್ತಿ ಮಾಡುವ ಪ್ರತಿ ಅರ್ಜಿಗೆ ರೂ.30-50 ಹಣವನ್ನು ಸಾರ್ವಜನಿಕರಿಂದಲೇ ಪಡೆಯಬೇಕಿದೆ. ಆದರೆ ಈ ಬಗ್ಗೆ ಸ್ಪಷ್ಟತೆ ಇಲ್ಲ, ಜನರ ದೂರು ಆಧರಿಸಿ ಲೋಕಾಯುಕ್ತರ ನಗರಸಭೆಗೆ ಬಂದು ಪರಿಶೀಲನೆ ನಡೆಸಿದ್ದಾರೆ.
>
> ■ ಹೆಸರು ಹೇಳಲಿಚ್ಚಿಸದ, ನಗರಸಭೆ ಸಿಬ್ಬಂದಿ

ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಬ್ಯಾಡಗಿ: ಕೆರೆಕಟ್ಟೆಗಳು ನಾಡಿನ ಜೀವನಾಡಿ ರೈತಾಪಿ ಜನರ ಉಸಿರು. ಅವುಗಳನ್ನು ಉಳಿಸಿಕೊಳ್ಳ ಬೇಕಾದು ನಮ್ಮ ಕರ್ತವ್ಯ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡ ಕೆರೆಗಳ ಅಭಿವೃದ್ಧಿ ಕಾಮಗಾರಿಗಳಿಂದ ಜನರ ಜೀವನಮಟ್ಟ ಸುಧಾರಿಸುತ್ತಿದೆ ಎಂದು ರೈತ ಮುಖಂಡ ಕಿರಣ ಗಡಿಗೋಳ ಹೇಳಿದರು.

ತಾಲೂಕಿನ ಶೀಡೆನೂರ ಗ್ರಾಮದಲ್ಲಿ ದೊಡ್ಡ ತಳವಾರ ಕಟ್ಟಿಕೆರೆಯ 2026-27ನೇ ಸಾಲಿನ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ ಕೆರೆ ಹೂಳೆತ್ತಿ ಅವುಗಳಿಗೆ ಮರು ಜೀವ ನೀಡಲಾಗುತ್ತದೆ. ನಂತರ ಊರಿನವರಿಗೆ ಕೆರೆ ವರ್ಗಾಯಿಸಲಾಗುತ್ತದೆ. ಈ ಮೂಲಕ ಕೆರೆಯ ಮಹತ್ವ ಅಗತ್ಯ ಕೆರೆಯ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವುದು ಅಪೂರ್ವ ಕೆಲಸವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಾಡುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಈರಣ್ಣ ತೆವರಿ ಸದಸ್ಯರಾದ ಮಲ್ಲಿಕಾರ್ಜುನ್ ದುರ್ಗದ ಹಾಗೂ ಜಿಲ್ಲಾ ಜನಜಾಗೃತಿ ಸದಸ್ಯರಾದ ಮುರಿಗೆಪ್ಪ ಶೆಟ್ಟರ್, ಶೇಖರ ಗೌಡ ಪಾಟೀಲ, ಭಾರತಿ ಕುಲಕರ್ಣಿ, ಸುಭಾಶ ಓಲೆಕಾರ್ ಮತ್ತು ತಾಲೂಕು ಯೋಜನಾಧಿಕಾರಿಗಳಾದ ರಘುಪತಿ, ಪ್ರಕಾಶ್ ಜಿ, ಉಮಾ, ನಾಗನಗೌಡ ತೆವರಿ, ಬಸವರಾಜ್ ಹುಲ್ಲತ್ತಿ, ಪ್ರಭು ಬಿದರಿ, ರುದ್ರಪ್ಪ ಹಲಗಣ್ಣನವರ್ ಅರ್ಜುನ್ ಕಿತ್ತೂರ, ಚಂದ್ರಶೇಖರ್ ದ್ಯಾವಣ್ಣನವರ್ ರೈತ ಬಾಂಧವರು ಉಪಸ್ಥಿತರಿದ್ದರು.

> ಇಂದು ಹಳ್ಳಿಗಳಲ್ಲಿ ಹನಿ ನೀರಿಗೂ ಪರದಾಡಬೇಕಾದ ಅನಿವಾರ್ಯತೆ ಎದುರಾಗಿದೆ ಪ್ರತಿಯೊಂದು ಜೀವಿಗೂ ನೀರಿನ ಅವಶ್ಯಕತೆ ಇದೆ ಕೆರೆಗಳ ಪುನರ್ ಚೇತನದೊಂದಿಗೆ ನೀರನ್ನು ಉಳಿಸಬೇಕಾದದ್ದು ನಮ್ಮ ಕರ್ತವ್ಯ.
>
> ■ ಮುರಗೆಪ್ಪ ಶೆಟ್ಟರ್, ಜಿಲ್ಲಾ ಜನಜಾಗೃತಿ ಸದಸ್ಯ



ವಿವಿಧ ಬೇಡಿಕೆ ಈಡೇರಿಕೆಗೆ ರೈತರ ಒತ್ತಾಯ



ರಾಣೇಬೆನ್ನೂರ: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿ ಸಿ.ಎಂ.ಸಿದ್ದರಾಮಯ್ಯನವರಿಗೆ ಏ.19ರಂದು ರಾಣೇಬೆನ್ನೂರ ನಗರದಲ್ಲಿ ಮನವಿ ಸಲ್ಲಿಸಲಾಗುವುದು ಎಂದು ರೈತ ಮುಖಂಡ ರವೀಂದ್ರಗೌಡ ಪಾಟೀಲ್ ಹೇಳಿದರು.

ಶುಕ್ರವಾರದಂದು ನಗರದಲ್ಲಿ ವಿವಿಧ ಕನ್ನಡಪರ ಸಂಘಟನೆಗಳು, ರೈತ ಸಂಘದವರು ಮತ್ತು ಸ್ತ್ರೀ ಶಕ್ತಿ ಸಂಘ ಸೇರಿದಂತೆ ಹಲವಾರು ಸಂಘಟನೆಗಳು ಸಭೆ ಸೇರಿ ನಂತರ ಮನವಿ ಅರ್ಪಿಸುವ ಕುರಿತು ಅವರು ಮಾತನಾಡಿದರು.

ಎಸ್.ಟಿ. ಜನಾಂಗದವರೆ ವಾಸಿಸುವ ತಾಲೂಕಿನ ಕೃಷ್ಣಾಪುರ ಗ್ರಾಮಕ್ಕೆ ಇದುವರೆಗೂ ಸ್ಮಶಾನ ಭೂಮಿ ಇಲ್ಲದಿರುವುದರಿಂದ ಸ್ಮಶಾನ ಭೂಮಿ ಒದಿಸುವುದು, ನೆರೆ ಸಂತ್ರಸ್ತ ಮುಷ್ಟೂರು ಗ್ರಾಮದ 17 ದಲಿತ ಕುಟುಂಕ್ಕೆ ಭೂ ಗ್ಯಾರಂಟಿ ಯೋಜನೆಯಲ್ಲಿ ಹಕ್ಕುಪತ್ರ ವಿತರಿಸುವುದು ಮತ್ತು ಕಳಪೆ ಬಿತ್ತನೆ ಬೀಜ ಪೂರೈಕೆಯಿಂದ ಹಾನಿಗೊಂಡ ರೈತರಿಗೆ ಪರಿಹಾರ ನೀಡುವುದು, ವಿನಾಃ ಕಾರಣ ಗರ್ಭಕೋಶ ಶಸ್ತ್ರಚಿಕಿತ್ಸೆಗೊಳಗಾದ ಮಹಿಳೆಯರಿಗೆ ಪರಿಹಾರ, ಹಲಗೇರಿ ಇಟಗಿ ರಸ್ತೆ ನಿರ್ಮಾಣದಲ್ಲಿ ಹಾನಿಗೊಂಡ ರೈತರಿಗೆ ಯೋಗ್ಯ ಪರಿಹಾರ ಎಲ್ಲಾ ಕಳಪೆ ಕಾಮಗಾರಿಯ ತನಿಖೆ, ನೀರಾವರಿ ಇಲಾಖೆಯ ಬ್ರಹ್ಮಾಂಡ ಭ್ರಷ್ಟಾಚಾರ, ತೋಟಗಾರಿಕಾ ಇಲಾಖೆಯ ತುಂತುರು ನೀರಾವರಿ ಯೋಜನೆಯಲ್ಲಿ ರೈತರಿಗಾದ ಅನ್ಯಾಯಕ್ಕೆ ಪರಿಹಾರ ಸೇರಿದಂತೆ ಸಮಾಜ ಕಲ್ಯಾಣ, ನೀರಾವರಿ, ಕಂದಾಯ, ತೋಟಗಾರಿಕೆ, ಅಪ್ಪರತುಂಗಾ, ಆರೋಗ್ಯ ಇಲಾಖೆ, ಪಿ.ಡಬ್ಲ್ಯು.ಡಿ ಮತ್ತು ಮೀನುಗಾರಿಕೆ ಇಲಾಖೆಗೆ ಸಂಬಂಸಿದಂತೆ ಬಹುದಿನಗಳ ಈ ಜ್ವಲಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವಂತೆ ಒತ್ತಾಯಿಸಿ ಏ.19ರಂದು ನಗರಕ್ಕೆ ಆಗಮಿಸಲಿರುವ ಮುಖ್ಯಮಂತ್ರಿ, ಸಿದ್ದರಾಮಯ್ಯನವರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಗುವುದು ಎಂದರು.

ಏ.20ರಂದು ಬಸವೇಶ್ವರ ಜಯಂತಿ

ಹಾವೇರಿ: ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹುಕ್ಕೇರಿಮಠದ ಸಹಯೋಗದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಏ.20ರಂದು ಬೆಳಗ್ಗೆ 10.30ಕ್ಕೆ ಹಾವೇರಿ ನಗರದ ಹುಕ್ಕೇರಿಮಠದ ಶಿವಾನುಭವ ಮಂಟಪದಲ್ಲಿ ಜರುಗಲಿದೆ.

ಅಂದು ಬೆಳಗ್ಗೆ 10ಗಂಟೆಗೆ ನಗರದ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಹಾಗೂ ಸಂಜೆ 4 ಗಂಟೆಗೆ ಹುಕ್ಕೇರಿಮಠದಿಂದ ಬಸವೇಶ್ವರರ ಭಾವಚಿತ್ರದ ಮೆರವಣಿಗೆ ಜರುಗಲಿದೆ. ಹುಕ್ಕೇರಿ ಮಠದ ಸದಾಶಿವ ಸ್ವಾಮಿಗಳು ಹಾಗೂ ಹೊಸಮಠದ ಬಸವಶಾಂತಲಿಂಗ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಲಿದ್ದು, ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಗೌರವಾನ್ವಿತ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ.

ಮಾಜಿ ಸಿಎಂ ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಅವರ ಗೌರವ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಉಪಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ಸೈಯದ್ ಅಜೀಮಪೀರ್ ಖಾದ್ರಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್. ಪಾಟೀಲ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಧಾನ ಪರಿಷತ್ ಶಾಸಕರಾದ ಪ್ರೊ. ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ ಅಹ್ಮದಖಾನ್ ಪಠಾಣ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ. ಹಿರೇಮಠ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳಅನುಷ್ಠಾನಪ್ರಾಧಿಕಾರದ ಅಧ್ಯಕ್ಷ ಎಂ.ಎಂ. ಮೈದೂರ ಅವರು ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಹಾವೇರಿ ಬಸವ ಬಳಗದ ಅಧ್ಯಕ್ಷರಾದ ವಿ.ಜಿ. ಯಳಗೇರಿ ಹಾಗೂ ರಾಜಶೇಖರ ಮಾಗನೂರಅವರುಪಾಲ್ಗೊಳ್ಳಲಿದ್ದಾರೆ. ಶರಣ ಚಿಂತಕ ಜಗದೀಶ ಹತ್ತಿಕೋಟಿ ಅವರು ಉಪನ್ಯಾಸ ನೀಡಲಿದ್ದಾರೆ.

ಏ.20ರಿಂದ ಶಂಕರಪಂಚಮೀ ಉತ್ಸವ

ಸಿದ್ದಾಪುರ: ತಾಲೂಕಿನ ಭಾನ್ಕುಳಿಯ ರಾಮದೇವಮಠದಲ್ಲಿ ಬ್ರಹ್ಮೀಭೂತ ರಾಘವೇಂದ್ರ ಭಾರತೀ ಶ್ರೀಗಳ ಕಾಲದಿಂದಲೂ ಶಂಕರ ಜಯಂತಿ ಆಚರಣೆ ನಡೆಸಿಕೊಂಡು ಬರಲಾಗಿದೆ.

ಇದೀಗ ಇಲ್ಲಿ ಏ.20ರಿಂದ 22ರವರೆಗೆ 14ನೇ ಶಂಕರ ಪಂಚಮೀ ಉತ್ಸವವನ್ನು ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಆಯೋಜಿಸಲಾಗಿದೆ ಎಂದು ಶಂಕರಪಂಚಮೀ ಉತ್ಸವ ಸಮಿತಿ ಮಾರ್ಗದರ್ಶಕ ಜಿ.ಕೆ.ಹೆಗಡೆ ಗೋಳಗೋಡ ಹೇಳಿದ್ದಾರೆ. ಅವರು ಗುರುವಾರ ಭಾನ್ಕುಳಿ ರಾಮದೇವ ಮಠದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಶಂಕರ ಪಂಚಮೀ ಉತ್ಸವ ಕುರಿತು ಮಾಹಿತಿ ನೀಡುತ್ತಿದ್ದರು.

ಸಂಯೋಜಕ ಆರ್.ಎಸ್.ಹೆಗಡೆ ಹರಗಿಮಾತನಾಡಿ,ಏ.20ರಂದುಬೆಳಗ್ಗೆ ಗುರುವಂದನೆ, ದೇವತಾ ಪ್ರಾರ್ಥನೆ, ಸ್ವಸ್ತಿಪುಣ್ಯಾಹ, ದೇವನಾಂದಿ, ಋತ್ವಿಗ್ವರಣ, ಯಜುರ್ವೇದ ಪಾರಾಯಣ ಹಾಗೂ ಭಾಷ್ಯ ಪಾರಾಯಣ ಆರಂಭಗೊಳ್ಳಲಿದೆ. ಸಂಜೆ ರಾಘವೇಶ್ವರಭಾರತೀ ಶ್ರೀಗಳ ಪುರಪ್ರವೇಶ ನಡೆಯಲಿದೆ. ಏ.21ರಂದು ಶ್ರೀಕರಾರ್ಚಿತ ಪೂಜೆ, ಪಂಚಾಯತನ ಹವನ, ಕುಂಕುಮಾರ್ಚನೆ, ಮಾತೆಯರಿಂದ ಉಡಿಸೇವೆ, ಸಂಜೆ ಮಹಾಪಾದುಕಾ ಪೂಜೆ, ರಾಘವೇಶ್ವರ ಭಾರತೀ ಶ್ರೀಗಳವರಸಾನ್ನಿಧ್ಯದಲ್ಲಿಉದಕಶಾಂತಿ ಪಾರಾಯಣ ನಡೆಯಲಿದೆ ಎಂದರು.

ಏ.22 ರಂದು 'ಆವಹಂತೀ ಹವನ'ನಡೆಯಲಿದೆ. ಯಜುರ್ವೇದ ಪಾರಾಯಣ ಹಾಗೂ ಭಾಷ್ಯ ಪಾರಾಯಣ ಮುಕ್ತಾಯ, ವಿರಾಟ್ ಗೋಪೂಜೆ, ಗೋಸೂಕ್ತ ಪಾರಾಯಣ, ಗೋದತ್ತು ಸ್ವೀಕಾರ, ಮಾತೃತ್ವಮ್ ಸಮಾವೇಶ, ಧರ್ಮಸಭೆ, ರಾಘವೇಶ್ವರ ಭಾರತೀ ಶ್ರೀಗಳ ಆಶೀರ್ವಚನ, ಅನುಗ್ರಹ ಮಂತ್ರಾಕ್ಷತೆ, ಸಂಜೆ ಗೋದೀಪೋತ್ಸವ ಜರುಗಲಿದೆ ಎಂದು ವಿವರಿಸಿದರು. ರಾಜ್ಯಮಟ್ಟದಲ್ಲಿ ಗೋವಿನ ಕುರಿತಾಗಿ ಕಾರ್ಯಮಾಡಿದವರಿಗೆ ಶಹರಾ ಫೌಂಡೇಶನ್ ಸಹಯೋಗದಲ್ಲಿ 'ಗೋಪಾಲ ಗೌರವ' ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದರು. ಶ್ರೀಮಠ ಸಮಿತಿಯ ಕೋಶಾಧ್ಯಕ್ಷ ಎಂ.ಎಂ. ಹೆಗಡೆ ಮಗೇಗಾರ, ಸಂಯೋಜಕ ಜಿ.ಎಸ್.ಭಟ್ಟ ಕಲ್ಲಾಳ, ಗೋಸ್ವರ್ಗ ಕಾರ್ಯದರ್ಶಿ ಎಂ.ವಿ.ಹೆಗಡೆ ಮುತ್ತಿಗೆ, ಕಾರ್ಯಾಲಯ ಕಾರ್ಯದರ್ಶಿ ಚಂದನ ಶಾಸ್ತ್ರಿ ಸಂಯೋಜಕರಾಘವೇಂದ್ರ ಮುಸವಳ್ಳಿ ಉಪಸ್ಥಿತರಿದ್ದರು.



ಏ.21ಕ್ಕೆ ಶಂಕರಾಚಾರ್ಯ ಜಯಂತ್ಯುತ್ಸವ

ಹಾವೇರಿ: ಜಿಲ್ಲಾಡಳಿತ, ಜಿಪಂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಬ್ರಾಹ್ಮಣ ಸಮಾಜದ ಸಹಯೋಗದಲ್ಲಿ ಶಂಕರಾಚಾರ್ಯರ ಜಯಂತಿ ಏ.21ರಂದು ಸಂಜೆ 6ಗಂಟೆಗೆ ಹಾವೇರಿ ನಗರದ ರಾಮ ಮಂದಿರದಲ್ಲಿ ಜರುಗಲಿದೆ. ಇದಕ್ಕೂ ಮೊದಲು ಸಂಜೆ 5 ಗಂಟೆಗೆ ಶಂಕರ ಭಾರತಿ ಮಠದಿಂದ ಶಂಕರಾಚಾರ್ಯರ ಭಾವಚಿತ್ರ ಮೆರವಣಿಗೆ ಹೊರಡಲಿದೆ.

ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಗೌರವಾನ್ವಿತ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ. ಮಾಜಿ ಸಿಎಂ ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಅವರ ಗೌರವ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹೆಸ್ಕಾಂ ಅಧ್ಯಕ್ಷ ಅಜೀಮಪೀರ್ ಖಾದ್ರಿ, ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್. ಪಾಟೀಲ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಧಾನ ಪರಿಷತ್ ಶಾಸಕರಾದ ಪ್ರೊ.ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ ಅಹ್ಮದಖಾನ್ ಪಠಾಣ, ಹುಡಾ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಲ್ಲಾ ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ. ಹಿರೇಮಠ, ಎಂ.ಎಂ. ಮೈದೂರ ಅವರು ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಹಾವೇರಿ ಜಿಲ್ಲಾ ಬ್ರಾಹ್ಮಣ ಸಮಾಜದ ಅಧ್ಯಕ್ಷ ವಸಂತ ಮೊಕ್ತಾಲಿ ಹಾಗೂ ತಾಲೂಕು ಅಧ್ಯಕ್ಷ ಸುರೇಶ ಕಡಕೋಳ ಪಾಲ್ಗೊಳ್ಳಲಿದ್ದಾರೆ. ಸಹ ಶಿಕ್ಷಕರಾದ ಡಾ.ಸೀತಾ ಧೀರೇಂದ್ರಾಚಾರ ಕಡಕೋಳ ಅವರು ಉಪನ್ಯಾಸ ನೀಡಲಿದ್ದಾರೆ.

ನಾಳೆ ಮಹಾರಥೋತ್ಸವ

ನರಗುಂದ: ಪಟ್ಟಣದ ವೀರಕ್ತಮಠದಲ್ಲಿ ಜರಗುತ್ತಿರುವ ಕರ್ತೃ ಚನ್ನಬಸವ ಮಹಾಶಿವಯೋಗಿಗಳ 157ನೇ ಪುಣ್ಯಸ್ಮರಣೋತ್ಸವದ ಪುರಾಣ ಪ್ರವಚನವು ಶನಿವಾರ ಮಂಗಲವಾಗಲಿದೆ. ಏ.19ಕ್ಕೆ ಫಲ್ಲಕ್ಕಿ ಉತ್ಸವ ಹಾಗೂ ಸಂಜೆ 5 ಗಂಟೆಗೆ ಮಹಾರಥೋತ್ಸವವು ಸಕಲ ವಾಧ್ಯಮೇಳದೊಂದಿಗೆ ವಿಜೃಂಭಣೆಯಿಂದ ಜರುಗಲಿದೆ.

ಕಾರ್ಯಕ್ರಮದಲ್ಲಿಹುಬ್ಬಳ್ಳಿಮೂರುಸಾವಿರ ಮಹಾಸಂಸ್ಥಾನ ಮಠದ ಮಹಾರಾಜ ನಿರಂಜನ ಜಗದ್ಗುರು ಡಾ.ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ, ಮುನವಳ್ಳಿ ಸೋಮಶೇಖರ ಮಠದ ಮುರಘೇಂದ್ರ ಸ್ವಾಮೀಜಿ, ಹುಕ್ಕೇರಿ ಶಿವಬಸವ ಸ್ವಾಮೀಜಿ, ಮೂಲೇಗದ್ದಿ ಅಭಿನವ ಚನ್ನಬಸವ ಸ್ವಾಮೀಜಿ, ಅರಳಿಕಟ್ಟಿ ಶಿವಮೂರ್ತಿ ಸ್ವಾಮೀಜಿ, ಕೂಡಲ ಗುರುನಂದೇಶ್ವರ ಮಠದ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ, ಬಂಗರಗ ಹಿರೇಮಠದ ವಾಮದೇವ ಶಿವಾನಂದ ಶಿವಾಚಾರ್ಯರು, ಕೊಣ್ಣೂರಿನ ಡಾ.ಚನ್ನವಿರೇಶ್ವರ ಸ್ವಾಮೀಜಿ, ಅತಿಥಿಗಳಾಗಿ ಶಾಸಕ ಸಿ.ಸಿ. ಪಾಟೀಲ ಸೇರಿದಂತೆ ಅನೇಕರಿರುವರು.

ರಾಷ್ಟ್ರೀಯ ಶಿಕ್ಷಣ ಸಮಿತಿ ಆಸ್ತಿ ವಶಕ್ಕೆ ಒತ್ತಾಯಿಸಿ ಜಿಲ್ಲಾಧಿಕಾರಿಗೆ ಮನವಿ

ಹಾವೇರಿ: ತಾಲೂಕಿನ ಹೊಸರಿತ್ತಿ ಗ್ರಾಮದ ರಾಷ್ಟ್ರೀಯ ಶಿಕ್ಷಣ ಸಮಿತಿಗೆ ಸೇರಿದ ಆಸ್ತಿಯನ್ನು ಅಕ್ರಮವಾಗಿ ಮಾರಾಟ ಮಾಡಿ ಆಡಳಿತ ಮಂಡಳಿಯ ಕೆಲ ಪದಾಧಿಕಾರಿಗಳು ಹಾಗೂ ಅವರ ಕುಟುಂಬ ಸದಸ್ಯರ ಹೆಸರಿಗೆ ನೋಂದಣಿ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿರುವ ಗ್ರಾಮಸ್ಥರು ಪ್ರಸ್ತುತ ಆಡಳಿತ ಮಂಡಳಿಯನ್ನು ವಜಾ ಮಾಡಿ, ಆಸ್ತಿಯನ್ನು ಮತ್ತೆ ಸಂಸ್ಥೆಯ ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳುವಂತೆ ಶುಕ್ರವಾರ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.



1965ರಲ್ಲಿ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಕರ್ನಾಟಕ ಏಕೀಕರಣ ಚಳವಳಿಯ ನಾಯಕರಾದ ಗುದ್ಲೆಪ್ಪ ಹಳ್ಳಿಕೇರಿ ಅವರಿಂದ ಸ್ಥಾಪಿತವಾದ ಈ ಶಿಕ್ಷಣ ಸಂಸ್ಥೆ, ದಾನಿಗಳ ಸಹಕಾರದಿಂದ ಬೆಳೆದು, ಅನೇಕ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುತ್ತಿದೆ. ಆದರೆ ಇತ್ತೀಚೆಗೆ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಅವ್ಯವಹಾರಗಳು ಹೆಚ್ಚಾಗಿವೆ. ಸ್ವಜನ ಪಕ್ಷಪಾತದ ಆರೋಪಗಳು ಕೇಳಿಬರುತ್ತಿವೆ. ಸಂಸ್ಥೆಗೆ ಸೇರಿದ ಹೊಸರಿತ್ತಿ ಗ್ರಾಮದ ಸರ್ವೆ ನಂ.71/ಬಿ ಆಸ್ತಿಯನ್ನು ಪದವಿ ಕಾಲೇಜು ಕಟ್ಟಡ ನಿರ್ಮಾಣದ ನೆಪದಲ್ಲಿ ಕಡಿಮೆ ಬೆಲೆಗೆ ಆಡಳಿತ ಮಂಡಳಿಯ ಕೆಲ ಸದಸ್ಯರು ಹಾಗೂ ಅವರ ಬಂಧುಗಳ ಹೆಸರಿಗೆ ಖರೀದಿಸಿಕೊಂಡಿದ್ದಾರೆ ಎಂದು ಮನವಿ ಪತ್ರದಲ್ಲಿ ದೂರಿದ್ದಾರೆ.

ಪ್ರತಿ 55.70 ಚದರ ಮೀಟರ್ ಜಾಗಕ್ಕೆ ಮಾರುಕಟ್ಟೆಯಲ್ಲಿ ಕನಿಷ್ಠ 30ಲಕ್ಷ ರೂ., ಬೆಲೆ ಇದ್ದರೂ, ಕೇವಲ 2ಲಕ್ಷಕ್ಕೆ ನೋಂದಣಿ ಮಾಡಲಾಗಿದೆ. ಇದರಿಂದ ಪ್ರತಿಪ್ಲಾಟ್‌ಗೆ ಸುಮಾರು 28ಲಕ್ಷ ರೂ., ನಷ್ಟ ಉಂಟಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಆಡಳಿತ ಮಂಡಳಿಯ ಕೆಲ ಸದಸ್ಯರಾದ ಸಿದ್ಧಲಿಂಗಪ್ಪ ಹಳ್ಳಿಕೇರಿ ಹಾಗೂ ವೀರಣ್ಣ ಅರಳಿ ಸಭೆಯಲ್ಲಿ ಈ ಅಕ್ರಮಕ್ಕೆ ವಿರೋಧ ವ್ಯಕ್ತಪಡಿಸಿದರೂ, ಅವರ ಮಾತುಗಳನ್ನು ಇತರರು ಪರಿಗಣಿಸಿಲ್ಲ, ಇದಲ್ಲದೆ, ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಕೇಳಲಾದ ಆಸ್ತಿ ವಿವರಗಳ ಮಾಹಿತಿಯನ್ನು ಸಂಸ್ಥೆಯ ಕಾರ್ಯದರ್ಶಿ ನೀಡಲು ನಿರಾಕರಿಸಿರುವುದರಿಂದ ಅನುಮಾನಗಳು ಇನ್ನಷ್ಟು ಗಾಢವಾಗಿವೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಆಡಳಿತ ಮಂಡಳಿಯನ್ನು ವಜಾ ಮಾಡಬೇಕು, ಸರ್ಕಾರದಿಂದ ಆಡಳಿತಾಽಕಾರಿ ನೇಮಕ ಮಾಡಬೇಕು, ಅಕ್ರಮವಾಗಿ ಖರೀದಿಸಿದ ಆಸ್ತಿಗಳ ನೋಂದಣಿ ರದ್ದುಪಡಿಸಿ ಸಂಸ್ಥೆಯ ವಶಕ್ಕೆ ಪಡೆಯಬೇಕು ಹಾಗೂ ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಒತ್ತಾಯಿಸಿ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿದ ಜಿಲ್ಲಾಽಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ, ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ವಹಿಸುವ ಭರವಸೆ ನೀಡಿದರು.

ಬಸವರಾಜ ಮರಳಿಹಳ್ಳಿ, ಐ.ಜಿ. ಕೋರಿ, ಸಿ.ಕೆ. ಹಳ್ಳಿಕೇರಿ, ಎಂ.ಬಿ. ಮುಂಡರಗಿ, ನಿರಂಜನ ಪರಂಗಿ, ಸಿದ್ಧಲಿಂಗಪ್ಪ ಕಲಕೋಟಿ, ಮುತ್ತಯ್ಯ ಕಿತ್ತೂರಮಠ, ಕೆ.ಸಿ. ಕೋರಿ, ಮಲ್ಲಣ್ಣ ಹಳ್ಳಿಕೇರಿ, ಸಿದ್ದಣ್ಣ ಹಳ್ಳಿಕೇರಿ, ರುದ್ರಪ್ಪ ಯತ್ನಳ್ಳಿ, ರವಿ ಚಂದ್ರಗಿರಿ, ಸಿದ್ದಲಿಂಗಪ್ಪ ರಾಚನಾಯ್ಕರ್, ಗುದ್ಲೆಪ್ಪ ಸವಣೂರ, ಆನಂದ ಮುರಡೆಪ್ಪನವರ, ಶಂಭಣ್ಣ ಶಾಬಳದ, ಬಿ.ಎಸ್. ದೊಡ್ಡಮನಿ, ಎಸ್.ಜಿ. ದೀಪಾಳಿ, ರವಿ ಗಾಣಗೇರ ಸೇರಿದಂತೆ ಹೊಸರಿತ್ತಿ ಗ್ರಾಮಸ್ಥರು ಇದ್ದರು.

ಕಿರುಸುದ್ದಿ

ಸತತ ಮೂರನೇ ವರ್ಷ ಶೇ.100ರಷ್ಟು ಫಲಿತಾಂಶ





• **ಮೂಡಲಗಿ** : ಪಟ್ಟಣದ ಆರ್ ಡಿಎಸ್ ವಿದ್ಯಾನಿಕೇತನ ಸಿಬಿಎಸ್ಇ. ಶಾಲೆಯ 10ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಸತತ ಮೂರನೇ ಬಾರಿ ನೂರಕ್ಕೆ ನೂರರಷ್ಟು ಫಲಿತಾಂಶ ಪಡೆದುಕೊಂಡಿದೆ ಎಂದು ಪ್ರಾಂಶುಪಾಲೆ ದ್ರಾಕ್ಷಾಯಿಣಿ ಮಠಪತಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನೀರಜ್ ಗಾಡವಿ ಶೇ.91.2 ಅಂಕ ಪಡೆದು ಶಾಲೆಗೆ ಪ್ರಥಮ ಫಾತಿಮಾ ನದಾಫ್ ಶೇ.90 ದ್ವಿತೀಯ, ಪೂರ್ಣಿಮಾ ಗಾಡವಿ ಶೇ.87 ತೃತೀಯ ಸ್ಥಾನ ಪ್ರಜ್ವಲ್ ಬಿದರಿ ಶೇ.83% ನಾಲ್ಕನೇ ಸ್ಥಾನ ಪಡೆದು ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಪರೀಕ್ಷೆ ಬರೆದ 9 ವಿದ್ಯಾರ್ಥಿಗಳಲ್ಲಿ 5 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಮತ್ತು ನಾಲ್ಕು ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಉತ್ತಮ ಫಲಿತಾಂಶ ಪಡೆದಿದ್ದಕ್ಕಾಗಿ ಸಂಸ್ಥೆಯ ಅಧ್ಯಕ್ಷ ಸಂತೋ? ತಮ್ಮಣ್ಣ ಪಾರ್ಶಿ ಮತ್ತು ಉಪಾಧ್ಯಕ್ಷೆ ಪೂಜಾ ಸಂತೋಷ ಪಾರ್ಶಿ ಪ್ರಾಂಶುಪಾಲರಾದ ದ್ರಾಕ್ಷಾಯಿಣಿ ಮಠಪತಿ ಶಾಲಾ ಸಿಬ್ಬಂದಿ ವರ್ಗ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಶಿವಶಂಕರ ಜೊಲ್ಲೆ ಪಬ್ಲಿಕ್ ಶಾಲೆ: ಶೇ.100 ಫಲಿತಾಂಶ



• **ಚಿಕ್ಕೋಡಿ** : ತಾಲೂಕಿನ ಯಕ್ಸಂಬಾ ಪಟ್ಟಣದ ಶಿವಶಂಕರ ಜೊಲ್ಲೆ ಇಂಗ್ಲಿಷ್ ಮಾಧ್ಯಮದ ಪಬ್ಲಿಕ್ ಶಾಲೆಯ 2025–26ನೇ ಸಾಲಿನಲ್ಲಿ 10ನೇ ತರಗತಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಬಂದಿದೆ. 80 ವಿದ್ಯಾರ್ಥಿಗಳ ಪೈಕಿ 29 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 20 ಪ್ರಥಮ ದರ್ಜೆ, 23 ದ್ವಿತೀಯ ದರ್ಜೆ, 8 ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಪ್ರೇಕ್ಷಾ ಮಲಿಕವಾಡೆ ಶೇ.94, ನಿಧಿ ಪಾಟೀಲ ಶೇ.92.6, ಶ್ರದ್ಧಾ ಬುಬನಾಳೆ ಶೇ.91.2 ಅಂಕಗಳನ್ನು ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಜೊಲ್ಲೆಗ್ರುಪ್ ಸಂಸ್ಥಾಪಕ ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ, ಸಂಸ್ಥೆಯ ಅಧ್ಯಕ್ಷೆ, ಶಾಸಕಿ ಶಶಿಕಲಾ ಜೊಲ್ಲೆ ಸೇರಿದಂತೆ ಸಂಸ್ಥೆಯ ಪದಾಧಿಕಾರಿಗಳು, ಶಿಕ್ಷಕರು, ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ನೀರಿಗಾಗಿ ಸಹಾಯವಾಣಿ

• **ಗೋಕಾಕ:** ಬೇಸಿಗೆ ಆರಂಭವಾಗಿರುವ ಹಿನ್ನಲೆ ಗೋಕಾಕ ತಾಲೂಕಿನ ಎಲ್ಲ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾದಲ್ಲಿ ತಾಲೂಕು ಪಂಚಾಯತಿ ಕಾರ್ಯಾಲಯದಲ್ಲಿ 24/7 ಸಹಾಯವಾಣಿ ಕೇಂದ್ರ ಆರಂಭಿಸಿದ್ದು, ಸಹಾಯವಾಣಿ ಕೇಂದ್ರ ಸಿಬ್ಬಂದಿ ನಿಯೋಜಿಸಲಾಗಿದ್ದು, ದೂರವಾಣಿ ಸಂಖ್ಯೆ 08332–225063ಗೆ ಸಂಪರ್ಕಿಸಬಹುದು. ಈ ಸಹಾಯವಾಣಿಯ ಸದುಪಯೋಗಪಡಿಸಿಕೊಳ್ಳುವಂತೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪರಶುರಾಮ ಘಸ್ತೆ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಬಸವೇಶ್ವರ ಜಯಂತ್ಯುತ್ಸವ

• **ಕಕಮರಿ:** ಗ್ರಾಮದ ಶ್ರೀ ಬಸವೇಶ್ವರ ಆವರಣದಲ್ಲಿ ಏ.18ರಿಂದ 20ರವರೆಗೆ ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತ್ಯುತ್ಸವ ನಿಮಿತ್ತ ವಿಶ್ವಗುರು ಬಸವಣ್ಣನವರ ಚರಿತ್ರೆ ಸಂಜೆ 6ರಿಂದ 7ಗಂಟೆಯವರೆಗೆ ಅತ್ತೀಗೇರಿ ಅದ್ವೈತಾನಂದ ಶ್ರೀಗಳಿಂದ ಪ್ರವಚನ ಜರುಗುವುದು. ಸಾನ್ನಿಧ್ಯ ಗುರುದೇವ ಆಶ್ರಮ ಆತ್ಮಾರಾಮ್ ಸ್ವಾಮೀಜಿ ವಹಿಸಲಿದ್ದಾರೆ. ಏ.20ರಂದು ಬೆಳಗ್ಗೆ 8 ಗಂಟೆಗೆ ಬಸವೇಶ್ವರ ವೃತ್ತದಲ್ಲಿ ಧ್ವಜಾರೋಹಣ ಜರುಗುವುದು. ಬೆಳಗ್ಗೆ 10 ಗಂಟೆಗೆ ಬಸವೇಶ್ವರ ದೇವಸ್ಥಾನದಲ್ಲಿ ಬಾಲಬಸವಣ್ಣನ ತೊಟ್ಟಿಲು ಹಾಕುವ ಕಾರ್ಯಕ್ರಮ ಜರುಗುವುದು. ಸಂಜೆ 4 ಗಂಟೆಗೆ ಜೋಡೆತ್ತುಗಳ ಮೆರವಣಿಗೆ ಮೂಲಕ ಸಕಲ ವಾದ್ಯ ಮೇಳದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಬಸವೇಶ್ವರ ಫೋಟೋ ಮೆರವಣಿಗೆ ಜರುಗುವುದು. ರಾತ್ರಿ 10 ಗಂಟೆಗೆ ಜತ್ತ ತಾಲೂಕಿನ ಸಿಂದೂರ ಗ್ರಾಮದರಿಂದ ಸಿಂದೂರ ಲಕ್ಷ್ಮಣ ಸಾಮಾಜಿಕ ಬೈಲಾಟ ಪ್ರದರ್ಶನಗೊಳ್ಳಲಿದೆ. ಪ್ರತಿದಿನ ಪ್ರವಚನದ ನಂತರ ಮಹಾಪ್ರಸಾದ ಜರುಗುವುದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಲು ಕೋರಲಾಗಿದೆ ಎಂದು ಶ್ರೀ ಜಗಜ್ಯೋತಿ ಬಸವೇಶ್ವರ ಕಮೀಟಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಥಣಿ: ತಾಲೂಕಿನ ಚಮಕೇರಿ ರಸ್ತೆಯ ಭರಮಕೋಡಿಯಲ್ಲಿರುವ ಬುದ್ಧ ಬಸವ ಅಂಬೇಡ್ಕರ್ ಜನ ಕಲ್ಯಾಣ ಪ್ರತಿಷ್ಠಾನ (ರಿ) ಸುಕನ್ಯಾ ವೃದ್ಧಾಶ್ರಮದ ನಿರ್ವಹಣೆಗಾಗಿ ಧರ್ಮಸ್ಥಳದ ಧರ್ಮಾಧಿಕಾರಿಗಳು ಡಾ.ಡಿ ವೀರೇಂದ್ರ ಹೆಗ್ಗಡೆಯವರು ಮಂಜೂರು ಮಾಡಿದ 50,000ಗಳ ಮಂಜುರಾತಿ ಪತ್ರವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕಿ ನಾಗರತ್ನ ಹೆಗಡೆ ಇವರು ವಿತರಣೆ ಮಾಡಿದರು.

ಅಂಬೇಡ್ಕರ್ ಜಯಂತಿ: ಸನ್ಮಾನ

• **ಯರಗಟ್ಟಿ :** ಸಮೀಪದ ತಾವಲಗೇರಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಇತ್ತಿಚೆಗೆ ಜರುಗಿದ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ ಜಯಂತಿ ಆಚರಿಸಲಾಯಿತು. ಈ ವೇಳೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ 578 (96.34%) ಅಂಕಗಳನ್ನು ಪಡೆದು ಪರೀಕ್ಷಾ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದ ಭಾಗ್ಯಲಕ್ಷ್ಮಿ ಮಹಾಲಿಂಗಪುರ ವಿದ್ಯಾರ್ಥಿನಿಗೆ ಬಾಪೂಜಿ ಕಾಲೇಜು ಬೈಲಹೊಂಗಲ ವತಿಯಿಂದ ಸನ್ಮಾನಿಸಲಾಯಿತು.ಈ ಸಂದರ್ಭದಲ್ಲಿ ಶಾಲೆಯ ಪ್ರಧಾನ ಗುರುಗಳಾದ ವಾಯ್. ಬಿ. ನಂದಿ, ಬಾಪೂಜಿ ಕಾಲೇಜು ಪ್ರಾಚಾರ್ಯರಾದ ಎಸ್. ಡಿ. ಹೊಸಮನಿ, ಪದವಿ ಪ್ರಾಚಾರ್ಯರಾದ ಎಂ. ಬಿ. ಯಕ್ಕುಂಡಿ. ಉಪನ್ಯಾಸಕರಾದ ಎಸ್. ಜಿ. ಮರಕುಂಬಿ, ಎಸ್ ಡಿ ಎಂ ಸಿ ಅಧ್ಯಕ ಮಾರುತಿ ಅಜ್ಜನಕಟ್ಟಿ, ಶಿಕ್ಷಕರಾದ ವ್ಹಿ. ಎಸ್. ಕೋಲಕಾರ, ಎಸ್. ಎಸ್. ಮುಂತಾಗಿ, ಡಿ. ಎಂ. ಬೋಳೆತ್ತಿನ, ವ್ಹಿ. ವಾಯ್. ಪುಡಕಲಕಟ್ಟಿ, ಎಂ. ವಾಯ್. ಪುಡಕಲಕಟ್ಟಿ, ಗ್ರಾಮಸ್ಥರಾದ ಬಸಪ್ಪ ಎಮ್ಮಿ, ಲಂಕೇಶ ಮೇತ್ರಿ, ಗಂಗಾಧರ ಉಳ್ಳಾಗಡ್ಡಿ, ಬಸವರಾಜ ಕರಿಗಣ್ಣವರ, ಯಮನಪ್ಪ ಮಾದರ, ರುದ್ರಪ್ಪ ಸಣ್ಣಲಿಂಗನ್ನವರ, ಫಕ್ಕೀರಪ್ಪ ಕುಲಮುರ, ಬಸವರಾಜ ಹರಿಜನ, ನಿಂಗಪ್ಪ ಗುಡಗನ್ನವರ, ರೇವಪ್ಪ ಮಹಾಲಿಂಗಪುರ ನಿರ್ಮಲಾ ಶೆಟ್ಟಪ್ಪನವರ, ಮಲ್ಲವ್ವ ಗುಡಗನ್ನವರ, ಶೋಭಾ ಮಹಾಲಿಂಗಪುರ, ರಾಜಶ್ರೀ ಮಹಾಲಿಂಗಪುರ, ಭೀಮವ್ವ ಡಾಲಿನ, ಸೋಮವ್ವ ಶೆಟ್ಟಪ್ಪನವರ ಉಪಸ್ಥಿತರಿದ್ದರು.



ಯರಗಟ್ಟಿ : ಸಮೀಪದ ತಾವಲಗೇರಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಇತ್ತಿಚೆಗೆ ಜರುಗಿದ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ ಜಯಂತಿ ಆಚರಿಸಲಾಯಿತು. ಈ ವೇಳೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ 578 (96.34%) ಅಂಕಗಳನ್ನು ಪಡೆದು ಪರೀಕ್ಷಾ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದ ಭಾಗ್ಯಲಕ್ಷ್ಮಿ ಮಹಾಲಿಂಗಪುರ ವಿದ್ಯಾರ್ಥಿನಿಗೆ ಬಾಪೂಜಿ ಕಾಲೇಜು ಬೈಲಹೊಂಗಲ ವತಿಯಿಂದ ಸನ್ಮಾನಿಸಲಾಯಿತು.

ಕನ್ನಡಪರ ಹೋರಾಟಗಾರರ ವಿರುದ್ಧದ

ಮೊಕದ್ದಮೆ ಹಿಂಪಡೆಯಿರಿ

• **ಬೆಳಗಾವಿ:** ನಮ್ಮ ನಾಡಿನ ನೆಲ, ಜಲ, ಭಾಷೆ ಹಾಗೂ ಸಂಸ್ಕೃತಿಗೆ ಧಕ್ಕೆ ಬಂದಾಗ, ಕನ್ನಡದ ಹಿತವನ್ನು ಕಾಯುವ ನಿಟ್ಟಿನಲ್ಲಿ ಹೋರಾಟ ಮಾಡಿದ ರಾಜ್ಯದ ನೂರಾರು ಕನ್ನಡಪರ ಹೋರಾಟಗಾರರ ಮೇಲೆ ಸಾವಿರಾರು ಮೊಕದ್ದಮೆಗಳು ದಾಖಲಾಗಿವೆ. ಈ ಮೊಕದ್ದಮೆಗಳನ್ನು ಕಾನೂನಾತ್ಮಕವಾಗಿ ಹಿಂಪಡೆದು, ನಾಡಿನ ಹಿತದೃಷ್ಟಿಯಿಂದ ರದ್ದುಗೊಳಿಸಬೇಕೆಂದು ಆಗ್ರಹಿಸಿ ಗೃಹ ಮಂತ್ರಿ ಜಿ. ಪರಮೇಶ್ವರ ಅವರಿಗೆ ಕರವೇ ಜಿಲ್ಲಾಧ್ಯಕ್ಷ ದೀಪಕ ಗುಡಗನಟ್ಟಿ ನೇತೃತ್ವದಲ್ಲಿ ಮನವಿ ಸಲ್ಲಿಸಿದರು.

ಶುಕ್ರವಾರ ಗೃಹ ಮಂತ್ರಿ ಜಿ. ಪರಮೇಶ್ವರ ಅವರು ಬೆಳಗಾವಿಯಲ್ಲಿ ಪೊಲೀಸ್ ಇಲಾಖೆ ನೂತನ ಕ್ವಾಟರ್ಸ್‌ಗಳ ಲೋಕಾರ್ಪಣೆ ಹಾಗೂ ಉದ್ಘಾಟನೆಗೆ ಆಗಮಿಸಿದ ವೇಳೆ ಕರವೇ ಕಾರ್ಯಕರ್ತರು ಅವರನ್ನು ಭೇಟಿ ಮಾಡಿ ಕನ್ನಡಪರ ಹೋರಾಟಗಾರರ ವಿರುದ್ಧ ಕೇಸ್‌ಗಳನ್ನು ರದ್ದು ಪಡಿಸಬೇಕೆಂದು ಆಗ್ರಹಿಸಿದರು.

ಅನೇಕ ಕನ್ನಡಪರ ಸಂಘಟನೆಗಳು ಹಾಗೂ ಹೋರಾಟಗಾರರು, ತಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಮನವಿ ಮಾಡಿಕೊಂಡು ಬರುತ್ತಿದ್ದೇವೆ. ಆದರೆ, ನಮ್ಮ ಮನವಿಗೆ ಇಲ್ಲಿಯವರೆಗೆ ಸೂಕ್ತ ಸ್ಪಂದನೆ ದೊರೆತಿಲ್ಲ ಹಾಗೂ ಅದು ಕೇವಲ ಭರವಸೆಯಾಗಿಯೇ ಉಳಿದಿದೆ ಎಂದು ಗೃಹ ಮಂತ್ರಿಗಳಿಗೆ ಕನ್ನಡ ಪರ ಹೋರಾಟಗಾರರು ಅಳಲು ತೊಡಿಕೊಂಡರು.

ಈ ವೇಳೆ ಕರವೇ ಜಿಲ್ಲಾಧ್ಯಕ್ಷ ದೀಪಕ ಗುಟಗನಟ್ಟಿ, ಸುರೇಶ್ ಗವನ್ನವರ, ಸೇರಿದಂತೆ ಗಹಲವಾರ ಕರವೇ ಕಾರ್ಯಕರ್ತರು ಇದ್ದರು.



▸▸ ಕನ್ನಡಪರ ಹೋರಾಟಗಾರರ ಮೇಲಿರುವ ಪ್ರಕರಣಗನ್ನು ರದ್ದು ಪಡಿಸುವ ಬಗ್ಗೆ ಮನವಿಯನ್ನು ಸ್ವೀಕರಿಸಿದ ಬಳಿಕ ಕನ್ನಡಪರ ಹೋರಾಟಗಾರರಿಗೆ ಗೃಹ ಸಚಿವ ಜಿ. ಪರಮೇಶ್ವರ ಅವರು ಕನ್ನಡ ಹೋರಾಟಗಾರರ ಎಲ್ಲ ಪ್ರಕರಣಗಳನ್ನು ರದ್ದು ಪಡಿಸುವುದಾಗಿ ಭರವಸೆಯನ್ನು ನೀಡಿದರು.

- ▸▸ ಕನ್ನಡ ಹೋರಾಟಗಾರರ ರಕ್ಷಣೆಗೆ ಮನವಿ
- ▸▸ ನಾಡಿನ ಹಿತದೃಷ್ಟಿ ಕಾಪಾಡಲು ಆಗ್ರಹ
- ▸▸ ನೀಡಿದ ಭರವಸೆ ಈಡೇರಿಸಲು ಒತ್ತಾಯ

ವಿಶಿಷ್ಟಚೇತನರ ಒಕ್ಕೂಟದಿಂದ ಡಿಸಿಗೆ ಮನವಿ

ಬೇಡಿಕೆ ಈಡೇರಿಸದಿದ್ದರೆ ಚುನಾವಣೆ ಬಹಿಷ್ಕಾರ

• **ಬೆಳಗಾವಿ:** ತಮ್ಮ ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಬೆಳಗಾವಿ ಜಿಲ್ಲಾ ವಿಶಿಷ್ಟಚೇತನರ ಒಕ್ಕೂಟ ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ, ಸರ್ಕಾರದ ನಿರ್ಲಕ್ಷ್ಯ ಧೋರಣೆ ಮುಂದುವರಿದರೆ ಮುಂಬರುವ ಚುನಾವಣೆಗಳನ್ನು ಬಹಿಷ್ಕರಿಸುವುದಾಗಿ ದಿವ್ಯಾಂಗರು ಎಚ್ಚರಿಸಿದ್ದಾರೆ.

ಬೆಳಗಾವಿ ಜಿಲ್ಲಾ ವಿಶಿಷ್ಟಚೇತನರ ಒಕ್ಕೂಟದ ನೇತೃತ್ವದಲ್ಲಿ ನೂರಾರು ವಿಕಲಚೇತನರು ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸಿ ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಮನವಿ ಸಲ್ಲಿಸಿದರು.

ವಿಕಲಚೇತನರ ಮಾಸಿಕ ಪೋಷಣಾ ಭತ್ಯೆಯನ್ನು ಕನಿಷ್ಠ 6,000 ರೂಪಾಯಿಗಳಿಗೆ ಹೆಚ್ಚಿಸಬೇಕು ಹಾಗೂ ರಾಜ್ಯದ ಎಲ್ಲಾ ದಿವ್ಯಾಂಗರಿಗೆ ಬಿಪಿಎಲ್ ಪಡಿತರ ಚೀಟಿ ವಿತರಿಸಬೇಕು ಎಂಬುದು ಇವರ ಪ್ರಮುಖ ಬೇಡಿಕೆಗಳಾಗಿವೆ. ಇದರೊಂದಿಗೆ ವರ್ಷಕ್ಕೆ 2 ಲಕ್ಷ ರೂ. ಆರೋಗ್ಯ ವಿಮೆ ಮತ್ತು ಶಕ್ತಿ ಯೋಜನೆಯಡಿ ಉಚಿತ ಬಸ್ ಪಾಸ್ ಸೌಲಭ್ಯ ನೀಡಬೇಕೆಂದು ಪ್ರಭಟನೆಯಲ್ಲಿ ಜಿಲ್ಲಾಡಳಿತ ಮೂಲಕ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

ಸ್ಥಳೀಯ ಸಂಸ್ಥೆಗಳಿಂದ ಹಿಡಿದು ವಿಧಾನಸಭೆ ಮತ್ತು ಲೋಕಸಭೆಯವರೆಗೆ ವಿಕಲಚೇತನರಿಗೆ ರಾಜಕೀಯವಾಗಿ ಒಂದು ಸ್ಥಾನವನ್ನು ಮೀಸಲಿಡಬೇಕು ಎಂದು ಒಕ್ಕೂಟವು ಆಗ್ರಹಿಸಿದೆ. ಪ್ರಸ್ತುತ ವಿಕಲಚೇತನರಿಗಾಗಿ ಮೀಸಲಿಟ್ಟಿರುವ ಶೇಕಡಾ 5ರಷ್ಟು ಅನುದಾನ ದುರ್ಬಳಕೆಯಾಗುತ್ತಿದ್ದು, ಇದನ್ನು ತಡೆದು ಪ್ರತಿ ಗ್ರಾಮ ಪಂಚಾಯತ್ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತ 'ದಿವ್ಯಾಂಗ ಭವನ'ಗಳನ್ನು ನಿರ್ಮಿಸಬೇಕು ಎಂದು ಮನವಿಯಲ್ಲಿ ಒತ್ತಿ ಹೇಳಲಾಗಿದೆ.

ಬಳಿಕ ಸಂಘಟನೆಯ ಮುಖಂಡರುಗಳಾದ ರಾವಸಾಹೇಬ್ ದೇವರಮನಿ ಅವರು ಮಾತನಾಡಿ, ಆರ್ಥಿಕವಾಗಿ ಹಿಂದುಳಿದಿರುವ ವಿಕಲಚೇತನರ ಬದುಕಿಗೆ ಸರ್ಕಾರ ಆಸರೆಯಾಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರವು ಇದೇ ರೀತಿ ನಿರ್ಲಕ್ಷ್ಯ ಧೋರಣೆ ಮುಂದುವರೆಸಿದರೆ, ಮುಂಬರುವ ಎಲ್ಲಾ ಚುನಾವಣೆಗಳಲ್ಲಿ ಮತದಾನದ ಹಕ್ಕನ್ನು ಬಹಿಷ್ಕರಿಸುವ ಮೂಲಕ ಕಠಿಣ ನಿರ್ಧಾರ ಕೈಗೊಳ್ಳಬೇಕಾಗುತ್ತದೆ ಎಂದು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಈ ವೇಳೆ ರಾವಸಾಹೇಬ್ ದೇವರಮನಿ, ಚಿದಾನಂದ ದುರದುಂಡಿ, ಶಾಂತಾಬಾಯಿ ಮಳವಾಡೆ, ಸುವರ್ಣ ಮಳವಾಡೆ, ಬಸವರಾಜ್ ಬಾಳನಾಯಕ, ಗಣೇಸ್ ಸಡೇಕರ, ಲಕ್ಷ್ಮಣ್ ರಾವಣಕಟ್ಟಿ, ರಾಜೇಶ್ವರಿ ರಾಜಣ್ಣವರ ಸೇರಿದಂತೆ ಹಲವರು ಇದ್ದರು.



ಜಾಗೃತಿಯಿಂದ ಪ್ರಗತಿ: ರವಿ

• **ಬೆಳಗಾವಿ:** ಕಟ್ಟ ಕಡೆಯ ಸಮುದಾಯಗಳ ಪ್ರಗತಿಗೆ ಜಾಗೃತಿಯೊಂದೇ ಮೊದಲ ಅಸ್ತ್ರವೆಂದು ಘೋಷಿಸಿದ್ದ ಬಾಬಾಸಾಹೇಬ ಅಂಬೇಡ್ಕರ್ ಅವರು ದಲಿತ ಸಮುದಾಯಗಳ ಜಾಗೃತಿಗೆ ರೂಪಕವಾಗಿದ್ದಾರೆ ಎಂದು ಕವಿ ರವಿ ಕೋಟಾರಗಸ್ತಿ ಹೇಳಿದರು.

ನಗರದ ಮಾನವ ಬಂಧುತ್ವ ವೇದಿಕೆಯ ಕೇಂದ್ರ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನೆ

ಡಾ. ಅಂಬೇಡ್ಕರ್ ಅವರ ಜನ್ಮದಿನದ ನಿಮಿತ್ತ ಆಯೋಜಿಸಿದ್ದ ಅಂಬೇಡ್ಕರ್ ಕುರಿತ ಕವಿತೆಗಳ ವಾಚನ ಗೋಷ್ಠಿಯ ಆಶಯ ನುಡಿಗಳನ್ನಾಡಿದರು.

ಅಂದಿನ ಮದ್ರಾಸಿನ ಜೈಭೀಮ್ ಪತ್ರಿಕೆಯ ಸಂಪಾದಕರು ತಮ್ಮ 50ನೇ ಜನ್ಮದಿನದ ಸಂದೇಶವನ್ನು ನೀಡಲು ಅಂಬೇಡ್ಕರ್ ಅವರನ್ನು ಕೋರಿದಾಗ ಜಾಗೃತರಾಗಿ, ಹೋರಾಡಿ, ಸಂಘಟಿತರಾಗಿ ಎಂದು ಕರೆ ನೀಡಿದ್ದರು ಎಂದು ಕೋಟಾರಗಸ್ತಿ ನೆನಪಿಸಿದರು.

ಕವಿಗೋಷ್ಠಿಯಲ್ಲಿ ಅಡಿವೆಪ್ಪ ಇಟಗಿ, ಪಲ್ಲವಿ ಕಾಂಬಳೆ, ಅರ್ಜುನ್ ನಿಡಗುಂದೆ, ಶಶಿಕಾಂತ ಕಂಬನ್ನವರ, ಜೊಶ್ನಾ ಪಾರಸೇಕರ, ಶಿವರಾಜ ಅರಳಿ, ರಾಜು ಗಸ್ತಿ, ಅಂಬಿಕಾ ಕಾಂಬಳೆ, ಅಮೀರ ಬಾಗವಾನ, ವಿನಾಯಕ ನಂದಿ, ಚೈತ್ರಾ ಮೋರೆ, ಕೃಷ್ಣಾ ಕಂಬನ್ನವರ ಅವರು ಅಂಬೇಡ್ಕರ್ ಕುರಿತ ಕವಿತೆಗಳ ವಾಚನ ಮಾಡಿದರು. ಡಾ. ಸುಬ್ಬರಾವ್ ಎಂಟೆತ್ತಿನವರ ಅಧ್ಯಕ್ಷತೆ ವಹಿಸಿದ್ದರು.

ಈ ವೇಳೆ ಯಲ್ಲಪ್ಪ ಹಿಮ್ಮಡಿ, ಡಿ. ಎಸ್. ಚೌಗಲೆ, ಅಶೋಕ ಚಂದರಗಿ, ಸುನೀಲ್ ಮೂಗಿ, ಮಂದಾ ನೇವಗಿ, ನಿರ್ಮಲಾ ಬಟ್ಟಲ, ಇಂದಿರಾ ಹೋಳ್ಕರ್, ಎಸ್ ಟಿ ಕರಿಭೀಮಗೋಳ, ಸಾಹುಕಾರ ಕಾಂಬಳೆ, ಮಹಾಂತೇಶ ಚಲವಾದಿ, ಸಿದ್ದಪ್ಪ ಕೊಟ್ರೆ, ಉದಯ ಬಾಗೋಡಿ, ಶಿವರಾಜ ಕಾಮಶೆಟ್ಟಿ, ಪ್ರಣಾಲಿ ಕಾಂಬಳೆ, ಸುಮತಿ ಕೆ.ಡಿ, ಭೂಮಿಕಾ ನಾಯಕ, ಆಶಾ ಮಾದರ, ಸ್ನೇಹಾ ಹೊನಕಾಂಬಳೆ, ರೇಣುಕಾ ಕಾಂಬಳೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ವೃದ್ಧಾಶ್ರಮಕ್ಕೆ ಫಿಟ್ ಇಂಡಿಯಾ ರಾಯಭಾರಿ ಭೇಟಿ

• **ಬೆಳಗಾವಿ:** ಇಲ್ಲಿನ ಶಾಂತಾಯಿ ವೃದ್ಧಾಶ್ರಮಕ್ಕೆ ಫಿಟ್ ಇಂಡಿಯಾ ರಾಯಭಾರಿ ಹಾಗೂ ಕೇಂದ್ರ ಸರ್ಕಾರದ ರಾಷ್ಟ್ರೀಯ ಯುವ ಪ್ರಶಸ್ತಿ ವಿಜೇತ ರಂಜಿತ್ ಸಿಂಗ್ ರಜಪೂತ್ ಗುರುವಾರ ಭೇಟಿ ನೀಡಿದರು. ಬಳಿಕ ಆಶ್ರಮದ ಸ್ವಚ್ಛತೆ ಹಾಗೂ ಹಿರಿಯರ ಆರೋಗ್ಯ ಕಾಳಜಿಯನ್ನು ಕಂಡು ಮೆಚ್ಚುಗೆ ವ್ಯಕ್ತಪಡಿಸಿದರು. ಅಜ್ಜ–ಅಜ್ಜಿಯರೊಂದಿಗೆ ಸಂವಾದ ನಡೆಸಿ ಸಾರ್ಥಕ ಸಮಯ ಕಳೆದರು.

ಶಾಂತಾಯಿ ವೃದ್ಧಾಶ್ರಮದ ಪರಿಸರ ಮತ್ತು ಅಲ್ಲಿನ ಹಿರಿಯ ನಿವಾಸಿಗಳ ಸಕ್ರಿಯ ಜೀವನಶೈಲಿಯನ್ನು ಕಂಡು ಅಪಾರ ತೃಪ್ತಿ ವ್ಯಕ್ತಪಡಿಸಿದರು. ಆಶ್ರಮದಲ್ಲಿ ಹಿರಿಯರನ್ನು ಅತ್ಯಂತ ಪ್ರೀತಿ ಮತ್ತು ಕಾಳಜಿಯಿಂದ ನೋಡಿಕೊಳ್ಳುತ್ತಿರುವುದು ಹಾಗೂ ಸುತ್ತಮುತ್ತಲಿನ ಸ್ವಚ್ಛತೆಯನ್ನು ಕಾಪಾಡಿಕೊಂಡಿರುವುದಕ್ಕೆ ಸಂತಸ ವ್ಯಕ್ತ ಪಡಿಸಿದರು. ಇದೇ ವೇಳೆ ಮಾಜಿ ಮೇಯರ್ ವಿಜಯ್ ಮೋರೆ ಮತ್ತು ಅವರ ಕುಟುಂಬದವರು ಸಮಾಜಸೇವೆಯ ದೃಷ್ಟಿಯಿಂದ ವೃದ್ಧಾಶ್ರಮವನ್ನು ಸುಸಜ್ಜಿತವಾಗಿ ನಡೆಸಿಕೊಂಡು ಬರುತ್ತಿರುವುದನ್ನು ರಜಪೂತ್ ವಿಶೇಷವಾಗಿ ಅಭಿನಂದಿಸಿದರು.



ಶಾಂತಾಯಿ ವೃದ್ಧಾಶ್ರಮದ ಆಡಳಿತ ಮಂಡಳಿ ನಿರ್ದೇಶಕ ಆಲನ್ ವಿಜಯ್ ಮೋರೆ ಅವರು ರಂಜಿತ್ ಸಿಂಗ್ ರಜಪೂತ್ ಅವರನ್ನು ಸನ್ಮಾನಿಸಿದರು. ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಪ್ರದೀಪ್ ಪುಣೇಕರ್ ಮತ್ತು ವಿಜಯ್ ಮೋರೆ ಅವರು, ತಮ್ಮ ಬಿಡುವಿಲ್ಲದ ವೇಳೆಯಲ್ಲೂ ಆಶ್ರಮಕ್ಕೆ ಆಗಮಿಸಿ ಹಿರಿಯರ ಮುಖದಲ್ಲಿ ಮಂದಹಾಸ ಮೂಡಿಸಿದ ರಜಪೂತ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು.

ಮೆರವಣಿಗೆ ಮಾರ್ಗ ಪರಿಶೀಲಿಸಿದ ಮಹಾಪೌರರು

• **ಬೆಳಗಾವಿ :** ಇದೇ ಏಪ್ರಿಲ್ 21 ರಂದು ನಡೆಯಲಿರುವ ಶಿವಜಯಂತಿ ಮತ್ತು 26 ರಂದು ನಡೆಯಲಿರುವ ಬಸವ ಜಯಂತಿಯ ಮೆರವಣಿಗೆ ಹಿನ್ನೆಲೆ ಮಹಾಪೌರ ಮತ್ತು ಉಪಮಹಾಪೌರರು ಶುಕ್ರವಾರ ಮೆರವಣಿಗೆ ಮಾರ್ಗವನ್ನು ಪರಿಶೀಲಿಸಿದರು.

ರಾಜ್ಯದಲ್ಲೇ ಅತಿ ವಿಜೃಂಭಣೆಯಿಂದ ಶಿವ ಮತ್ತು ಬಸವ ಜಯಂತಿಯನ್ನು ಬೆಳಗಾವಿಯಲ್ಲಿ ಆಚರಣೆ ಮಾಡಲಾಗುತ್ತದೆ. ಇಲ್ಲಿ ನಡೆಯುವ ಶಿವಬಸವ ಜಯಂತಿಗೆ ಈಗಾಗಲೇ ಪೂರ್ವ ಸಿದ್ಧತೆಗಳು ಸಮರೋಪಾದಿಯಲ್ಲಿ ಜಾರಿಯಲ್ಲಿವೆ. ಮಹಾಪೌರ ಪ್ರೀತಿ ಕಾಮಕರ, ಉಪಮಹಾಪೌರ ಹಣಮಂತ ಕೊಂಗಾಲಿ ಸೇರಿದಂತೆ ಮಹಾನಗರ ಪಾಲಿಕೆಯ ಅಧಿಕಾರಿಗಳು ಮೆರವಣಿಗೆಯ ಮಾರ್ಗವನ್ನು ಪರಿಶೀಲಿಸಿ ಸಮಸ್ಯೆಗಳನ್ನು ಆಲಿಸಿದರು.



ಶಿವ ಜಯಂತಿ ಉತ್ಸವ ರೂಪಕ ವಾಹನ ಮಹಾಮಂಡಳದ ಅಧ್ಯಕ್ಷ ಸುನೀಲ್ ಜಾಧವ್ ಅವರು ಇಂದು ಮಹಾಪೌರ ಉಪಮಹಾಪೌರರು ಸೇರಿದಂತೆ ಅಧಿಕಾರಿಗಳು ಶಿವಜಯಂತಿ ಉತ್ಸವದ ಮೆರವಣಿಗೆ ಮಾರ್ಗವನ್ನು ಪರಿಶೀಲಿಸಿದ್ದು ಸಮಸ್ಯೆಗಳನ್ನು ಎರಡು ದಿನಗಳಲ್ಲಿ ನಿವಾರಿಸುವ ಭರವಸೆಯನ್ನು ನೀಡಿದ್ದಾರೆ ಎಂದರು. ಆಡಳಿತ ಪಕ್ಷದ ನಾಯಕ ಸಂತೋಷ್ ಪೇಡನಕರ ಅವರು ರಸ್ತೆ, ಕುಡಿಯುವ ನೀರು, ಬೀದಿ ದೀಪ, ಮೊಬೈಲ್ ಶೌಚಾಲಯ, ಮರಗಳ ಕೊಂಬೆಗಳನ್ನು ಕತ್ತರಿಸುವುದು ಸೇರಿದಂತೆ ಸಕಲ ಸೌಲಭ್ಯಗಳನ್ನು ಕಲ್ಪಿಸಲು ಮಹಾಪೌರ–ಉಪಮಹಾಪೌರರು ಮತ್ತು ಅಧಿಕಾರಿಗಳು ಭರವಸೆವನ್ನು ನೀಡಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಉಪಮಹಾಪೌರ ಆನಂದ ಚವ್ಹಾಣ, ನಗರಸೇವಕ ಗಿರೀಶ್ ಧೋಂಗಡಿ, ಜಯತೀರ್ಥ ಸವದತ್ತಿ, ಶ್ರೇಯಸ್ ನಾಕಾಡಿ, ರಾಜು ಭಾತಕಾಂಡೆ, ಜಯಂತ್ ಜಾಧವ್, ನೀತಿನ ಜಾಧವ, ಮಹಾಮಂಡಳದ ಜೆ.ಬಿ. ಶಹಾಪುರಕರ, ಪ್ರಸಾದ್ ಮೋರೆ, ವಿನಾಯಕ ಬಾವಡೇಕರ, ಕರಣ್ ಭಗತ್, ಗುಣವಂತ ಪಾಟೀಲ್ ಸೇರಿದಂತೆ ಸೇರಿದಂತೆ ಇತರರು ಭಾಗಿಯಾಗಿದ್ದರು.

ಹಲ್ಮಿಡಿ ಶಾಸನದ ಪ್ರತಿಕೃತಿ ಸೂಕ್ತ ಜಾಗೆಯಲ್ಲಿ ಮರುಸ್ಥಾಪಿಸಿ

• **ಬೆಳಗಾವಿ:** ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ಹಲ್ಮಿಡಿ ಶಾಸನದ ಪ್ರತಿಕೃತಿಯನ್ನು ಆವರಣದೊಳಗೆ ಸೂಕ್ತ ಸ್ಥಳದಲ್ಲಿ ಮರು ಸ್ಥಾಪಿಸುವಂತೆ ಕನ್ನಡ ಸಂಘಟನೆಗಳ ಮುಖಂಡರು ಶುಕ್ರವಾರ ನಿರ್ಮಿತಿ ಕೇಂದ್ರದ ಅಧಿಕಾರಿಗಳಿಗೆ ಸಲಹೆಯನ್ನು ಕನ್ನಡಪರ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ್ ಚಂದರಗಿ ನೀಡಿದರು.

ಜಿಲ್ಲಾಧಿಕಾರಿಗಳ ಆವರಣದ ಮುಖ್ಯ ದ್ವಾರದ ಬಳಿ ಕೂಡಿಸಲು ಸಿದ್ಧತೆ ಮಾಡಲಾಗಿದೆ. ಈ ಸ್ಥಳವು ಜಿಲ್ಲಾಧಿಕಾರಿ ಮುಂದಿನ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಶೀಘ್ರವೇ ರಸ್ತೆ ಮೇಲ್ಸೇತುವೆ ನಿರ್ಮಾಣ ಕಾರ್ಯ ಆರಂಭವಾಗಲಿದ್ದು, ಮತ್ತೆ ಹಲ್ಮಿಡಿ ಶಾಸನದ ಸ್ಥಳಾಂತರ ಮಾಡಬಹುದಾಗಿದೆ ಎಂದು ಕನ್ನಡಪರ ಹೋರಾಟಗಾರರಿಗೆ ಗೊಂದಲದ ವಾತಾವರಣ ನಿರ್ಮಾಣ ಮಾಡಿದಂತಾಗಿದೆ. ಹೊಸ ಧ್ವಜದ ಕಟ್ಟೆಯ ಸಮೀಪವೇ ತಳ ಕಟ್ಟೆಯನ್ನು ಸುಂದರವಾಗಿ ನಿರ್ಮಿಸಿ, ಸುತ್ತಲೂ ಸರಪಳಿ ಹಾಕಿ ಹಲ್ಮಿಡಿ ಶಾಸನವನ್ನು ಪೂರ್ವಾಭಿಮುಖವಾಗಿ ಕೂಡಿಸುವಂತೆ ಜಿಲ್ಲಾಡಳಿತಕ್ಕೆ ಹಾಗೂ ಅಧಿಕಾರಿಗಳಿಗೆ ತಿಳಿಸಿದರು.



ಈ ವೇಳೆ ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ, ಕಿತ್ತೂರು ಕರ್ನಾಟಕ ಸೇನೆಯ ರಾಜ್ಯಾಧ್ಯಕ್ಷ ಮಹಾದೇವ ತಳವಾರ, ಸರ್ವೋದಯ ಸಂಘದ ಅಧ್ಯಕ್ಷ ಶ್ರೀನಿವಾಸ ತಾಳೂಕರ, ಗಡಿನಾಡು ಕನ್ನಡಿಗರ ಸೇನೆಯ ರಾಜ್ಯಾಧ್ಯಕ್ಷ ಬಲರಾಮ ಮಾಸೇನಟ್ಟಿ ಸೇರಿದಂತೆ ಇತರರು ಕನ್ನಡಪರ ಹೋರಾಟಗಾರರು ಭಾಗಿಯಾಗಿದ್ದರು.

ಶ್ರೀ ಮುರುಘರಾಜೇಂದ್ರ ಶ್ರೀಗಳ ಪಾದಪೂಜೆ

• **ಮುಗಳಖೋಡ:** ಕೆಪಿಸಿಸಿ ಅಸಂಘಟಿತ ಕಾರ್ಮಿಕ ವರ್ಗದ ರಾಜ್ಯ ಉಪಾಧ್ಯಕ್ಷ ಡಾ.ಸಿ.ಬಿ.ಕುಲಿಗೋಡ ಅವರು ಅಮವಾಸ್ಯೆ ನಿಮಿತ್ತ ಮುಗಳಖೋಡ ಜಿಡಗಾ ಮಠದ ಪೀಠಾಧಿಪತಿ ಡಾ. ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳನ್ನು ತಮ್ಮ ಕೃಷ್ಣಾ ನಿವಾಸಕ್ಕೆ ಆಹ್ವಾನಿಸಿ ಗುರುಗಳ ಆಶೀರ್ವಾದ ಪಡೆದರು.

ಶ್ರೀ ಚವಿವ ಸಂಘದ ಅಧ್ಯಕ್ಷ ಹಾಗೂ ಪುರಸಭೆ ಸದಸ್ಯ ಸಂಜಯ ಕುಲಿಗೋಡ ಅವರು ಮುರುಘರಾಜೇಂದ್ರ ಮಹಾಸ್ವಾಮಿಗಳ ಪಾದಪೂಜೆ ನೆರವೇರಿಸಿ ಗುರುಗಳ ಕೃಪೆಗೆ ಪಾತ್ರರಾದರು. ಡಾ ಸಿ.ಬಿ.ಕುಲಿಗೋಡ ಶಾಲು ಹೊದಿಸಿ ಹೂಮಾಲೆ ಹಾಕಿ ಗುರುಕಾಣಿಕೆ ನೀಡಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು.ಈ ಸಂದರ್ಭದಲ್ಲಿ ಗುರು ಮಠಪತಿ, ಪುರಸಭೆ ಸದಸ್ಯರಾದ ಪರಪ್ಪ ಖೇತಗೌಡರ, ಮಹಾಂತೇಶ ಕುಲಿಗೋಡ, ರಾಜಶೇಖರ ನಾಯಿಕ, ಶ್ರೀಶೈಲ ಕುಲಿಗೋಡ, ಗೋಪಾಲ ಕುಲಿಗೋಡ, ಮಹಾಂತೇಶ ಯರಡತ್ತಿ, ರಾಜಕುಮಾರ ನಾಯಿಕ, ಮುತ್ತಪ್ಪ ಬಾಳೋಜಿ, ಸಾತಪ್ಪ ಹುಲ್ಲೋಳಿ, ವಿಜಯಕುಮಾರ ನಾಯಿಕ, ಕೃಷ್ಣಾ ಬದ್ನಿಕಾಯಿ ಸೇರಿದಂತೆ ಇನ್ನಿತರರು ಇದ್ದರು.



ಮಕ್ಕಳಲ್ಲಿ ಸಂಸ್ಕಾರ ಬಿತ್ತುವ ಕೆಲಸವಾಗಲಿ

• **ರಾಯಬಾಗ:** ಇಂದಿನ ದಿನಗಳಲ್ಲಿ ಮಕ್ಕಳ ಬೆಳವಣಿಗೆ ವಾತಾವರಣ ಬಹಳ ಕೆಟ್ಟದಾಗಿದೆ. ಸಂಸ್ಕಾರ ಇಲ್ಲ. ಹಿರಿಯರಿಗೆ ಗೌರವ ಕೊಡುವುದಿಲ್ಲ. ಇದರಿಂದ ಸಮಾಜಕ್ಕೆ ಅಷ್ಟೇ ಅಲ್ಲ ಕುಟುಂಬಕ್ಕೂ ಮಾರಕವಾಗಬಹು ಎಂದು ಶರಣಶ್ರೀ ಬಸವರಾಜ ಶರಣರು ಬೇಸರ ವ್ಯಕ್ತಪಡಿಸಿದರು.



ತಾಲೂಕಿನ ಬಾವನ ಸೌಂದತ್ತಿ ಗ್ರಾಮದಲ್ಲಿ ಶ್ರೀ ಮಹಾದೇವ ಮಂದಿರ ದೇವಸ್ಥಾನದಲ್ಲಿ ಬಸವ ಜಯಂತಿಯ ನಿಮಿತ್ತ ಐದು ದಿನಗಳವರೆಗೆ ನಡೆಯಲಿರುವ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪೋಷಕರಾದವರು ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಮಕ್ಕಳಲ್ಲಿ ಸಂಸ್ಕಾರ ಬಿತ್ತುವ ಕೆಲಸ ಮಾಡಬೇಕು. ಗುರು ಹಿರಿಯರಿಗೆ ಗೌರವಿಸುವುದನ್ನು ಕಲಿಸಬೇಕು. ಸಮಾಜದ ಮುಖ್ಯವಾಹಿನಿಗೆ ನಿಮ್ಮ ಮಗುವನ್ನು ಬರಬೇಕಾದರೆ ಸಂಸ್ಕಾರ ಅಗತ್ಯವಾಗಿ ಬೇಕೆ ಬೇಕು ಎಂದು ಸಲಹೆ ನೀಡಿದರು.

ಬಸವಣ್ಣವರ ಹುಟ್ಟಿದ ದಿನವೇ ಅಕ್ಷಯ ತೃತೀಯ. ಈ ಅಕ್ಷಯ ತೃತೀಯದ ಮಹತ್ವದ್ದರ ಬಗ್ಗೆ ನಾವೆಲ್ಲರೂ ತಿಳಿದುಕೊಳ್ಳುವುದು ಅವಶ್ಯವಾಗಿದೆ. ಹಾಗಾಗಿ ಎಲ್ಲರೂ ಪ್ರವಚನ ಕೇಳಿ ಧನ್ಯರಾಗಬೇಕು ಎಂದು ಹೇಳಿದರು. ಪ್ರಾರಂಭದಲ್ಲಿ ನಂದಿಕುರಳಿಯ ವೀರಭದ್ರ ಸ್ವಾಮೀಜಿಗಳು ಬಸವಜಯಂತಿ ನಿಮಿತ್ತ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.ಈ ಸಂದರ್ಭದಲ್ಲಿ ಧೂಳಗೌಡಾ ಪಾಟೀಲ, ತಾತ್ಯಾಸಾಹೇಬ ಕಾಟೆ, ಅನೀಲ ಹಂಜೆ, ಅಜೀತ ಖೇಮಲಾಪುರೆ, ಸತ್ಯಪ್ಪಾ ಭೀಷ್ಮೆ, ಅಜೀತ ಕಮಗೌಡಾ, ಅಜಪ್ಪಾ ನಾಗರಾಳೆ, ಪ್ರಕಾಶ ಜನಾಜ, ಪ್ರಕಾಶ ಭೀಷ್ಮೆ ಅಶೋಕ ಕಾಮಗೌಡ, ರಾಜುಗೌಡ ಪಾಟೀಲ, ಸೇರಿದಂತೆ ಅನೇಕ ಶರಣು ಶರಣೀಯರು ಅನೇಕರು ಉಪಸ್ಥಿತರಿದ್ದರು. ಅನೀಲ ಬೆಳಗಲಿ ಸ್ವಾಗತಿಸಿ ವಂದಿಸಿದರು.

ಹತ್ತರಗಿ ಪುರಾತನ ಕಾಲದ ದೇವಾಲಯಗಳಿಗೆ ತಹಶೀಲ್ದಾರ್ ಭೇಟಿ

• **ಯಮಕನಮರಡಿ:** ಸಮೀಪದ ಹತ್ತರಗಿ ಗ್ರಾಮದಲ್ಲಿ ಸುಮಾರು 2 ನೇ ಪುಲಕೇಶಿ ಕಾಲದಲ್ಲಿ ನಿರ್ಮಾಣವಾದ ಪುರಾತನ ಕಾಲದ ದೇವಾಲಯಗಳಿಗೆ ಹುಕ್ಕೇರಿ ತಾಲೂಕು ತಹಶೀಲ್ದಾರ್ ಬಲರಾಮ ಕಟ್ಟಿಮನಿ ಸೇರಿದಂತೆ ಅಧಿಕಾರಿಗಳು ಭೇಟಿ ನೀಡಿದರು.

ಗ್ರಾಮದಲ್ಲಿ ಗತ ವೈಭವದೊಂದಿಗೆ ರಾರಾಜಿಸುತ್ತಿರುವ 5 ದೇವಾಲಯಗಳಿದ್ದು, ಅವುಗಳ ಶಿಲಾಲಿಪಿಯು ಸಹಿತ ಈಗಲೂ ನೋಡಲು ಲಭ್ಯವಿರುತ್ತದೆ. ಗ್ರಾಮಸ್ಥರು ಗ್ರಾಮ ಪಂಚಾಯತಿ ಹಾಗೂ ಪುರಾತತ್ವ ಇಲಾಖೆಯವರು ಜೀರ್ಣೋದ್ಧಾರಗೊಳಿಸಿ ಪುರಾತನ ಕಾಲದ ಗತವೈಭವವನ್ನು ಉಳಿಸಿಕೊಳ್ಳಲು ಸಹಕರಿಸಿದ್ದಾರೆ. ಹುಕ್ಕೇರಿ ತಾಲೂಕು ತಹಶೀಲ್ದಾರ್ ಬಲರಾಮ ಕಟ್ಟಿಮನಿ, ಕಂದಾಯ ನಿರೀಕ್ಷಕರಾದ ಕಲಕಾಂಬಕರ ಗ್ರಾಮಲೆಕ್ಕಾಧಿಕಾರಿ, ಗ್ರಾಪಂ ಮಾಜಿ ಅಧ್ಯಕ್ಷ ಮಹಾದೇವ ಪಟೋಳಿ, ಸಾಹಿತಿಗಳಾದ ಗೋಪಾಲ ಚಪಣಿ ಹಾಗೂ ಶಿಕ್ಷಕರಾದ ನಿಜಲಿಂಗಯ್ಯಾ ಹಾಲದೇವರಮಠ ಮುಂತಾದವರು ಉಪಸ್ಥಿತರಿದ್ದರು.



ಕಿರುಸುದ್ದಿ

ಅಂಬೇಡ್ಕರ್ ಜಯಂತಿ: ವಿದ್ಯಾರ್ಥಿಗಳಿಗೆ ಸನ್ಮಾನ

ಕಾಗವಾಡ: ಕಾಗವಾಡ ತಾಲೂಕು ಆಡಳಿತ, ವಿವಿಧ ಸರ್ಕಾರಿ ಇಲಾಖೆಗಳು ಹಾಗೂ ಶಿಕ್ಷಣ ಸಂಸ್ಥೆಗಳ ವತಿಯಿಂದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಯಿತು.ವಿದ್ಯಾಧರ ದಶರತ್ ಅವರು ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಸೃಷ್ಟಿ ಅಮರ್ ಕಾಂಬಳೆ ಮತ್ತು ಸೃಷ್ಟಿ ಸಿಂಗೆ ಸೇರಿದಂತೆ ಹಲವರನ್ನು ಸನ್ಮಾನಿಸಲಾಯಿತು.

ತಾಪಂ ಇಒ ವೀರಣ್ಣ ವಾಲಿ, ಬಿಇಒ ಪಾಂಡುರಂಗ ಮದಬಾವಿ, ಪಿಎಸ್ಐ ರಾಘವೇಂದ್ರ ಖೋತ ಹಾಗೂ ಪುಷ್ಪಲಾತಾ ಸುಣ್ಣದಕಲ್ಲ,ಸಿಡಿಪಿಒ, ರವೀಂದ್ರ ಗುದ್ದಗೆನ್ನವರ, ಪಂ ಪ. ಪ್ರಸನ ಕಲ್ಯಾಣ ಶೆಟ್ಟಿ,ಉಪತಶೀಲ್ದಾರ್ ರಶ್ಮಿ ಜಾಕತಿ, ಬಾಳಾಸಾಬ ಕಾಂಬಳೆ, ಮಲ್ಲಿಕಾರ್ಜುನ ಕಾಂಬಳೆ, ಉದಯ ಖೋಡೆ, ಮಹಾಂತೇಶ್ ಬಡಿಗೇರ, ರಮೇಶ ಚೌಗಲೆ , ಚಿದಾನಂದ್ ಅವಟಿ, ಕಾಕಾ ಪಾಟೀಲ,ವಿಶಾಲ ಧೋಂಡಾರೆ,ಜಯಪಲ ಬಡಿಗೇರ,ರಾಹುಲ ಬಡಿಗೇರ, ರಾಹುಲ ಕುರಾಡೆ, ಪೃಥ್ವಿರಾಜ ಚವ್ಹಾಣ, ವಿನೋದ ಕಾಂಬಳೆ, ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ದಲಿತ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಬಾಕಿ ಭತ್ಯೆ ಬಿಡುಗಡೆಗೆ ಆಗ್ರಹಿಸಿ ಹೋರಾಟದ ಎಚ್ಚರಿಕೆ

ಬೆಳಗಾವಿ: ಕೇಂದ್ರ ಸರ್ಕಾರದ ಅಧೀನದ ಬಿಎಸ್ಎನ್ ಎಲ್ ಮತ್ತು ಎಂಟಿಎನ್ಎಲ್ನ ಲಕ್ಷಾಂತರ ಪಿಂಚಣಿದಾರರು ಈಗ ಬೀದಿಗಿಳಿಯುವ ಮುನ್ಸೂಚನೆ ನೀಡಿದ್ದಾರೆ. ತಮಗೆ ಬರಬೇಕಾದ ತುಟ್ಟಿಭತ್ಯೆಯ ಹಕ್ಕಿಗಾಗಿ ದೆಹಲಿಯ ಮಟ್ಟದಲ್ಲಿ ಪತ್ರ ಸಮರ ಆರಂಭವಾಗಿದ್ದು, ಸರ್ಕಾರಕ್ಕೆ ಗಡುವು ನೀಡಲಾಗಿದೆ.ಬಿಎಸ್ಎನ್ಎಲ್ ಮತ್ತು ಎಂಟಿಎನ್ ಎಲ್‌ನ ಸುಮಾರು 4 ಲಕ್ಷ ಪಿಂಚಣಿದಾರರಿಗೆ ಬರಬೇಕಾದ ಜನವರಿ 2026ರ ತುಟ್ಟಿಭತ್ಯೆ ವಿಳಂಬವಾಗುತ್ತಿರುವುದನ್ನು ಖಂಡಿಸಿ ಪಿಂಚಣಿದಾರರ ಸಂಘಟನೆಗಳ ಒಕ್ಕೂಟವು ಕೇಂದ್ರ ಸರ್ಕಾರದ ಮೊರೆ ಹೋಗಿದೆ. ಫೆ.27ರಂದೇ ಸಾರ್ವಜನಿಕ ಉದ್ಯಮಗಳ ಇಲಾಖೆ ಆದೇಶ ಹೊರಡಿಸಿದ್ದರೂ, ದೂರಸಂಪರ್ಕ ಇಲಾಖೆಯು ಇದನ್ನು ಜಾರಿಗೆ ತರಲು ಮೀನಮೇಷ ಎಣಿಸುತ್ತಿದೆ. ಇದರಿಂದಾಗಿ ಹಿರಿಯ ನಾಗರಿಕರಲ್ಲಿ ತೀವ್ರ ಆತಂಕ ಮತ್ತು ಅಸಮಾಧಾನ ಮೂಡಿದ್ದು, ಇಲಾಖೆಯ ವಿಳಂಬ ಧೋರಣೆಯ ವಿರುದ್ಧ ಅಸಮಾಧಾನ ಸ್ಫೋಟಗೊಂಡಿದೆ.

ಕಳೆದ ಮಾರ್ಚ್ ತಿಂಗಳಲ್ಲೇ ಅಗತ್ಯ ಮಾಹಿತಿಯನ್ನು ಬಿಎಸ್ಎನ್ಎಲ್ ಕಚೇರಿ ನೀಡಿದ್ದರೂ, ದೂರಸಂಪರ್ಕ ಇಲಾಖೆ ಮೌನಕ್ಕೆ ಶರಣಾಗಿರುವುದು ಪ್ರತಿಭಟನೆಗೆ ನಾಂದಿ ಹಾಡಿದೆ. ಈ ಹಿನ್ನೆಲೆಯಲ್ಲಿ, ತಕ್ಷಣವೇ ಆದೇಶ ಜಾರಿಗೊಳಿಸದಿದ್ದರೆ ಏಪ್ರಿಲ್ 16 ರಂದು ದೇಶವ್ಯಾಪಿ ಬಿಎಸ್ಎನ್ಎಲ್ ಕಚೇರಿಗಳ ಮುಂದೆ ಪ್ರದರ್ಶನ ಹಾಗೂ ಏ.30ರಂದು ಬೃಹತ್ ಧರಣಿ ನಡೆಸುವುದಾಗಿ ಒಕ್ಕೂಟವು ಎಚ್ಚರಿಸಿದೆ ಎಂದು ಸಂಘದ ಉಪಾಧ್ಯಕ್ಷ ರಾಮು ತಟಪಟಿ ಹೇಳಿದರು.ಈ ವೇಳೆ ವಿ. ವಾರಾ ಪ್ರಸಾದ, ಪುಲಾದ್ ರೈ, ಡಿ.ಡಿ.ಮಿಸ್ತ್ರಿ ಮುರಳೀಧರನ್ ನೈರ್, ಜಿ.ಎಲ್. ಜೋಗಿ, ಎ.ಕೆ.ಕೌಶೀಕ್ ಸೇರಿದಂತ ಹಲವರು ಪಾಲ್ಗೊಂಡಿದರು.

ಅರ್ಜಿ ಆಹ್ವಾನ

ಬೆಳಗಾವಿ: ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ 2025ನೇ ಸಾಲಿನಲ್ಲಿ (ಜನವರಿ ಯಿಂದ ಡಿಸೆಂಬರ್) ಕನ್ನಡದಲ್ಲಿ ಪ್ರಕಟವಾದ ಕೃತಿಗಳಿಗೆ, ಅವುಗಳ ಮುದ್ರಣ, ಮುಖಪುಟ ವಿನ್ಯಾಸ, ಗುಣಮಟ್ಟವನ್ನು ಪರಿಗಣಿಸಿ ವಿವಿಧ ಕನ್ನಡ ಪುಸ್ತಕ ಸೊಗಸು ಬಹುಮಾನಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಪ್ರಕಾಶಕರು, ಮುದ್ರಕರು, ಕಲಾವಿದರು ಮೇ 11 ರೊಳಗಾಗಿ ಅರ್ಜಿ ನಮೂನೆಯನ್ನು ವೆಬ್ಸೈಟ್ https://kpp.karnataka.gov.in ರಲ್ಲಿ ಪಡೆದುಕೊಂಡು, ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560 002 ಈ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು -560002 ಸಂಪರ್ಕಿಸಬಹುದಾಗಿದೆ ಎಂದು ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಂದು ಕೊರತೆಗಳ ನಿವಾರಣಾ ಸಭೆ ಇಂದು

ಬೆಳಗಾವಿ: ಹು.ವಿ.ಸ.ಕಂ.ನಿ, ಕಾಪಾ, ನಗರ ಉಪವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ನೆಹರೂ ನಗರದ ಹೆಸ್ಕಾಂ ನಗರ ಉಪ-ವಿಭಾಗ-3 ರ ಕಚೇರಿಯಲ್ಲಿ ಏ.18ರಂದು ಮಧ್ಯಾಹ್ನ 3 ಗಂಟೆಗೆ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ಸಭೆ ಆಯೋಜಿಸಲಾಗಿದೆ. ವಿದ್ಯುತ್ ಗ್ರಾಹಕರು ತಮ್ಮ ಸಮಸ್ಯೆ, ಕುಂದು-ಕೊರತೆಗಳನ್ನು ಈ ಸಭೆಯಲ್ಲಿ ಭಾಗವಹಿಸಿ ಪರಿಹರಿಸಿಕೊಳ್ಳಬಹುದು ಎಂದು ಹು.ವಿ.ಸ.ಕಂ.ನಿ,ಕಾ ಮತ್ತು ಪಾ ನಗರ ಉಪ ವಿಭಾಗ ನಂ-3 ರ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಾಗವಾಡ: ಕಾಗವಾಡ ತಾಲೂಕು ಆಡಳಿತ, ವಿವಿಧ ಸರ್ಕಾರಿ ಇಲಾಖೆಗಳು ಹಾಗೂ ಶಿಕ್ಷಣ ಸಂಸ್ಥೆಗಳ ವತಿಯಿಂದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಜಯಂತಿ ಆಚರಿಸಲಾಯಿತು. ವಿದ್ಯಾಧರ ದಶರತ್ ಅವರು ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಸೃಷ್ಟಿ ಅಮರ್ ಕಾಂಬಳೆ ಮತ್ತು ಸೃಷ್ಟಿ ಸಿಂಗೆ ಸೇರಿದಂತೆ ಹಲವರನ್ನು ಸನ್ಮಾನಿಸಲಾಯಿತು.

ಶಿಕ್ಷಣ, ಸಂಘಟನೆ, ಹೋರಾಟ ಅಳವಡಿಸಿಕೊಳ್ಳಿ

ಗೋಕಾಕ: ವಿದ್ಯಾರ್ಥಿಗಳು ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಶಿಕ್ಷಣ, ಸಂಘಟನೆ ಹಾಗೂ ಹೋರಾಟ ಎಂಬ ಮೂರು ಸೂತ್ರಗಳನ್ನು ತಮ್ಮ ಜೀವನದಲ್ಲಿ ಅಳವಡಿಕೊಳ್ಳಬೇಕು ಎಂದು ಪತ್ರಕರ್ತ ಸಾದಿಕ ಹಲ್ಯಾಳ ಹೇಳಿದರು.

ಗುರುವಾರದಂದು ನಗರದ ಸತೀಶ್ ಶುಗರ್ಸ ಅಕಾಡೆಮಿ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜುನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಪ್ರಯುಕ್ತ '' ಮನೆ -ಮನೆಗೆ ಮನ ಮನಕ್ಕೆ ಬಾಬಾಸಾಹೇಬರು'' ಅಭಿಯಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ಹಾಕಿಕೊಟ್ಟ ದಾರಿಯಲ್ಲಿ ಸಾಗಿ ನಾವು ನಮ್ಮ ಜೀವನವನ್ನು ಪಾವನಗೊಳಿಸಿಕೊಳ್ಳಬೇಕಾಗಿದೆ ವಿದ್ಯಾರ್ಥಿ ಜೀವನದಲ್ಲಿ ಬಾಬಾಸಾಹೇಬ ಅವರರಂತಹ ಮಹಾಮಾನವತಾವಾದಿ ಬಗ್ಗೆ ತಿಳಿದುಕೊಂಡು ಅವರ ತತ್ವ ಸಿದ್ಧಾಂತಗಳನ್ನು ವಿದ್ಯಾರ್ಥಿ ದಿಸೆಯಲ್ಲಿಯೇ ಪಾಲಿಸಿಕೊಂಡು ಮುಂದೆ ಸಾಗಿದರೆ ಒಬ್ಬ ಒಳ್ಳೆಯ ಸಾಧಕರಾಗಲು ಸಾಧ್ಯ ಆ ದಿಸೆಯಲ್ಲಿ ಎಲ್ಲರೂ ವ್ಯಾಸಂಗ ಮಾಡಿ ಸಮ ಸಮಾಜವನ್ನು ಕಟ್ಟಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸತೀಶ್ ಶುಗರ್ಸ ಅಕಾಡೆಮಿ ಪದವಿ ಕಾಲೇಜಿನ ಪ್ರಾಚಾರ್ಯ ಬಿ.ಎಚ್.ಸ್ವಾಮಿ ವಹಿಸಿದ್ದರು. ಈ ಸಂದರ್ಭದಲ್ಲಿ ಸಿ.ಆರ್.ಲಕ್ಷೆಟ್ಟಿ, ಕರವೇ ಅಧ್ಯಕ್ಷ ಬಸವರಾಜ ಖಾನಪ್ಪನವರ, ಡಾ.ಎಂ.ಆಯ್ .ನದಾಫ್, ಎಸ್.ವಾಯ್.ಸಣ್ಣಾಯಿಕ, ಎಸ್.ಆರ್.ಭಜಂತ್ರಿ, ಜಿ.ಆರ್.ಗುಡ್ಡೊಡಗಿ, ಎಸ್. ಎಲ್.ಮನ್ನಿಕೇರಿ ಉಪಸ್ಥಿತರಿದ್ದರು.



ಬೆಳಗಾವಿ : ಕೆಎಲ್ ಎಸ್ ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯದ ಜಿಮಖಾನಾ ಯೂನಿಯನ್ ಹವ್ಯಾಸಿ ಕ್ಲಬ್ ವತಿಯಿಂದ ಛಾಯಾಗ್ರಹಣ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿ ವಿನೀತ ಕಾಜಗಾರ ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಛಾಯಾಗ್ರಹಣದ ಕುರಿತು ನೈಜ ಅನುಭವ ನೀಡಿದರು. ಕಾರ್ಯಾಗಾರದಲ್ಲಿ 35 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ ಸದುಪಯೋಗ ಪಡೆದರು. ಜಿಮಖಾನಾ ಯೂನಿಯನ್ ಅಧ್ಯಕ್ಷ ಡಾ. ಡಿ.ಪ್ರಸನ್ನ ಕುಮಾರ, ಮಹಾಲಕ್ಷ್ಮೀ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಿತ್ತೂರು ರಾಣಿ ಚನ್ನಮ್ಮಾಜಿ ಐಕ್ಯ ಸ್ಥಳಕ್ಕೆ ಗೃಹ ಸಚಿವ ಜಿ. ಪರಮೇಶ್ವರ ಭೇಟಿ

ರಾಕ್ ಗಾರ್ಡನ್‌ಗೆ ಮೆಚ್ಚುಗೆ

ಬೈಲಹೊಂಗಲ: ಸ್ವಾತಂತ್ರ್ಯ ಹೋರಾಟದ ಧೀರ ನಾಯಕಿ ಕಿತ್ತೂರು ರಾಣಿ ಚನ್ನಮ್ಮಾಜಿ ಅವರ ಐಕ್ಯ ಸ್ಥಳಕ್ಕೆ ಗೃಹ ಸಚಿವ ಜಿ. ಪರಮೇಶ್ವರ ಭೇಟಿ ನೀಡಿ ಪುಷ್ಪ ನಮನ ಸಲ್ಲಿಸಿದರು.

ಐಕ್ಯ ಸ್ಥಳ ಹಾಗೂ ನವೀಕರಿಸಲಾದ ರಾಕ್ ಗಾರ್ಡನ್ ವೀಕ್ಷಿಸಿದ ಅವರು ಸಂತಸ ವ್ಯಕ್ತಪಡಿಸಿದರು.

ನಯಾನಗರ ಗ್ರಾಮದ ಸುಖದೇವಾನಂದ ಮಠದ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಲು ಆಗಮಿಸಿದ್ದ ಸಚಿವರು, ಬೈಲಹೊಂಗಲ ನಗರಕ್ಕೆ ಭೇಟಿ ನೀಡಿ ಶಾಸಕ ಮಹಾಂತೇಶ ಕೌಜಲಗಿ ಅವರ ನಿವಾಸಕ್ಕೆ ತೆರಳಿ, ಮಾಜಿ ಸಚಿವ ಶಿವಾನಂದ ಕೌಜಲಗಿ ಅವರೊಂದಿಗೆ ಕೆಲಹೊತ್ತು ಚರ್ಚೆ ನಡೆಸಿದರು. ನಂತರ ಚನ್ನಮ್ಮಾಜಿಯ ಐಕ್ಯ ಸ್ಥಳಕ್ಕೆ ತೆರಳಿ ಗೌರವ ನಮನ ಸಲ್ಲಿಸಿದರು.

ಈ ವೇಳೆ ಶಾಸಕ ಮಹಾಂತೇಶ ಕೌಜಲಗಿ ಅವರು ಚನ್ನಮ್ಮಾಜಿಯ ಇತಿಹಾಸ ಹಾಗೂ ನವೀಕರಿಸಲಾದ ರಾಕ್ ಗಾರ್ಡನ್ ಕುರಿತು ಸಚಿವರಿಗೆ ಮಾಹಿತಿ ನೀಡಿದರು. ರಾಕ್ ಗಾರ್ಡನ್ ವೀಕ್ಷಿಸಿದ ಬಳಿಕ ಸಚಿವರು ಸುಖದೇವಾನಂದ ಮಠಕ್ಕೆ ತೆರಳಿ ಅಭಿನವ ಸಿದ್ದಲಿಂಗೇಶ್ವರ ಶ್ರೀಗಳ ಆಶೀರ್ವಾದ ಪಡೆದರು.



5 ಲಕ್ಷ ರೂ. ಅನುದಾನ

ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿದ ಸಚಿವರು, ರಾಜ್ಯದಲ್ಲಿಯೇ ಉತ್ತಮ ಹೆಸರು ಗಳಿಸಿರುವುದಕ್ಕೆ ಹೆಮ್ಮೆ ವ್ಯಕ್ತಪಡಿಸಿದರು. ಕಾಲೇಜಿನ ಗ್ರಂಥಾಲಯ ಅಭಿವೃದ್ಧಿಗಾಗಿ ಸ್ವತಃ 5 ಲಕ್ಷ ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಶಾಸಕ ಆಸೀಫ್ ಶೇಠ್, ಬೆಳಗಾವಿ ಐಜಿಪಿ ಚೇತನಸಿಂಗ್ ರಾಥೋಡ, ಎಸ್ಪಿ ಕೆ. ರಾಮರಾಜನ್, ತಾಲೂಕು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಮಹಾಂತೇಶ ಕಳ್ಳಿಬಡ್ಡಿ, ನಗರಸಭೆ ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಉಪಸ್ಥಿತರಿದ್ದರು.

ಕೃಷ್ಣಶರ್ಮರ ಕೃತಿಗಳಲ್ಲಿ ಸ್ತ್ರೀ ಪ್ರಾಮುಖ್ಯತೆಗೆ ಮೊದಲ ಆದ್ಯತೆ: ಸಾಹಿತಿ ಡಾ. ಪಾಟೀಲ

ಬೆಳಗಾವಿ: ಡಾ. ಬೆಟಗೇರಿ ಕೃಷ್ಣಶರ್ಮ ಮಾತೃ ಹೃದಯದ ಆಶ್ರಯದಲ್ಲಿ ಬೆಳೆದಂತವರು. ಅವರ ಕೃತಿಗಳಲ್ಲಿಯೂ ಕೂಡ ಸ್ತ್ರೀತ್ವದ ಅಂಶಗಳು ಅತ್ಯಂತ ಪ್ರಖರವಾಗಿವೆ ಎಂದು ಧಾರವಾಡದ ಹಿರಿಯ ಸಾಹಿತಿಗಳಾದ ಡಾ. ರಾಘವೇಂದ್ರ ಪಾಟೀಲ ತಿಳಿಸಿದರು.

ಡಾ. ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್ ಹಾಗೂ ಮಹಾಂತೇಶ ನಗರ ರಹವಾಸಿಗಳ ಸಂಘ ಶಿಕ್ಷಣ ಮಹಾವಿದ್ಯಾಲಯ ಬೆಳಗಾವಿ ಸಹಯೋಗದಲ್ಲಿ ಗುರುವಾರ ಮಹಾಂತೇಶ ನಗರದ ಮಹಾಂತ ಭವನದಲ್ಲಿ ನಡೆದ ಡಾ. ಬೆಟಗೇರಿ ಕೃಷ್ಣಶರ್ಮ ಜಯಂತಿ ಅಂಗವಾಗಿ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಟಗೇರಿ ಕೃಷ್ಣಶರ್ಮ ಅವರು ಸ್ತ್ರೀ ಪುರುಷರನ್ನು ಸಮಾನವಾಗಿ ಮಾನವತಾವಾದದಿಂದ ನೋಡುತ್ತಿದ್ದರು. ಬೆಟಗೇರಿ ಕೃಷ್ಣಶರ್ಮ ಅವರು ನವೋದಯದ ಪ್ರತಿಭಾವಂತ ಕವಿಯಾಗಿದ್ದರು ಎಂದು ಡಾ. ರಾಘವೇಂದ್ರ ಪಾಟೀಲ್ ಅವರು ವಿವರಿಸಿದರು.

ಧಾರವಾಡದ ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟನ ಅಧ್ಯಕ್ಷ ಡಾ. ಸರಜೂ ಕಾಟಕರ, ಡಾ.ರುದ್ರೇಶ್ ಮೇಟಿ,

ಬೆಳಗಾವಿ ಡಾ. ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್ ನ ಅಧ್ಯಕ್ಷರಾದ ಡಾ. ವಿನಯಾ ಒಕ್ಕುಂದ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬೆಳಗಾವಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರಾದ ಕೆ.ಎಚ್. ಚನ್ನೂರ, ಬೆಳಗಾವಿ ಮಹಾಂತೇಶ ನಗರ ರಹವಾಸಿಗಳ ಸಂಘ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ನಿರ್ಮಲಾ ಬಟ್ಟಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ಹಾಗೂ ಡಾ. ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್‌ನ ಸದಸ್ಯ ಕಾರ್ಯದರ್ಶಿಗಳಾದ ವಿದ್ಯಾವತಿ ಭಜಂತ್ರಿ, ಬಸವರಾಜ ಕಟ್ಟಿಮನಿ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಯಲ್ಲಪ್ಪ ಹಿಮ್ಮಡಿ ಹಾಗೂ ಡಾ. ಎಚ್.ಬಿ. ಕೋಲ್ಕಾರ, ಡಾ. ಗೀತಾಂಜಲಿ ಕುರುಡಗಿ, ರವಿ ಕುಲಕರ್ಣಿ ಉಪಸ್ಥಿತರಿದ್ದರು.



ಅರ್ಜಿ ಆಹ್ವಾನ

ಬೆಳಗಾವಿ: 2026-27 ನೇ ಸಾಲಿಗೆ ಬೆಳಗಾವಿ ನಗರದ ಸದಾಶಿವ ನಗರದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಯುತ್ತಿರುವ ಸೈನಿಕ ತರಬೇತಿ ಶಾಲೆಯಲ್ಲಿ ಸೈನಿಕ ಶಾಲೆ ವಿಜಯಪೂರ (ವಿಜಾಪೂರ) ದಲ್ಲಿ ಪ್ರವೇಶಕ್ಕಾಗಿ ಪರೀಕ್ಷಾ ಪೂರ್ವ ತರಬೇತಿ ನೀಡಲು ವಾರ್ಷಿಕ ವರಮಾನ ರೂ.2,50 ಲಕ್ಷಗಳ ಒಳಗಿರುವ ಮತ್ತು 2026-27 ನೇ ಸಾಲಿನಲ್ಲಿ 5 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಪ್ರತಿಭಾವಂತ ಪುರುಷ ಮಕ್ಕಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

50 ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆ , ಮೇರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತಿದ್ದು, ನಿಗಧಿತ ಅರ್ಜಿ ನಮೂನೆಗಳನ್ನು ತಾಲೂಕಿನ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆಯ ಕಚೇರಿಗಳಿಂದ ಹಾಗೂ ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ ರವರ ಕಛೇರಿಯಿಂದ ಏ.16 ರಿಂದ ಮೇ 11ರವರೆಗೆ ಪಡೆಯಬಹುದಾಗಿದೆ. ಮೇ 12ರ ಸಂಜೆ 5 ಗಂಟೆಯೊಳಗಾಗಿ ಅರ್ಜಿಗಳನ್ನು ಆಯಾ ತಾಲೂಕಿನ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆಯ ಕಛೇರಿ, ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ ರವರ ಕಛೇರಿಗೆ ಸಲ್ಲಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಡತನ ನಿರ್ಮೂಲನೆಗೆ ಶಿಕ್ಷಣವೇ ಮದ್ದು

ಸಂಕೇಶ್ವರ: ಬಡತನ ನಿರ್ಮೂಲನೆಗೆ ಶಿಕ್ಷಣವೇ ಉತ್ತಮ ಮದ್ದಾಗಿದ್ದು, ಯುವಪೀಳಿಗೆ ಶಿಕ್ಷಣವೆಂಬ ಪ್ರಬಲ ಅಸ್ತ್ರವನ್ನು ಸಮಾಜದ ಪಿಡುಗು ನಿವಾರಣೆಗೆ ಬಳಸಿಕೊಳ್ಳಬೇಕು ಎಂದು ನಿಡಸೋಸಿ ಜಗದ್ಗುರು ಪಂಚಮ ಡಾ.ಶಿವಲಿಂಗೇಶ್ವರ ಸ್ವಾಮೀಜಿ ಹೇಳಿದರು.

ಸಮೀಪದ ನಿಡಸೋಸಿ ಸಿದ್ಧ ಸಂಸ್ಥಾನ ಮಠದಲ್ಲಿ ಪಿಯು ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ಗ್ರಾಮದ ಅಂಕಿತ ಭೀಮಪ್ಪ ಕಾರತಗಿ ಅವರನ್ನು ಆಶೀರ್ವದಿಸಿ ಮಾತನಾಡಿದರು.

ತಂದೆ ದಿನ ಕೂಲಿ ಮಾಡುತ್ತಿದ್ದರೂ ಮೊರಾರ್ಜಿ ವಸತಿ ಕಾಲೇಜಿನ ಸೌಲಭ್ಯ ಪಡೆದು

ಸಾಧಿಸಬೇಕೆಂಬ ಅಚಲತೆಯೊಂದಿಗೆ ಅಂಕಿತ ಕಾರತಗಿ ಎಸ್ಸೆಸ್ಸೆಲ್ಸಿಯಲ್ಲಿ ರಾಜ್ಯಕ್ಕೆ ಎಂಟನೆ ರ್‍ಯಾಂಕ್ ಹಾಗೂ ಪಿಯುಸಿಯಲ್ಲಿ ರಾಜ್ಯಕ್ಕೆ ಎರಡನೇ ರ್‍ಯಾಂಕ್ ಪಡೆಯುವ ಮೂಲಕ ಅದ್ವಿತೀಯ ಸಾಧನೆ ಮಾಡಿರುವುದು ಸಂತಸ ತಂದಿದೆ ಎಂದರು.

> **ಉತ್ತಮ ಕೈಂಕರ್ಯ ಮಾಡುವವರಿಗೆ ಶ್ರೀಮಠದಿಂದ ಪ್ರೋತ್ಸಾಹ ನೀಡುತ್ತ ಬರಲಾಗಿದ್ದು, ಪಿಯುಸಿಯಲ್ಲಿ ಸಾಧಕ ಅಂಕಿತ ಕಾರತಗಿ ಹಾಗೂ ಕೃಷಿಯಲ್ಲಿ ಗ್ರಾಮದ ವಿಶಾಲ ಪಾಟೀಲ ಉತ್ತಮ ಸಾಧನೆ ಮಾಡಿದ್ದು, ಭವಿತವ್ಯದಲ್ಲಿ ಇನ್ನಷ್ಟು ಪ್ರಗತಿ ಹೊಂದಬೇಕು.**
>
> **■ ಜಗದ್ಗುರು ಪಂಚಮ ಡಾ.ಶಿವಲಿಂಗೇಶ್ವರ ಮಹಾಸ್ವಾಮೀಜಿ. ನಿಡಸೋಸಿ**

ವಿದ್ಯಾರ್ಥಿ ತಂದೆ ಭೀಮಪ್ಪಾ ಕಾರತಗಿ, ವಿದ್ಯಾರ್ಥಿ ಅಂಕಿತ ಕಾರತಗಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಶ್ರೀಮಠದ ಪರವಾಗಿ ಶ್ರೀಗಳು ಅಂಕಿತ ಕಾರತಗಿ ಹಾಗೂ ಭೀಮಪ್ಪಾ ಕಾರತಗಿ ಅವರನ್ನು ಸತ್ಕರಿಸಿದರು. ಈ ಸಂದರ್ಭದಲ್ಲಿ ಸಾತಯ್ಯ ಸಾವಳಗಿಮಠ, ಪ್ರಗತಿಪರ ರೈತ ವಿಶಾಲ ಪಾಟೀಲ ಉಪಸ್ಥಿತರಿದ್ದರು.



ಏ.29ಕ್ಕೆ ಸಾಮೂಹಿಕ ಉಚಿತ ಗುಗ್ಗಳೋತ್ಸವ

ನೇಸರಗಿ: ಇಲ್ಲಿನ ಪ್ರತಿಷ್ಠಿತ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ ಏ.27ರಿಂದ ಪ್ರಾರಂಭವಾಗಿ ಮೇ 1ರವರೆಗೆ ಅದ್ದೂರಿಯಾಗಿ ಜರುಗಲಿದೆ.

ಏ.27ರಂದು ಬ್ರಾಹ್ಮೀ ಮಹೂರ್ತದಲ್ಲಿ ಶ್ರೀ ವೀರಭದ್ರೇಶ್ವರ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಸಂಜೆ 4 ಘಂಟೆಗೆ ಕಳಸರೋಹಣ ನೆರವೇರುವುದು. ಏ.28ರಂದು ಸಂಜೆ 4 ಗಂಟೆಗೆ ಊರಿನ ದೈವದ ವತಿಯಿಂದ ಗ್ರಾಮದೇವಿಗೆ ಉಡಿ ತುಂಬುವುದು, ಏ.29ರಂದು ನೇಸರಗಿ ಮಲ್ಲಾಪೂರ ಗಾಳೇಶ್ವರ ಮಠದ ಚಿದಾನಂದ ಸ್ವಾಮೀಜಿ ಹಾಗೂ ಹಣಬರಹಟ್ಟಿ ಹಿರೇಮಠದ ಬಸವಲಿಂಗ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಪೂಜಾ ಅಭಿಷೇಕ ಪ್ರಾರಂಭವಾಗಿ ಡಾ.ಎಸ್.ಬಿ. ಗೆಜ್ಜಿ ಕುಟುಂಬಸ್ಥರಿಂದ ಉಚಿತ ಸಾಮೂಹಿಕ ರವಿ ಗುಗ್ಗಳೋತ್ಸವ ನೆರವೇರಲಿದೆ.

ಮೂಡಲಗಿ ತಾಲೂಕಿನ ಕಲ್ಲೋಳಿ ಮತ್ತು ನೇಸರಗಿ ಸುತ್ತಮುತ್ತಲಿನ ಗ್ರಾಮಗಳ ಉಡಗಿ ಪುರವಂತರಿಂದ ಒಡಪು ಮತ್ತು ಜೈ ಹನುಮನ ಸಂಬಾಳ ಮಜಲ್ ಇವರಿಂದ ವೀರಗಾಸೆ ಹಾಗೂ ಕುಣಿತದ ವಿಶೇಷ ಕಾರ್ಯಕ್ರಮ ಜರುಗುವವು. ಸೈನಿಕರ ಸಂಘ ನೇಸರಗಿ ವತಿಯಿಂದ ಅಂಬಾರಿ ಸಮೇತ ಆಣೆ ಮೆರವಣಿಗೆ ಹಾಗೂ ಕಮಿತಿ ವತಿಯಿಂದ ಗೊಂಬೆ ಕುಣಿತ ಕಾರ್ಯಕ್ರಮ, ರಥ ಚಲಿಸುವ ಬೀದಿಗಳಲ್ಲಿ ರಂಗೋಲಿ ಹಾಕಿ, ಮಧ್ಯಾಹ್ನ 3 ಘಂಟೆಗೆ ಮಹಾ ರಥೋತ್ಸವ ಅದ್ದೂರಿಯಾಗಿ ಜರುಗುವದು.ಏ 29 ರಂದು ರಾತ್ರಿ 10 ಗಂಟೆಗೆ ಶ್ರೀ ರಾಮಲಿಂಗೇಶ್ವರ ನಾಟ್ಯ ಸಂಘ ಅನಿಗೋಳ, ಆಕಾಶವಾಣಿ ಹಾಗೂ ದೂರದರ್ಶನ ಕಲಾವಿದರು ಮತ್ತು ಶ್ರೀ ಗೋವಿಂದಪ್ಪ ಭೀಮಶೇಪ್ಪ ಪರಂಡಿ ಹಾಗೂ ಸಂಗಡಿಗರಿಂದ ಶ್ರೀಮನ್ ನಿಜಗುಣ ಶಿವಯೋಗಿ ಸಣ್ಣಾಟ ನೆರವೇರಲಿದೆ. ಏ 30 ರಂದು ಮಧ್ಯಾಹ್ನ 3 ಗಂಟೆಗೆ ವೀರಭದ್ರೇಶ್ವರ ದೇವಸ್ಥಾನದ ಓಣಿಯಲ್ಲಿ ತೆರೆಬಂಡಿಯಲ್ಲಿ ಇಬ್ಬರು ಹುಡುಗರು ಸೇರಿ ಪುನಾಗಾಡಿ ಜಗ್ಗುವ ಸ್ಪರ್ಧೆ ಏರ್ಪಡಿಸಲಾಗಿದೆ.

ಮೇ 1ರಂದು ಸಂಜೆ 6 ಗಂಟೆಗೆ ಕಳಸ ಇಳಿಸುವುದು, 7 ಗಂಟೆಗೆ ಗುಡಿ ಓಣಿಯ ಹುಡುಗರಿಂದ ಲಕ್ಷ ದೀಪೋತ್ಸವ ಕಾರ್ಯಕ್ರಮ ಜರುಗುವದು. ಉಚಿತ ರವಿ ಗುಗ್ಗಳೋತ್ಸವ ಭಾಗವಹಿಸುವವರು ಏ.27ರ ಒಳಗಾಗಿ ಪುರವಂತರ ಕಮಿಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಿ. ಹೆಚ್ಚಿನ ಮಾಹಿತಿಗಾಗಿ ಮೊ. ನಂ. 9535883527,7026211363 ಈ ನಂಬರಗೆ ಸಂಪರ್ಕಿಸಲು ಜಾತ್ರಾ ಕಮಿಟಿ ಸದಸ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷೇತ್ರ ಪುನರ್ವಿಂಗಡಣೆ ಮಸೂದೆಗೆ ಸಂಸದೆ ವಿರೋಧ

ಬೆಳಗಾವಿ: ಪ್ರಸ್ತಾವಿತ 2026ರ ಕ್ಷೇತ್ರ ಪುನರ್ವಿಂಗಡಣೆ ಮಸೂದೆ ದೇಶದ ಒಕ್ಕೂಟ ವ್ಯವಸ್ಥೆ ಹಾಗೂ ರಾಜ್ಯಗಳ ರಾಜಕೀಯ ಸಮತೋಲನಕ್ಕೆ ಧಕ್ಕೆಯುಂಟುಮಾಡುವ ಸಾಧ್ಯತೆ ಇದೆ ಎಂದು ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಸತೀಶ್ ಜಾರಕಿಹೊಳಿ ಗಂಭೀರ ಆತಂಕ ವ್ಯಕ್ತಪಡಿಸಿದರು.



ಸದನದಲ್ಲಿ ಮಾತನಾಡಿದ ಅವರು, ಒಬ್ಬ ವ್ಯಕ್ತಿ, ಒಂದು ಮತ' ಎಂಬ ತತ್ವದಡಿ ಕ್ಷೇತ್ರ ಮರುಹಂಚಿಕೆ ಸಂವಿಧಾನಾತ್ಮಕವಾದದ್ದೇ ಆಗಿದ್ದರೂ, ಅದರ ಪರಿಣಾಮವಾಗಿ ಪ್ರಗತಿ ಸಾಧಿಸಿದ ರಾಜ್ಯಗಳಿಗೆ ಅನ್ಯಾಯವಾಗಬಾರದು ಎಂದು ಎಚ್ಚರಿಸಿದರು. ಕುಟುಂಬ ಯೋಜನೆ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ದಕ್ಷಿಣ ರಾಜ್ಯಗಳು ಜನಸಂಖ್ಯೆ ನಿಯಂತ್ರಣದಲ್ಲಿ ಯಶಸ್ವಿಯಾಗಿದ್ದು, ಕೇವಲ ಜನಸಂಖ್ಯೆ ಆಧಾರಿತ ಹಂಚಿಕೆ ಮಾಡಿದರೆ ಇವು ಸಂಸತ್ತಿನಲ್ಲಿ ತಮ್ಮ ಪ್ರತಿನಿಧಿತ್ವವನ್ನು ಕಳೆದುಕೊಳ್ಳುವ ಅಪಾಯ ಎದುರಿಸುತ್ತವೆ ಎಂದರು.

ಮಹಿಳಾ ಮೀಸಲಾತಿ ಕುರಿತು ಮಾತನಾಡಿದ ಅವರು, ಬಸವಣ್ಣ ಅವರ ಅನುಭವ ಮಂಟಪ' ಉದಾಹರಣೆ ನೀಡಿ, ಮಹಿಳೆಯರಿಗೆ ಪ್ರಾಚೀನ ಕಾಲದಿಂದಲೇ ಅವಕಾಶ ನೀಡಲಾಗಿತ್ತು ಎಂದು ಹೇಳಿದರು. ಮಹಿಳಾ ಮೀಸಲಾತಿ ಮಸೂದೆ ತಡವಿಲ್ಲದೆ ತಕ್ಷಣ ಜಾರಿಗೆ ಬರಬೇಕು ಎಂದು ಒತ್ತಾಯಿಸಿದರು.

ಮನೆ ಬಾಗಿಲಿಗೆ ಕುಡಿಯುವ ನೀರು

ಅಳಗವಾಡಿ: ಗ್ರಾಮದಲ್ಲಿ ದಿನದಿಂದ ದಿನಕ್ಕೆ ಕುಡಿಯುವ ನೀರಿಗೆ ಹಾಹಾಕಾರ ಹೆಚ್ಚುತ್ತಿದೆ. ಇದನ್ನು ಮನಗಂಡ ಗ್ರಾಮದ ಯುವ ನಾಯಕ ಗ್ರಾಪಂ ಮಾಜಿ ಸದಸ್ಯ ಕುಮಾರ್ ಬೊಮ್ಮನ್ನವರ ಗ್ರಾಮದ ಯಾವುದೇ ಮನೆಯಿಂದ ಕರೆ ಬಂದರೆ ಸಾಕು ಟ್ರ್ಯಾಕ್ಟರ್ ಟ್ಯಾಂಕ್‌ಗೆ ನೀರು ತುಂಬಿಸಿ ಮನೆಗೆ ತಂದು ಹಾಕುತ್ತಾರೆ.



ಕಳೆದ ಮೂರು ವರ್ಷಗಳಿಂದ ಬೇಸಿಗೆ ಸಮಯದಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೆ ಮಾಡುವ ಮಾದರಿ ಕಾರ್ಯಕ್ಕೆ ಜನ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ . ಯಾವ ಆಸೆ ಇಟ್ಟುಕೊಳ್ಳದೆ ಗ್ರಾಮದ ಜನರಿಗೆ ಸದಾ ಸೇವೆ ಮಾಡುತ್ತಿರುವ ಕುಮಾರ್ ಅವರಿಗೆ ದೇವರು ಒಳಿತು ಮಾಡಲಿ ಎಂದು ವಿಠ್ಠಲ ಪಡಚೆ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ರಸಗೊಬ್ಬರದ ಕೊರತೆಯಿಲ್ಲ: ಎಚ್.ಡಿ.ಕೊಲೆಕರ

ಖಾನಾಪುರ: ಬೆಳಗಾವಿ ಜಿಲ್ಲೆಯಲ್ಲಿ ಅಗತ್ಯ ಪ್ರಮಾಣದಲ್ಲಿ ರಸಗೊಬ್ಬರ ದಾಸ್ತಾನಿದೆ. ಈ ವರ್ಷದ ಮುಂಗಾರು ಹಂಗಾಮು ಆರಂಭಕ್ಕೂ ಮೊದಲು ಎಲ್ಲ ವಿಧದ ಗೊಬ್ಬರ ವಿತರಿಸಲು ಕೃಷಿ ಇಲಾಖೆ ಬದ್ಧವಾಗಿದೆ. ರಸಗೊಬ್ಬರ ಸರಬರಾಜು ವಿಷಯದಲ್ಲಿ ರೈತಾಪಿ ಜನರು ಆತಂಕ ಹೊಂದುವ ಅಗತ್ಯವಿಲ್ಲ ಎಂದು ಜಂಟಿ ಕೃಷಿ ನಿರ್ದೇಶಕ ಎಚ್ .ಡಿ.ಕೊಲೆಕರ ಹೇಳಿದರು.

ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ನಡೆದ ತಾಲೂಕಿನ ರಸಗೊಬ್ಬರ ಮಾರಾಟಗಾರರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕೆಲವು ಕಡೆಗಳಲ್ಲಿ ಗೊಬ್ಬರ ಮಾರಾಟಗಾರರು ಕೆಲವೊಂದು ರಸಗೊಬ್ಬರಗಳ ಕೃತಕ ಅಭಾವ ಸೃಷ್ಟಿಸುತ್ತಿರುವ ಬಗ್ಗೆ ಮತ್ತು ಹೆಚ್ಚಿನ ಬೆಲೆಗೆ ಗೊಬ್ಬರ ಮಾರುತ್ತಿರುವ ಇಲಾಖೆಗೆ ಮಾಹಿತಿ ಲಭ್ಯವಾಗಿದೆ. ಖಾನಾಪುರ ತಾಲೂಕಿನಲ್ಲಿ ಈ ರೀತಿಯ ಸನ್ನಿವೇಶಗಳು ಕಂಡುಬಂದಲ್ಲಿ ಅಂತಹ ಗೊಬ್ಬರ ವಿತರಕರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.



- ಗೊಬ್ಬರ ಪಡೆಯಲು ಎಫ್ಐಡಿ ಕಡ್ಡಾಯ
- ಯೂರಿಯಾ ಅಕ್ರಮ ಮಾರಾಟಕ್ಕೆ ತಡೆ
- ಯೂರಿಯಾಗೆ ಪರ್ಯಾಯ ಗೊಬ್ಬರ ಬಳಕೆಗೆ ಸಲಹೆ
- ಗೊಬ್ಬರದ ಬಗ್ಗೆ ಆತಂಕ ಬೇಡ

ಉಪ ಕೃಷಿ ನಿರ್ದೇಶಕ ಸಲೀಂ ಸಂಗತ್ರಾಸ್ ಮಾತನಾಡಿ, ಈ ವರ್ಷ ರೈತರ ಫ್ರೂಟ್ಸ್ ಐಡಿ ಬಳಸಿ ಪ್ರತ್ಯೇಕ ತಂತ್ರಾಂಶದ ಮೂಲಕ ಯೂರಿಯಾ ವಿತರಣೆ ಮಾಹಿತಿಯನ್ನು ನಿರ್ವಹಣೆ ಮಾಡುವಂತೆ ಸರ್ಕಾರ ನಿರ್ದೇಶನ ನೀಡಿದೆ. ಯೂರಿಯಾ ಗೊಬ್ಬರದ ದುರ್ಬಳಕೆ ತಡೆಯಲು ಮತ್ತು ಇದರ ಸಮರ್ಪಕ ಹಂಚಿಕೆಗೆ ಈ ತಂತ್ರಾಂಶ ಸಂಗ್ರಹ ಸಹಕಾರಿ ಆಗಲಿದೆ ಎಂದು ವಿವರಿಸಿದರು.

ಸಹಾಯಕ ಕೃಷಿ ನಿರ್ದೇಶಕ ಸತೀಶ ಮಾವಿನಕೊಪ್ಪ ಮಾತನಾಡಿ, ಯೂರಿಯಾಗೆ ಪರ್ಯಾಯವಾಗಿ ನ್ಯಾನೋ ಯೂರಿಯಾ, ಅಮೋನಿಯಂ ಸಲ್ಫೇಟ್ ಬಳಕೆ, ಸಾವಯವ ಗೊಬ್ಬರಗಳ ಉಪಯೋಗಕ್ಕೆ ಉತ್ತೇಜನ ನೀಡಲಾಗುತ್ತಿದೆ ಎಂದರು.

ತರಕಾರಿ ಮತ್ತು ಹಣ್ಣಿನ ಬೆಳೆಗಳಲ್ಲಿ ಡಿಎಪಿ ರಸಗೊಬ್ಬರ ಬಳಕೆ ನಿಯಂತ್ರಿಸುವುದರೊಂದಿಗೆ ಸಮತೋಲಿತ ಪೋಷಕಾಂಶ ಬಳಕೆಗೆ ಒತ್ತು ನೀಡುವಂತೆ ಹಾಗೂ ಗ್ರಾಪಂ ಮಟ್ಟದಲ್ಲಿ 'ಧರತಿ ಮಾತಾ ಬಚಾವೋ' ಅಭಿಯಾನದ ಮೂಲಕ ರೈತರಿಗೆ ಸಮತೋಲಿತ ಗೊಬ್ಬರ ಬಳಕೆಯ ಕುರಿತು ಜಾಗೃತಿ ಮೂಡಿಸುವಂತೆ ಗೊಬ್ಬರ ಮಾರಾಟಗಾರರಿಗೆ ಸೂಚಿಸಲಾಯಿತು. ಸಹಾಯಕ ಕೃಷಿ ನಿರ್ದೇಶಕ (ವಿಷಯ ತಜ್ಞ) ಸಿ.ಐ ಹೂಗಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ತಾಲೂಕಿನ ರಸಗೊಬ್ಬರ ಮಾರಾಟಗಾರರು, ಕೃಷಿ ಅಧಿಕಾರಿಗಳು ಮತ್ತು ಸಿಬ್ಬಂದಿ ಸಭೆಯಲ್ಲಿ ಹಾಜರಿದ್ದರು.

> **ರೈಜೋಬಿಯಮ್, ಅಜೋಟೋಬ್ಯಾಕ್ಟರ್, ಅಜೋಸ್ಪಿರಿಲ್ಲಂ ಮತ್ತು ಪಿಎಸ್‌ಬಿ ಸೇರಿದಂತೆ ಸೂಕ್ಷ್ಮ ಜೀವಾಣು ಗೊಬ್ಬರಗಳ ಬಳಕೆಗೆ ಪ್ರೋತ್ಸಾಹ ನೀಡಲಾಗುತ್ತಿದೆ ಹಾಗೂ ರೈತರು ಸಾವಯವ ಕೃಷಿ ಹಾಗೂ ನೈಸರ್ಗಿಕ ಕೃಷಿಯಿಂದ ರಾಸಾಯಿನಿಕ ಗೊಬ್ಬರಗಳ ಮೇಲಿನ ಅವಲಂಬನೆ ತಪ್ಪಿಸಬಹುದಾಗಿದೆ.**
>
> **■ ಎಚ್.ಡಿ.ಕೊಲೆಕರ, ಜಂಟಿ ಕೃಷಿ ನಿರ್ದೇಶಕ**

ದಾಸೋಹದಿಂದ ಪುಣ್ಯ ಪ್ರಾಪ್ತಿ: ಶ್ರೀಗಳು

ಅಥಣಿ: ನಿಷ್ಠಾವಂತ ಕಾಯಕದ ಮೂಲಕ ಸಂಪತ್ತು ಸಂಪಾದಿಸಿರಿ, ನಿಸ್ವಾರ್ಥ ದಾಸೋಹದ ಮೂಲಕ ಸಮಾಜಕ್ಕೆ ಅರ್ಪಣೆ ಮಾಡಿರಿ. ಕಾಯಕ ಹಾಗೂ ದಾಸೋಹ ನಮ್ಮನ್ನು ಪುಣ್ಯದ ಮಾರ್ಗದ ಕಡೆಗೆ ತೆಗೆದುಕೊಂಡು ಹೋಗುವ ಸಾಧನಗಳಾಗಿವೆ ಎಂದು ಜನವಾಡ ಅಲ್ಲಮಪ್ರಭು ಆಶ್ರಮದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಸಾಯಿ ನಗರದ ಬಸವ ಉದ್ಯಾನ ವನದಲ್ಲಿ ಬಸವ ಜಯಂತಿ ಅಂಗವಾಗಿ ಜರಗುತ್ತಿರುವ ಶರಣರ ಜೀವನ ದರ್ಶನ ಪ್ರವಚನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿ, ದರು.

ಈ ಸಂದರ್ಭದಲ್ಲಿ ಅಭಿಯಂತರ ರಾಜಶೇಖರ ಟೋಪಿಗಿ, ನ್ಯಾಯವಾದಿ ಶಂಕರ ಮಟ್ಟೆಪ್ಪನವರ, ಬಸಪ್ಪ ಬಳವಾಡ, ಅಶೋಕ ಡಾಬಳ್ಳಿ, ಲಾಯಪ್ಪ ಮಾಳಶೆಟ್ಟಿ, ಮಚೇಂದ್ರ ಭೋಸಲೆ, ಸಿದರಾಯ ಪುಟಾಣಿ, ರಾಜು ಬಿಸುಗುಪ್ಪಿ, ಡಾ. ಸುರೇಶ ಬಂಡಗಾರ, ಯೋಗ ಶಿಕ್ಷಕ ಶ್ರೀಶೈಲ ಪಾಟೀಲ, ಭರತ ಕಾಂಬಳೆ, ಬಸಗೊಂಡ ಕಾರಜಣಗಿ, ತಬಲಾ ವಾದಕ ರಾವಸಾಹೇಬ ದೇಸಾಯಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಗ್ರಾಮಗಳಿಂದ ದೇಶದ ಉನ್ನತಿ: ಶಾಸಕ



ತೆಲಸಂಗ: ದೇಶದ ಉನ್ನತಿ ಗ್ರಾಮಗಳ ಅಭಿವೃದ್ಧಿಯಲ್ಲಿ ಅಡಗಿದೆ. ಅಧಿಕಾರಕ್ಕಾಗಿ ನಾನು ರಾಜಕಾರಣಕ್ಕೆ ಬಂದವನಲ್ಲ. ರೈತರ ಬದುಕಿನಲ್ಲಿ ಹೊಸ ಬೆಳಕು ಮೂಡಿಸುವ ಸೇವಾ ಸಂಕಲ್ಪದೊಂದಿಗೆ ಬಂದವನು ಎಂದು ಅಥಣಿ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಶುಕ್ರವಾರ ಸಮೀಪದ ಬನ್ನೂರು ಗ್ರಾಮದಲ್ಲಿ 1.10 ಕೋಟಿ ರೂ. ವೆಚ್ಚದ ಬನ್ನೂರು-ತೆಲಸಂಗ ಸಂಪರ್ಕ ರಸ್ತೆಯ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿ, ಒಂದು ರಾಷ್ಟ್ರ ಪ್ರಗತಿ ಹೊಂದಿದೆ ಎಂದು ಹೇಳಬೇಕಾದರೆ ಮೊದಲು ಗ್ರಾಮಗಳು ಅಭಿವೃದ್ಧಿ ಕಾಣಬೇಕು. ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆಯನ್ನು ಜಾರಿಗೆ ತಂದಿದ್ದೇನೆ. ಇದರ ಮೊದಲ ಹಂತ ಶೀಘ್ರದಲ್ಲೇ ಮುಕ್ತಾಯಗೊಳ್ಳಲಿದ್ದು, ರೈತರ ಮುಖದಲ್ಲಿ ಮಂದಹಾಸ ಮೂಡಲಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೋಘಸಿದ್ದ ಖೊಬ್ರಿ, ಎಇಇ ಮಲ್ಲಿಕಾರ್ಜುನ, ಮಗದುಮ, ಸ್ಥಳೀಯ ಹಿರಿಯರಾದ ನಾನಾಗೌಡ ಪಾಟೀಲ, ಅಶೋಕಗೌಡ ಪಾಟೀಲ, ಗುರುರಾಜ್ ಕಾಮನ್, ಗಿರಿಶ ಸಜ್ಜನ, ಗುತ್ತಿಗೇದಾರ ಬಾರಗೀರ, ಶಂಕರ್ ಕಾಮನ್, ಶ್ರೀಶೈಲ ಶೆಲ್ಲೆಪ್ಪಗೋಳ, ಗಿರೀಶ ಸಜ್ಜನ, ಯಂಕಣ್ಣ ಅಸ್ಕಿ, ಅಪ್ಪು ಜಮಾದಾರ, ಸೇರಿದಂತೆ ಅನೇಕ ಗಣ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಬಾಗಲಕೋಟೆ: ಬಾಗಲಕೋಟೆ ವಿಭಾಗ ವ್ಯಾಪ್ತಿಯ 110 ಕೆವಿ ಅಚನೂರ ವಿದ್ಯುತ್ ವಿತರಣಾ ಕೇಂದ್ರದಲ್ಲಿ 110 ಕೆವಿ ಬಸ್‌ಬಾರ ಜೋಡಣೆ ಕಾಮಗಾರಿ ಕೈಗೊಂಡ ನಿಮಿತ್ತ ಏ.18ರಂದು ಮಧ್ಯಾಹ್ನ 2 ರಿಂದ ಸಂಜೆ 4 ಗಂಟೆವರೆಗೆ 110 ಕೆವಿ ವಿದ್ಯುತ್ ಕೇಂದ್ರದಿಂದ ಸರಬರಾಜು ಆಗುವ ಎಫ್-1 ಜಡ್ರಾಮಕುಂಟಿ ಐಪಿ, ಎಫ್-2 ಬೆಣ್ಣೂರ ಐಪಿ, ಎಫ್-3 ಭಗವತಿ ಐಪಿ, ಎಫ್-4 ಮುಗಳೊಳ್ಳಿ ಎನ್‌ಜೆ.ವಾಯ್, ಎಫ್-5 ಮುಗಳೊಳ್ಳಿ ಐಪಿ, ಎಫ್-6 ಹಳ್ಳೂರ ಐಪಿ, ಎಫ್-7 ಹಳ್ಳೂರ ಎನ್‌ಜೆವಾಯ್, ಎಫ್-8 ಅಚನೂರ ಎನ್‌ಜೆವಾಯ್, ಎಫ್-9 ಸಂಗಾಪೂರ ಐಪಿ ಹಾಗೂ ಎಫ್-10 ಕಡ್ಲಿಮಟ್ಟಿ ಐಪಿ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಗ್ರಾಹಕರು ಸಹಕರಿಸುವಂತೆ ಬಾಗಲಕೋಟೆ ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಸಾಮೂಹಿಕ ವಿವಾಹದಲ್ಲಿ ಬಾಲ್ಯವಿವಾಹ ನಡೆದರೆ ಕ್ರಮ

ಬಾಗಲಕೋಟೆ: ಜಿಲ್ಲೆಯಲ್ಲಿ ಏ.20ರಂದು ಅಕ್ಷಯ ತೃತೀಯ ಹಿನ್ನಲೆಯಲ್ಲಿ ನಡೆಯುವ ಸಾಮೂಹಿಕ ವಿವಾಹ ಹಾಗೂ ವ್ಯಯಕ್ತಿಕ ವಿವಾಹ ಕಾರ್ಯಕ್ರಮಗಳಲ್ಲಿ ಬಾಲ್ಯವಿವಾಹ ಜರುಗಿದಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ-2006 ರನ್ವಯ ಶಿಕ್ಷಾರ್ಹ ಅಪರಾಧವಾಗಿರುತ್ತದೆ ಎಂದು ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ ಸಾರ್ವಜನಿಕರಲ್ಲಿ ಎಚ್ಚರಿಕೆ ನೀಡಿದೆ. ಜಿಲ್ಲೆಯ ದೇವಸ್ಥಾನಗಳು, ಕಲ್ಯಾಣ ಮಂಟಪಗಳು ಹಾಗೂ ಧಾರ್ಮಿಕ ಸ್ಥಳಗಳಲ್ಲಿ ಬಾಲ್ಯವಿವಾಹ ನಿಷೇಧ ಫಲಕವನ್ನು ಪ್ರದರ್ಶಿಸಬೇಕು. ಬಾಲ್ಯ ವಿವಾಹವನ್ನು ನಡೆಸುವ, ನಿರ್ದೇಶಿಸುವ ಅಥವಾ ಪ್ರಚೋದಿಸುವ ಯಾವುದೇ ವ್ಯಕ್ತಿ, ಕಾನೂನು ಪ್ರಕಾರ ಸಮಾನವಾಗಿ ಹೊಣೆಗಾರರಾಗುತ್ತಾರೆ. ಜಿಲ್ಲೆಯಾದ್ಯಂತ ವಿವಿಧ ಇಲಾಖೆಗಳಲ್ಲಿನ ಬಾಲ್ಯವಿವಾಹ ನಿಷೇಧ ಅಧಿಕಾರಿಗಳು ತೀವ್ರ ನಿಗಾ ವಹಿಸಿ ಪರಿಶೀಲನೆ ನಡೆಸುತ್ತಿದ್ದಾರೆ. ಬಾಲ್ಯವಿವಾಹ ನಡೆಯುತ್ತಿರುವ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ದೊರೆತಲ್ಲಿ ತಕ್ಷಣವೇ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅಥವಾ ತುರ್ತು ಸೇವೆ 112, ಹತ್ತಿರದ ಪೊಲೀಸ್ ಠಾಣೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ತಿಳಿಸುವಂತೆ ಮನವಿ ಮಾಡಿದೆ. ಮಾಹಿತಿ ನೀಡಿದವರ ಹೆಸರನ್ನು ಗೌಪ್ಯವಾಗಿಡಲಾಗುತ್ತದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಪ್ರಕಟಣೆಯಲ್ಲಿ ತಿಳಿಸಿದೆ.

ರಸ್ತೆ ಕಾಮಗಾರಿಗೆ ಅನುದಾನ



ಜಮಖಂಡಿ: ತಾಲೂಕಿನ ಆಲಗೂರ ಗ್ರಾಮದಲ್ಲಿನ ಜೈನ ಸಮಾಜ ಪಂಚಕಲ್ಯಾಣ ಮಹೋತ್ಸವದ ಅಂಗವಾಗಿ ಗ್ರಾಮ ಎರಡು ರಸ್ತೆಯ ಕಮಾಗಾರಿಗಾಗಿ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಮನವಿಯನ್ನು ಮಾಡಿಕೊಂಡಿದ್ದರು. ಅದರಂತೆ ಸಚಿವರು ಗ್ರಾಮದ ರಸ್ತೆಗಾಗಿ ಮನವಿ ಮಾಡಿಕೊಂಡಿದ್ದೆವು ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ತಿಳಿಸಿದ್ದಾರೆ. 2025-26ನೇ ಸಾಲಿನ ಲೆಕ್ಕ ಶೀರ್ಷಿಕೆಯಲ್ಲಿ ಗ್ರಾಮ ಎರಡು ರಸ್ತೆಗಳ ದುರಸ್ಥಿಗಾಗಿ 1.15 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಿದ್ದಾರೆ. ರಸ್ತೆಯ ಕಾಮಗಾರಿ ಕೆಆರ್‌ಐಡಿಎಲ್ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲು ಆದೇಶ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಅಪಘಾತ: ಪಾದಚಾರಿ ಸಾವು

ಕೆರೂರ: ಪಟ್ಟಣದ ಎ.ಆರ್.ಹಿರೇಮಠ ಹೈಸ್ಕೂಲ್ ಹತ್ತಿರ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೈಕ್ ಸವಾರ ಪಾದಾಚಾರಿಗೆ ಡಿಕ್ಕಿ ಹೊಡೆದ ಪರಿಣಾಮ ಅಫಘಾತ ಸಂಭವಿಸಿ ಪಾದಚಾರಿ ಮೃತಪಟ್ಟಿರುವ ಘಟನೆ ಗುರುವಾರ ರಾತ್ರಿ ನಡೆದಿದೆ. ಮೃತ ವ್ಯಕ್ತಿಯು ಪಟ್ಟಣದ ಬಸರಿಗೀಡ ಪೇಟೆ ನಿವಾಸಿ ಗಿರಿಮಲ್ಲಗೌಡ ಬಸನಗೌಡ ಗೌಡರ(64) ಎಂದು ಗುರುತಿಸಲಾಗಿದೆ. ವ್ಯಕ್ತಿಯು



ಗುರುವಾರ ಸಂಜೆ ವಾಕಿಂಗ್ ಹೋಗುತ್ತಿದ್ದಾಗ ಬಸ್ ನಿಲ್ದಾಣದಿಂದ ಹಿರೇಮಠ ಹೈಸ್ಕೂಲ್ ಕಡೆಗೆ ಜೋರಾಗಿ ಬಂದ ಬೈಕ್ ಸವಾರ ಸೂರಜ್(ಅಮನ್) ಚಿಕ್ಕೂರ ಪಾದಚಾರಿಗೆ ಡಿಕ್ಕಿ ಹೊಡಿದಿದ್ದಾನೆ. ಅಫಘಾತದಲ್ಲಿ ಪಾದಚಾರಿ ವ್ಯಕ್ತಿಗೆ ತಲೆಗೆ ಹಾಗೂ ಎಡಗಾಲಿಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಬಾಗಲಕೋಟೆ ಧನುಷ್ಯ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಕೆರೂರ ಪೊಲೀಸ್ ಠಾಣೆಯ ಪಿಎಸ್‌ಐ ಭೀಮಪ್ಪ ರಬಕವಿ, ಎಎಸ್‌ಐ ಎಂ.ಎ.ಘಂಟಿ ಭೇಟಿ ನೀಡಿ ಪ್ರಕರಣ ದಾಖಲಿಸಿದ್ದಾರೆ.



ಗುಳೇದಗುಡ್ಡ: ಸಮೀಪದ ಆಸಂಗಿ ಗ್ರಾಮದ ಮಾದಿಗ ಸಮುದಾಯದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ ಅವರ 135ನೇ ಜನ್ಮ ದಿನಾಚರಣೆಯ ಅಂಗವಾಗಿ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಜಯಂತಿ ಆಚರಿಸಲಾಯಿತು. ಸಮಾಜದ ಹಿರಿಯರಾದ ಬೈಲಪ್ಪ ಮದರ ಯಲ್ಲಪ್ಪ ಭೀಮಪ್ಪ ಮಾದರ, ಹಣಮಪ್ಪ ಮಾದರ, ಮುತ್ತು ಮಾದರ, ಪರಶುರಾಮ ಆಸಂಗಿ, ಮಲಕಪ್ಪ ಮಾದರ, ರಾಘವೇಂದ್ರ ಆಸಂಗಿ, ಪ್ರವೀಣ ಮಾದರ, ಆಸಂಗೆಪ್ಪ ಮಾದರ, ಸುರೇಶ ಮಾದರ ಹಾಗೂ ಡಿಎಸ್‌ಎಸ್ ಸಂಘದ ಸದಸ್ಯರಾದ ಪರಶುರಾಮ ಆಸಂಗಿ, ಮಹಾತೇಶ ಮಾದರ ಮತ್ತಿತರರು ಉಪಸ್ಥಿತರಿದ್ದರು.

ಸಮಾಜಕ್ಕೆ ಅಂಬೇಡ್ಕರ್ ಕೊಡುಗೆ ಅಪಾರ

ತೇರದಾಳ: ಡಾ.ಅಂಬೇಡ್ಕರ್ ಕೇವಲ ದಲಿತರಿಗಷ್ಟೇ ಅಲ್ಲ ಇಡೀ ಮಾನವ ಕುಲಕ್ಕೆ ಒಳಿತು ಮಾಡಿದರು. ಅವರು ಕೇವಲ ಸಂವಿಧಾನ ಬರೆದೋರು ಮತ್ತು ಅವರು ದಲಿತರು ಎನ್ನುವುದನ್ನು ಬಿಟ್ಟರೆ ಮತ್ತೊಂದು ಏನು ಗೊತ್ತಿಲ. ಆದರೆ ಅವರ ಜೀವನ ಇಡೀ ಮಾನವ ಕುಲದ ಒಳಿತಿಗಾಗಿ ಮೀಸಲಾಗಿತ್ತು ಎಂಬುದನ್ನು ನಾವೆಂದು ಮರೆಯಬಾರದು. ಪ್ರತಿ ಮನೆಯಲ್ಲೂ ಬಾಬಾಸಾಹೇಬರ ಜಯಂತಿ ಆಚರಿಸುವಂತಾಗಬೇಕು ಎಂದು ತಾಲೂಕು ಕಚೇರಿಯ ಶಿರಸ್ತೆದಾರ ಎಲ್.ಎನ್.ಮಿರಜಕರ ಹೇಳಿದರು. ಪಟ್ಟಣದ ತಾಲೂಕು ಕಚೇರಿಯಲ್ಲಿ ಡಾ.ಅಂಬೇಡ್ಕರವರ ಜಯಂತಿ ಆಚರಿಸಿ ಮಾತನಾಡಿದ ಅವರು, ನಾಲ್ಕು ಗೊಡೆಗಳ ಮಧ್ಯ ಗುಲಾಮಳಾಗಿದ್ದ ಮಹಿಳೆಯರು ಸಹಿತ ಪುರಷನಷ್ಟೆ ಸಮಾನಳು ಎಂದು ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲೂ ಹಕ್ಕುಗಳನ್ನು ನೀಡಿದರು. ಭಾರತಿಯ ಪ್ರತಿ ಮಹಿಳೆಯರಿಗೆ ಭತ್ಯೆ ಸಹಿತ ಪ್ರಸೂತಿ ರಜೆ ಜಾರಿಗೆ ತಂದು ಸ್ತ್ರೀಯರ ಘನತೆ ಎತ್ತಿಹಿಡಿದರು. ಪುರುಷ ಗುಲಾಮಗಿರಿಯಲ್ಲಿ ಬದುಕುತ್ತಿದ್ದ ಸ್ತ್ರೀಯರನ್ನು ಬಂಧನದಿಂದ ಮುಕ್ತಿಗೊಳಿಸಿದರು. ಅವರ ಈ ಉಪಕಾರವನ್ನು ಸ್ತ್ರೀಯರೆಂದು ಮರೆಯಬಾರದು. ಕಾರ್ಮಿಕರಿಗೆ ವಿಮೆ, ತುಟ್ಟಿಭತ್ಯೆ, ಪ್ರಾವಿಡಂಟ ಫಂಡ ಜಾರಿಗೆ ತಂದರು.ಪ್ರತಿಯೊಬ್ಬರಿಗೂ ಓಟಿನ ಹಕ್ಕನ್ನು ಕೊಟ್ಟವರು ಇವರೆ. ಅವರ ಈ ಋಣವನ್ನು ನಾವೆಂದು ತೀರಿಸಲು ಸಾಧ್ಯವಿಲ್ಲ ಎಂದರು. ಶ್ರದ್ಧಾ ಗುಡಕ್ಕನವರ ಬಾಬಾಸಾಹೇಬರ ಜೀವನ ಚರಿತ್ರೆಯ ಕುರಿತು ಇಂಗ್ಲಿಷ್‌ನಲ್ಲಿ ಭಾಷಣ ಮಾಡಿ ಎಲ್ಲರಿಂದ ಮೆಚ್ಚುಗೆ ಪಡೆದಳು.



ತೇರದಾಳ: ಪಟ್ಟಣದ ತಾಲೂಕು ಕಚೇರಿಯಲ್ಲಿ ಡಾ.ಅಂಬೇಡ್ಕರವರ ಜಯಂತಿ ಆಚರಿಸಲಾಯಿತು. ತಾಲೂಕು ಕಚೇರಿಯ ಶಿರಸ್ತೆದಾರ ಎಲ್.ಎನ್.ಮಿರಜಕರ, ಹಿರಿಯ ನಿಲಯ ಪಾಲಕ ವಿ.ಬಿ.ಹಿರೇಮಠ, ಪರಸಪ್ಪ ಮಾಸ್ತಿ, ಸುನೀಲ ಆಳಗೊಂಡ, ಸುಜಿತ ದಾನಿಗೊಂಡ, ನೇಮಣ್ಣ ಸಾವಂತನವರ, ದಯಾನಂದ ಕಾಳಿ. ಗೋಪಾಲ ಮಾಂಗ, ಆರ್.ಎ.ಕಮತರ, ಜಯಾ ಲಿಂಗದಳ್ಳಿ, ಸುಂದ್ರವ್ವ ಕಾಂಬಳೆ, ಸುರೇಶ ಹಟ್ಟಿನ್ನವರ ಸೇರಿದಂತೆ ಕಂದಾಯ ಇಲಾಖೆಯ ಸಿಬ್ಬಂದಿ ಹಾಗೂ ಸಹೋದರಿಯರು ಉಪಸ್ಥಿತರಿದ್ದರು.

ಸದ್ಯಕ್ಕಿಲ್ಲ ನೀರಿಗೆ ಬರ: ಜಾಗರೂಕತೆಯಲ್ಲಿ ತಾಲೂಕಾಡಳಿತ

ಕೈ ಹಿಡಿದ ಎಂವಿಎಸ್ ಯೋಜನೆ

ಮಲ್ಲಿಕಾರ್ಜುನ ತುಂಗಳ

ದಿಗಂತ ವಿಶೇಷ

ರಬಕವಿ-ಬನಹಟ್ಟಿ: ತಾಲೂಕಿನ 1 ನಗರಸಭೆ, 2 ಪುರಸಭೆ ಹಾಗೂ 17 ಗ್ರಾಮ ಪಂಚಾಯತಿ ಸೇರಿದಂತೆ ಒಟ್ಟು 30 ಗ್ರಾಮಗಳಲ್ಲಿ ಸದ್ಯಕ್ಕೆ ನೀರಿನ ಸಮಸ್ಯೆ ತಲೆದೋರಿಲ್ಲವೆಂಬುದು ನಿರಾಳತೆಗೆ ಕಾರಣವಾಗಿದೆ.

ಬಹುಗ್ರಾಮಕುಡಿಯುವನೀರಿನ ಯೋಜನೆ ತಾಲೂಕಿನಾದ್ಯಂತ ಸಂಪೂರ್ಣ ಯಶಸ್ವಿಯೊಂದಿಗೆ ನಡೆಯುತ್ತಿರುವದೇ ನೀರಿನ ಅಭಾವ ತಲೆದೋರಲು ಸಾಧ್ಯವಾಗಿಲ್ಲ.

ಎಲ್ಲ 17 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿಯೂ ಈ ಯೋಜನೆಯಿಂದಲೇ ಇಂದಿಗೂ ನೀರು ಸರಬರಾಜು ಆಗುತ್ತಿದೆ. ತೇರದಾಳ, ರಬಕವಿ-ಬನಹಟ್ಟಿ ಹಾಗೂ ಜಮಖಂಡಿ ತಾಲೂಕುಗಳಿಗೆ ಇಲ್ಲಿರುವ ಹಿಪ್ಪರಗಿ ಬ್ಯಾರೇಜ್ ಅಕ್ಷರಸಹ ಸಂಜೀವಿನಿಯಾಗಿದೆ. ಹಿಪ್ಪರಗಿ ಬ್ಯಾರೇಜ್‌ನಲ್ಲಿ ಕಳೆದ ತಿಂಗಳು ಭಾರಿ ಪ್ರಮಾಣದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿತ್ತು. ಕಳೆದ ತಿಂಗಳು ಮಹಾರಾಷ್ಟ್ರದ ರಾಜಾಪೂರ ಬ್ಯಾರೇಜ್‌ನಿಂದ ಅಲ್ಪ ಪ್ರಮಾಣದಲ್ಲಿ ನೀರು ಬಂದಿದ್ದರ ಕಾರಣದಿಂದಾಗಿ ಇದೀಗ ಮತ್ತೇ 2.15 ಟಿಎಂಸಿಯಷ್ಟು ನೀರು ಸಂಗ್ರಹವಾಗುವಲ್ಲಿ ಬ್ಯಾರೇಜ್ ಕಾರಣವಾಗಿದೆ.

ಬೆಳಗಾವಿ, ವಿಜಯಪುರ ಹಾಗು ಬಾಗಲಕೋಟೆ ಜಿಲ್ಲೆಗಳ ಸಂಜೀವನಿಯಾಗಿರುವ ಹಿಪ್ಪರಗಿ ಜಲಾಶಯದಲ್ಲಿನ ನೀರು ಬೇಸಿಗೆಯ ಬಾಷ್ಪೀಕರಣ ಹೊಡೆತಕ್ಕೆ ಸಂಗ್ರಹದಲ್ಲಿ ಭಾರಿ ಕುಸಿತಕ್ಕೆ



ಕಾರಣವಾಗಿದೆ. ಹಿಪ್ಪರಗಿ ಜಲಾಶಯದಿಂದ ದಿನಂಪ್ರತಿ 10 ರಿಂದ 13 ಸೆಮಿನಷ್ಟು ಅಂದರೆ 0.7 ಟಿಎಂಸಿಯಷ್ಟು ನೀರು ಖಾಲಿಯಾಗುತ್ತಿದೆ. ಇತ್ತ ಜನತೆ ಬಳಕೆಗೆ ಕಾರಣವಾದರೆ, ಮತ್ತೊಂದೆಡೆ ಬಿರುಬಿಸಿಲಿನ ತಾಪಕ್ಕೆ ನೀರು ತೀವ್ರ ಕಡಿಮೆಯಾಗಲು ಕಾರಣವಾಗಿದೆ.

ನೀರಿನ ಮಟ್ಟ ಕೆಲ ದಿನಗಳಲ್ಲಿ ದಿಢೀರ್ ಆಗಿ ಭಾರಿ ಕುಸಿತ ಕಂಡ ಹಿನ್ನಲೆಯಲ್ಲಿ ಜನರಿಗೆ ಬೇಸಿಗೆಯ ಆತಂಕ ಶುರುವಾಗಿದೆ. ನೀರಿನ ಸಮರ್ಪಕ ಬಳಕೆಯಿಂದ ಬೇಸಿಗೆ ದಿನಗಳನ್ನು ಸಂಪೂರ್ಣ ನಿರಾಯಾಸವಾಗಿ ಕಳೆಯಬಹುದಾಗಿದೆ.

ಎಲ್ಲ ಗ್ರಾಮಗಳಲ್ಲಿ ನೀರಿನ ಅಭಾವವಾಗದ ರೀತಿಯಲ್ಲಿ ಕೊಳವೆ ಬಾವಿಗಳನ್ನು ಸರ್ಕಾರಿ ಹಾಗೂ ರೈತರ ಪ್ರದೇಶದಲ್ಲಿರುವವೆಲ್ಲವನ್ನೂ ಗುರ್ತಿಸಿ ಮುಂದಿನ ದಿನಗಳಲ್ಲಿ ಬೇಸಿಗೆ ನೀಗಿಸಲು ತಾಲೂಕಾಡಳಿತ ಸಭೆಗಳ ಮೂಲಕ ಸರ್ವ ಸನ್ನದ್ಧವಾಗಿದೆ.

ಪ್ರತಿ ವರ್ಷ ಬೇಸಿಗೆ ಸಂದರ್ಭ ಹಿಪ್ಪರಗಿ ಜಲಾಶಯದಿಂದ ಮುಂಭಾಗಕ್ಕೆ ಅಂದಾಜು ಸುಮಾರು 0.5 ಟಿಎಂಸಿಯಷ್ಟು ನೀರನ್ನು ಜಮಖಂಡಿ ಭಾಗಕ್ಕೆ ಕುಡಿಯುವ ನೀರಿನ ಸಲುವಾಗಿ ಬಿಡುಗಡೆಗೊಳಿಸುತ್ತಿದ್ದರು. ಪ್ರಸಕ್ತ ವರ್ಷ ಗೇಟ್ ನಂ.22 ರಲ್ಲಿ ಆಗಿರುವ ಅವಘಡದಿಂದ 2 ಟಿಎಂಸಿಯಷ್ಟು ನೀರು ಪೋಲಾಗಿದ್ದು, ಇದೇ ಪರಿಣಾಮವಾಗಿ ಹಿಪ್ಪರಗಿ ಬ್ಯಾರೇಜ್‌ನ ಹಿನ್ನೀರನಲ್ಲಿರುವ ನಗರ, ಗ್ರಾಮ ಹಾಗೂ ರೈತ-ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ಉಂಟಾಗುವ ಸಾಧ್ಯತೆಗಳಿವೆ. ಬೇಸಿಗೆ ಮುಗಿಯುವವರೆಗೂ ಇದೇ ನೀರು ನಿಯಂತ್ರಣದಲ್ಲಿದ್ದರೆ ಮಾತ್ರ ಮೇ ಮಧ್ಯಂತವರೆಗೆ ಅನುಕೂಲವಾಗುವದು.

> **ಬಹುಗ್ರಾಮ ಕುಡಿಯುವ ನೀರಿನ ಯೋಜನೆ ನಿಜಕ್ಕೂ ಬೇಸಿಗೆಯಲ್ಲಿ ಯಶಸ್ವಿಯಾಗುತ್ತಿದೆ. ಹಿಪ್ಪರಗಿ ಬ್ಯಾರೇಜ್ ಮೂಲ ಆಧಾರವಾಗಿದ್ದು, ಬೇಸಿಗೆ ಸಂಪೂರ್ಣ ನೀಗಿಸುವ ಪ್ರಯತ್ನ ನಮ್ಮದಾಗಿದೆ.**
> ■ ಸಿದ್ದಪ್ಪ ಪಟ್ಟಿಹಾಳ, ಸಹಾಯಕ ಕಾರ್ಯ ನಿರ್ವಾಹಕರು ತಾಪಂ

> **ಸದ್ಯಕ್ಕೆ ಎಲ್ಲಿಯೂ ನೀರಿನ ಅಭಾವವಿಲ್ಲ, ಅಧಿಕಾರಿಗಳ ನೇತೃತ್ವದಲ್ಲಿ ಸಭೆಗಳನ್ನು ನಡೆಸಲಾಗಿದೆ. ಮೇ ಮಧ್ಯಂತರ ನಂತರ ನೀರಿನ ಕೊರತೆಯಾದರೆ ಖಾಸಗಿ ಹಾಗೂ ಸರ್ಕಾರಿ ಕೊಳವೆ ಬಾವಿಗಳೇ ಆಧಾರವಾಗಲಿವೆ.**
> ■ ಗಿರೀಶ ಸ್ವಾದಿ, ತಹಶೀಲ್ದಾರ್

ಪಕ್ಷ ವಿರೋಧಿ ಕೆಲಸ ಮಾಡಿದವರ ವಿರುದ್ಧ ಕ್ರಮ

ಬಾಗಲಕೋಟೆ: ಕಾಂಗ್ರೆಸ್ ಪಕ್ಷದದಲ್ಲಿದ್ದುಕೊಂಡು ಪಕ್ಷ ವಿರೋಧಿ ಚಟುವಟಿಕೆ ಮಾಡಿದವರ ಮೇಲೆ ನಿರ್ಧಾಕ್ಷಿಣ್ಯವಾಗಿ ಪಕ್ಷದ ಬೈಲಾ ಪ್ರಕಾರ ಕ್ರಮ ಕೈಗೊಂಡು ಪಕ್ಷದಿಂದ ಅವರನ್ನು ಅಮಾನತ್ತು ಮಾಡಲು ಇನ್ನೆರಡು ದಿನದಲ್ಲಿ ಕ್ರಮ ವಹಿಸಲಾಗುವುದು ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ ತಿಳಿಸಿದರು.

ನವನಗರದ ಪತ್ರಿಕಾಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಪಕ್ಷ ವಿರೋಧಿ ಚಟುವಟಿಕೆ ಮಾಡಿರುವ ಕುರಿತು ಮಾಹಿತಿ ಬಂದಿದೆ. ಇನ್ನೆರಡು ದಿನಗಳಲ್ಲಿ ಅವರ ವಿರುದ್ಧ ಪಕ್ಷದ ಚೌಕಟ್ಟಿನಲ್ಲಿ ಕ್ರಮ ಕೈಗೊಂಡು ಅವರನ್ನು ಪಕ್ಷದಿಂದ ಅಮಾನತು ಮಾಡುತ್ತೇವೆ ಎಂದರು.

ಉಪಚುನಾವಣೆಯ ಸಂದರ್ಭದಲ್ಲಿ ಪಕ್ಷದ ನಾಯಕರು, ಮುಖಂಡರ ಮಧ್ಯೆ ಇದ್ದ ಸಣ್ಣಪುಟ್ಟ ವ್ಯಾಜ್ಯಗಳನ್ನು ನಮ್ಮ ಪಕ್ಷದ ನಾಯಕರು ಪರಿಹರಿಸಿ ಸಂಘಟನೆಯಲ್ಲಿ ತೊಡಗಿಸುವ ಮೂಲಕ ಪಕ್ಷದ ಪರವಾಗಿ ಕೆಲಸ ಮಾಡಲು ತಿಳಿಸಿದ ಹಿನ್ನಲೆಯಲ್ಲಿ ಪಕ್ಷದ ಪರವಾಗಿ ಎಲ್ಲರೂ ಕೆಲಸ ಮಾಡಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವುಕುಮಾರ, ಸಚಿವ ಸತೀಶ ಜಾರಕಿಹೊಳಿ, ಆರ್.ಬಿ.ತಿಮ್ಮಾಪುರ, ಶಿವಾನಂದ ಪಾಟೀಲ, ಜಮೀರ ಅಹ್ಮದ, ಎಂ.ಬಿ.ಪಾಟೀಲ, ಜಿಲ್ಲೆಯ ಕಾಂಗ್ರೆಸ್ ಪಕ್ಷದ ಶಾಸಕರು, ಪಕ್ಕದ ಜಿಲ್ಲೆಯ ಶಾಸಕರು,ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಪಕ್ಷದ ನಾಯಕರು, ಬ್ಲಾಕ್ ಕಮೀಟಿ ಸದಸ್ಯರು, ಅಧ್ಯಕ್ಷರು, ಪದಾಧಿಕಾರಿಗಳು, ಮಹಿಳಾ ಘಟಕದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕರ್ತರು ಸೇರಿಕೊಂಡು ಉಪಚುನಾವಣೆಯಲ್ಲಿ ಕೆಲಸ ಮಾಡಿದ್ದಾರೆ. ಸಂಘಟನಾ ಶಕ್ತಿಯಿಂದ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವುದು ನಿಶ್ಚಿತ, ಮತದಾರರು ಕೂಡ ಪಕ್ಷದ ಪರ ಮತ ಚಲಾಯಿಸಿದ್ದು ಜಯ ನಮ್ಮದೇ ಎಂದರು.

ಕಾಂಗ್ರೆಸ್ ವಕ್ತಾರ ಚಂದ್ರಶೇಖರ ರಾಠೋಡ ಮಾತನಾಡಿ, ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪರವಾಗಿ ಎಲ್ಲ ಸಮುದಾಯದವರು ಬೆಂಬಲಿಸಿದ್ದಾರೆ ಅವರೆಲ್ಲರಿಗೂ ಪಕ್ಷದ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ನಾಗರಾಜ ಹದ್ಲಿ, ಅಕ್ಬರ ಮುಲ್ಲಾ, ರಾಜು ಮನ್ನಿಕೇರಿ, ಶ್ರೀನಿವಾಸ ಬಳ್ಳಾರಿ ಇದ್ದರು.



ಸಿಂಚನಾ ಹೊನ್ನಳ್ಳಿಗೆ ಶೇ.95 ಅಂಕ

ಬೀಳಗಿ: ತಾಲೂಕಿನ ಕುಂದರಗಿ ಗ್ರಾಮದ ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ಮಾತೋಶ್ರೀ ಬಸಲಿಂಗಮ್ಮ ಎನ್.ಖೋತ ಸಿಬಿಎಸ್‌ಇ ಶಾಲೆಯ 2025-2026ನೇ 10ನೇ ತರಗತಿ ಫಲಿತಾಂಶ 100ಕ್ಕೆ 100ರಷ್ಟು ಆಗಿದೆ. 17 ವಿದ್ಯಾರ್ಥಿಗಳಲ್ಲಿ 17 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿರುವರು. ವಿದ್ಯಾರ್ಥಿನಿ ಸಿಂಚನಾ ಶ್ರೀಕಾಂತ ಹೊನ್ನಳ್ಳಿ ಶೇ.95 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ, ಯಲ್ಲಯ್ಯ ವಡಿಯರ ಶೇ.85 ಅಂಕಗಳನ್ನು ಪಡೆದು ದ್ವಿತೀಯ, ದಯಾಸಾಗರಿ ಪಾಟೀಲ ಶೇ.80 ಅಂಕಗಳನ್ನು ಪಡೆದು ತೃತೀಯ ಸ್ಥಾನ ಪಡೆದಿರುವರು.



ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚರಂತಿಮಠದ ವೀರಸಂಗಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಚೇರ್ಮನ್ ಬಸವರಾಜ ಖೋತ, ಆಡಳಿತ ಮಂಡಳಿಯ ಸದಸ್ಯರು, ಎಂಬಿಎನ್‌ಕೆ ಶಾಲೆಯ ಚೇರ್ಮನ್ ಡಾ.ಎ.ಐ.ಅಕ್ಕಿ, ಪ್ರಾಚಾರ್ಯ ರಾಜೇಂದ್ರ ಕೆ. ಸಿಬ್ಬಂದಿ ಶುಭ ಹಾರೈಸಿದ್ದಾರೆ.

ಮರದಿಂದ ಕೆಳಗೆ ಬಿದ್ದ ಮರಿಮಂಗ ರಕ್ಷಣೆ

ಗುಳೇದಗುಡ್ಡ: ಪಟ್ಟಣದ ಜಿರ್ಲಿ ಓಣಿಯಲ್ಲಿನ ಮರದಿಂದ ಕೆಳಗೆ ಬಿದ್ದು, ತಾಯಿಂದ ಬೇರ್ಪಟ್ಟಿದ್ದ ಸುಮಾರು 15ದಿನದ ಮಂಗನ ಮರಿಯನ್ನು ಸಂಗಪ್ಪ ಸಂಗೊಂದಿ ಎಂಬ ಯುವಕ ರಕ್ಷಣೆ ಮಾಡಿ, ಅರಣ್ಯ ಇಲಾಖೆಗೆ ಗುರುವಾರ ಒಪ್ಪಿಸಿದ್ದಾರೆ.

ಮರದಿಂದ ಕೆಳಗೆ ಬಿದ್ದು ತಾಯಿಂದ ದೂರಾಗಿ ಚೀರಾಡುತ್ತಿದ್ದ ಮಂಗನ ಮರಿಯನ್ನು ನೋಡಿ ಸಾರ್ವಜನಿಕರು ಮರಿಯನ್ನು ರಕ್ಷಿಸಲು ಮುಂದಾದರು.

ಸಂಗಪ್ಪ ಸಂಗೊಂದಿ ಅವರು ಮಂಗನ ಮರಿಯನ್ನು ಹಿಡಿದು ಅದಕ್ಕೆ ಆರೈಕೆಮಾಡಿ, ಅರಣ್ಯ ಇಲಾಖೆಗೆ ನೀಡಿದರು. ಸದ್ಯ ಅರಣ್ಯ ಇಲಾಖೆ ಸಿಬ್ಬಂದಿ ಮರಿಯನ್ನು ಪಾಲನೆ ಮಾಡುತ್ತಿದ್ದರೆ ಎಂದು ರಣ್ಯ ಇಲಾಖೆ ಮಾಹಿತಿ ತಿಳಿಸಿತು.



> **ತಾಯಿಯಿಂದ ಬೇರ್ಪಟ್ಟ ಮಂಗ 15 ದಿನದ ಮರಿಯಾಗಿದ್ದು ಇದನ್ನು ನಮ್ಮ ಸಿಬ್ಬಂದಿಯೊಬ್ಬರು ಆರೈಕೆ ಮಾಡುತ್ತಿದ್ದಾರೆ. ಮಂಗನ ಮರಿ ತನ್ನಷ್ಟಕ್ಕೆ ತಾನು ಬದುಕವಂತಾದಾಗ ಅದನ್ನು ಸುರಕ್ಷಿತ ಜಾಗಕ್ಕೆ ಬಿಡಲಾಗುವುದು.**
> ■ ಆರ್.ಎಸ್.ಹೊಸಮನಿ, ಉಪವಲಯ ಅರಣ್ಯಾಧಿಕಾರಿ

ಏ.20ರಂದು ಅಹಿಂದ ಸಂಘಟನೆಗಳಿಂದ ನರಗುಂದ ಚಲೋ

ಬಾಗಲಕೋಟೆ: ಬಾಗಲಕೋಟೆಯ ಉಪಚುನಾವಣೆಯ ಸಂದರ್ಭದಲ್ಲಿ ನರಗುಂದ ಶಾಸಕ ಸಿ.ಸಿ.ಪಾಟೀಲ ಮುಸ್ಲಿಂ ಮತ್ತು ಕುರುಬ ಸಮುದಾಯದವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಹಿನ್ನಲೆಯಲ್ಲಿ ಅಹಿಂದ ಸಂಘಟನೆಗಳ ಒಕ್ಕೂಟದಿಂದ ಏ.20ರಂದು ನರಗುಂದ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕುರುಬ ಸಮುದಾಯದ ಸಂಘಟನೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಹಣಮಂತ ಅಪ್ಪಣ್ಣವರ ತಿಳಿಸಿದರು.

ನವನಗರದ ಪತ್ರಿಕಾಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನ ವಿರೋಧಿ, ಸಮಾಜ ವಿಭಜಿಸುವ ರಾಜಕೀಯವನ್ನು ಯಾವುದೇ ಕಾರಣಕ್ಕೂ ನಾವು ಸಹಿಸುವುದಿಲ್ಲ. ಬಸವ ಜಯಂತಿ ಪ್ರಯುಕ್ತ ಏ.20ರಂದು ನರಗುಂದ ಚಲೋ ಎಂಬ ಘೋಷಣೆಯೊಂದಿಗೆ ಸಂಜೆ 4ಗಂಟೆಗೆ ಸಿ.ಸಿ.ಪಾಟೀಲವರ ನಿವಾಸದ ಮುಂದೆ ಬಸವ ಜಯಂತಿಯನ್ನು ಆಚರಿಸಿ ನಂತರ ಕನಕದಾಸರ ಕೀರ್ತನೆಗಳ ಪುಸ್ತಕ ನೀಡಿ ಅವರಿಗೆ ಸಂವಿಧಾನ ಮೌಲ್ಯಗಳ ಮಹತ್ವ, ಸಾಮಾಜಿಕ ಸಮಾನತೆಯ ಪಾಠವನ್ನು ನೆನಪಿಸಲು ಮುಂದಾಗಿದ್ದೇವೆ ಎಂದು ಹೇಳಿದರು.



ಮುಸ್ಲಿಂ ಮತ್ತು ಕುರುಬ ಸಮುದಾಯ ಗುರಿಯಾಗಿಸಿಕೊಂಡು ಬಾಗಲಕೋಟೆ ಉಪಚುನಾವಣೆಯಲ್ಲಿ ಸಿ.ಸಿ.ಪಾಟೀಲರು ಸನ್ನೆ ಮೂಲಕ ಹೇಳಿಕೆ ನೀಡಿದ್ದು ಎರಡೂ ಸಮುದಾಯಕ್ಕೆ ನೋವು ತಂದಿದೆ ಎಂದರು.

ಅಹಿಂದ ಸಂಘಟನೆಗಳ ಒಕ್ಕೂಟದ ಮುಖಂಡ ಯಲ್ಲಪ್ಪ ಹೆಗಡೆ ಮಾತನಾಡಿ, ಮುಸ್ಲಿಂ ಮತ್ತು ಕುರುಬ ಸಮುದಾಯದ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಸಿ.ಸಿ.ಪಾಟೀಲರು ಇದುವರೆಗೆ ಎರಡೂ ಸಮುದಾಯದ ಕ್ಷಮೆ ಕೇಳಿಲ್ಲ, ವಿಷಾಧ ಕೂಡ ವ್ಯಕ್ತಪಡಿಸಿಲ್ಲ, ಹೀಗಾಗಿ ಅವರ ಮನೆಯೇ ಮುಂದೆ ಏ.20ರಂದು ಬಸವ ಜಯಂತಿ ಆಚರಿಸಿ ಸಂತರ ಪುಸ್ತಕ ನೀಡುವ ಮೂಲಕ ಸಂವಿಧಾನ ಮೌಲ್ಯ ಕುರಿತು ಪಾಠ ತಿಳಿಸಿಕೊಡಲಿದ್ದೇವೆ ಎಂದರು. ಶೇಖರ ಕಾಂಬಳೆ, ಧರ್ಮಣ್ಣ, ಬಸವರಾಜ ದಂಡಿನ್, ರಾಜಬಾಷ ಜಮಾದಾರ ಇದ್ದರು.

ನಿವಾಸಿಗಳ ಹಕ್ಕುಪತ್ರ, ಮೂಲ ಸೌಕರ್ಯಕ್ಕೆ ಆಗ್ರಹಿಸಿ ಧರಣಿ

ಜಮಖಂಡಿ: ತಾಲೂಕಿನ ಕೊನ್ನೂರು ಗ್ರಾಮದ ಮಡ್ಡಿ ಪ್ಲಾಟ್ ನಿವಾಸಿಗಳು ಹಕ್ಕುಪತ್ರ, ಮೂಲ ಸೌಕರ್ಯ ನೀಡಬೇಕೆಂದು ಆಗ್ರಹಿಸಿ ತಾಲೂಕು ಪಂಚಾಯತಿ ಕಚೇರಿ ಆವರಣದಲ್ಲಿ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

ಗದಗೆಪ್ಪ ಧಾರವಾಡ ಮಾತನಾಡಿ, ಕೊಣ್ಣೂರು ಮಡ್ಡಿ ಪ್ಲಾಟ ನಿವಾಸಿಗಳು ಇಲ್ಲಗಳ ಮಧ್ಯೆ ಜೀವನ ಸಾಗಿಸುತ್ತಿದ್ದಾರೆ ಕಳೆದ ಐದಾರು ವರ್ಷದಿಂದ ಧರಣಿ ಹೋರಾಟ ಸತ್ಯಾಗ್ರಹಳು ನಡೆದಿದ್ದರೂ ಸಹ ಯಾರೂ ನಮ್ಮತ್ತ ಗಮನ ಹರಿಸಿಲ್ಲ. ಹಕ್ಕು ಪತ್ರಕ್ಕಾಗಿ ಜಿಲ್ಲಾಡಳಿತ ತಾಲೂಕಾಡಲೀತಕ್ಕೂ ಸಹ ಮನವಿ ಮಾಡಿದ್ದೇವೆ ಆದರೆ ಯಾವುದೆ ಪ್ರಯೋಜನೆಯಾಗಿಲ್ಲ ಎಂದು ಆರೋಪಿಸಿದರು.

ಸುಮಾರು 30 ವರ್ಷಗಳಿಂದ ಹಕ್ಕುಪತ್ರ ಮತ್ತು ಸತ್ತು ಉತಾರಕ್ಕಾಗಿ ಹೋರಾಟ ನಡೆಯುತ್ತಿದ್ದು, 1992ರಿಂದ 1996ರ ಅವಧಿಯಲ್ಲಿ ಸುಮಾರು 120 ಹಕ್ಕುಪತ್ರಗಳನ್ನು ನೀಡಲಾಗಿದೆ. ಆದರೆ ಅವುಗಳಿಗೆ ಸಂಬಂಧಿಸಿದ ದಾಖಲೆಗಳು ಗ್ರಾಮ ಪಂಚಾಯತಿ ದಾಖಲೆಯಲ್ಲಿ ಇದ್ದರೂ, ಅಧಿಕಾರಿಗಳು ಅವನ್ನು ಅನಧಿಕೃತವೆಂದು ಹೇಳುತ್ತಿರುವುದು ಅನ್ಯಾಯ ಎಂದು



ಪ್ರತಿಭಟನಾಕಾರರು ದೂರಿದರು. ಮಡ್ಡಿ ಪ್ಲಾಟ್ ಪ್ರದೇಶವು ಸರ್ಕಾರದ ಜಾಗವಾಗಿದ್ದು, ತಾಲೂಕ್ ಪಂಚಾಯತಿ ಹೆಸರಿನಲ್ಲಿ 27 ಎಕರೆ ಪ್ರದೇಶವಿದೆ. ಇದರಲ್ಲಿ ಈಗಾಗಲೇ 8 ಎಕರೆ ಅಂಬೇಡ್ಕರ್ ವಸತಿ ಶಾಲೆಗೆ ಮೀಸಲಿಡಲಾಗಿದೆ. ಉಳಿದ 19 ಎಕರೆ ಜಾಗದಲ್ಲಿ ಯೋಗ್ಯ ಫಲಾನುಭವಿಗಳಿಗೆ ಮನೆ ನಿರ್ಮಿಸಿ ಹಕ್ಕುಪತ್ರ ನೀಡಬೇಕು ಹಾಗೂ ಈಗಾಗಲೇ ಹಕ್ಕುಪತ್ರ ಪಡೆದವರಿಗೆ ತಕ್ಷಣ ಸತ್ತು ಉತಾರ ನೀಡಬೇಕು ಎಂಬುದು ನಿವಾಸಿಗಳ ಮುಖ್ಯ ಬೇಡಿಕೆಯಾಗಿದೆ.

ಪ್ರತಿಭಟನೆ ಶಾಂತಮಯವಾಗಿ ನಡೆಯುತ್ತಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆ ಉಂಟಾಗದಂತೆ ಜಾಗ್ರತೆ ವಹಿಸಲಾಗಿದೆ. ಬೇಡಿಕೆ ಈಡೇರಿಸುವವರೆಗೆ ಹೋರಾಟ ಮುಂದುವರಿಸುವುದಾಗಿ ತಿಳಿಸಿದ್ದಾರೆ.

ಪ್ರಶಸ್ತಿ ನೀಡುವ ಕಾರ್ಯ ಶ್ಲಾಘನೀಯ



ಜಮಖಂಡಿ: ಎಲ್ಲ ಕ್ಷೇತ್ರದಲ್ಲಿ ಹಿಂಬಾಗಿಲಿನಿಂದ ಪ್ರಶಸ್ತಿ ಪಡೆಯುವ ಸಂಸ್ಕೃತಿ ಕಾಣಬಹುದು. ಇದರಿಂದ ಪ್ರಶಸ್ತಿ ಮೌಲ್ಯ ಕುಸಿಯುತ್ತವೆ. ಆದರೆ ಈ ಸಂಸ್ಕೃತಿ ಪತ್ರಿಕಾ ಕ್ಷೇತ್ರದಲ್ಲಿ ಇಲ್ಲ ಎನ್ನುವುದೇ ಸಮಾಧಾನಕರ ಸಂಗತಿ. ವ್ಯಕ್ತಿಗಳನ್ನು ಗುರುತಿಸಿ ಪ್ರಶಸ್ತಿ ನೀಡುವ ಕಾರ್ಯವನ್ನು ಪತ್ರಕರ್ತರ ಸಂಘ ಮಾಡುತ್ತಿದೆ ಎಂದು ಹಿರಿಯ ಪತ್ರಕರ್ತ ವಿಜಯ ಬಿರಾದಾರ ಹೇಳಿದರು.

ನಗರದ ಕಾನಿಪ ತಾಲೂಕು ಘಟಕದಿಂದ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2024ನೇ ಸಾಲಿನ ರಾಜ್ಯಮಟ್ಟದ ಪ್ರಶಸ್ತಿಗೆ ಭಾಜನರಾದ ವಿಜಯ ಬಿರಾದಾರ, ಮಹೇಶ ಮನ್ನಯ್ಯನವರಮಠ ಹಾಗೂ ವೆಂಕಟೇಶ ಗುಡೆಪ್ಪನವರ ಅವರ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವಿಕರಿಸಿ ಅವರು ಮಾತನಾಡಿದರು. ಪತ್ರಕರ್ತ ಮಹೇಶ ಮನ್ನಯ್ಯನವರಮಠ, ಮುಧೋಳ ಪತ್ರಕರ್ತ ವೆಂಕಟೇಶ ಗುಡೆಪ್ಪನವರ ಸನ್ಮಾನ ಸ್ವಿಕರಿಸಿ ಮಾತನಾಡಿದರು. ಅಧ್ಯಕ್ಷ ಲಕ್ಷ್ಮೀಕಾಂತ ದುದಗಿ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷ ಮೋಹನ ಸಾವಂತ ಇದ್ದರು. ಜಿಲ್ಲಾ ಸಮಿತಿ ಸದಸ್ಯ ಮಹಮ್ಮದ. ನದಾಫ್ ಮಾತನಾಡಿದರು. ಪತ್ರಕರ್ತ ಡಾ.ಮಲ್ಲಿಕಾರ್ಜುನಯ್ಯ ಮಠ, ಸಂಘದ ಗೌರವಾಧ್ಯಕ್ಷ ಪೀರ ಕೋಡತಿ, ಜಿಲ್ಲಾ ಸಮೀತಿ ಸದಸ್ಯ ಗೋಪಾಲ ಪಾಟೀಲ, ಆರೀಪ ಪೆಂಡಾರಿ, ರಫೀಕ ಮಾರಕಪನಳ್ಳಿ, ಅಯ್ಯೂಬ ಕೊರತಿ, ಮುಖಂಡ ಅಬುಬಕರ ಕುಡಚಿ ಇದ್ದರು.

ಡಾ.ಅಂಬೇಡ್ಕರ್ ಜಯಂತಿ: ರಸಮಂಜರಿ

ಬಾದಾಮಿ: ಡಾ:ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯುತ್ಸವದ ನಿಮಿತ್ತ ಮ್ಯೂಸಿಕ್ ಮೈಲಾರಿ ತಂಡದ ರಸಮಂಜರಿ ಕಾರ್ಯಕ್ರಮ ನಡೆಯಿತು.

ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರು ಬರೆದ ಸಂವಿಧಾನದಿಂದ ಇಂದು ಎಲ್ಲ ಸಮಾಜದವರು ಸೌಲಭ್ಯ ಪಡೆಯುತ್ತಿದ್ದಾರೆ. ಎಸ್‌ಸಿ, ಎಸ್‌ಟಿ, ಒಬಿಸಿ ಸೇರಿದಂತೆ ಎಲ್ಲರೂ ಅವರ ತತ್ವಾದರ್ಶ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಶಾಂತಗೌಡ ಪಾಟೀಲ, ಜೆಡಿಎಸ್ ಜಿಲ್ಲಾಧ್ಯಕ್ಷ ಹನುಮಂತ ಮಾವಿನಮರ ಮಾತನಾಡಿದರು. ಭೀಮವಾದ ದಲಿತ ಸಂಘರ್ಷ ಸಮಿತಿ ರಾಜ್ಯಾಧ್ಯಕ್ಷ ಯಮನಪ್ಪ ಗುಣದಾಳ, ರುದ್ರೇಶ ಪ.ಹುಣಸಿಗಿಡದ, ಲಾವ ಹಿರೇಮನಿ, ಬಸವರಾಜ ಪಾತ್ರೋಟಿ, ಯಲ್ಲಪ್ಪ ಪಾತ್ರೋಟಿ ಹುಲಗಪ್ಪ ಭೋವಿ, ರಕ್ಷಣಾ ವೇದಿಕೆ ಜಿಲ್ಲಾ ಕಾರ್ಯದರ್ಶಿ ಸ್ನೇಕ್ ಮಾಹಂತೇಶ್, ಶಹಜಿ ಪವಾರ ಶ್ರೀರಾಮ ಸೇನೆ ರಾಜ್ಯ ಕಾರ್ಯದರ್ಶಿ ಹೇಮಂತ ದೊಡಮನಿ, ಬಂಜಾರ ಸಮಾಜದ ಮುಖಂಡರು ಸೋಮಪ್ಪ ದೊಡಮನಿ, ಬಸವರಾಜ ಕೆರೂರ, ಕನಕಪ್ಪ ಮಾದರ ಸೇರಿದಂತೆ ವಿವಿಧ ರೀತಿಯ ದಲಿತ ಪರ ಸಂಘಟನೆಯ ನಾಯಕರು ಪದಾಧಿಕಾರಿಗಳು ಪಾಲ್ಗೊಂಡಿದ್ದರು.



ಕಾಮಗಾರಿ ಕಳಪೆ: ಸರಿಪಡಿಸಲು ಆಗ್ರಹ

ಬಾದಾಮಿ: ಚಾಲುಕ್ಯರ ನಾಡಿಗೆ ಕೇಂದ್ರ ಸರ್ಕಾರದಿಂದ ಪಾರಂಪರಿಕ ಯೋಜನೆಯಲ್ಲಿ 2014-15ನೇ ಸಾಲಿನಲ್ಲಿ ಮಂಜೂರಾದ ರೂ.22.26 ಕೋಟಿ ವೆಚ್ಚದಲ್ಲಿ ಆರು ಸ್ವಾಗತ ಕಮಾನುಗಳಿಗೆ ರೂ.3.38 ಕೋಟಿ ಅನುದಾನ ಮಂಜೂರಾಗಿದ್ದು, ಕಾಮಗಾರಿ ಕಳಪೆಯಾಗಿದ್ದು ಸರಿಪಡಿಸಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ. ಹೃದಯ ಯೋಜನೆಯಡಿ ಅ.2018ರಲ್ಲಿಯೇ ಕೈಗೊಳ್ಳಲಾಗಿದೆ. ಹೃದಯ ಸ್ವಾಗತ ಕಮಾನುಗಳು ಸಂಪೂರ್ಣ ಕಳಪೆ ಕಾಮಗಾರಿಯಾಗಿದೆ. ಗುತ್ತಿಗೆದಾರರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದಾರೆ.



ಹೃದಯ ಯೋಜನೆಯಲ್ಲಿ ಕೇಂದ್ರದ ದೆಹಲಿ ಮೂಲದ ಯೋಗಿ ಇಲಾಖೆಯಿಂದ ಪ್ರವಾಸಿ ತಾಣದ ರಸ್ತೆ ಮತ್ತು ಸ್ಮಾರಕಗಳ ಸಮೀಪ 193 ಸೂಚನಾ ಫಲಕಗಳಿಗೆ ರೂ.1.39 ಕೋಟಿ, ಪುಲಿಕೇಶಿ ಮತ್ತು ಬಸವೇಶ್ವರ ಎರಡೂ ವೃತ್ತಗಳ ಅಭಿವೃದ್ಧಿಗೆ ರೂ.41.91 ಲಕ್ಷ, ಆರು ಪಾರಂಪರಿಕ ಪ್ರವೇಶ ದ್ವಾರ (ಕಮಾನು) ಕ್ಕೆ ರೂ.3.38 ಕೋಟಿ, ಕಮಾನುಗಳ ಸಿಮೆಂಟ್ ಕಾಮಗಾರಿ ಮತ್ತು ಹೈಟೆಕ್ ಶೌಚಾಲಯಕ್ಕೆ ರೂ.1.33 ಕೋಟಿ ಸೇರಿದಂತೆ ಒಟ್ಟು ರೂ.6.53 ಕೋಟಿ ವೆಚ್ಚದಲ್ಲಿ ಕಾಮಗಾರಿ ದೆಹಲಿಯ ಸೃಷ್ಟಿ ಮತ್ತು ಕುನಾಲ್ ಎಂ.ಪಿ. ಗುತ್ತಿಗೆದಾರರಿಂದ ಮಾಡಿಸಲಾಗಿದೆ.

ಸ್ವಾಗತ ಕಮಾನುಗಳು ಕಾಮಗಾರಿ ಕಳಪೆಯಾಗಿದ್ದು, ಯಾರಾದರೂ ತಲೆಯ ಮೇಲೆ ಕಲ್ಲು ಬಿದ್ದರೆ ಏನೆ ಅನಾಹುತವಾಗುವ ಮೊದಲು ಕಮಾನುಗಳನ್ನು ದುರಸ್ಥಿ ಮಾಡಿಸಬೇಕು ಎಂದು ಆಗ್ರಹಿಸಿದ್ದಾರೆ.

ಸಂವಿಧಾನ ಸರ್ವೋಚ್ಚ ಕಾನೂನು: ವನಕಿ



ಕಮತಗಿ: ಭಾರತದ ಸಂವಿಧಾನವು ದೇಶದ ಸರ್ವೋಚ್ಚ ಕಾನೂನು. ಡಾ.ಅಂಬೇಡ್ಕರವರು ಕಷ್ಟಗಳನ್ನು ಅನುಭವಿಸಿ ಭಾರತಕ್ಕೆ ಬೃಹತ್ ಸಂವಿದಾನ ನೀಡಿದರು ಎಂದು ಶಂಕರ್ ವನಕಿ ಹೇಳಿದರು.

ಹುಚ್ಚೇಶ್ವರ ಗ್ರಾಮೀಣ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ವತಿಯಿಂದ ಸಮೀಪದ ಮುಳ್ಳೂರು ಗ್ರಾಮದಲ್ಲಿ ನಡೆದ ಎನ್‌ಎಸ್‌ಎಸ್ ಘಟಕದ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಜಾಪ್ರಭುತ್ವದ ಮೂಲಭೂತ ಹಕ್ಕುಗಳ ರಕ್ಷಣೆ, ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಅಧಿಕಾರಗಳ ನಿರ್ವಹಣೆ ಮತ್ತು ನಾಗರಿಕರ ಸಾಮಾಜಿಕ-ಆರ್ಥಿಕ ನ್ಯಾಯ ಖಾತರಿಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ಹೇಳಿದರು.

ಹುನಗುಂದದ ಎಸ್‌ವಿಎಂ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕ ಡಾ. ಪರಶುರಾಮ ಹಾದಿಮನಿ ಮಾತನಾಡಿ, ದಲಿತರ ಮಹಿಳೆಯರ ಮಕ್ಕಳಿಗೆ ನಡೆಯುತ್ತಿದ್ದ ಅನ್ಯಾಯದ ವಿರುದ್ಧ ಮತ್ತು ಅಸ್ಪೃಶ್ಯತೆ ವಿರುದ್ಧ ಹೋರಾಡಿ ಭಾರತಕ್ಕೆ ಬೃಹತ್ ಸಂವಿದಾನ ರಚಿಸಿದ ಪುಣ್ಯಾತ್ಮ ಎಂದು ಹೇಳಿದರು.

ಸಂಸ್ಥೆಯ ಪ್ರಾಚಾರ್ಯ ಡಾ.ಪಿ.ಎಂ.ಗುರುವಿನಮಠ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಎಂ.ಎಸ್.ಶೆಟ್ಟರ, ಮುಖ್ಯ ಶಿಕ್ಷಕ ಬಸವರಾಜ ನಿಡಗುಂದಿ, ಮಹಾಂತೇಶ ಕೆಲೂರ, ಯಮನಪ್ಪ ನಕ್ಕರಗುಂದಿ, ಜುಮ್ಮಣ್ಣ ಕುರಿ ಸೇರಿ ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಕಿರುಸುದ್ದಿ

ಇಂದು ಪೂರ್ವಭಾವಿ ಸಭೆ

ವಿಜಯಪುರ: ಡಾ.ರಾಜ್‌ಕುಮಾರ್ ಅವರ ಜನ್ಮದಿನಾಚರಣೆ ಏ.24ರಂದು ಜಿಲ್ಲಾಡಳಿತ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಹಯೋಗದಲ್ಲಿ ಆಚರಿಸುವ ಹಿನ್ನೆಲೆ ಪೂರ್ವಭಾವಿ ಸಿದ್ಧತಾ ಸಭೆಯನ್ನು ಅಪರ ಜಿಲ್ಲಾಧಿಕಾರಿಗಳ ಇವರ ಅಧ್ಯಕ್ಷತೆಯಲ್ಲಿ ಏ.18ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಒಂದನೇ ಮಹಡಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಈ ಸಭೆಗೆ ಅಧಿಕಾರಿಗಳು, ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಆಗಮಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ತಿಳಿಸಿದೆ.

ಇಂದಿನಿಂದ ಬಸವೇಶ್ವರ ಜಯಂತ್ಯುತ್ಸವ

ಬಸವನಬಾಗೇವಾಡಿ: ಬಸವೇಶ್ವರ ಜಯಂತ್ಯುತ್ಸವ ನಿಮಿತ್ತ ಏ.18ರಿಂದ 20ರವರೆಗೆ ಮೂಲನಂದೀಶ್ವರನ (ಬಸವೇಶ್ವರ)ದೇವಸ್ಥಾನದ ಆವರಣದಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಏ.18ರಂದು ಬೆಳಗ್ಗೆ 5.30ಕ್ಕೆ ಶಿವಭಜನೆ ಪ್ರಾರಂಭ. ಸಂಜೆ ಸಂಜೆ 5.30ರಿಂದ ರಾತ್ರಿ 10.30ರ ವರೆಗೆ ಸ್ಥಳೀಯ ಕಲಾವಿದರಿಂದ ಉಪನ್ಯಾಸ, ವಚನಗಾಯನ, ವಚನ ನೃತ್ಯ ರೂಪಕಗಳು ನಡೆಯಲಿವೆ. ಏ.19ರಂದು ಸಂಜೆ 5.30ರಿಂದ ರಾತ್ರಿ 10.30ರ ವರೆಗೆ ವಚನ ಸಂಗೀತ, ಉಪನ್ಯಾಸ, ವಚನ ನೃತ್ಯ ರೂಪಕ, ರಾತ್ರಿ10.30ಕ್ಕೆ ಪ್ರಸಿದ್ಧ ಕಲಾವಿದರಿಂದ ಭಜನಾ ಪದಗಳು, ಏ.20ರಂದು ಬೆಳಗ್ಗೆ 7.30ಕ್ಕೆ ಷಟಸ್ಥಲ ಧ್ವಜಾರೋಹಣ, ಬೆಳಗ್ಗೆ 9.30ಕ್ಕೆ ಬಸವೇಶ್ವರ ಭಾವಚಿತ್ರದ ಭವ್ಯ ಮೆರವಣಿಗೆ ದೇವಸ್ಥಾನದಿಂದ ಬಸವ ಜನ್ಮಸ್ಮಾರಕದವರೆಗೆ, ಬೆಳಗ್ಗೆ 10.30ಕ್ಕೆ ಬಸವ ಜನ್ಮಸ್ಮಾರಕದಲ್ಲಿ ಬಸವೇಶ್ವರರ ತೊಟ್ಟಿಲೋತ್ಸವ, ಮಧ್ಯಾಹ್ನ 12.30ಕ್ಕೆ ಮಹಾಪ್ರಸಾದ, ಸಂಜೆ 5ಗಂಟೆಗೆ ವಚನ ಚಿಂತನ, ರಾತ್ರಿ 10.30ಕ್ಕೆ ಸಕಲ ಮಂಗಳ ವಾದ್ಯ ವೈಭವಗಳೊಂದಿಗೆ ಅಲಂಕೃತ ಬಸವೇಶ್ವರರ ಪಲ್ಲಕ್ಕಿ ಹಾಗೂ ಬಸವೇಶ್ವರರ ಭಾವಚಿತ್ರ ಭವ್ಯ ಮೆರವಣಿಗೆ ನಡೆಯಲಿದೆ ಎಂದು ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ಮಂಡಳಿ ತಿಳಿಸಿದೆ.

ಲಕ್ಷ್ಮೀ ರಾಜ್ಯಕ್ಕೆ 9ನೇ ಸ್ಥಾನ



ಝಳಕಿ: ಇಂಡಿ ತಾಲೂಕಿನ ಜೇವೂರ ಗ್ರಾಮದ ರೈತರಾದ ಗೋಪಾಲ ಬಿರಾದಾರ ಅವರ ಸುಪುತ್ರಿ 2025-26ನೇ ಸಾಲಿನ ಪಿಯುಸಿ ಪರೀಕ್ಷೆಯಲ್ಲಿ (590) 98.33% ಅಂಕ ಗಳಿಸಿ, ರಾಜ್ಯಕ್ಕೆ 9ನೇ ಸ್ಥಾನ ಪಡೆದಿದ್ದು, ಇಂಡಿ ತಾಲೂಕು ಕರ್ನಾಟಕ ರಕ್ಷಣಾ ವೇದಿಕೆ ಉಪಾಧ್ಯಕ್ಷರು ಅಭಿನಂದನೆ ಸಲ್ಲಿಸಿದರು.

ಶಿವಗಂಗಾಗೆ ಪಿಎಚ್‌ಡಿ



ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಶಿವಗಂಗಾ ಅವರು ಸಲ್ಲಿಸಿದ್ದ ?ಅಸೆಸ್‌ಮೆಂಟ್ ಆಫ್ ಲೈಬ್ರರಿ ಆ್ಯಂಕ್ಸೆಟಿ ಅಮಂಗ್ ಡಿಫರಂಟ್ ಕೆಟಗರೀಸ್ ಆಫ್ ಯುಸರ್ಸ: ಎ ಕಂಪ್ಯಾರೇಟಿವ್ ಅನಾಲಿಸಸ್ ಆಫ್ ಸೆಲೆಕ್ಟಡ್ ಯುನಿವರ್ಸಿಟಿ ಇನ್ ಕರ್ನಾಟಕ ಸ್ಟೇಟ್ ಕುರಿತು ಸಲ್ಲಿಸಿದ್ದ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ಶಿವಗಂಗಾ ಅವರು ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದ ಪ್ರೊ.ಪಿ.ಜಿ ತಡಸದ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ಶಿವಗಂಗಾ ಅವರನ್ನು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್ ಲಕ್ಕಣ್ಣನವರ ಅಭಿನಂದಿಸಿದ್ದಾರೆ.

ನಿಧನಸುದ್ದಿ

ನಿಂಗನಗೌಡ ಪಾಟೀಲ



ದೇವರ ಹಿಪ್ಪರಗಿ: ಪಟ್ಟಣದ ಪಂಚಮಸಾಲಿ ಸಮುದಾಯದ ಹಿರಿಯರಾದ ನಿಂಗನಗೌಡ ಅಪ್ಪಣ್ಣಗೌಡ ಪಾಟೀಲ(ಹತ್ತರಕಿಹಾಳ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಗಂಡು ಹಾಗೂ ಒಬ್ಬರು ಹೆಣ್ಣು ಮಗಳು ಸೇರಿದಂತೆ ಅಪಾರ ಬಂಧುಬಳಗ ಇದ್ದಾರೆ.

ಸಂಗಪ್ಪ ಸೊನ್ನದ



ವಿಜಯಪುರ: ಜಿಲ್ಲೆಯ ದೇವರಹಿಪ್ಪರಗಿ ತಾಲೂಕಿನ ಹಂಚಲಿ ಗ್ರಾಮದ ನಿವೃತ್ತ ಶಿಕ್ಷಕ ಸಂಗಪ್ಪ ಶರಣಪ್ಪ ಸೊನ್ನದ (84) ನಿಧನರಾದರು. ಮೃತರು ಪತ್ರಕರ್ತ ಚಂದ್ರಕಾಂತ ಸೊನ್ನದ ಸೇರಿ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗ ಇದ್ದಾರೆ.



ಮುದ್ದೇಬಿಹಾಳ: ತಾಲೂಕಿನ ನಾಗರಬೆಟ್ಟದ ಆಕ್ಸಫರ್ಡ್ ಪಾಟೀಲ ಪಿಯು ವಿದ್ಯಾರ್ಥಿಗಳಿಗೆ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಕರ್ನಾಟಕದ 3 ರಾಂಕ್‌ಗಳನ್ನು ಬಾಚಿದ ಬಸವನಬಾಗೇವಾಡಿಯ ಲಕ್ಷ್ಮೀ ಅಡಿಗಿಮನಿ, ಕೌಜಲಗಿಯ ಭಾಗ್ಯ ಹೊಸಮನಿ, ಮುಧೋಳದ, ಸಂಜನಾ ದಾಸಗೌಡರ (ಕ್ರಮವಾಗಿ 6,7,8 ನೇರ್‍ಯಾಂಕ್) ಅವರಿಗೆ ಜಿಲ್ಲಾದಿಕಾರಿ ಡಾ.ಆನಂದ ಕೆ. ಅವರಿಂದ ಸನ್ಮಾನ ಮಾಡಲಾಯಿತು. ಸಂಸ್ಥೆಯ ಆಡಳಿತ ಅಧಿಕಾರಿ ಅಮಿತ್ ಗೌಡ ಪಾಟೀಲ್ ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

ಇಂಡಿ: ಕರ್ನಾಟಕ ರಾಜ್ಯ ಇಂಡಿ ತಾಲೂಕಿನ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲೆ ಹೊರಗುತ್ತಿಗೆ ನೌಕರರ ಸಂಘದಿಂದ ತಮ್ಮ ವಿವಿಧ ಬೇಡಿಕೆ ಆಗ್ರಹಿಸಿ ಆಡಳಿತಸೌಧದಲ್ಲಿ ಪ್ರತಿಭಟನೆ ನಡೆಸಿದರು. ಇಂಡಿ ತಾಲೂಕು ಹಾಸ್ಟೇಲ್ ಮತ್ತು ವಸತಿ ಶಾಲೆ ಹೊರ ಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ದಾನಮ್ಮ ಹೂಗಾರ ಮಾತನಾಡಿ, ಹಿಂದುಳಿದ ವರ್ಗಗಳ ಇಲಾಖೆ ಸಮಾಜ ಕಲ್ಯಾಣ ಇಲಾಖೆ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಪರಿಶಿಷ್ಟ ವರ್ಗಗಳ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಹಾಸ್ಟೆಲ ಹಾಗೂ ವಸತಿ ನಿಲಯಗಳಲ್ಲಿ ಕೆಲಸ ಮಾಡುವ ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತಾಗಾರರು ಕಾವಲುಗಾರರು ಜವಾನರು ನರ್ಸಗಳು ಕಂಪ್ಯೂಟರ ಅಪರೇಟರಗಳು ಡಾಟಾ ಎಂಟ್ರಿ ಅಪರೇಟರಗಳು, ಸುಮಾರು ಹದಿನೈದು ವರ್ಷದಿಂದ ಇಪ್ಪತ್ತು ವರ್ಷಗಳವರೆಗೆ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕನಿಷ್ಠ ವೇತನ ಜಾರಿ ಆಗಬೇಕು ಎಲ್ಲಾ ಹೊರಗುತ್ತಿಗೆ ನೌಕರರಿಗೂ ಸೇವಾ ಭದ್ರತೆ ನೀಡಿ ಖಾಯಂ ಮಾಡಬೇಕು. ಏಪ್ರಿಲ್ ಮತ್ತು ಮೇ ತಿಂಗಳ ಅವಧಿಯಲ್ಲಿ ಹಾಸ್ಟೆಲ ನೌಕರರಿಗೆ ರಜಾ ಸಹಿತ ವೇತನ ನೀಡಬೇಕು ಎಂದರು. ತಾಲುಕು ಪ್ರಧಾನ ಕಾರ್ಯದರ್ಶಿ ರಜನಿ ಬನಸೋಡೆ, ಕಲಾವತಿ ಕಾಳೆ, ಯಲ್ಲಮ್ಮ ಮದಭಾವಿ, ಶಾರದಾ ಬಿರಾದಾರ, ಪ್ರೇಮಾವತಿ ಭಜಂತ್ರಿ, ರೇಣುಕಾ ಬಾರಾಸೆ, ಶಶಿಕಲಾ ಕಮತಿ, ಗೀರಿಜಾ ಮದಭಾವಿ, ಸುಮಂಗಲಾ ಕುಂಬಾರುವಮ್ಮ ಕಾಪಸೆ, ಶೋಭಾ ಬಾರಿಕಾಯಿ, ಪ್ರಕಾಶ ದೇಸಾಯಿ, ದಾವಲಸಾಬ ಕಸ್ಸಾಬ ಮತ್ತಿತರಿದ್ದರು.



ಇಂಡಿ: ಕರ್ನಾಟಕ ರಾಜ್ಯ ಇಂಡಿ ತಾಲೂಕಿನ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲೆ ಹೊರಗುತ್ತಿಗೆ ನೌಕರರ ಸಂಘದಿಂದ ತಮ್ಮ ವಿವಿಧ ಬೇಡಿಕೆ ಆಗ್ರಹಿಸಿ ಆಡಳಿತಸೌಧದಲ್ಲಿ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಬಿ.ಎಸ್.ಕಡಕಬಾವಿ ಅವರಿಗೆ ಮನವಿ ಸಲ್ಲಿಸಿದರು. ಇಂಡಿ ತಾಲೂಕು ಹಾಸ್ಟೇಲ್ ಮತ್ತು ವಸತಿ ಶಾಲೆ ಹೊರ ಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ದಾನಮ್ಮ ಹೂಗಾರ ಸೇರಿದಂತೆ ಇತರರು ಇದ್ದರು.

ಕೆಲಸದ ಸ್ಥಳದಲ್ಲಿ ಹಿಂದು ಯುವಕ, ಯುವತಿಯರಿಗೆ ಕಿರುಕುಳ ಸಲ್ಲ

ಮುನ್ನೆಚ್ಚರಿಕೆ ಕ್ರಮಕ್ಕೆ ಒತ್ತಾಯಿಸಿ ಮನವಿ

ವಿಜಯಪುರ: ಕೆಲಸದ ಸ್ಥಳದಲ್ಲಿ ಹಿಂದೂ ಯುವಕ ಯುವತಿಯರಿಗೆ ಕಿರುಕುಳ ಮತ್ತು ಬಲವಂತದ ಧಾರ್ಮಿಕ ಆಚರಣೆಗಳ ವಿರುದ್ಧ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅವರಿಗೆ ಹಿಂದೂಪರ ವೇದಿಕೆ ಪದಾಧಿಕಾರಿಗಳು ಮನವಿ ಸಲ್ಲಿಸಿದರು.



ಮಹಾರಾಷ್ಟ್ರದ ನಾಶಿಕ್ ನಗರದಿಂದ ಪ್ರತಿಷ್ಠಿತ ಬಹುರಾಷ್ಟ್ರೀಯ ಟಿಸಿಎಸ್ ಕಂಪನಿಯಲ್ಲಿ ಇತ್ತೀಚೆಗೆ ಬಂದ ವರದಿಗಳು ಕೆಲಸದ ಸ್ಥಳಗಳಲ್ಲಿ ಕಿರುಕುಳ ಹಾಗೂ ಖ್ಯಾತ ಸಂಸ್ಥೆಗಳ ಒಳಗೆ ನಡೆಯುತ್ತಿರುವಂತೆ ಹೇಳಲಾಗಿರುವ ಬಲವಂತದ ಆಚರಣೆಗಳ ಕುರಿತು ಗಂಭೀರ ಆತಂಕವನ್ನು ಉಂಟುಮಾಡಿವೆ. ಇಂತಹ ಘಟನೆಗಳು ನಿರಂತರ ಎಚ್ಚರಿಕೆ ಮತ್ತು ಮುನ್ನೆಚ್ಚರಿಕಾ ಕ್ರಮಗಳ ಅಗತ್ಯತೆ ಸ್ಮರಿಸುತ್ತವೆ. ವಿಜಯಪುರ ಜಿಲ್ಲೆಯಲ್ಲಿ ವಿವಿಧ ಸಮುದಾಯಗಳು ಮತ್ತು ಹಿನ್ನೆಲೆಯಿಂದ ಬಂದ ಉದ್ಯೋಗಿಗಳನ್ನು ಹೊಂದಿರುವ ಅನೇಕ ಶಿಕ್ಷಣ ಸಂಸ್ಥೆಗಳು, ಆರೋಗ್ಯ ಸೇವಾ ಕೇಂದ್ರಗಳು, ತರಬೇತಿ ಸಂಸ್ಥೆಗಳು ಹಾಗೂ ಸಣ್ಣ ಕೈಗಾರಿಕೆಗಳಿವೆ. ಎಲ್ಲ ಉದ್ಯೋಗಿಗಳಿಗೆ ಸುರಕ್ಷಿತ, ಗೌರವಯುತ ಮತ್ತು ಕಾನೂನುಬದ್ಧ ಕೆಲಸದ ವಾತಾವರಣವನ್ನು ಖಚಿತಪಡಿಸುವುದು ಅತ್ಯಂತ ಮುಖ್ಯವಾಗಿದೆ. ಈ ಹಿನ್ನೆಲೆಗಳಲ್ಲಿ, ಜಿಲ್ಲಾಡಳಿತವು ಕೆಳಗಿನ ಮುನ್ನೆಚ್ಚರಿಕಾ ಕ್ರಮಗಳನ್ನು ಬಲಪಡಿಸಬೇಕು ಎಂದು ಮನವಿ ಪತ್ರದಲ್ಲಿ ಒತ್ತಾಯಿದ್ದಾರೆ.

ಕೆಲಸದ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ ಮುಂತಾದ ಸರಿಯಾದ ನಿಗಾವ್ಯವಸ್ಥೆಯನ್ನು ಖಚಿತಪಡಿಸಬೇಕು. ಉದ್ಯೋಗಿಗಳ ಹಕ್ಕುಗಳು ಹಾಗೂ ದೂರು ಪರಿಹಾರ ವ್ಯವಸ್ಥೆಗಳ ಕುರಿತು ಜಾಗೃತಿ ಮೂಡಿಸಬೇಕು. ಕಿರುಕುಳ ಮತ್ತು ಯಾವುದೇ ಬಲವಂತದ ವಿರುದ್ಧ ಕಠಿಣ ನೀತಿಗಳನ್ನು ಸಂಸ್ಥೆಗಳು ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಬರುವ ದೂರುಗಳ ಬಗ್ಗೆ ಸ್ಥಳೀಯ ಅಧಿಕಾರಿಗಳು ಎಚ್ಚರಿಕೆಯಿಂದ ಹಾಗೂ ತ್ವರಿತವಾಗಿ ಪ್ರತಿಕ್ರಿಯಿಸಬೇಕು. ತ್ವರಿತವಾಗಿ ಸ್ಪಂದಿಸಲು ಸಹಾಯವಾಣಿ ಸಂಖ್ಯೆಯನ್ನು ಪ್ರಕಟಿಸಬೇಕು. ಸಮಾಜದಲ್ಲಿ ಸೌಹಾರ್ದತೆ ಕಾಪಾಡಲು, ವೈಯಕ್ತಿಕ ಸ್ವಾತಂತ್ರ್ಯಗಳನ್ನು ರಕ್ಷಿಸಲು ಮತ್ತು ಕಾನೂನು ಸುವ್ಯವಸ್ಥೆಯನ್ನು ಉಳಿಸಲು ಸಹಕಾರಿಯಾಗುತ್ತವೆ ಎಂದು ತಿಳಿಸಿದ್ದಾರೆ.

ಬಿಜೆಪಿ ಮುಖಂಡ ದಯಸಗಾರ್ ಪಾಟೀಲ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಮಹೇಂದ್ರ ನಾಯ್ಕ್, ಮಹಾನಗರ ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ, ಕುಮಾರ್ ಗಡಗಿ, ಬಿಜೆಪಿ ಮುಖಂಡ ಕೃಷ್ಣ ಗುನ್ನಾಳ್ಕರ, ವಿಎಚ್‌ಪಿ ಪ್ರಮುಖ ಸುನೀಲ ಭೈರವಾಡಗಿ, ಬಿಜೆಪಿ ಮಾಜಿ ಅಧ್ಯಕ್ಷ ನಗರ ಶಂಕರ ಹೂಗಾರ್, ಸಿದ್ದು ಕಲ್ಲೂರ ಇದ್ದರು.

ಸಂವಾದ ಸಭೆ ಇಂದು

ವಿಜಯಪುರ: ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವಿಜಯಪುರ ತಾಲೂಕಿನ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗಕ್ಕೆ ಸಂಬಂಧಿಸಿದಂತೆ ಏ.18ರಂದು ಮಧ್ಯಾಹ್ನ 3.30ಗಂಟೆಗೆ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಕಛೇರಿಯಲ್ಲಿ ರೈತರು ಹಾಗೂ ಗ್ರಾಹಕರೊಂದಿಗೆ ವಿದ್ಯುತ್ ಸಮಸ್ಯೆಗಳ ಪರಿಹಾರಕ್ಕೆ ಗ್ರಾಹಕರ ಸಂವಾದ ಸಭೆ ಆಯೋಜಿಸಲಾಗಿದೆ. ಹೆಸ್ಕಾಂ ಗ್ರಾಮೀಣ ಉಪ ವಿಭಾಗದ ಕಛೇರಿಗೆ ಒಳಪಡುವ ಗ್ರಾಮಗಳ ಗ್ರಾಹಕರು ಹಾಗೂ ಸಾರ್ವಜನಿಕರು ಸಂವಾದ ಸಭೆಯಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ವಿಜಯಪುರ ಗ್ರಾಮೀಣ ಉಪ ವಿಭಾಗದ ಹೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಮಹಾನ್ ಸಾಧಕ ಡಾ.ಅಂಬೇಡ್ಕರ್

ಸಿಂದಗಿ: ಜಗತ್ತಿನಲ್ಲಿ ಬಹಳಷ್ಟು ಜನ ಜನ್ಮ ತಾಳುತ್ತಾರೆ. ಅದರಲ್ಲಿ ಬೆರಳಣಿಕೆಯಷ್ಟು ಜನ ಮಾತ್ರ ಮಹಾನ ಸಾಧಕರಾಗಿ ಹೊರಹೊಮ್ಮುತ್ತಾರೆ. ಆ ಸಾಲಿನಲ್ಲಿ ಬಾಬಾಸಾಹೇಬ್ ಅವರು ಒಬ್ಬರು. ಇವರ ಜಯಂತಿಯನ್ನು ಆಚರಣೆ ಮಾಡು ವುದರ ಜೊತೆಗೆ ತತ್ವದಾರ್ಶಗಳನ್ನು ಮೈಗೂಡಿಸಿ ಕೊಂಡು ಬದುಕು ಸಾಗಿಸಬೇಕು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಪಟ್ಟಣದ ಬಸ್ ಡಿಪೋದಲ್ಲಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ವತಿಯಿಂದ ಹಮ್ಮಿಕೊಂಡ ಡಾ.ಬಿ.ಆರ್.ಅಂಬೇಡ್ಕರ ಅವರ 135ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅವರ ಚಿಂತನೆಗಳು ಮುಂದಿನ ಯುವ ಪಿಳಿಗೆಗೆ ರವಾನೆ ಆಗಬೇಕಾದರೆ ಹೆಚ್ಚೆಚ್ಚು ಗ್ರಂಥಾಲಯಗಳು ತೆರೆಯುವ ಮೂಲಕ ಅವರ ತತ್ವಗಳನ್ನು ಬಿತ್ತಬೇಕಾಗಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ವೈ.ಸಿ.ಮಯೂರ ಮಾತನಾಡಿ, ಶೋಷಿತ ಸಮುದಾಯದಲ್ಲಿ ಜನಿಸಿ, ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಅಸ್ಪೃಶ್ಯತೆಯ ವಿರುದ್ಧ ಬಹುದೊಡ್ಡ ಕ್ರಾಂತಿಕಾರಿ ಚಳುವಳಿ ಆರಂಭಿಸಿದ್ದಲ್ಲದೇ ಸಮಾಜದಲ್ಲಿನ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಒದಗಿಸಲು ಹಗಲು ರಾತ್ರಿ ಶ್ರಮಿಸಿ ಮನುಕುಲ ಒಂದೇ ಎಂಬ ಆಶಯದೊಂದಿಗೆ ವಿಶ್ವದ ಅತಿದೊಡ್ಡ ಸಂವಿಧಾನ ರಚನೆ ಮಾಡುವ ಮೂಲಕ ಸರ್ವ ಜನರ ಒಳಿತಿಗಾಗಿ ಜನಿಸಿದ ಮಹಾನ್ ಚೇತನ್ ಎಂದರು.

ಘಟಕ ವ್ಯವಸ್ಥಾಪಕ ಎಂ.ಆರ್.ಲಮಾಣಿ, ವಲಯ ಅರಣ್ಯಾಧಿಕಾರಿ ಇರ್ಷಾದ ನೇವಾರ, ಗೋಲಗೇರಿ ಗೊಲ್ಲಾಳೇಶ್ವರ ದೇವಸ್ಥಾನದ ಧರ್ಮದರ್ಶಿ ರವಿರಾಜ ದೇವರಮನಿ, ರುದ್ರಗೌಡ ಪಾಟೀಲ ಯಂಕಂಚಿ, ಲೆಕ್ಕಪತ್ರ ಮೇಲ್ವಿಚಾರಕ ಸಂತೋಷ ಹತ್ತರಕಿ, ಸಿಬ್ಬಂದಿ ಮೇಲ್ವಿಚಾರಕ ಆನಂದ ಬಡಿಗೇರ ಇದ್ದರು.

ಮಾಧ್ಯಮ ಸಲಹೆಗಾರ ಪಂಡಿತ ಯಂಪೂರೆ, ಶ್ರೀಧರ ಇಂಗಳೆ, ಮುತ್ತಪ್ಪ ತಳ್ಳೊಳ್ಳಿ, ಬಸವರಾಜ ದ್ಯಾಮಗೊಂಡ, ಶಿವಶರಣ ಹೊಸಮನಿ, ಪರಸುರಾಮ ದೊಡಮನಿ, ಬಾಬು ಬೀಳಗಿ, ರಾಜಶೇಖರ ಕೊಣ್ಣೂರ, ಜೈಬೀಮ ಪೂಜಾರಿ, ಮರಳಪ್ಪ ಕುದರಗೊಂಡ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಎಸ್ಸಿ,ಎಸ್ಟಿ ನೌಕರರ ಸಂಘದ ಅಧ್ಯಕ್ಷ ಸುರೇಶ ಹೊಸಮನಿ ಸ್ವಾಗತಿಸಿದರು. ಶ್ರೀಕಾಂತ ಮೆಟಗಾರ ನಿರೂಪಿಸಿದರು. ಕಾರ್ಯದರ್ಶಿ ರಾಘವೇಂದ್ರ ಜಾಬನವರ ವಂದಿಸಿದರು.



ಸರ್ಕಾರಿ ಯೋಜನೆ ಸದುಪಯೋಗ ಪಡೆಯಿರಿ

ವಿಜಯಪುರ: ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದ, ಶೋಷಿತ ಸಮುದಾಯಗಳಿಗೆ ಶಿಕ್ಷಣ ನೀಡಲು ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ ವಿದ್ಯಾರ್ಥಿಗಳು ಅವುಗಳನ್ನು ಬಳಸಿಕೊಂಡು ಬದುಕು ರೂಪಿಸಿಕೊಳ್ಳಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಜೆ. ಇಂಡಿ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್.ಬಿ.ಕಲಾ ಮತ್ತು ಕೆ.ಸಿ.ಪಿ ವಿಜ್ಞಾನಿ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ, ಎಸ್ಸಿ, ಎಸ್ಟಿ, ಓಬಿಸಿ ಹಾಗೂ ಮೈನಾರಿಟಿ ಸೆಲ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಿದ್ಯಾರ್ಥಿ ವೇತನ ಜಾಗೃತಿ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸ್ವಾಮೀಜಿಗಳು, ಶಿಕ್ಷಣ ಪ್ರೇಮಿಗಳು ಹಾಗೂ ಅನೇಕ ರಾಜಕೀಯ ಮುಖಂಡರು ಜಿಲ್ಲೆಯ ಶೈಕ್ಷಣಿಕ ಕ್ರಾಂತಿಗೆ ಮುನ್ನುಡಿ ಬರೆದಿದ್ದಾರೆ ಎಂದರು.

ಆರ್ಥಿಕವಾಗಿ ಬಹಳಷ್ಟು ಕುಟುಂಬಗಳು ಮಕ್ಕಳ ಶಿಕ್ಷಣ ಕೊಡಿಸಲಾರದಷ್ಟು ಬಡತನ ಎದುರಿಸುತ್ತಿವೆ. ಸರ್ಕಾರ ಅಂತಹ ಮಕ್ಕಳ ಶೈಕ್ಷಣಿಕ ಬದುಕು ಉಜ್ವಲಗೊಳಿಸಲು ಶಿಷ್ಯವೇತನ ಜಾರಿಗೊಳಿಸಿದೆ. ಉತ್ತಮ ಶಿಕ್ಷಣ ಹಾಗೂ ಉದ್ಯೋಗ ಪಡೆಯಲು ಇದು ಸದವಕಾಶಎಲ್ಲವಿದ್ಯಾರ್ಥಿಗಳುಸಂವಿಧಾನದ ಆಶಯಗಳನ್ನು ಈಡೇರಿಸಬೇಕು. ಜಗತ್ತು ಭಾರತೀಯರ ಮಾತನ್ನು ಕಡೆಗಣಿಸುವ ಸ್ಥಿತಿಯಲ್ಲಿ ಇಲ್ಲ. ಕಾರಣ ಇಂದಿನ ಪ್ರಧಾನಿ ಹಾಗೂ ನಮ್ಮ ವಿದೇಶಾಂಗ ನೀತಿ ಕಾರಣ. ಹಾಗಾಗಿ ನಮ್ಮಲ್ಲಿ ಬರುವ ಎಸ್ಸಿ ಎಸ್ಟಿ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ತರಬೇತಿ ಪಡೆಯಲು ಸಹಿತ ಸರ್ಕಾರ ಯೋಜನೆ ರೂಪಿಸಿದೆ ಎಂದರು.

ಪ್ರಾಚಾರ್ಯ ಡಾ.ಅನೀಲ ಬಿ. ನಾಯಕ ಮಾತನಾಡಿ, ವಿಜ್ಞಾನ, ತಂತ್ರಜ್ಞಾನ, ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಶಿಕ್ಷಣ ಒಂದು ಪ್ರಮುಖ ಸಾಧನವಾಗಿದೆ ಎಂದರು.

ಬಾಗಲಕೋಟೆಯ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಸಹಾಯಕ ಅಧಿಕಾರಿ ಗುರುನಾಥ ಎಂ.ಮಸಳಿ ಮಾತನಾಡಿದರು.

ಐಕ್ಯೂಎಸಿ ಸಂಯೋಜಕ ಡಾ.ಪಿ.ಎಸ್.ಪಾಟೀಲ, ಎಸ್ಸಿ, ಎಸ್ಟಿ, ಸೆಲ್ ಮುಖ್ಯಸ್ಥ ಡಾ. ಪ್ರದೀಪ.ಚವಾಣ್ ಹಾಗೂ ಒಬಿಸಿ ಮೈನಾರಿಟಿ ಸೆಲ್ ಮುಖಸ್ಥ ಡಾ.ಎಸ್.ಡಿ.ಲಮಾಣಿ, ಪ್ರೊ.ಪ್ರಭಾವತಿ ತಳವಾರ, ಪ್ರೊ.ಬಿಲಾಲ್ ಪಾನಿಬಂಧ, ಡಾ.ಧರ್ಮ ಗುರು ಪ್ರಸಾದ, ಪ್ರೊ.ಪವನ್ ಮಹೀಂದ್ರಕರ, ಮಲಿಕ್ ಎಲ್. ಜಮಾದಾರ, ಪ್ರೊ.ಎಸ್.ವೈ.ಅಂಗಡಿ, ಪಲ್ಲವಿ ಜಾಗಿರದಾರ ಮಹಾವಿದ್ಯಾಲಯದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ನಾಳೆ ಬಸವಜ್ಯೋತಿ ಪಾದಯಾತ್ರೆ ಆರಂಭ: ಪಾಟೀಲ

ವಿಜಯಪುರ: ಸಮಾನತೆಯ ಹರಿಕಾರ, ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸಣ್ಣನವರ ಜಯಂತಿ ನಿಮಿತ್ತ ಜನ್ಮಸ್ಥಳ ಬಾಗೇವಾಡಿಯಿಂದ ವಿಜಯಪುರದವರೆಗೆ ವಿಜಯಪುರ ಸೈಕ್ಲಿಂಗ್ ಗ್ರುಪ್ ಸಹಯೋಗದಲ್ಲಿ ಬಸವಜ್ಯೋತಿ ಪಾದಯಾತ್ರೆ ಏ. 19ರಂದು ಭಾನುವಾರ ರಾತ್ರಿ 7 ಗಂಟೆಗೆ ಆರಂಭಿಸಲಾಗುವುದು ಎಂದು ಆಯೋಜಕ ಬಿ.ಬಿ.ಪಾಟೀಲ ತಿಳಿಸಿದರು.



ವಿಜಯಪುರದಲ್ಲಿ ಬಸವಜ್ಯೋತಿ ಪಾದಯಾತ್ರೆ ನಿಮಿತ್ತ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಈ ಬಾರಿ ವಿಶಿಷ್ಟ ರೀತಿಯಲ್ಲಿ ಬಸವ ಜಯಂತಿ ಆಚರಿಸಲಾಗುವುದು. ಬಸವಣ್ಣನವರ ಜನ್ಮಸ್ಥಳ ಬಸವನ ಬಾಗೇವಾಡಿಯಲ್ಲಿ ಪಾದಯಾತ್ರಿಗಳುಸಂಜೆ6 ಗಂಟೆಗೆ ಹಾಜರಿರುವುದು. ಸಂಜೆ 6.30 ಗಂಟೆಗೆ ಪೂಜೆ ಸಲ್ಲಿಸಿದ ನಂತರ ರಾ.7ಗಂ. ಬಸವಜ್ಯೋತಿ ಪಾದಯಾತ್ರೆಗೆ ಬಸವನ ಬಾಗೇವಾಡಿ ವಿರಕ್ತಮಠದ ಪ.ಪೂ ಸಿದ್ದಲಿಂಗ ಸ್ವಾಮೀಜಿ ಚಾಲನೆ ನೀಡಲಿದ್ದಾರೆ. ಈ ಯಾತ್ರೆ ಮಸಬಿನಾಳ, ಉಕ್ಕಲಿ, ಉಕುಮನಾಳ ಮಾರ್ಗವಾಗಿ ಶಿವಗಿರಿ ತಲುಪಲಿದೆ. ನಂತರ ನಗರದ ಬಸವೇಶ್ವರ ವೃತ್ತದಲ್ಲಿ ಮುಕ್ತಾಯಗೊಳ್ಳಲಿದೆ. 50ಕಿ.ಮೀ ಮಾರ್ಗದೂದ್ದಕ್ಕೂ ಪಾದಯಾತ್ರಿಗಳಿಗೆ ಅಲ್ಪೋಪಹಾರ ಮತ್ತು ಲಘುಪಾನಿಯ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಸ್ವಯಂ ಪ್ರೇರಿತರಾಗಿ 150ಕ್ಕೂ ಹೆಚ್ಚು ಬಸವಾನುಯಾಯಿಗಳು ನೋಂದಣಿ ಮಾಡಿಕೊಂಡಿದ್ದು ಪಾದ ಯಾತ್ರೆಯಲ್ಲಿ ಭಾಗವಹಿಸಿದವರಿಗೆ ಟಿ-ಶರ್ಟ್, ಪದಕ ಮತ್ತು ಪ್ರಮಾಣ ಪತ್ರ ನೀಡಲಾಗುವುದು ಎಂದು ತಿಳಿಸಿದರು.

ಕೋಟಿವೃಕ್ಷ ಅಭಿಯಾನ ಸಂಚಾಲಕ ಡಾ.ಮುರುಗೇಶ ಪಟ್ಟಣಶೆಟ್ಟಿ, ವಿಸಿಜಿ ಉಪಾಧ್ಯಕ್ಷ ಶಿವನಗೌಡ ಪಾಟೀಲ, ಕಾರ್ಯದರ್ಶಿ ಸೋಮಶೇಖರ ಸ್ವಾಮಿ, ಸದಸ್ಯರಾದ ಶಾಂತೇಶ ಕಳಸಗೊಂಡ, ಸಂತೋಷ ಔರಸಂಗ, ಡಾ.ರಾಜು ಯಲಗೊಂಡ, ಶಂಭು ಕರ್ಪೂರಮಠ, ಡಿ.ಕೆ.ತಾವಸೆ, ಗುರುಶಾಂತ ಕಾಪಸೆ, ಅಶ್ಪಾಕ ಮನಗೂಳಿ, ಸಿದ್ದು ನಾಯ್ಕೋಡಿ, ಸೋಮು ಮಠ, ವಿಜಯಕುಮಾರ ಕೋರೆ, ಅಮೀತ ಬಿರಾದಾರ ಇದ್ದರು.

ಜಾಗತಿಕ ಸವಾಲು ಎದುರಿಸಲು ಸಮಗ್ರ ಅವಲೋಕನ ಅಗತ್ಯ

ಇಂಡಿ: ಸಮಕಾಲೀನ ಜಾಗತಿಕ ಸವಾಲುಗಳನ್ನು ಎದುರಿಸುವಲ್ಲಿ ಬಹುಶಿಸ್ತಿಯ ವಿಧಾನಗಳ ಪ್ರಾಮುಖ್ಯತೆಯ ಸಮಗ್ರ ಮತ್ತು ಒಳನೋಟಗಳುಳ್ಳ ಅವಲೋಕನ ಮಾಡಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಸಮಾಜ ಕಾರ್ಯ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್.ವಿ.ರಮಣಯ್ಯ ಹೇಳಿದರು.



ನಗರದ ಜಿ.ಆರ್.ಗಾಂಧಿ ಕಲಾ, ವೈ.ಎ.ಪಾಟೀಲ ವಾಣಿಜ್ಯ ಹಾಗೂ ಎಂ.ಪಿ.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಘಟಕದ ಸಹಯೋಗದಲ್ಲಿ ಏರ್ಪಡಿಸಿದ್ದ ಎರಡು ದಿನದ ರಾಷ್ಟ್ರಮಟ್ಟದ ಬಹುಶಿಸ್ತಿಯ ಆನ್‌ಲೈನ್ ಸಮ್ಮೇಳನದಲ್ಲಿ ಮಾತನಾಡಿದರು.

ಈಗೀನ ವೇಗವಾಗಿ ವಿಕಸನಗೊಳ್ಳುತ್ತಿರುವ ಜಗತ್ತಿನಲ್ಲಿ ನಾವಿನ್ಯತೆ, ಸುಸ್ಥಿರ ಅಭಿವೃದ್ಧಿ ಪರಿಣಾಮಕಾರಿ ಸಮಸ್ಯೆ ಪರಿಹಾರಕ್ಕಾಗಿ ವಿವಿಧ ವಿಭಾಗಗಳಲ್ಲಿ ಜ್ಞಾನದ ಏಕೀಕರಣವು ಅತ್ಯಗತ್ಯವಾಗಿದೆ. ಶಿಕ್ಷಣ, ಆಡಳಿತ, ವ್ಯವಹಾರ ಮತ್ತು ಅಂತರರಾಷ್ಟ್ರೀಯ ಸಂಬಂಧಗಳಂತಹ ವಿವಿಧ ಕ್ಷೇತ್ರಗಳನ್ನು ಪುನರ್ ರೂಪಿಸುವಲ್ಲಿ ತಂತ್ರಜ್ಞಾನ ವಿಶೇಷವಾಗಿ ಡಿಜಿಟಲ್ ರೂಪಾಂತರ ಮತ್ತು ಕೃತಕ ಬುದ್ಧಿಮತ್ತೆಯು ಮುಖ್ಯ ವಾಗಿದೆ. ವಿಮರ್ಶಾತ್ಮಕ ಚಿಂತನೆ ಮತ್ತು ಶೈಕ್ಷಣಿಕ ಸಹಯೋಗ ಮಹತ್ವವಾಗಿದೆ ಎಂದರು.

ಸಂಘದ ಗೌರವ ಕಾರ್ಯದರ್ಶಿ ಬಸವರಾಜ ತಾಂಬೆ, ಉಪಾಧ್ಯಕ್ಷ ಡಾ. ಆದರ್ಶ ಪ್ರಭಾಕರ ಬಗಲಿ ಸಂಶೋಧನಾ ನಿಯತಕಾಲಿಕೆ ಬಿಡುಗಡೆಗೊಳಿಸಿ ಸಂಶೋಧನೆಯ ವಿಧಿ-ವಿಧಾನಗಳುಕುರಿತು, ಸಂಘದ ಅಧ್ಯಕ್ಷ ನೀಲಕಂಠಗೌಡ ಎಸ್.ಪಾಟೀಲ ಮಾತನಾಡಿ, ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಗಳ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇಂತಹ ಸಮ್ಮೇಳನಗಳು ಇನ್ನು ಹೆಚ್ಚು ಜರುಗಬೇಕು. ಸಂಶೋಧನಾ ಕಾರ್ಯಗಳು ಚುರುಕುಗೊಳ್ಳಬೇಕು. ಇಂತಹ ಕಾರ್ಯಕ್ರಮಗಳಿಗೆ ಆದ್ಯತೆ ಕೊಡಲಾಗುವುದು ಎಂದರು.

ನಿರ್ದೇಶಕ ವರ್ಧನ ದೋಶಿ, ಉಪನ್ಯಾಸಕಿ ಶೃತಿ ಪಾಟೀಲ, ಪ್ರಾಚಾರ್ಯ ಶ್ರೀಶೈಲ ಸಣ್ಣಕ್ಕಿ, ಇಕ್ಯೂಎಸಿ ಸಂಯೋಜಕ ಜಯಪ್ರಸಾದ ಡಿ. ಮಾತನಾಡಿದರು. ಪ್ರಾಧ್ಯಾಪಕ ಆನಂದ ನಡುವಿನಮನಿ, ವಿಶ್ವಾಸಕೋರವಾರ, ಪಿ.ಕೆ.ರಾಠೋಡ, ಸುರೇಂದ್ರ ಕೆ., ಎಸ್.ಬಿ. ಜಾಧವ, ಸಿ.ಎಸ್.ಬಿರಾದಾರ, ಶ್ರೀಕಾಂತ ರಾಠೋಡ, ಎಂ.ಆರ್.ಕೋಣದೆ, ಆರ್.ಪಿ.ಇಂಗನಾಳ ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ



ವಿಜಯಪುರ: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಇಪಿಎಸ್-95 ರಾಷ್ಟ್ರೀಯ ಸಂಘರ್ಷ ಸಮಿತಿವತಿ ಯಿಂದ ನಗರದಲ್ಲಿ ಪ್ರತಿಭಟನೆ ನಡೆಸಿ, ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ್ ಅವರಿಗೆ ಮನವಿ ಸಲ್ಲಿಸಲಾಯಿತು.

ಎನ್‌ಎಸಿ ಕಾರ್ಯಾಧ್ಯಕ್ಷ ವೀರ ಕುಮಾರ ಗಡಾದ ಮಾತನಾಡಿ, ನ. 4, 2022 ರಂದು ಸುಪ್ರೀಂ ಕೋರ್ಟ್ ತೀರ್ಪು ಬಂದಿದ್ದರೂ ಅದನ್ನು ಪೂರ್ಣ ಪ್ರಮಾಣದಲ್ಲಿ ಜಾರಿ ಗೊಳಿಸದೇ ಇಪಿಎಫ್‌ಓ ತಾರತಮ್ಯ ವೆಸಗಿದೆ. ಕನಿಷ್ಠ ಪಿಂಚಣಿ 1000 ಗಳಿಂದ 7500 ಕ್ಕೆ ಹೆಚ್ಚಿಸಿ, ಅದಕ್ಕೆ ತುಟ್ಟಿ ಭತ್ಯೆ ನೀಡಬೇಕು ಹಾಗೂ ಎಲ್ಲ ಇಪಿಎಸ್- 95 ಪಿಂಚಣಿದಾರರಿಗೆ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು. ಕಳೆದ 10 ವರ್ಷಗಳಿಂದ ಪಿಂಚಣಿದಾರರು ಕಮಾಂಡರ್ ಅಶೋಕ್ ರಾವುತ್ ಅವರ ನೇತೃತ್ವದಲ್ಲಿ ಹೋರಾಟ ಮಾಡುತ್ತಿದ್ದಾರೆ. ದೇಶದ ಇಪಿಎಸ್- 95 ಪಿಂಚಣಿದಾರರಿಗೆ ಲಭ್ಯವಿರುವ ವೈದ್ಯಕೀಯ ಸೌಲಭ್ಯಗಳ ಕೊರತೆಯಿಂದಾಗಿ, ಅವರಲ್ಲಿ ಮರಣ ಪ್ರಮಾಣ ಹೆಚ್ಚುತ್ತಲೇ ಕೂಡಲೇ ಈ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು. ಮುಖಂಡರಾದ ಎಸ್.ಜೆ.ಗೌಡರ, ರಫೀಕ್ ಘನಿಬಂದ, ಬಿ.ಆರ್.ರಜಪೂತ, ಗುಂಡಪ್ಪ ತೊಂತನಾಳ, ಎಸ್.ಎಸ್.ಆಲಗುಂಡಿ, ಶ್ರೀಕಾಂತ್ ಉಮರಾಣಿ, ರಾಮಸಾಬ ಚಂದುಗಡೆ, ಶಾಂತಿನಾಥ ಪಾಟೀಲ್ ಇದ್ದರು.

ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ

ಇಂಡಿ: ನಗರದ ಆರ್.ಎಂ.ಶಹಾ ಪಬ್ಲಿಕ್ ಸ್ಕೂಲ್ ಸಿಬಿಎಸ್‌ಇ 10ನೇ ತರಗತಿಯ ವಾರ್ಷಿಕ(2026) ಪರೀಕ್ಷೆ ಫಲಿತಾಂಶದಲ್ಲಿ ಶಾಲೆಗೆ ಶೇ.100 ರಷ್ಟು ಫಲಿತಾಂಶ ತಂದ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಚಿನ್ಮಯ ಗಿರೀಶ ಕುಮಾನಿ 97.4% ಶಾಲೆಗೆ ಹಾಗೂ ತಾಲೂಕಿಗೆ ಪ್ರಥಮ ಸ್ಥಾನ, ಸಂದೀಪ ಮಳಸಿದ್ದಪ್ಪ ನಾಗೋಡ 96.% ದ್ವಿತಿಯ, ಸಾಕ್ಷಿ ಸಂಜೀವ ಮಂದೇವಾಲಿ 95.6% ತೃತೀಯ ಸ್ಥಾನ ಪಡೆದಿದ್ದಾರೆ.

ಶಾಲೆಗೆ ಹಾಗೂ ತಾಲೂಕಿಗೆ ಪ್ರಥಮ, ದ್ವಿತೀಯ, ತೃತೀಯಾ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಶಾಲಾ ಅಧ್ಯಕ್ಷ ಡಿ.ಆರ್.ಶಹಾ ಮಾತನಾಡಿ, ವಿದ್ಯಾರ್ಥಿಗಳಿಗೆ ಮುಂದಿನ ಭವಿಷ್ಯ ಉಜ್ವಲವಾಗಲಿ. ಈಗ ಸಾಧನೆ ಮಾಡಿದಂತೆ ಮುಂದಿನ ದಿನಗಳಲ್ಲಿ ಸಾಧನೆ ಮಾಡಿ ಕುಟುಂಬದ, ಊರಿನ ಮತ್ತು ಶಾಲೆಯ ಹೆಸರು ತರಬೇಕು ಎಂದು ಹಾರೈಸಿದರು.

ಶಾಲಾ ಶೈಕ್ಷಣಿಕ ಮಾರ್ಗದರ್ಶಕ ನಜೀರ ಹುಂಡೇಕರ ಮಾತನಾಡಿ, ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಜೀವನಕ್ಕೆ ಉಪಯುಕ್ತವಾದ ಮಾಹಿತಿಗಳನ್ನು ಹಂಚಿಕೊಂಡು ಶುಭ ಹಾರೈಸಿದರು. ಅನಿಶಾ ಕೆ., ಅಲ್ಲಾಬಕ್ಷ ಉಕ್ಕಲಿ, ಶಾಲಾ ಆಡಳಿತ ಮಂಡಳಿಯ ಸದಸ್ಯರು, ಪ್ರಾಚಾರ್ಯ ಹಾಗೂ ಶಿಕ್ಷಕ ಶಿಕ್ಷೇತರ ಸಿಬ್ಬಂದಿ ಭಾಗವಹಿಸಿದ್ದರು.



ಮೇ 8, 9ರಂದು ಜಾಗೃತ ಸಮಾವೇಶ



ಮುದ್ದೇಬಿಹಾಳ: ತಾಲೂಕಿನ ದೇವಾಂಗ (ನೇಕಾರ) ಸಮುದಾಯದ ಸಂಘಟನೆ ಮತ್ತು ಜಾಗೃತಿಗಾಗಿ ಅಖಿಲ ಭಾರತ ದೇವಾಂಗ ಬೃಹತ್ ಜನಜಾಗೃತಿ ಸಮಾವೇಶ ಹಾಗೂ ದಯಾನಂದಪುರಿ ಸ್ವಾಮೀಜಿಗಳ 36ನೇ ಪಟ್ಟಾಭಿಷೇಕ ಮಹೋತ್ಸವ ಮೇ 8 ಹಾಗೂ 9ರಂದು ಬಾದಾಮಿ ತಾಲೂಕು ಬನಶಂಕರಿ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ದೇವಾಂಗ ಸಮಾಜದ ಜಿಲ್ಲಾಧ್ಯಕ್ಷ ಬಸವರಾಜ ಚಿತ್ತರಗಿ ಹೇಳಿದರು. ಪಟ್ಟಣದ ಬನಶಂಕರಿ ದೇವಸ್ಥಾನದಲ್ಲಿ ಕಾರ್ಯಕ್ರಮಕ್ಕೆ ಆಹ್ವಾನ ನೀಡಲು ಹಂಪಿ ಹೇಮಕೂಟ ಗಾಯತ್ರಿ ಪೀಠದ ದಯಾನಂದಪುರಿ ಸ್ವಾಮೀಜಿಗಳು ಆಗಮಿಸಿದ್ದ ವೇಳೆ ಸಮಾಜದ ಬಾಂಧವರ ಸಭೆಯಲ್ಲಿ ಮಾತನಾಡಿದರು. ಬನಶಂಕರಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ, ಪತ್ರಕರ್ತ ಶಂಕರ ಈ ಹೆಬ್ಬಾಳ, ದಿವ್ಯ ಸಾನ್ನಿಧ್ಯ ವಹಿಸಿದ್ದ ಹಂಪಿ ಹೇಮಕೂಟ ಗಾಯತ್ರಿ ಮಹಾಸಂಸ್ಥಾನ ಗುರುಪೀಠದ ದಯಾನಂದಪುರಿ ಸ್ವಾಮೀಜಿ ಮಾತನಾಡಿದರು. ಹಂಪಿ ಹೇಮಕೂಟ ಗಾಯತ್ರಿ ಪೀಠದ ಟ್ರಸ್ಟಿ ನಾಗೇಶ ಭಾವಿಕಟ್ಟಿ, ಮುಖಂಡರಾದ ಮುತ್ತಣ್ಣ ಪ್ಯಾಟಿಗೌಡರ, ಸಿದ್ದಣ್ಣ ಚಿತ್ತರಗಿ, ಸಂಗಣ್ಣ ಡಂಬಳ, ಉಮ್ಮಣ್ಣ ಹೆಬ್ಬಾಳ, ಅಮರೀಶ ಡಂಬಳ, ನಾಗಪ್ಪ ಅಗಸಬಾಳ, ಉದಯ ಕುಪ್ಪಸ್ತ, ಯುವ ಘಟಕದ ಅಧ್ಯಕ್ಷ ಶಿವಶಂಕರ ಪ್ಯಾಟಿಗೌಡರ. ನಿರ್ದೇಶಕರಾದ ಶ್ರೀಕಾಂತ ಹೆಬ್ಬಾಳ, ದ್ಯಾವಪ್ಪ ಹುಣಶ್ಯಾಳ ಸೇರಿದಂತೆ ಹಲವರು ಇದ್ದರು.

ದೇವರ ಪಲ್ಲಕ್ಕಿಗಳ ಅದ್ದೂರಿ ಭೇಟಿ

ಝಳಕಿ: ನಾಲ್ಕು ಗ್ರಾಮಗಳಿಂದ ಬಂದ ದೇವರ ಪಲ್ಲಕ್ಕಿಗಳ ಭೇಟಿ ಅದ್ದೂರಿಯಾಗಿ ನಡೆಯಿತು.

ಸಮೀಪದ ಗೋಟ್ಯಾಳ ಗ್ರಾಮದ ಬೀರಲಿಂಗೇಶ್ವರ ದೇವರ ಜಾತ್ರಾಮಹೋತ್ಸವ ಪ್ರಯುಕ್ತ ಗೋಟ್ಯಾಳ ಗ್ರಾಮದ ಭೀರಲಿಂಗೇಶ್ವರ ದೇವರ ಪಲ್ಲಕ್ಕಿ, ಝಳಕಿ ಗ್ರಾಮದಿಂದ ಬೀರಲಿಂಗೇಶ್ವರ ದೇವರ ಪಲ್ಲಕ್ಕಿ, ಲೋಣಿ ಬಿಕೆ ಗ್ರಾಮದಿಂದ ಭೀರಲಿಂಗೇಶ್ವರ ದೇವರ ಪಲ್ಲಕ್ಕಿ, ಹಲಸಂಗಿ ಗ್ರಾಮದಿಂದ ಬಂದ ಮಾಳಿಂಗರಾಯ ದೇವರ ಪಲ್ಲಕಿಗಳ ವಾದ್ಯ ವೈಭಗಳನ್ನೊಂದಿಗೆ ಅದ್ದೂರಿವಾಗಿ ಬೇಟಿ ಕಾರ್ಯಕ್ರಮ ಜರಗಿತು. ಭಕ್ತರಿಂದ ದೇವರ ಪಲ್ಲಕ್ಕಿಗಳ ಮೇಲೆ ಭಂಡಾರ ಹಾಗೂ ಹೂ ಹಾರಿಸುವ ಮೂಲಕ ಭಕ್ತರು ತಮ್ಮ ಹರಕೆ ತೀರಿಸಿದರು.

ಗದಗಿ ಪೂಜಾರಿ ರೇವಪ್ಪ ಪೂಜಾರಿ, ಜಾತ್ರಾ ಕಮಿಟಿ ಅದ್ಯಕ್ಷ ರೇವಣಸಿದ್ದ ಅವಜಿ, ಶರಣಪ್ಪ ಪೂಜಾರಿ, ಬಸವರಾಜ ಡಂಗೆ, ದುಂಡಪ್ಪ ಪೂಜಾರಿ, ರಾಯಗೊಂಡ ಪೂಜಾರಿ, ದುಂಡಪ್ಪ ಖಿಲಾಟೆ, ಅಮಸಿದ್ಧ ಪೂಜಾರಿ, ಬೀರಪ್ಪ ಜಿಗಜೇಣಗಿ ಮಹಾದೇವ ಹಳಕೆ, ಉಮೇಶ ಕಾರಕಲ್ಲ, ಅಮಸಿದ್ದ ಡಾಳೆ, ಹಾಗೂ ಸಮಸ್ತ ಗ್ರಾಮಸ್ಥರು ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದು ಮನೆಗೊಂದು ಗ್ರಂಥಾಲಯ ಅನುಷ್ಠಾನ

ಕುಷ್ಟಗಿ: ಪಟ್ಟಣದ ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪುರ ಮಾಜಿ ಶಾಸಕ ಕೆ.ಶರಣಪ್ಪ ವಕೀಲರು, ಸಾಹಿತಿಗಳಾದ ಅಮರೇಗೌಡ ಜಾಲಿಹಾಳ, ಡಾ.ನಾಗರಾಜ ಹೀರಾ ಅವರ ಮನೆಯಲ್ಲಿ ಏ.18ರಂದು ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮ ಬೆಳಿಗ್ಗೆ 10:30ಕ್ಕೆ ನಡೆಯಲಿದೆ. ಕನ್ನಡ ಮತ್ತು ಸಾಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಜಿಲ್ಲಾ ಜಾಗೃತಿ ಸಮಿತಿ ಸಹಯೋಗದೊಂದಿಗೆ ನಡೆಯುವ ಈ ಕಾರ್ಯಕ್ರಮದ ಉದ್ಘಾಟನೆ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ನೆರವೇರಿಸಲಿದ್ದಾರೆ. ಅಲ್ಲಮಪ್ರಭು ಬೆಟ್ಟದೂರ, ಜಿಲ್ಲಾ ಕಸಾಪ ಅಧ್ಯಕ್ಷ ಶರಣೇಗೌಡ ಪೊಲೀಸ್ ಪಾಟೀಲ ಸೇರಿದಂತೆ ಪ್ರಾಧಿಕಾರದ ಸದಸ್ಯರಾದ ಡಾ.ಶರಣಬಸಪ್ಪ ಕೋಲ್ಕಾರ, ಜಿಲ್ಲಾ ಗ್ರಂಥಾಲಯ ಜಾಗೃತಿ ಸಮಿತಿ ಸಂಚಾಲಕ ಜಿ.ಎಸ್.ಗೋನಾಳ ಉಪಸ್ಥಿತರಿರುವರು ಎಂದು ಜಿಲ್ಲಾ ಗ್ರಂಥಾಲಯ ಜಾಗೃತಿ ಸಮಿತಿ ಸದಸ್ಯರಾದ ರವಿಂದ್ರ ಬಾಕಳೆ ತಿಳಿಸಿದ್ದಾರೆ.


ಜ್ಞಾನ ಬಂಧು ಸಿಬಿಎಸ್‌ಇ ಶಾಲೆಗೆ ಉತ್ತಮ ಫಲಿತಾಂಶ



ಕೊಪ್ಪಳ: ಭಾಗ್ಯನಗರದ ಜ್ಞಾನ ಬಂಧು ಸಿ.ಬಿ.ಎಸ್.ಇ. ಶಾಲೆಯ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದಿದ್ದಾರೆ. ಒಟ್ಟು 79 ವಿದ್ಯಾರ್ಥಿಗಳು ಹಾಜರಾಗಿದ್ದು, 11 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 47 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಚಿನ್ಮಯ 500 ಕ್ಕೆ 473 ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನದಲ್ಲಿದ್ದಾನೆ. ಪ್ರತಿಭಾ 500 ಕ್ಕೆ 470 ಅಂಕಗಳು, ಪವನ್ ಕುಮಾರ 500 ಕ್ಕೆ 464 ಅಂಕಗಳನ್ನು ಗಳಿಸಿ ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದ್ದಾರೆ. ಹಿಂದಿಯಲ್ಲಿ 1, ಮಾಹಿತಿ ಮತ್ತು ತಂತ್ರಜ್ಞಾನದಲ್ಲಿ 2 ವಿದ್ಯಾರ್ಥಿಗಳು ವಿಷಯವಾರು ಶೇ. 100 ರಷ್ಟು ಅಂಕಗಳನ್ನು ಸಾಧಿಸಿದ್ದಾರೆ. ಎಲ್ಲಾ ಸಾಧಕ ವಿದ್ಯಾರ್ಥಿಗಳು, ಪಾಲಕ-ಪೋಷಕರನ್ನು ಸಂಸ್ಥೆಯ ಅಧ್ಯಕ್ಷರಾದ ದಾನಪ್ಪ ಕವಲೂರು, ಶರತ್ ನೀಟ್ ಮತ್ತು ಜೆಇಇ ಅಕಾಡೆಮಿಯ ಅಧ್ಯಕ್ಷರಾದ ಪಿ. ಶರತ್‌ಚಂದ್ರ, ಶಾಲಾ ಪ್ರಾಂಶುಪಾಲರಾದ ಜ್ಯೋತಿ ಎಸ್.ಎಸ್. ಹಾಗೂ ಸಿಬ್ಬಂದಿವರ್ಗ ಅಭಿನಂದಿಸಿದ್ದಾರೆ.

ಇಂದು ಅಣ್ಣಪ್ಪ ಸ್ವಾಮಿ ದೇವಸ್ಥಾನ ಉದ್ಘಾಟನೆ

ಗಾದಿಗನೂರು: ಹೊಸಪೇಟೆ ತಾಲೂಕು ಗಾದಿಗನೂರು ಗ್ರಾಮದಲ್ಲಿ ಏ.18ರಿಂದ 20ರವರೆಗೆ ನೂತನವಾಗಿ ನಿರ್ಮಾಣವಾಗಿರುವ ಅಣ್ಣಪ್ಪ ಸ್ವಾಮಿ ದೇವಸ್ಥಾನ ಉದ್ಘಾಟನೆ, ಮೂರ್ತಿ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಏ.18 ಬೆಳಗ್ಗೆ 8ರಿಂದ 9.30ರವರೆಗೆ ಹಂಪಿ ತುಂಗಭದ್ರ ನದಿಯಿಂದ ಗಂಗೆ ತಂದು ರೇವಣಸಿದ್ದೇಶ್ವರ ದೇವಸ್ಥಾನದಿಂದ ಗಂಗೆ ಪೂಜೆ ಜರುಗುವುದು. ಮಂಗಳವಾದ್ಯ ಸುಮಂಗಲೆಯರಿಂದ ಕಳಸ ಕುಂಭದೊಂದಿಗೆ ಪುರ ಪ್ರವೇಶ ಕಾರ್ಯಕ್ರಮ ನಡೆಯಲಿದೆ. ಶ್ರಿಚ್ಚಾಚರಣೆ ಧರ್ಮಸ್ಥಳ ಕ್ಷೇತ್ರದಿಂದ ನೇತ್ರಾವತಿ ನದಿ ನೀರಿನಿಂದ ಆಲಯ ದ್ರವೀಶ ಜಲಾದಿವಸ ಕಾರ್ಯಕ್ರಮ, ಮಹಾಮಂಗಳಾರತಿ ತೀರ್ಥ ಪ್ರಸಾದ ನಡೆಯಲಿದೆ. ಸಂಜೆ 5ರಿಂದ ಗಣಪತಿ ಹೋಮ ಸ್ವಸ್ತಿ ಪುಣ್ಯಾಹ ವಾಚಕ, ಪಂಚಗವ್ಯ ಪ್ರಾಶನ, ರಕ್ಷಾ ಬಂಧನ ರಕ್ಷೋಘ್ನ ಹೋಮ, ವಾಸ್ತು ಹೋಮ, ಕ್ಷೀರಾಧಿವಸ, ಮಹಾಮಂಗಳಾರತಿ ಜರುಗುವುದು. ಏ. 19ರಂದು ಬೆಳಗ್ಗೆ 8.30 ರಿಂದ ಅಖಂಡ ಜ್ಯೋತಿ ಸ್ಥಾಪನೆ, ಶೈವಾಗ್ನಿ ಪ್ರತಿಷ್ಠೆ, ದಾನ್ಯದಿವಸ, ಮಹಾಮಂಗಳಾರತಿ ಕಾರ್ಯಕ್ರಮ ಜರಗುವವು. ಏ.20 ಬೆಳಗ್ಗೆ 4ಯಿಂದ ಸಂಜೆ 6 ರೊಳಗಾಗಿ ಯಂತ್ರ ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮ ನಡೆಯಲಿದೆ. ಇದೇ ಸಂದರ್ಭದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಲಾಗಿದೆ. ಆದಕಾರಣ ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರು, ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ತನು ಮನ ಧನ ಸೇವೆ ಸಲ್ಲಿಸಬೇಕೆಂದು ಅಣ್ಣಪ್ಪ ಸ್ವಾಮಿ ಸೇವಾ ಸಮಿತಿಯವರು ತಿಳಿಸಿದರು.





ಕುಕನೂರು: ತಾಲೂಕಿನ ಲಕಾಮಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದ್ವಾರಕಾ ಮಯಿ ಫೌಂಡೇಶನ್ ಗದಗ, ಸೇರಂಟೀಕಾ ರಿನಿವಲ್ ಸೋಲಾರ ವಿಭಾಗದಿಂದ ವಿಜ್ಞಾನ, ಕ್ರೀಡಾ ಕಿಟ್ ವಿತರಣಾ, ಶುದ್ಧ ಕಡಿಯುವ ಘಟಕ ವಿತರಣಾ ಸಮಾರಂಭ ಜರುಗಿತು. ದ್ವಾರಕಾಮಯಿ ಸಂಸ್ಥೆಯ ಸ್ಥಾಪಕ ವಿನಾಯಕ್ ಆರ್., ಆಡಳಿತಾಧಿಕಾರಿ ಕೆ.ಟಿ.ಮುಲ್ಲಾ, ಸದಸ್ಯರಾದ ಗಣೇಶ ಚವಡಿ, ವ್ಯವಸ್ಥಾಪಕ ಕಲ್ಯಾಣಿ, ಮಲ್ಲೇಶ್ ಮೂರ್ತಿ, ಕಿಶೋರಕುಮಾರ್, ರಾಜೇಂದ್ರ, ಬಿ.ಸುಭಾಷ, ನಾಗಪ್ಪ, ಸಿದ್ದಪ್ಪ, ಬಿಆರ್‌ಪಿ ಶಿವಪ್ಪ ಇಬೆರಿ, ಎಸ್‌ಡಿಎಂಸಿ ಅಧ್ಯಕ್ಷ ಶರಣಪ್ಪ ಅವಾರಿ ಇದ್ದರು.

ಅಂಬೇಡ್ಕರ್ ವೃತ್ತ ನಿರ್ಮಾಣಕ್ಕೆ ಭೂಮಿಪೂಜೆ

ಮುನಿರಾಬಾದ್: ಕರ್ನಾಟಕದ ದಲಿತ ಸಂಘರ್ಷ ಸಮಿತಿ ಸಂಘದಿಂದ ಡಾ.ಬಿ.ಆರ್. ಅಂಬೇಡ್ಕರ್ ಅವರ 35ನೆಯ ಜಯಂತಿ ಅಂಗವಾಗಿ ಶಿವಪುರ ಕ್ರಾಸ್‌ನಲ್ಲಿ ಭಾವಚಿತ್ರಕ್ಕೆ ಪುಷ್ಪ ಹಾಕುವ ಮೂಲಕ ಜಯಂತಿಯನ್ನು ವಿಜ್ರಂಭಣೆಯಿಂದ ಆಚರಿಸಲಾಯಿತು.

ನಂತರ ಶಿವಪುರ ಕ್ರಾಸ್‌ನಲ್ಲಿ ಅಂಬೇಡ್ಕರ್ ವೃತ್ತ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಯಿತು. ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಮಕ್ಕಳು ಹಾಗೂ ಪತ್ರಕರ್ತರನ್ನ ಸನ್ಮಾನಿಸಲಾಯಿತು.

ಅಂಬೇಡ್ಕರ್ ಅವರ ಆದರ್ಶ ತತ್ವಗಳನ್ನು ನಾವು ಅಳವಡಿಸಿಕೊಂಡಾಗ ಮಾತ್ರ ಸಂಘಟನೆಗೆ ಮಹತ್ವ ಬರುತ್ತದೆ. ಪ್ರತಿಯೊಬ್ಬ ಶಾಲೆಗೆ ಹೋಗುವಾಗ ವಿದ್ಯಾರ್ಥಿಗಳು ಅಂಬೇಡ್ಕರ್ ಅವರ ಭಾವಚಿತ್ರ ನೋಡಿ ನಾನೊಬ್ಬ ಆದರ್ಶ ವ್ಯಕ್ತಿ ಆಗಬೇಕೆಂಬ ವಿದ್ಯಾರ್ಥಿಗಳಿಗೆ ಬಯಕೆ ಬರಬೇಕು ಎಂದು ಮಾಜಿ ಉಪಾಧ್ಯಕ್ಷ ವೆಂಕಟೇಶ್ ತಿಳಿಸಿದರು. ಡಿಎಸ್‌ಎಸ್ ಜಿಲ್ಲಾಧ್ಯಕ್ಷ ಪರಶುರಾಮ್ ಕೆರೆಹಳ್ಳಿ, ದಲಿತ ಮುಖಂಡರಾದ ಸಂಜೀವ್ ದಾಸರ್, ಚೆನ್ನಪ್ಪ ಸಂಜೀವ್ ನಾಯಕ್, ಮಾಜಿ ಸೈನಿಕ ಗೋಣಿಬಸಪ್ಪ ಕರ್ಕಿಹಳ್ಳಿ, ಮಹೇಶ್‌ಗೌಡ ನಂದಾಪುರ್, ವಿರೂಪಾಕ್ಷಿ ಕಡೆಮನಿ, ಧರ್ಮಣ್ಣ ಹಟ್ಟಿ, ಕೆ.ಎಸ್.ಮೈಲಾರಪ್ಪ, ಡಿಎಸ್‌ಎಸ್ ರಾಜ್ಯಾಧ್ಯಕ್ಷ ಹುಲುಗಪ್ಪ ಬಾಳಿಕಾಯಿ, ರೈತ ಸಂಘ ಅಧ್ಯಕ್ಷ ರಾಜ ಸಾಬ್ ಬಾಳಿಕಾಯಿ, ಚನ್ನಪ್ಪ ಶಲೋಡಿ, ಹನುಮೇಶ್ ನಾಯಕ್, ಗ್ರಾಪಂ ಮಾಜಿ ಸದಸ್ಯರು ಹಾಗೂ ದಲಿತ ಮುಖಂಡರು ಉಪಸ್ಥಿತರಿದ್ದರು.



ಮುನಿರಾಬಾದ್: ಕರ್ನಾಟಕದ ದಲಿತ ಸಂಘರ್ಷ ಸಮಿತಿ ಸಂಘದಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 35ನೆಯ ಜಯಂತಿ ಅಂಗವಾಗಿ ಶಿವಪುರ ಕ್ರಾಸ್‌ನಲ್ಲಿ ಭಾವಚಿತ್ರಕ್ಕೆ ಪುಷ್ಪ ಹಾಕುವ ಮೂಲಕ ಜಯಂತಿಯನ್ನು ವಿಜ್ರಂಭಣೆಯಿಂದ ಆಚರಿಸಲಾಯಿತು.

ಸಿಯುಕೆ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಅಭಿಮತ

ತಂತ್ರಜ್ಞಾನದಲ್ಲಿ ಭಾರತ ಮುಂಚೂಣಿ

ಕಲಬುರಗಿ: ಭಾರತವು ಕೃತಕ ಬುದ್ಧಿಮತ್ತೆ, ಅಂತರಿಕ್ಷ ಹಾಗೂ ವೈರ್‌ಲೆಸ್ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದಲ್ಲಿ ಮುನ್ನಡೆಯುತ್ತಿದ್ದು, ಇಸ್ರೋ ಮತ್ತು ಡಿಆರ್‌ಡಿಆರ್‌ಒ ಸಂಸ್ಥೆಗಳು ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತಿವೆ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಹೇಳಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ವಿಭಾಗ ವತಿಯಿಂದ ಶುಕ್ರವಾರ ಐಇಇಇ ಎಪಿ-ಎಸ್ ಎಂಟಿಟಿ-ಎಸ್ ವಿದ್ಯಾರ್ಥಿ ಘಟಕ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ವಿದ್ಯಾರ್ಥಿಗಳ ತಾಂತ್ರಿಕ ಜ್ಞಾನ ಹಾಗೂ ಹೊಸ ನವೀನತೆ ವೃದ್ಧಿಗೆ ಇದು ವಿವಿಯಲ್ಲಿ ಮಹತ್ವದ ಹೆಜ್ಜೆಯಾಗಲಿದೆ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ಇಟಲಿಯ ಐಇಇಇ 2024ರ ಮೈಕ್ರೋವೇವ್ ಥಿಯರಿ ಆ್ಯಂಡ್ ಟೆಕ್ನಾಲಜಿ ಸೊಸೈಟಿ ಅಧ್ಯಕ್ಷ, ಇಟಲಿಯ ಪಾವಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಮೌರಿಜಿಯೋ ಬೊಜ್ಜಿ ಮಾತನಾಡಿ, 1952ರಲ್ಲಿ ಸ್ಥಾಪಿತವಾದ ಐಇಇಇ ಸಂಸ್ಥೆ ಇಂದು 18, 000ಕ್ಕೂ ಹೆಚ್ಚು ಸದಸ್ಯರು ಹೊಂದಿದ್ದು ಹಾಗೂ ಸುಮಾರು ಇಡೀ ದೇಶದಲ್ಲಿ 400 ಶಾಖೆಗಳೊಂದಿಗೆ ಜಾಗತಿಕ ಮಟ್ಟದಲ್ಲಿ ಬೆಳೆಯುತ್ತಿದೆ ಎಂದು ಹೇಳಿದರು.

ಭಾರತೀಯ ಅಂತರಿಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಪ್ರೊ.ಚಿನ್ಮಯ ಸಾಹಾ ಮಾತನಾಡಿ, ಐಇಇಇ ನೀಡುವ ಅವಕಾಶ ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಂಡು ಹೊಸ ತಂತ್ರಜ್ಞಾನ ಹಾಗೂ ನವೀನತೆಯಲ್ಲಿ ತೊಡಗಿಕೊಳ್ಳುವಂತೆ ಕರೆ ನೀಡಿದರು.



> ಐಇಇಇ-ಎಂಟಿಟಿ-ಎಸ್ ಶಾಖೆ,ಯೂಜಿ-ಪಿಜಿ ಹಾಗೂ ಪಿಹೆಚ್‌ಡಿ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಲಿದೆ. ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ತಮ್ಮ ಗುರಿ ಸಾಧನೆಗೆ ಮುಂದಾಗಬೇಕು. ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ಆರಂಭಿಸಲಾದ 'ಒನ್ ನೇಷನ್ ಒನ್ ಸಬ್ ಸ್ಕ್ರಿಪ್ಷನ್' ಯೋಜನೆ ಮೂಲಕ ಅನೇಕ ಶೈಕ್ಷಣಿಕ ಜರ್ನಲ್‌ಗಳಿಗೆ ಪ್ರವೇಶ ಲಭ್ಯವಾಗುತ್ತಿರುವುದನ್ನು ಉಲ್ಲೇಖಿಸಿ, ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಬೇಕು.
>
> ■ ಪ್ರೊ.ಬಟ್ಟು ಸತ್ಯನಾರಾಯಣ, ಸಿಯುಕೆ ಕುಲಪತಿ

- ಭಾರತವು ಕೃತಕ ಬುದ್ಧಿಮತ್ತೆ, ಅಂತರಿಕ್ಷ ಹಾಗೂ ವೈರ್‌ಲೆಸ್ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಜಾಗತಿಕ ಮಟ್ಟದಲ್ಲಿ ಮುನ್ನಡೆಯುತ್ತಿದೆ.
- ಐಇಇಇ ನೀಡುವ ಅವಕಾಶ ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಂಡು ಹೊಸ ತಂತ್ರಜ್ಞಾನ ಹಾಗೂ ನವೀನತೆಯಲ್ಲಿ ತೊಡಗಿಕೊಳ್ಳಬೇಕು.

ಎಂಜಿನಿಯರಿಂಗ್ ವಿಭಾಗದ ಡೀನ್ ಪ್ರೊ.ಪರಮೇಶ್ ಅವರು ಸ್ವಾಗತ ಭಾಷಣ ಮಾಡಿದರು. ಡಾ.ಎನ್ .ಸಿ.ಪ್ರಧಾನ ಕಾರ್ಯಕ್ರಮ ಸಂಯೋಜಿಸಿದರು. ಪ್ರೊ. ರಾಜೀವ್ ಜೋಶಿ, ವಿಭಾಗದ ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಡಾ.ರಾಜ್‌ಕುಮಾರ್ ಜನ್ಮ ದಿನಾಚರಣೆ ಸಿದ್ಧತೆಗೆ ಅಪರ ಜಿಲ್ಲಾಧಿಕಾರಿ ಸೂಚನೆ

ಕೊಪ್ಪಳ: ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸಹಯೋಗದಲ್ಲಿ ಡಾ. ರಾಜ್‌ಕುಮಾರ್ ಜನ್ಮ ದಿನಾಚರಣೆಯ ಕಾರ್ಯಕ್ರಮ ರಾಜ್ ಸಂಭ್ರಮವು ಏಪ್ರೀಲ್ 24ರಂದು ಸಂಜೆ 5.30ಕ್ಕೆ ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದ್ದು, ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ತಿಳಿಸಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏಪ್ರೀಲ್ 17ರಂದು ಹಮ್ಮಿಕೊಂಡಿದ್ದ ಡಾ.ರಾಜಕುಮಾರ ಜಯಂತಿ ಆಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡದ ಮೇರು ನಟ, ನಟಸಾರ್ವಭೌಮ ಡಾ.ರಾಜ್ ಕುಮಾರ್ ಅವರು ಈ ನಾಡು ಕಂಡ ನೆಚ್ಚಿನ ನಟರಾಗಿದ್ದಾರೆ. ಗೋಕಾಕ ಚಳವಳಿ ಸೇರಿದಂತೆ ಅನೇಕ ಕನ್ನಡಪರ ಹೋರಾಟಗಳಲ್ಲಿ ಭಾಗಿಯಾಗಿ ನಾಡು-ನುಡಿಗಾಗಿ ಮಹತ್ತರ ಸೇವೆ ಸಲ್ಲಿಸಿದಮಹನಿಯರಾಗಿದ್ದಾರೆ.ತಮ್ಮದೇ ಆದ ವಿಶೇಷ ನಟನೆಯಿಂದಾಗಿ ಕನ್ನಡಿಗರ ಮನೆಮಾತಾದ ಡಾ.ರಾಜಕುಮಾರ ಅವರು ಎಲ್ಲ ಬಗೆಯ ಪಾತ್ರಗಳಲ್ಲಿ ಮನಮಿಡಿಯುವಂತೆ ನಟಿಸಿ ಕಲಾರಾಧಕರ ಹೃದಯಗೆದ್ದಿದ್ದಾರೆ. ಅಂತಹ ಮಹನಿಯರ ಜಯಂತಿ ಕಾರ್ಯಕ್ರಮ ಕೊಪ್ಪಳ ಜಿಲ್ಲೆಯಲ್ಲಿ ಸಹ ವಿಶೇಷವಾಗಿ ನಡೆಯಬೇಕು. ಇದಕ್ಕಾಗಿ ಜವಾಬ್ದಾರಿ ಹಂಚಿಕೆ ಮಾಡಿದಂತೆ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ಕೆಲಸ ನಿರ್ವಹಿಸಿ, ಡಾ.ರಾಜ್ ಸಂಭ್ರಮ ಕಾರ್ಯಕ್ರಮವು ಅದ್ದೂರಿಯಾಗಿ ನಡೆಯುವಂತೆ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಬೆಂಗಳೂರಿನ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸದಸ್ಯರಾದ ಸಾವಿತ್ರಿ ಮುಜುಮದಾರ, ಕೊಪ್ಪಳ ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಕನ್ನಡ ಪರ ಹೋರಾಟಗಾರರಾದ ಮಹಾಂತೇಶ ಕೊತಬಾಳ ಅವರು ಮಾತನಾಡಿದರು. ಜಿಪಂ ಸಹಾಯಕ ಕಾರ್ಯದರ್ಶಿ ಎಸ್. ಆರ್ ಪೂಜಾರ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಜಗದೀಶ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಲೆಕ್ಕ ಅಧೀಕ್ಷಕರಾದ ಎ.ಆಂಜನೇಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯವಸ್ಥಾಪಕಾರದ ಉಷಾ ಮುಜುಮ್‌ದಾರ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎ.ಬಸವರಾಜ, ಸಹಾಯಕ ಕೃಷಿ ನಿರ್ದೇಶಕರಾದ ರೇವಣಪ್ಪ ಮನಗೂಳಿ, ವಾರ್ತಾ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ರಾಜ್ಯಮಟ್ಟದ ಮುಕ್ತ ಸ್ಪರ್ಧಾತ್ಮಕ ಪರೀಕ್ಷೆ



ಮುನಿರಾಬಾದ್: ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯ ನಿಮಿತ್ಯ ಶುಕ್ರವಾರ ಗ್ರಾಮ ಪಂಚಾಯಿತಿ ಕಾರ್ಯಾಲಯ ವನಬಳ್ಳಾರಿ ಹಾಗೂ ಅರಿವು ಕೇಂದ್ರ ವನಬಳ್ಳಾರಿಯವರ ಆಶ್ರಯದಲ್ಲಿ ಜರುಗಿದ ರಾಜ್ಯಮಟ್ಟದ ಮುಕ್ತ ಸ್ಪರ್ಧಾತ್ಮಕ ಪರೀಕ್ಷೆ ಯಶಸ್ವಿಯಾಗಿ ಜರುಗಿತು.

ಈ ಪರೀಕ್ಷೆಯಲ್ಲಿ ಯಾದಗಿರಿ, ಧಾರವಾಡ ಹಾಗೂ ಕಲ್ಬುರ್ಗಿ ಜಿಲ್ಲೆಗಳ ಅನೇಕ ಅಭ್ಯರ್ಥಿಗಳು ಭಾಗವಹಿಸಿದರು. ನಮ್ಮ ಭಾಗದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಆಸಕ್ತಿ ಮೂಡಿಸುವ ಸದುದ್ದೇಶದಿಂದ ಗ್ರಾಮ ಪಂಚಾಯಿತಿ ಈ ಪರೀಕ್ಷೆ ಆಯೋಜಿಸಲಾಗಿತು.

ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಹಾಗೂ ಸಿಬ್ಬಂದಿ ವರ್ಗದವರ ಸಮರ್ಪಕ ಸಹಕಾರದಿಂದ ಪರೀಕ್ಷೆ ಅತ್ಯಂತ ಸುಸೂತ್ರ ಮತ್ತು ಯಶಸ್ವಿಯಾಗಿ ನಡೆಯಿತು.

ಪರೀಕ್ಷೆ ಮುಗಿದ ಒಂದು ಗಂಟೆಯೊಳಗೆ ಫಲಿತಾಂಶ ಪ್ರಕಟಿಸಿದರು. ಅತಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಘೋಷಿಸಿ ನಗದು ಬಹುಮಾನ ವಿತರಿಸಲಾಯಿತು. ಐದು ವಿದ್ಯಾರ್ಥಿಗಳಿಗೆ ಸಮಾಧಾನಕರ ಬಹುಮಾನವಾಗಿ ಡಾ.ಗಂಗಾಧರಪ್ಪ ಪಿ.ಎಸ್. ರಚಿಸಿದ ಭಾರತ ಸಂವಿಧಾನ ಪುಸ್ತಕ ವಿತರಿಸಲಾಯಿತು.ಪ್ರಥಮ, ದ್ವಿತೀಯ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಿದರು.

ಈ ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಿದ ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಕೆ.ಬಸವರಾಜ್, ಅಭಿವೃದ್ಧಿ ಅಧಿಕಾರಿಗಳು, ಉಪನ್ಯಾಸಕ ರಾಜಕುಮಾರ್ ಹಾಗೂ ಗ್ರಂಥಾಲಯ ಮೇಲ್ವಿಚಾರಕ ರವಿ ಬಡಿಗೇರ್ ಎಲ್ಲ ಗ್ರಾಪಂ ಸಿಬ್ಬಂದಿ ಉಪಸ್ಥಿತರಿದ್ದರು.

ರಾಷ್ಟ್ರೀಯ ಜನಗಣತಿಗೆ ಪಪಂ ಮುಖ್ಯಾಧಿಕಾರಿ ರಾಯನಗೌಡ ಚಾಲನೆ

ಹನುಮಸಾಗರ: ರಾಷ್ಟ್ರೀಯ ಜನಗಣತಿ ಕಾರ್ಯ ಏ.16ರಿಂದ ಅಧಿಕೃತವಾಗಿ ಆರಂಭವಾಗಿದ್ದು, ಸಾರ್ವಜನಿಕರು ಗಣತಿದಾರರು ಮನೆಗೆ ಬಂದಾಗ ಸಮರ್ಪಕ ಹಾಗೂ ನಿಖರ ಮಾಹಿತಿ ನೀಡಬೇಕು ಎಂದು ಪಪಂ ಮುಖ್ಯಾಧಿಕಾರಿ ರೆಡ್ಡಿ ರಾಯನಗೌಡ ಹೇಳಿದರು.

ಪಪಂ ಕಾರ್ಯಾಲಯದಲ್ಲಿ ಇತ್ತೀಚಿಗೆ ನಡೆದ ರಾಷ್ಟ್ರೀಯ ಜನಗಣತಿಗೆ ಪಪಂ ಮುಖ್ಯಾಧಿಕಾರಿ ರೆಡ್ಡಿ ರಾಯನಗೌಡ ಚಾಲನೆ ನೀಡಿ, ಮಾತನಾಡಿ, ಗಣತಿ ಕಾರ್ಯ ಅತ್ಯಂತ ವ್ಯವಸ್ಥಿತ ಹಾಗೂ ನಿಖರವಾಗಿ ಕೈಗೊಳ್ಳಬೇಕು. ಗಣತಿ ಆರಂಭಿಸುವಾಗ ಯಾವುದೇ ಗೊಂದಲಗೊಳ್ಳದೇ ಮೂಲ ರಸ್ತೆಯಿಂದ ಕಾರ್ಯ ಪ್ರಾರಂಭಿಸಬೇಕು. ಪ್ರತಿ ಮನೆ ಹಾಗೂ ಲ್ಯಾಂಡ್‌ಮಾರ್ಕ್ ಸ್ಪಷ್ಟವಾಗಿ ದಾಖಲಿಸಬೇಕು. ಗಣತಿ ವೇಳೆ ಬಳಸುವ ಮೊಬೈಲ್ ಆ್ಯಪ್‌ಗಳಲ್ಲಿ ಕೆಲವು ತಾಂತ್ರಿಕ ಸಮಸ್ಯೆ ಉಂಟಾದಲ್ಲಿ ಕೂಡಲೇ ಮೇಲಾಧಿಕಾರಿಗಳ ಗಮನಕ್ಕೆ ತರಬೇಕು ಎಂದರು.

ಗಣತಿ ಕಾರ್ಯಕ್ಕಾಗಿ ಒಟ್ಟು 20 ಬ್ಲಾಕ್‌ಗಳನ್ನು ಗುರುತಿಸಲಾಗಿದೆ. ಈ ಕಾರ್ಯಕ್ಕಾಗಿ 26 ಗಣತಿದಾರರನ್ನು ಹಾಗೂ ಅವರಿಗೆ ಮಾರ್ಗದರ್ಶನ ನೀಡಲು 6 ಜನ ಮೇಲ್ವಿಚಾರಕರನ್ನು ನೇಮಕ ಮಾಡಿ ಜವಾಬ್ದಾರಿ ಹಂಚಿಕೆ ಮಾಡಲಾಗಿದೆ ಎಂದರು.

ಮೇಲ್ವಿಚಾರಕ ಕಿಶನರಾವ್ ಕುಲಕರ್ಣಿ ಮಾತನಾಡಿ, ಮೊದಲ ಮೂರು



ದಿನಗಳ ಕಾಲ ಮ್ಯಾಪಿಂಗ್ ಪ್ರಕ್ರಿಯೆ ನಡೆಯಲಿದ್ದು, ನಂತರ ಮನೆ-ಮನೆಗೆ ಗಣತಿ ಆರಂಭವಾಗಲಿದೆ. ಸಾರ್ವಜನಿಕರು ಈಗಾಗಲೇ ಆನ್‌ಲೈನ್ ಮೂಲಕ ಸ್ವಯಂ ಗಣತಿ ಮಾಡಿಕೊಂಡಿದ್ದರೆ, ಅದರಲ್ಲಿ ಏನಾದರೂ ತಿದ್ದುಪಡಿವಿದರೆ ಗಣತಿದಾರರು ಮನೆಗೆ ಬಂದಾಗ ಸರಿಪಡಿಸಿಕೊಂಡು ದೃಢೀಕರಿಸಲು ಅವಕಾಶವಿದೆ ಎಂದು ಮಾಹಿತಿ ನೀಡಿದರು.

ಮೇಲ್ವಿಚಾರಕ ರಾಮಚಂದ್ರ ಬಡಿಗೇರ, ಹಬೀಬಪಾಶಾ ಮಕಾಂದಾರ, ಹುಲಗಪ್ಪ ಕೊಪ್ಪಳ, ಚಂದ್ರಶೇಖರ ಗುಳೆದ ಸೇರಿದಂತೆ ಪಪಂ ಸಿಬ್ಬಂದಿ ಮಹಾಂತಯ್ಯ ಕೊಮಾರಿ, ವೀರೇಶ ಕುರನಾಳ, ಹನುಮೇಶ ಪತ್ತಾರ, ಬಸವರಾಜ ಶಿವಸಿಂಪಿ, ಚಂದಯ್ಯ ಹಿರೇಮಠ, ಮಹಿಬೂಬ್ ಇತರರಿದ್ದರು.

ಅಗ್ನಿ ಶಾಮಕ ಸೇವಾ ಸಪ್ತಾಹಕ್ಕೆ ಚಾಲನೆ

ಕುಷ್ಟಗಿ: ಅಗ್ನಿಯಿಂದ ಉಂಟಾಗುವ ಅವಘಡ ಕಾಪಾಡಿಕೊಳ್ಳಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಅಗ್ನಿಶಾಮಕ ಠಾಣಾಧಿಕಾರಿ ಮಾಳಿಂಗರಾಯ ಹೇಳಿದರು.

ಪಟ್ಟಣದ ಗಮಗೇರಾ ರಸ್ತೆಯಲ್ಲಿರುವ ಸೋಲಾರ್ ಕಂಪನಿ ಆವರಣದಲ್ಲಿ ಹಮ್ಮಿಕೊಂಡಿದ್ದ ಅಗ್ನಿಶಾಮಕ ಮಾಕ್ ಡ್ರಿಲ್ ಅಣುಕು ಪ್ರದರ್ಶನಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು.

ಬೆಂಕಿ ಅನಾಹುತ ತಡೆಗಟ್ಟುವಂತಹ ಮುನ್ನೆಚ್ಚರಿಕೆ ಸಾರ್ವಜನಿಕರು ಮುಂಜಾಗ್ರತ ಕ್ರಮ ಸಾರ್ವಜನಿಕರು ಅಗ್ನಿ ಸುರಕ್ಷತೆಯಿಂದ ಜಾಗೃತಿ ಕೈಗೊಳ್ಳಲು ಮುಂದಾಗಲಿ. ಅಗ್ನಿ ಅವಘಡ ಜೀವ ಮತ್ತು ಆಸ್ತಿ ನಷ್ಟಕ್ಕೆ ಸುರಕ್ಷತೆ ನಿಯಮ ಪಾಲಿಸಬೇಕು. ಯಾವುದೇ ತುರ್ತು ಪರಿಸ್ಥಿತಿಯಲ್ಲಿ ಅಗ್ನಿಶಾಮಕದಳ ಪ್ರಯೋಜನೆ ಪಡೆದುಕೊಳ್ಳಬೇಕು. ಏ.14ರಿಂದ 20ರವರಗೆ ಅಗ್ನಿಶಾಮಕ ಸೇವಾ ಸಪ್ತಾಹ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ತಿಳಿಸಿದರು.



ಅಗ್ನಿಶಾಮಕ ಸಹಾಯಕ ಅಧಿಕಾರಿ ಅಸ್ಮಾಂ ಪುಣೇಕರ್, ಅಧಿಕಾರಿ ನಾಗಪ್ಪ ಗಂಗನಾಳ, ಚಾಲಕ ಬಸವರಾಜ, ಸಿಬ್ಬಂದಿಗಳಾದ ಪ್ರವೀಣ, ಬಸವರಾಜ ಹೊರಕೇರಿ, ಮಲ್ಲಿಕಾರ್ಜುನ ಪ್ರಮುಖರಾದ ಸಾಗರ ಯಾದವ, ಆನಂದ ಹೊಸ್ಮನಿ, ಆನಂದ ಆರ್.ಕೆ., ಮಹೆಬೂಬ ಕಾರಜೋಳ್, ಪರಸಪ್ಪ ಅಳ್ಳಿ, ಬಸವನಗೌಡ ಪಾಟೀಲ ಇತರರಿದ್ದರು.

ಅಂಬೇಡ್ಕರ್, ಗಣ್ಯರ ಭಾವಚಿತ್ರಕ್ಕೆ ಅಪಮಾನ: ಪ್ರತಿಭಟನೆ

ಕುಕನೂರು: ಇತ್ತೀಚಿನ ದಿನಗಳಲ್ಲಿ ಸಂವಿಧಾನ ಶಿಲ್ಪಿ, ಜ್ಞಾನ ಭಂಡಾರ ಎಂದು ಕರೆಯುವ ಬಾಬಾ ಸಾಹೇಬರ ಮೇಲೆ ಹೀನಕೃತ್ಯ ಎಸಗುವವರ ಸಂಖ್ಯೆ ಹೆಚ್ಚಾಗಿದೆ. ಆದ್ದರಿಂದ ಅವರ ಅಭಿಮಾನಿಗಳಿಗೆ ಅತೀವ ನೋವುಂಟಾಗಿದೆ ಎಂದು ದಲಿತ ಸೇನೆಯ ಕೊಪ್ಪಳ ಜಿಲ್ಲಾಧ್ಯಕ್ಷ ಉಡಚಪ್ಪ ಶ್ರೀರಾಮನಗರ ಆಗ್ರಹಿಸಿದರು.

ಈ ಘಟನೆ ಕುರಿತು ಶುಕ್ರವಾರ ತಾಲೂಕಿನ ವೀರಾಪೂರ ಗ್ರಾಮದಲ್ಲಿ ದಲಿತ ಸೇನೆಯಿಂದ ಪ್ರತಿಭಟನೆ ನಡೆಸಿ ಅವರು ಮಾತನಾಡಿದರು.

ಬಾಬಾ ಸಾಹೇಬರು ಯಾವ ಜಾತಿ ಧರ್ಮದ ವಿರೋಧಿಗಳಲ್ಲ ಅವರು ಕೇವಲ ದಲಿತರಿಗೆ ಮಾತ್ರ ಸಂವಿಧಾನ ರಚನೆ ಮಾಡಿ ಮಿಸಲಾತಿಯನ್ನು ನೀಡಿಲ್ಲ, ಸರ್ವ ಜನಾಂಗಕ್ಕೆ ಒಳಿತನ್ನ ಬಯಸಿದವರು ಅಂತವರ ಭಾವಚಿತ್ರ, ಮೂರ್ತಿಗಳ ಮೇಲೆ ದುಷ್ಕರ್ಮಿಗಳು ಪದೇ ಪದೆ ಅವಮಾನ ಮಾಡುವ ಕಾರ್ಯ



ರಾಜ್ಯಾದ್ಯಂತ ನಿರಂತರವಾಗಿದೆ. ಅದರಲ್ಲಿ ನಮ್ಮ ಜಿಲ್ಲೆಯಲ್ಲಿ ಹೆಚ್ಚಾಗುತ್ತಿದೆ. ಇಂತಹ ಘಟನೆಗಳಿಂದ ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಕೇಲವು ವಿಕೃತ ಮನಸ್ಸುಗಳನ್ನು ಪತ್ತೆ ಹಚ್ಚಬೇಕು ಹಾಗೂ ಈ ಘಟನೆಯಲ್ಲಿ ಭಾಗಿಯಾದ ತಪ್ಪಿತಸ್ಥರನ್ನು ಪತ್ತೆ ಮಾಡಿ ಅವರನ್ನು ಗಡಿಪಾರು ಮಾಡಬೇಕು. ಬಾಬಾ ಸಾಹೇಬರು ಅಷ್ಟೇ ಅಲ್ಲದೆ ಅಲ್ಲಿರುವ ಡಾ.ಬಾಬು ಜಗಜೀವನ ರಾಂ, ಜ್ಯೋತಿಬಾ ಫುಲೆ, ಬಸವೇಶ್ವರರು ಸೇರಿದಂತೆ ಅನೇಕ ಮಹನೀಯರ ಭಾವಚಿತ್ರಕ್ಕೆ ಸಗಣಿ ಎರಚಿ ಅವಮಾನ ಮಾಡಿರುವ ಘಟನೆ ಅತ್ಯಂತ ಖಂಡನೀಯ ಅವರು ಯಾರೇ ಇರಲಿ ಅವರನ್ನು ತಕಗಷಣ ಬಂಧಿಸಬೇಕು ಹಾಗೂ ಉಗ್ರ ಶಿಕ್ಷೆಯಾಗಬೇಕು. ಇಲ್ಲವಾದಲ್ಲಿ ನಮ್ಮ ದಲಿತ ಸೇನೆಯಿಂದ ರಾಜ್ಯಾದ್ಯಂತ ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದರು.

ದಲಿತ ಸೇನೆಯ ಕುಕನೂರು ತಾಲೂಕು ಅಧ್ಯಕ್ಷ ಮುದಿಯಪ್ಪ ಭಲವಾದಿ, ಉಪಾಧ್ಯಕ್ಷ ಬಸವರಾಜ ಕಡೆಮನಿ, ಕಾರ್ಯದರ್ಶಿ ರಾಜೇಶ ಕಾಳಿ, ಮುಖಂಡರಾದ ಸೋಮಣ್ಣ ಬಡಿಗೇರ, ಮಹೇಶ ದೊಡ್ಡಮನಿ, ಶ್ರೀಕಾಂತ ಸೋಂಪೂರ, ಮುತ್ತು ಕುಕನೂರು, ಸೇರಿದಂತೆ ಅನೇಕ ಮುಖಂಡರಿದ್ದರು.

ಡಾ.ಅಂಬೇಡ್ಕರ್ ಜಯಂತಿ ಆಚರಣೆ

ಸಿಂಧನೂರು: ತಾಲೂಕಿನ ತುರುವಿಹಾಳ ಪಟ್ಟಣದ ಪ್ರತಿಷ್ಠಿತ ಬಸವಚೇತನ ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಪಿಯು ಕಾಲೇಜಿನಲ್ಲಿ ವಿಶ್ವ ಜ್ಞಾನದ ಸಂಕೇತ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ಅತ್ಯಂತ ಸಡಗರ-ಸಂಭ್ರಮದಿಂದ ಆಚರಿಸಲಾಯಿತು. ಆರಂಭದಲ್ಲಿ ಶಾಲೆಯ ಶಿಕ್ಷಕಿಯರು ಮತ್ತು ವಿದ್ಯಾರ್ಥಿಗಳು ಬಾಬಾಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಿದರು. ಈ ವೇಳೆ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ವಿರುಪಾಕ್ಷಪ್ಪ ಗಚ್ಚಿನಮನಿ, ಬಡತನ ಮತ್ತು ಅವಮಾನಗಳ ನಡುವೆಯೇ ಬೆಳೆದು ನಿಂತ ಅಂಬೇಡ್ಕರ್ ಅವರು,ತಮ್ಮ ಅವಿರತ ಪ್ರಯತ್ನ ಮತ್ತು ಪರಿಶ್ರಮದಿಂದ ಇಂದು ಜಗತ್ತಿಗೆ ಜ್ಞಾನದ ಸಂಕೇತವಾಗಿ ಹೊರಹೊಮ್ಮಿದ್ದಾರೆ. ಅವರ ಜೀವನದ ಹಾದಿ ನಮ್ಮೆಲ್ಲರಿಗೂ ದೊಡ್ಡ ಮಾರ್ಗದರ್ಶಿಯಾಗಿದೆ ಎಂದರು. ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠ ಹಾಗೂ ಆದರ್ಶಪ್ರಾಯವಾದ ಸಂವಿಧಾನವನ್ನು ರಚಿಸುವ ಮೂಲಕ ಅಂಬೇಡ್ಕರ್ ಅವರು ನಮಗೆ ಬದುಕಿನ ಬೆಳಕಾಗಿದ್ದಾರೆ ಎಂದರು. ಉಪನ್ಯಾಸಕಿಯರಾದ ಸಾವಿತ್ರಿ ಗಚ್ಚಿನಮನಿ, ಲಕ್ಷ್ಮೀಬಾಯಿ ಗುಡೂರು, ಶಿಕ್ಷಕರಾದ ಮಣಿಕಂಠ, ಚೆನ್ನಮ್ಮ ಬಟಾರಿ, ಸವಿತಾ ಗುಂಜಹಳ್ಳಿ, ಹನುಮಂತಿ ಗೌಡರ್, ಪ್ರೀಯಾಂಕ ಗಡ್ಯಾಳ ಸೇರಿದಂತೆ ಕಾಲೇಜಿನ ಸಿಬ್ಬಂದಿ ಇತರರಿದ್ದರು.



ತೊಗರಿಗೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಜಾರಿಯಾಗಲಿ

ಕಲಬುರಗಿ: ತೊಗರಿಗೆ ಸೂಕ್ತ ಬೆಂಬಲ ಬೆಲೆ ಸಿಗದೆ ಇರುವುದರಿಂದ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಬೆಳೆಗಾರರ ಬಗ್ಗೆ ವಿಶೇಷ ಕಾಳಜಿ ತೊಗರಿ ಬೆಳೆಗಾರರಿಗಾಗಿ ಕನಿಷ್ಠ ಬೆಂಬಲ ಬೆಲೆ ಕಾನೂನು ಜಾರಿಗೆ ತರಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಶರಣಬಸಪ್ಪ ಮಮಶೆಟ್ಟಿ ಆಗ್ರಹಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ಕ್ವಿಂಟಲ್ ತೊಗರಿಗೆ 12,500 ಬೆಂಬಲ ಬೆಲೆ ನಿಗದಿ ಮಾಡಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಪ್ರತಿ ಕ್ವಿಂಟಲ್‌ಗೆ 1 ಸಾವಿರ ಪ್ರೋತ್ಸಾಹಧನ ನೀಡಬೇಕು ಎಂದು ಒತ್ತಾಯಿಸಿದರು.

ತೊಗರಿ ತುರ್ತು ಖರೀದಿ ಕೇಂದ್ರಗಳನ್ನು ಆರಂಭಿಸಬೇಕು. ಹಾಲು ಉತ್ಪಾದಕರ ಸಹಕಾರ ಸಂಘಗಳ ಮಾದರಿಯಲ್ಲಿ ಖರೀದಿ ವ್ಯವಸ್ಥೆ



ರೂಪಿಸಬೇಕು. ಎಲ್ಲ ರೈತರಿಗೆ ಬೆಳೆ ವಿಮೆ ಸೌಲಭ್ಯ ನೀಡಬೇಕು. ರೈತರ ಸಾಲ ಮನ್ನಾ ಮಾಡಬೇಕು. ರೈತರ ಆತ್ಮಹತ್ಯೆ ಪ್ರಕರಣಗಳನ್ನು ತಡೆಗಟ್ಟಲು ತಕ್ಷಣ ಕ್ರಮ ಕೈಗೊಳ್ಳಬೇಕು. ವಿದೇಶಿ ತೊಗರಿ ಆಮದು ಮೇಲೆ ನಿಯಂತ್ರಣ ಹೇರಬೇಕು. ಡಾ.ಎಂ. ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಬೆಂಬಲ ಬೆಲೆ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ತೊಗರಿಗೆ ಬೆಂಬಲ ಬೆಲೆ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ರೈತರು ಮಾರುಕಟ್ಟೆಯಲ್ಲಿ ಕಾಯುತ್ತಾ ಸುಸ್ತಾಗಿದ್ದಾರೆ. ಸಾಲದ ಭಾರ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡರೈತರಕುಟುಂಬಗಳಿಗೆ ಪರಿಹಾರ ನೀಡುವ ಅರ್ಜಿಗಳನ್ನೂ ಸರ್ಕಾರ ತಿರಸ್ಕರಿಸುತ್ತಿರುವುದು ರೈತ ವಿರೋಧಿ ಧೋರಣೆಯಾಗಿದೆ ಎಂದು ಆರೋಪಿಸಿದರು.ಕರ್ನಾಟಕದ ತೊಗರಿ ನಾಡು ಎಂದೇ ಪ್ರಸಿದ್ಧಿಯಾದ ಕಲಬುರಗಿ ಜಿಲ್ಲೆಗೆ ಜಿ.ಐ.ಟ್ಯಾಗ್ ಮಾನ್ಯತೆ ಲಭಿಸಿದ್ದು, ಇಲ್ಲಿ ಉತ್ಪಾದನೆಯಾಗುವ ತೊಗರಿಯಲ್ಲಿ ಹೆಚ್ಚಿನ ಪ್ರಮಾಣದ ಪ್ರೋಟೀನ್ ಅಂಶವಿದೆ. ಆದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಸಮಸ್ಯೆಗಳತ್ತ ನಿರ್ಲಕ್ಷ್ಯ ವಹಿಸುತ್ತಿವೆ. ಕೂಡಲೇ ಪ್ರೋತ್ಸಾಹ ಧನವಾದರೂ ಪ್ರಕಟಿಸಬೇಕು ಎಂದರು. ದೇವು ಬಿರಾದಾರ, ಚಂದಪ್ಪ ಪೂಜಾರಿ, ಬಾಬು ಮೇಳಕುಂದಿ, ಸಾಯಬಣ್ಣಾ ಕೊರಬಾ, ಲಾಡ್ಲೆಸಾಬ್ ಕಡಣಿ ಇದ್ದರು.

ಕಿರುಸುದ್ದಿ

ಮರಿಶಿವಯೋಗಿಗಳ ಜಾತ್ರೆ ಸಂಪನ್ನ



• **ಸಿರುಗುಪ್ಪ:** ತಾಲೂಕಿನ ಹಳೇಕೋಟೆ ಗ್ರಾಮದಲ್ಲಿ ಶುಕ್ರವಾರ ಲಿಂಗೈಕ್ಯ ಶ್ರೀ ಮರಿಶಿವಯೋಗಿಗಳ 117ನೇ ಪುಣ್ಯಾರಾಧನೆ ಜಾತ್ರಾ ಮಹೋತ್ಸವ ಹಾಗೂ ನೂತನ ಮಹಾ ರಥೋತ್ಸವ ಕಾರ್ಯಕ್ರಮದ ನಿಮಿತ್ತ ಕತೃ ಗದ್ದುಗೆಗೆ ರುದ್ರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ ಮಹಾ ಮಂಗಳಾರತಿ ಮಾಡಲಾಯಿತು.

ಭಕ್ತರು ಹೂ, ಕಾಯಿ, ಹಣ್ಣುಗಳನ್ನು ಅರ್ಪಿಸಿ ಭಕ್ತಿ ಸಮರ್ಪಿಸಿದರು. ಸಂಜೆ ಮರಿಶಿವಯೋಗಿಗಳ ಬೆಳ್ಳಿ ಮೂರ್ತಿಯನ್ನು ಪಲ್ಲಕ್ಕಿಯಲ್ಲಿರಿಸಿ, ಮಠದ ಪೀಠಾಧಿಪತಿ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಮತ್ತು ಉತ್ತರಾಧಿಕಾರಿ ಸಿದ್ಧಬಸವ ಮಹಾಸ್ವಾಮಿಗಳು ಕಳಸ ಕನ್ನಡಿ ಸಕಲ ವಾದ್ಯ ವೈಭವಗಳೊಂದಿಗೆ ಊರಿನ ಪ್ರಮುಖ ರಾಜ ಬೀದಿಗಳಲ್ಲಿ ಭವ್ಯ ಮೆರವಣಿಗೆ ಮುಗಿದ ನಂತರ ಸುತ್ತಮುತ್ತಲಿನ ಗ್ರಾಮಗಳ ಹಾಗೂ ನೆರೆಯ ಆಂಧ್ರಪ್ರದೇಶದ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೂತನ ಮಹಾರಥೋತ್ಸವವು ಜರುಗಿತು.

ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಗೆ ಶೇ.100ರಷ್ಟು ಫಲಿತಾಂಶ

• **ಬಳ್ಳಾರಿ:** ನಗರದ ಸಮೀಪದ ಕೊಳಗಲ್ಲಿನ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ (ಸಿ.ಬಿ.ಎಸ್.ಇ ಪಠ್ಯಕ್ರಮ) 2025-26ನೇ ಸಾಲಿನ 10ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಶೇ. 100 ರಷ್ಟು ಅತ್ಯುತ್ತಮ ಗುಣಾತ್ಮಕ ಫಲಿತಾಂಶ ದಾಖಲಿಸಿದೆ.

ಶಾಲೆಯ ಒಟ್ಟು 56 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅತ್ಯುತ್ತಮ ದರ್ಜೆ-24 ವಿದ್ಯಾರ್ಥಿಗಳು, ಉತ್ತಮ ದರ್ಜೆ-20 ವಿದ್ಯಾರ್ಥಿಗಳು, ದ್ವಿತೀಯ ದರ್ಜೆ-11 ವಿದ್ಯಾರ್ಥಿಗಳು ಮತ್ತು ತೃತೀಯ ದರ್ಜೆ-01 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅಸ್ಮಾ ಕೌಸರ್-ಶೇ.90.8, ಅಬ್ದುಲ್ ರಿಯಾಜ್ ಎಂ-ಶೇ.88.4, ಪಿ.ಸಬಿನಾಬಿ-ಶೇ.87.8, ಮುಸ್ಕಾನ್ ಎಸ್-ಶೇ.86.2, ಈರಪ್ಪ.ಡಿ-85.6 ಮತ್ತು ಪ್ರಥಮ ಕುಮಾರ್.ಕೆ-ಶೇ.85. ವಿದ್ಯಾರ್ಥಿಗಳ ಈ ಅದ್ಭುತ ಸಾಧನೆಗೆ ಅಲ್ಪಸಂಖ್ಯಾತರ ನಿರ್ದೇಶನಾಲಯದ (ಬೆಂಗಳೂರು) ನಿರ್ದೇಶಕ, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ, ಶಾಲೆಯ ಪ್ರಾಚಾರ್ಯ ಮೂಕಪ್ಪ ಕೆ.ಎಂ. ಅಭಿನಂದನೆ ಸಲ್ಲಿಸಿದ್ದಾರೆ.

ಯಾರೇ ನೀರು ಕೇಳಿದರೂ ನೀಡಿ: ವಾಮದೇವ ಶ್ರೀಗಳು




• **ಕುರುಗೋಡು:** ರಾಜ್ಯ ಬಿಸಿಲಿನ ಬೇಗೆಗೆ ತತ್ತರಿಸುತ್ತಿದೆ. ಉರಿ ಬಿಸಿಲಿಗೆ ಕುದಿಯುವ ನೀರಿನಲ್ಲಿ ಜಲಚರಗಳು ಒದ್ದಾಡುತ್ತಿವೆ. ಹೀಗಾಗಿ ಯಾರೇ ನೀರು ಕೇಳಿ ಬಂದರೂ ಇಲ್ಲ ಅನ್ನಬೇಡಿ ಎಂದು ಗ್ರಾಮದ ಹಂಪಿ ಸಾವಿರ ಮಠದ ವಾಮದೇವ ಶಿವಾಚಾರ್ಯ ಶ್ರೀಗಳು ಹೇಳಿದರು. ಸಮೀಪದ ಎಮ್ಮಿಗನೂರು ಗ್ರಾಮದ ಹಂಪಿ ಸಾವಿರ ಮಠದಲ್ಲಿ ಭಕ್ತರಿಂದ ಶ್ರೀಗಳ 54 ಜನ್ಮದಿನದ ಕಾರ್ಯಕ್ರಮದಲ್ಲಿ ಮಾತನಾಡಿ, ಬದಲಾಗುತ್ತಿರುವ ಹವಾಮಾನದಿಂದಾಗಿ ಸಾಂಕ್ರಾಮಿಕ ರೋಗದ ಭೀತಿ ಹೆಚ್ಚಾಗಿದೆ. ಮೇ ತಿಂಗಳೊಳಗೆ ಮಳೆ ಬಾರದೇ ಇದ್ದರೆ ಬಿಸಿಲಿನ ಬೇಗೆಗೆ ಕುಡಿಯುವ ನೀರಿನ ಸಮಸ್ಯೆ ಆಗುವ ಸಾಧ್ಯತೆವಿದೆ. ಅದರಲ್ಲೂ ನಮ್ಮ ನಾಡಲ್ಲಿ ನದಿಗಳು ಸೇರಿದಂತೆ ಹಲವು ಹಳ್ಳ ಹಾಗೂ ಬೋರ್ ಕ್ಷೀಣಿಸಿದ್ದು, ಈಗಾಗಲೇ ಬಹುತೇಕ ಉತ್ತರ ಕರ್ನಾಟಕದಲ್ಲಿ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆವಿದೆ ಎಂದರು. ಬಿಸಿಲಿನಲ್ಲಿ ಕೆಲಸ ಮಾಡುವು ಕಡಿಮೆ ಮಾಡಬೇಕು. ನೀರು, ಹಣ್ಣು, ಪಾನೀಯಗಳು ಸೇವಿಸಬೇಕು. ಹಾಗಾಗಿ ಮನೆಗಳ ಮುಂದೆ ನೆರಳಿನಲ್ಲಿ ನೀರಿನ ವ್ಯವಸ್ಥೆ ಕಲ್ಪಿಸಿ ಎಂದು ಸಲಹೆ ನೀಡಿದರು. ಈ ವೇಳೆ ಹರಗಿನ ದೋಣಿ ಅಭಿನವ ಸಿದ್ದಲಿಂಗ ಶಿವಾಚಾರ್ಯರು, ವರರುದ್ರ ಮುನಿ ಶಿವಾಚಾರ್ಯರು ಮಸ್ಕಿ, ಕುರಕುಪ್ಪ ಶರಣಬಸವ ಶರಣರು, ನೆಲ್ಲೂಡಿ ಕೊಟ್ರಯ್ಯ ತಾತ, ಚಿತ್ರದುರ್ಗ ಜಗನ್ನಾಥ್, ಬಳ್ಳಾರಿ ಕಲ್ಯಾಣ ಶ್ರೀಗಳು, ಅಖಿಲ ಭಾರತ ವೀರಶೈವ ಮಹಾಸಭಾ ಸಂಘದ ಸದಸ್ಯರು, ಗ್ರಾಮದ ಮುಖಂಡರು, ಸುತ್ತಮಲ್ಲಿನ ಮುಖಂಡರು ಇದ್ದರು.



ಬಳ್ಳಾರಿ: ನಗರದ ಭತ್ರಿ ಕಾಲೋನಿ ಈಶ್ವರ ದೇವಾಲಯದ ಬಳಿ ಸರ್ಕಾರದ ಸ್ಥಳದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್ ಹಾಗೂ ಮನೆಗಳ ತೆರವು ಕಾರ್ಯಾಚರಣೆ ಸ್ಥಳಕ್ಕೆ ಮಾಜಿ ಸಚಿವ ಬಿ.ಶ್ರೀರಾಮುಲು ಭೇಟಿ ನೀಡಿ ಬಡವರನ್ನು ತೆರವುಗೊಳಿಸಿರುವ ಕ್ರಮ ಖಂಡಿಸಿದರು.

ಏ.20ಕ್ಕೆ ಬಸವೇಶ್ವರ ಜಯಂತಿ ಆಚರಣೆ

• **ಹೂವಿನಹಡಗಲಿ:** ಜಗಜ್ಯೋತಿ ಬಸವೇಶ್ವರ ಜಯಂತಿ ಏ.20ರಂದು ಪಟ್ಟಣದ ಹಿರೆಮಲ್ಲನಕೆರೆ ಮಠದಲ್ಲಿ ಆಯೋಜಿಸಲಾಗಿದೆ. ಶಾಸಕ ಎಲ್.ಕೃಷ್ಣ ನಾಯಕ ಉದ್ಘಾಟನೆ



ಹಾಗೂ ಸಮಾರಂಭದ ಅಧ್ಯಕ್ಷತೆ ವಹಿಸುವರು.ಗವಿಮಠದ ಡಾ.ಹಿರಿಶಾಂತವೀರ ಶ್ರೀಗಳು ಅಭಿನವ ಚೆನ್ನಬಸವ ಶ್ರೀಗಳು, ಹಿರೇಮಲ್ಲನಕೆರೆ ಮಠದ ಡಾ.ರಾಕೇಶಯ್ಯ ರಾಮಸ್ವಾಮಿ ಸಾನಿಧ್ಯ ವಹಿಸುವರು.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ , ಸಂಸದ ಈ ತುಕಾರಾಂ, ವಿಧಾನ ಪರಿಷತ್ ಸದಸ್ಯರಾದ ಜಿ.ಶಶೀಲ್ ನಮೋಶಿ, ಚಂದ್ರಶೇಖರ ಪಾಟೀಲ, ವೈ.ಎಂ.ಸತೀಶ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಪಿ.ಟಿ.ಭರತ್, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಸಿ.ಕೆ.ಎಂ.ಬಸವಲಿಂಗಸ್ವಾಮಿ, ನಗರ ಘಟಕದ ಅಧ್ಯಕ್ಷ ಉಮೇಶ ಮುಂಡವಾಡದ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.ಪ್ರಾಚಾರ್ಯ ಡಾ.ಬಸವರಾಜ ಟಿ.ಎಚ್. ಉಪನ್ಯಾಸ ನೀಡುವರು. ಎಲ್ಲ ಸಮಾಜದ ಅಧ್ಯಕ್ಷರು ವಿವಿಧ ಸಂಘ ಸಂಸ್ಥೆಗಳ ಪದಾಧೀಕಾರಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ತಹಶೀಲ್ದಾರ್ ಕೆ.ಎಂ.ಗುರುಬಸರಾಜ ತಿಳಿಸಿದ್ದಾರೆ.



ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ವಿನೂತನ ಮಹಿಳಾ ಪದವಿ ವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಮಾರೋಪ ಸಮಾರಂಭ ಜರುಗಿತು. ಮುಖಂಡ ವೈ. ರಾಘವೇಂದ್ರ ರೆಡ್ಡಿ, ನಿವೃತ್ತ ಪ್ರಾಚಾರ್ಯ ನಿವೃತ್ತ ಪ್ರಾಚಾರ್ಯ ಮಹಾಬಲೇಶ್ವರಪ್ಪ ಸಂಸ್ಥೆಯ ವ್ಯವಸ್ಥಾಪಕ ಪ್ರಕಾಶ್ ಪ್ರಾಚಾರ್ಯ ಮದ್ದಾನಪ್ಪ ಕೆ ಬಿ ವೀರೇಶ್ ಶಿಕ್ಷಕರಾದ ರಮೇಶ್ ಲೋಕೇಶ್ ಶಿವನೇಗೌಡರ ರಾಮಪ್ಪ ಟಿ ರಾಮ ಪಂಪಾಪತಿ ಇತರರಿದ್ದರು

ಸಿರಗುಪ್ಪ ತಾಲೂಕಿನ ಚಿಕ್ಕಬಳ್ಳಾರಿ ಗ್ರಾಮಕ್ಕೆ ಡಿಎಚ್‌ಒ ಭೇಟಿ

ಬಿಸಿಲು ಹೆಚ್ಚಳ: ಜಾಗ್ರತೆ ವಹಿಸಿ

• **ಸಿರುಗುಪ್ಪ:** ಬೇಸಿಗೆತಾಪಮಾನ ಗಣನೀಯವಾಗಿ ಏರಿಕೆಯಾಗುತ್ತಿರುವಹಿನ್ನೆಲೆಯಲ್ಲಿ, ಸಾರ್ವಜನಿಕರು ಬಿಸಿಲಿನ ಶಾಖಾಘಾತಕ್ಕೆ ಒಳಗಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾರಮೇಶ್ ಬಾಬು ಹೇಳಿದರು.



ತಾಲ್ಲೂಕಿನ ಚಿಕ್ಕ ಬಳ್ಳಾರಿ ಗ್ರಾಮಕ್ಕೆ ಇತ್ತೀಚೆಗೆ ಭೇಟಿ ನೀಡಿ ಸಂದರ್ಭದಲ್ಲಿ ಗರ್ಭಿಣಿಯರು ಮತ್ತು ಮಕ್ಕಳ ಮನೆಗಳಿಗೆ ಖುದ್ದು ಭೇಟಿ ನೀಡಿ ಆರೋಗ್ಯ ತಪಾಸಣೆ ನಡೆಸಿದರು. ಈ ಸಂದರ್ಭದಲ್ಲಿ ಬಿಸಿಲಿನಿಂದ ತಪ್ಪಿಸಿಕೊಳ್ಳಲು ಅನುಸರಿಸಬೇಕಾದ ಕ್ರಮಗಳ ಕುರಿತು ಜಾಗೃತಿ ಮೂಡಿಸಿದರು.

ತೀವ್ರ ಬಿಸಿಲಿರುವ ಕಾರಣ ಮಧ್ಯಾಹ್ನ 12ರಿಂದ ಸಂಜೆ 4ರವರೆಗೆ ತಾಯಂದಿರು, ವಯೋವೃದ್ಧರು ಮತ್ತು ಮಕ್ಕಳು ಅನಗತ್ಯವಾಗಿ ಮನೆಯಿಂದ ಹೊರಗೆ ಬರಬಾರದು. ಮಕ್ಕಳನ್ನು ಕರೆದೊಯ್ಯುವಾಗ ಅವರ ತಲೆಯ ಮೇಲೆ ಒದ್ದೆಯಾದ ಬಟ್ಟೆ ಹಾಕಿ ಬಿಸಿಲಿನ ತಾಪ ತಗುಲದಂತೆ ಜಾಗ್ರತೆ ವಹಿಸಬೇಕು ಎಂದು ತಿಳಿಸಿದರು.

ಮಾಡಬೇಕಾದ ಕಾರ್ಯ: ಬಾಯಾರಿಕೆ ಇಲ್ಲದಿದ್ದರೂ ಆಗಾಗ ನೀರು ಕುಡಿಯಿರಿ. ಮನೆಯಲ್ಲಿ ತಯಾರಿಸಿದ ಮಜ್ಜಿಗೆ,ಲಿಂಬೆ ಶರಬತ್ತು, ಎಳೆನೀರು ಹಾಗೂ ಹಣ್ಣಿನ ರಸ ಸೇವಿಸಿ. ಕಲ್ಲಂಗಡಿ, ಕಿತ್ತಳೆ, ಸೌತೆಕಾಯಿಯಂತಹ ಹಣ್ಣುನ್ನು ಹೆಚ್ಚು ತಿನ್ನಿ. ಸಾಧ್ಯವಾದಷ್ಟು ತಿಳಿ ಬಣ್ಣದ ಸಡಿಲವಾದ ಹತ್ತಿಬಟ್ಟೆ ಧರಿಸಿ ಎಂದು ಸಲಹೆ ನೀಡಿದರು.

ಬಾಯಾರಿಕೆಯು ನಿರ್ಜಲಿಕರಣದ ಲಕ್ಷಣವಾಗಿದೆ. ಪ್ರಯಾಣ ಮಾಡುವ ಸಮಯದಲ್ಲಿ ಸಹ ಕುಡಿಯುವ ನೀರನ್ನು ತೆಗೆದುಕೊಂಡು ಹೋಗುವುದು ಅಗತ್ಯ. ಓಆರ್‌ಎಸ್ ಜೀವಜಲ ಸೇವನೆ ಮಾಡಬೇಕು. ಮನೆಯಲ್ಲಿಯೇ ಸಿದ್ದ ಪಡಿಸಿದ ಪಾನಿಯಕ್ಕೆ ಒಂದು ಚಿಟಕೆ ಉಪ್ಪಿನೊಂದಿಗೆ ಸೇವಿಸುವುದು ಉತ್ತಮ. ಗರ್ಭಿಣಿ ಮಹಿಳೆಯರು ಆರೋಗ್ಯ ಸಮಸ್ಯೆಯಿಂದ ಬಳಲುವವರು ಮತ್ತು ನಿಗಧಿತ ಸಮಸ್ಯೆಗಳಿಗೆ ಔಷಧಿಗಳನ್ನು ತೆಗೆದುಕೊಳ್ಳುವವರು ವೈದ್ಯರ ಸಲಹೆ ಮೇರೆಗೆ ಮನೆಯ ಹೊರಗಡೆ ಕೆಲಸ ಮಾಡಲು ಅದ್ಯತೆ ನೀಡಬೇಕು. ಬೇಸಿಗೆಯಲ್ಲಿ ಕಲುಷಿತ ನೀರಿನ ಸೇವನೆಯಿಂದ ಸಂಭಾವ್ಯ ವಾಂತಿ-ಬೇಧಿ ಪ್ರಕರಣಗಳು ಉಂಟಾಗುವ ಹಿನ್ನಲೆಯಲ್ಲಿ ಶುದ್ಧೀಕರಿಸದೇ ಇರುವ ಅಥವಾ ಕೆರೆ, ಕುಂಟೆಗಳ ನೀರನ್ನು ನೇರವಾಗಿ ಕುಡಿಯಬಾರದು ಎಂದರು.

ದೇಹದಲ್ಲಿ ನಿರ್ಜಲೀಕರಣ ತಡೆಗಟ್ಟಲು ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಓಆರ್‌ಎಸ್ ಅಗತ್ಯವುಳ್ಳವರಿಗೆ ನೀಡುವ ವ್ಯವಸ್ಥೆ ಮಾಡಲಾಗಿದೆ. ರೋಗಿಗಳ ಆರೈಕೆಗಾಗಿ, ಐವಿ ಪ್ಲೂಯಿಡ್ಸ್ ಮತ್ತು ಜೀವರಕ್ಷಕಔಷಧಗಳದಾಸ್ತಾನುಇಟ್ಟುಕೊಳ್ಳಲಾಗಿದೆ. ಒಂದು ಲೀಟರ್ ನೀರಿಗೆ ಒಂದು ಪ್ಯಾಕೆಟ್ ಓಆರ್‌ಎಸ್ ಬೆರೆಸಿ 24 ಗಂಟೆಯೊಳಗೆ ಸೇವಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಿ ಎಂದರು.

ಈ ವೇಳೆ ಜಿಲ್ಲಾ ಆರೋಗ್ಯ ಮೇಲ್ವಿಚಾರಣಾಧಿಕಾರಿ ಟಿ.ವಿರೂಪಾಕ್ಷಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ರವಿಕುಮಾರ್, ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಎಲ್ಲಪ್ಪ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಲಿಂಗರಾಜ್, ರಾಚೋಟಯ್ಯ ಸ್ವಾಮಿ, ಪ್ರಾಥಮಿಕ ಸುರಕ್ಷಾ ಅಧಿಕಾರಿ ಮಹಾಲಕ್ಷ್ಮೀ ಸೇರಿದಂತೆ ಇತರರು ಇದ್ದರು.

ಅಪಾಯದ ಲಕ್ಷಣಗಳು

ವಯಸ್ಕರಲ್ಲಿ ಅರೆಪ್ರಜ್ಞಾವಸ್ಥೆ, ಅತಿಯಾದ ತಲೆನೋವು, ತಲೆಸುತ್ತುವಿಕೆ, ಕೆಂಪಾದ ಒಣ ಚರ್ಮ, ಸ್ನಾಯುಗಳ ಸೆಳೆತ ಹಾಗೂ ವಾಂತಿ ಕಂಡುಬರಬಹುದು. ಮಕ್ಕಳು ಆಹಾರ ಸೇವಿಸಲು ನಿರಾಕರಿಸುವುದು, ಕಡಿಮೆ ಮೂತ್ರ ವಿಸರ್ಜನೆ, ಬಾಯಿ ಒಣಗುವಿಕೆ, ಆಲಸ್ಯ ಹಾಗೂ ದೇಹದ ಯಾವುದೇ ಭಾಗದಲ್ಲಿ ರಕ್ತಸ್ರಾವ ಕಾಣಬಹುದು ಎಂದು ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ತಿಳಿಸಿದರು.

ಕಬೀರರ ಏಕತಾ ಸಂದೇಶ ಇಂದಿಗೂ ಪ್ರಸ್ತುತ

• **ವಿಜಯನಗರ:** ಇಂದಿನ ಸಮಾಜದಲ್ಲಿ ಜಾತಿ, ಧರ್ಮಗಳ ಹೆಸರಿನಲ್ಲಿ ಗೋಡೆ ನಿರ್ಮಿಸಿ ವಿಭಜನೆ ದಾರಿಯತ್ತ ಸಾಗುತ್ತಿದೆ. ಆದರೆ, ಎಲ್ಲರನ್ನು ಏಕತೆ ಕಡೆಗೆ ನಡೆಸುವ ಮಹಾನ್ ಚಿಂತಕರಲ್ಲಿ ಕಬೀರರು ಪ್ರಮುಖರು ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಹೇಳಿದರು.

ಕನ್ನಡವಿಶ್ವವಿದ್ಯಾಲಯದಹಂಪಿಯಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಹಿರೇಹಾಳ್ ಇಬ್ರಾಹಿಂ ಫೌಂಡೇಶನ್ ಸಹಯೋಗದಲ್ಲಿ ಭುವನ ವಿಜಯ ಸಭಾಂಗಣದಲ್ಲಿ ಏರ್ಪಡಿಸಿದ್ದ ಹಿರೇಹಾಳ್ ಇಬ್ರಾಹಿಂ ದತ್ತಿನಿಧಿ ಕಾರ್ಯಕ್ರಮದ ಅಂಗವಾಗಿ ಸಂತ ಕಬೀರರ ಕುರಿತು ವಿಚಾರಗೋಷ್ಠಿಯಲ್ಲಿ ಮಾತನಾಡಿ, ದುಷ್ಟರನ್ನು ಎಲ್ಲರಲ್ಲೂ ಹುಡುಕಿದೆ ಯಾರೂ ಕಾಣಲಿಲ್ಲ, ಕೊನೆಗೆ ಅರಿತು ಕೊಂಡೆ, ದುಷ್ಟನು ನನ್ನ ಅಂತರಂಗದಲ್ಲೇ ಇದ್ದಾನೆ ಎಂಬ ಕಬೀರರ ವಾಕ್ಯ ನೆನಪಿಸುತ್ತ, ಈ ಮೂಲಕ ಆತ್ಮ ಪರಿಶೀಲನೆಯ ಅಗತ್ಯತೆ. ಮನುಷ್ಯರಲ್ಲಿ ಮನುಷ್ಯತ್ವವನ್ನು ಗುರುತಿಸುವುದೇ ಕಬೀರರು ತೋರಿಸಿದ ಮಾರ್ಗವಾಗಿದ್ದು, ಅದನ್ನು ಅನುಸರಿಸುವುದರಿಂದ ಸಮಾಜದಲ್ಲಿ ಉತ್ತಮ ಮೌಲ್ಯಗಳು ಬೆಳೆಸಬಹುದು ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಸಿದ್ದಲಿಂಗ ಪಟ್ಟಣಶೆಟ್ಟಿ ಮಾತನಾಡಿ, ಕಬೀರರು ಎಲ್ಲಾ ಧರ್ಮಗಳಿಗೂ ಸೇರಿದ ಮಹಾನ್ ಸಂತರು. ಅವರು ಕಾಯಕ ನಿಷ್ಠರು, ಯಾವುದೇ ಧರ್ಮದಲ್ಲಿರುವ ಮೂಢನಂಬಿಕೆಗಳನ್ನು ವಿರೋಧಿಸಿ, ಮಾನವೀಯ ಮೌಲ್ಯ ಪ್ರತಿಪಾದಿಸಿದರು ಎಂದರು.

ಕಾಶಿಯಲ್ಲಿ ಕಬೀರರ ಮಠವಿದ್ದು, ಅಲ್ಲಿ ಇಂದಿಗೂ ಅವರ ವಚನಗಳು ಹಾಗೂ ದೋಹೆಗಳ ಪಠಣ ನಿರಂತರವಾಗಿ ನಡೆಯುತ್ತಿವೆ. ತಾನು ಕಾಶಿಗೆ ತೆರಳಿದಾಗ ಮೊದಲು ಕಬೀರರ ಮಠಕ್ಕೆ ಭೇಟಿ ನೀಡಿ, ಬಳಿಕ ಕಾಶಿ ವಿಶ್ವನಾಥನ ದರ್ಶನಕ್ಕೆ ಹೋಗುತ್ತೇನೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು. ರಾಮ ನಾಮವನ್ನು ಜಪ ಮಾಡುತ್ತಾ ನಿರ್ಗುಣ, ನಿರಾಕಾರ ನನ್ನ ರಾಮ ಎಂದು ಕಬೀರರು ಹೇಳುತ್ತಿದ್ದರು ಎಂದು ಕಬೀರರ ಮಾತುಗಳನ್ನು ತಿಳಿಸಿದರು.

ಹಿರಿಯ ಸಂಶೋಧನಾ ಅಧಿಕಾರಿ ಡಾ.ಕೆ. ಪ್ರೇಮಕುಮಾರ ಉಪನ್ಯಾಸ ನೀಡಿದರು.

ಹಿರಿಯ ಹಿಂದುಸ್ತಾನಿ ಗಾಯಕ ಹಾಗೂ ಸಂಗೀತ ನಿರ್ದೇಶಕ ದೇವೇಂದ್ರಕುಮಾರ ಪತ್ತಾರ ಕಬೀರರ ದೋಹೆಗಳ ಹಾಡುಗಾರಿಕೆ ಪ್ರಸ್ತುತಪಡಿಸಿದರು.

ಕುಲಸಚಿವ ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಸಂಚಾಲಕ ಡಾ.ವೆಂಕಟಗಿರಿ ದಳವಾಯಿ, ಹಿರೇಹಾಳ್ ಇಬ್ರಾಹಿಂ ಫೌಂಡೇಶನ್ ಅಧ್ಯಕ್ಷ ಎಚ್.ಇ.ದಾದ ಕಲಂದರ್ ಮೇಲೆ ಇದ್ದರು.



ಬಸವ ಉತ್ಸವ ಪ್ರಚಾರದ ವಾಹನಕ್ಕೆ ಚಾಲನೆ

• **ಬೀದರ್:** ಸಾಂಸ್ಕೃತಿಕ ನಾಯಕ ಬಸವಣ್ಣನವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸ ಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ತತ್ವ ಎಷ್ಟೇ ದೊಡ್ಡಾಗಿದ್ದರೂ ಅನುಯಾಯಿಗಳ ಕೊರತೆಯಾಗ ಬಾರದೆಂಬ ಹಿತಿಷ್ಟಿಯಿಂದ ಪ್ರಚಾರ ಕೈಗೊಳ್ಳಲಾಗುತ್ತಿದೆ ಎಂದು ಬಸವ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ಡಾ.ರಜನೀಶ ವಾಲಿ ನುಡಿದರು.

ನಗರದ ಉದಗಿರ ರಸ್ತೆಯಲ್ಲಿರುವ ಬಸವ ಜಯಂತಿ ಉತ್ಸವವನ್ನು ಸಮಿತಿಯ ಕಛೇರಿಯಿಂದ ಅಲಂಕೃತ ಎರಡು ಪ್ರಚಾರದ ವಾಹನಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಬಸವ ಜಯಂತಿ ಉತ್ಸವ ಪ್ರಚಾರ ವಾಹನಗಳು ನಗರದ ಪ್ರತಿ ಬಡಾವಣೆಯಲ್ಲಿ ಪ್ರಸಾರ/ ಪ್ರಚಾರ ಮಾಡಲು ಸಿದ್ಧಗೊಂಡಿದ್ದು ಅವುಗಳಿಗೆ ಚಾಲನೆ ನೀಡಲಾಗುತ್ತಿದೆ ಎಂದು ಹೇಳಿದರು.

ಸವ ಜಯಂತಿ ಉತ್ಸವ ಸಮಿತಿ ಕೋಶಾಧ್ಯಕ್ಷ ಸಿದ್ರಾಮಯ್ಯ ಸ್ವಾಮಿ ಮಾತನಾಡಿ, ನಗರದ ಪ್ರತಿಯೊಂದು ಬಡಾವಣೆಗೆ ಈ ವಾಹನ ಬೇಟಿ ನೀಡಿ ಅಲ್ಲಿಯ ಪ್ರಮುಖರನ್ನು ಸಂಪರ್ಕಿಸಿ ಕರ ಪತ್ರ ನೀಡಿ ಬಸವ ಜಯಂತಿ ಕಾರ್ಯಕ್ರಮಕ್ಕೆ ಬರಲು ಆಮಂತ್ರಿಸುವ ಪರಂಪರೆಗೆ ನಾಂದಿ ಹಾಡಲಿದೆ ಎಂದರು.

ಸವ ಜಯಂತಿ ಉತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಶೆಶಿಧರ ಹೊಸಳ್ಳಿ ಮಾತನಾಡಿ, ಬಸವಣ್ಣ ಸರ್ವ ಜನಾಂಗದ ಮಂತ್ರ ಪುರುಷ. ಮೂರು ದಿವಸಗಳ ವಿವಿಧ ಕಾರ್ಯಕ್ರಮದ ಪ್ರಚಾರ ಮಾಡಿ ಎಲ್ಲ ಸಮಾಜ ಬಾಂಧವರನ್ನು ಕೈ ಮಾಡಿ ಕರೆಯುವುದೇ ಇದರ ಮುಖ್ಯ ಉದ್ದೇಶವಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಚಾರ ವಾಹನ ಚಾಲನೆ ಸಮಾರಂಭದಲ್ಲಿ ಉತ್ಸವ ಸಮಿತಿಯ ಇತರ ಪ್ರಮುಖರಾದ ವಿಕ್ರಮ ಮುದಾಳೆ, ರಾಜೇಂದ್ರಕುಮಾರ ಗಂದಗೆ, ಸುರೇಶ ಚನ್ನಶೆಟ್ಟಿ, ಧನರಾಜ ಹಂಗರಗಿ, ಅಶೋಕ ಕರಂಜಿ, ವೀರುಪಾಕ್ಷ ಗಾದಗಿ, ಆದೀಶ ವಾಲಿ, ಬಾಬುರಾವ ದಾನಿ, ಮಾಣಿಕೇಶ ಪಾಟೀಲ ಇತರರಿದ್ದರು.



ಸಿಬಿಎಸ್‌ಇ ಫಲಿತಾಂಶ: ಮಹದೇವ ಶಾಲೆ ಅತ್ಯುತ್ತಮ ಸಾಧನೆ

• **ಕೊಟ್ಟೂರು:** ಇಲ್ಲಿಯ ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳಲ್ಲಿ ಒಂದಾದ ಮಹದೇವ ಇಂಟರ್‌ನ್ಯಾಷನಲ್ ಶಾಲೆ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶದಲ್ಲಿ ಶೇಕಡಾ ನೂರಕ್ಕೆ ನೂರು ಫಲಿತಾಂಶ ಪಡೆದು ಕೊಟ್ಟೂರು ಹಾಗೂ ತಾಲೂಕಿಗೆ ಕೀರ್ತಿ ತಂದಿದೆ.

ಪರೀಕ್ಷೆ ಬರೆದ 41 ವಿದ್ಯಾರ್ಥಿಗಳಲ್ಲಿ 41 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶಾಲೆಯ ಕೀರ್ತಿ ಮತ್ತಷ್ಟು ಹೆಚ್ಚಿಸಿದೆ. ಈ ವಿದ್ಯಾರ್ಥಿಗಳಲ್ಲಿ ಪುನರ್ವ ಎಚ್. ಶೇ.95 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದು ಕೀರ್ತಿ ತಂದಿದ್ದಾಳೆ. ಪೂರ್ವಿ ಶೇ.94, ಸಿಂಚನ ಶೇ.93, ಕಾರ್ತಿಕ್ ಶೇ.92.4, ತರುಣ್ ಶೇ.92, ಕೆ.ಸುಚಿತ್ ಶೇ.91.8, ಹಿತೇಶ್ ಶೇ.91.4,ಯುವರಾಜ್ ಶೇ.89.4, ಗಾಯನ ಶೇ.89.2, ನಿತಿನ್ ಹಾಗೂ ಪ್ರಜ್ವಲ್ ಶೇ.87,ಜ್ಯೋತಿಕಾ ಶೇ.86.8, ಗೌತಮಿ ಶೇ.85.8, ಶಶಾಂಕ ಶೇ.85.6, ಅನುಷ್ಕಾ ಮತ್ತು ಶ್ರೇಯ ಶೇ.85.4, ಚೇತನ್ ಕೆ.ಆರ್., ಶೇ.84.8, ಫಲಿತಾಂಶ ಪಡೆದು ಶಾಲೆಗೆ ಹಾಗೂ ತಾಲೂಕಿಗೆ ಕೀರ್ತಿ ತಂದಿದ್ದಾರೆ.



ವಿದ್ಯಾರ್ಥಿಗಳು ಫಲಿತಾಂಶದಲ್ಲಿ ಸಾಧನೆ ಮಾಡಿದ್ದಾರೆ. ಈ ಫಲಿತಾಂಶದ ಮೂಲಕ ಶಾಲೆ ಅತ್ಯುತ್ತಮ ಗುಣಮಟ್ಟದ ಶಾಲೆ ಎಂಬ ಕೀರ್ತಿಗೆ ಭಾಜನವಾಗಿದೆ. ಸಾದನೆ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೆ ಮಹದೇವ ಇಂಟರ್ನ್ಯಾಷನಲ್ ಶಾಲೆ ಆಡಳಿತ ಮಂಡಳಿದವರಾದ ಬಿ.ಪಂಪಾಪತಿ, ಸರೋಜಾ ಪಂಪಾಪತಿ, ಆರ್. ಮಧುಸೂದನ್, ಸಿಬ್ಬಂದಿ ಶುಭ ಹಾರೈಸಿರುತ್ತಾರೆ.

ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸ: ಡಾ.ಮಾನಸ

• **ಹುಣಸಗಿ:** ಮನೆಗೊಂದು ಗ್ರಂಥಾಲಯವಿರುವುದು ಇಂದಿನ ತುರ್ತು ಅಗತ್ಯತೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಹೇಳಿದರು.

ಮನೆಗೊಂದು ಗ್ರಂಥಾಲಯ ಕಾರ್ಯಕ್ರಮದ ಅಡಿಯಲ್ಲಿ ಹುಣಸಗಿ ಪಟ್ಟಣದ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಕುಮಾರ ಬಂಡೋಳಿ ಅವರ ಮನೆಯಲ್ಲಿ ಹಮ್ಮಿಕೊಂಡಿದ್ದ ಗ್ರಂಥಾಲಯಕ್ಕೆ ಚಾಲನೆ ನೀಡಿ ಮಾತನಾಡಿದರು. ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಅದನ್ನು ಓದುವುದರಿಂದ ಮಾತ್ರ ತಿಳಿದುಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ವಿನೂತನ ಕಾರ್ಯಕ್ರಮ ಹಮ್ಮಿಕೊಂಡಿದ್ದ ಮನೆಗೊಂದು ಗ್ರಂಥಾಲಯ ಯೋಜನೆಯಡಿ ಒಂದು ಲಕ್ಷ ಗ್ರಂಥಾಲಯಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಗುರಿ ಹೊಂದಲಾಗಿದೆ ಎಂದು ವಿವರಿಸಿದರು.

ಜಿಲ್ಲಾ ಸಂಚಾಲಕ ಪ್ರಕಾಶ ಅಂಗಡಿ ಕನ್ನಳ್ಳಿ ಮಾತನಾಡಿ, ಯಾದಗಿರಿ ಜಿಲ್ಲೆ ಅತ್ಯಂತ ಐತಿಹಾಸಿಕ ಮತ್ತು ಸಾಹಿತ್ಯಿಕ ಶ್ರೀಮಂತಿಕೆ ಹೊಂದಿರುವ ಜಿಲ್ಲೆಯಾಗಿದ್ದು, ಮುಂದಿನ ದಿನಮಾನಗಳಲ್ಲಿ ಜಿಲ್ಲೆ ಸಾಹಿತಿಗಳು ಮತ್ತು ಅವರ ಕೃತಿಗಳನ್ನು ಗುರುತಿಸುವ ಕಾರ್ಯ ಕನ್ನಡ ಪುಸ್ತಕ ಪ್ರಾಧಿಕಾರದಿಂದ ನಡೆಯುವಂತಾಗಲಿ. ಸೂಕ್ತ ಪ್ರತಿಭೆಗಳಿಗೆ ಅವಕಾಶ ಸಿಗುವಂತಾಗಲಿ ಎಂದರು.

ತಾಲೂಕಿನಲ್ಲಿ ಸುಮಾರು 10ಕ್ಕೂ ಹೆಚ್ಚು ಮನೆಗಳಲ್ಲಿ ಈ ಮನೆಗೊಂದು ಗ್ರಂಥಾಲಯ ಕಾರ್ಯಕ್ರಮ ಆಯೋಜಿಸಲಾಗಿದ್ದು, ಶುಕ್ರವಾರ ಸುರಪುರ ತಾಲ್ಲೂಕಿನಲ್ಲಿ ನಡೆಯಲಿದೆ ಎಂದು ಹೇಳಿದರು.



ತಾಲೂಕು ಸಂಚಾಲಕ ನೀಲಕಂಠ ಹೊನಕಲ್ಲ ಮಾತನಾಡಿ, ಯಾದಗಿರಿ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿನಿಂದ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿರುವುದು. ಈ ಭಾಗದ ಜನರಿಗೆ ಅತ್ಯಂತ ಹೆಚ್ಚು ಸಂತಸ ತಂದಿದೆ ಎಂದರು.

ಪಪಂ ಸದಸ್ಯ ಸಿದ್ರಾಮಪ್ಪ ಮುದಗಲ್ಲ, ನಿವೃತ್ತ ಅಭಿವೃದ್ಧಿ ಅಧಿಕಾರಿ ಬಸವರಾಜ ಬಂಡೋಳಿ, ವೆಂಕಟಗಿರಿ ದೇಶಪಾಂಡೆ, ಪರಮಣ್ಣ ನಿಲಗಲ್ಲ, ಪಾಟೀಲ ಬಸನಗೌಡ, ಭೀಮಶೇನರಾವ್ ಕುಲಕರ್ಣಿ, ನಾಗನಗೌಡ ಪಾಟೀಲ, ಎಸ್.ಎಸ್.ಮಾರನಾಳ, ಶರಣಗೌಡ ಗೆಣ್ಣೂರ, ಮಹೇಶ ಸ್ಥಾವರಮಠ, ಗುರುನಾಥ ನಾವದಗಿ, ನೀಲಮ್ಮ ನಾಗರಬಟ್ಟ, ಮಹಾದೇವಿ ಬೇನಾಳಮಠ, ಶಶಿಕಲಾ ಮಠದ ಇತರರಿದ್ದರು. ಶಿವಲೀಲಾ ಮುರಾಳ ಪ್ರಾರ್ಥಿಸಿದರು. ಬಸವಶ್ರೀ ನಿರೂಪಿಸಿ, ವಂದಿಸಿದರು.

ಜಗಜ್ಯೋತಿ ಬಸವೇಶ್ವರ ಜಯಂತಿ ಏ.20ರಂದು

• **ಹಗರಿಬೊಮ್ಮನಹಳ್ಳಿ:** ಬಸವೇಶ್ವರ ಜಯಂತಿ ಕಾರ್ಯಕ್ರಮಕ್ಕೂ ಮುನ್ನ ಬಸವೇಶ್ವರ ಭಾವಚಿತ್ರದ ಮೆರವಣಿಗೆ ಜೊತೆಗೆ ಎತ್ತುಗಳ ಮೆರವಣಿಗೆ ನಡೆಯಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸೋಣ ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು.

ಪಟ್ಟಣದ ತಾ.ಪಂ ಮಹಾತ್ಮಾಗಾಂಧಿ ಸಭಾಂಗಣದಲ್ಲಿ ಇತ್ತೀಚಿಗೆ ಬಸವೇಶ್ವರ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಏ.20ರಂದು ಬೆಳಗ್ಗೆ 8ಕ್ಕೆ ಈಶ್ವರ ದೇವಸ್ಥಾನದಿಂದ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಹಗರಿ ಆಂಜನೇಯ ದೇವಸ್ಥಾನದವರೆಗೆ ಸಮಾಳ, ನಂದಿಕೋಲು, ಡೊಳ್ಳು, ವಿವಿಧ ವಾದ್ಯ ಮೇಳದೊಂದಿಗೆ ಭಾವಚಿತ್ರ ಮೆರವಣಿಗೆ ನಡೆಯಲಿದೆ ಎಂದರು.

ಬಸವೇಶ್ವರ ಪುತ್ಥಳಿಗೆ ವಿದ್ಯುತ್ ದೀಪಾಲಂಕಾರಿಸುವುದು, ಬಸವೇಶ್ವರ ಪ್ಲೆಕ್ಸ್ ಬ್ಯಾನರ್ ಕಟ್ಟುವುದು ಸೇರಿದಂತೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ನಿರ್ವಹಿಸಬೇಕು ಎಂದರು.

ವಾಲ್ಮೀಕಿ ಸಮಾಜದ ತಾಲೂಕು ಅಧ್ಯಕ್ಷ ಪವಾಡಿ ಹನುಮಂತಪ್ಪ ಮಾತನಾಡಿ, ಬಸವೇಶ್ವರರ ಜಯಂತಿ ತಾಲೂಕ ಆಡಳಿತದಿಂದ ಅದ್ದೂರಿಯಾಗಿ ಆಚರಿಸುವಂತಾಗಬೇಕು ಎಂದರು.

ಈ ವೇಳೆ ತಹಶೀಲ್ದಾರ್ ಆರ್.ಕವಿತಾ, ತಾಪಂ ಇಒ ಪಾಲಯ್ಯನಕೋಟೆ ವಿಶ್ವನಾಥ, ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷಕೊಟ್ರೇಶ ಶೆಟ್ಟರ್, ರೇಣುಕಾ ವಿದ್ಯಾಸಂಸ್ಥೆ ಮುಖ್ಯಸ್ಥರಾದ ಇಂದುಮತಿ ವೈ.ಮಲ್ಲಿಕಾರ್ಜುನ, ಬಾದಾಮಿ ಮೃತ್ಯುಂಜಯ, ಬಾದಾಮಿ ನಟರಾಜ, ವಾಲ್ಮೀಕಿ ಸಮಾಜದ ಮುಖಂಡ ಕನ್ನಿಹಳ್ಳಿ ಚಂದ್ರಶೇಖರ , ಪೂಜಾರ್ ಸಿದ್ದಪ್ಪ , ಇತರರು ಮಾತನಾಡಿದರು.



ಈ ವೇಳೆ ಸಮಾಜದ ಮುಖಂಡ ಜಿ.ಎಂ.ಜಗದೀಶ, ಶಿವರುದ್ರಪ್ಪ, ಡಿ.ಮಂಜುನಾಥ, ಕಮಲಮ್ಮ, ಸಿದ್ದೇಶ ಕುಂಬಾರ, ಮಂಜುನಾಥ ಗೌಡ್ರು, ಹುಡೇಧ ಗುರುಬಸವರಾಜ ತಾಲೂಕು ಮಟ್ಟದ ಅಧಿಕಾರಿಗಳಾದ ಉಪತಹಶೀಲ್ದಾರ್ ಶಿವಕುಮಾರ್ ಗೌಡ, ಬಿಸಿಯೂಟದ ಅಧಿಕಾರಿ ರಾಜಕುಮಾರ್ ನಾಯಕ , ಬಿಇಒ ಪ್ರಭಾಕರ, ಪಿಎಸ್ಐ ಬಸವರಾಜ ಅಡವಿಬಾವಿ, ಸತೀಶ ನಾಯ್ಕ್, ಜಗದೀಶ ದಿಡಗೂರು, ರಮೇಶ ಮಹಾಲಿಂಗಾಪೂರ ಸೂರಪ್ಪ, ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಸೊನ್ನದ ಗುರುಬಸವರಾಜ, ಇತರ ಅಧಿಕಾರಿಗಳು, ವಿವಿಧ ಸಮಾಜದ ಮುಖಂಡರು ಭಾಗವಹಿಸಿದ್ದರು.

ಸಿಬಿಎಸ್‌ಇ ಫಲಿತಾಂಶ 'ಇಂದು' ಶಾಲೆ ತಾಲೂಕಿಗೆ ಪ್ರಥಮ

• **ಕೊಟ್ಟೂರು:** ಪಟ್ಟಣದ ಇಂದು ಸಿ.ಬಿ.ಎಸ್.ಇ.ಶಾಲೆಯು 2025 26ನೇ ಸಾಲಿನ ಸಿಬಿಎಸ್‌ಇ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಿದೆ. ಬುಧವಾರ ಸಂಜೆ ಪ್ರಕಟವಾದ ಫಲಿತಾಂಶದಲ್ಲಿ ಇಂದು ಶಾಲೆಯ ಪರೀಕ್ಷೆ ಬರೆದ 51 ವಿದ್ಯಾರ್ಥಿಗಳಲ್ಲಿ 49 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶಾಲೆಯು ಶೇಕಡ 96. 07 ಫಲಿತಾಂಶ ಪಡೆದಿದೆ.

ಈ ಸಾಧನೆಗೆ ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕರ ಮಾರ್ಗದರ್ಶನ ಹಾಗೂ ಪೋಷಕರ ಬೆಂಬಲವೆಂದು ಹೇಳಲಾಗಿದೆ ವೈಯಕ್ತಿಕ ಸಾಧನೆಗಳಲ್ಲಿಯೂ ಶಾಲೆಯ ವಿದ್ಯಾರ್ಥಿನಿ ಮಾನಸ ಜೆ 466 ಅಂಕಗಳನ್ನು ಗಳಿಸುವುದರ ಮೂಲಕ ಶೇಕಡ 93.20 ಫಲಿತಾಂಶದೊಂದಿಗೆ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ಅಮೂಲ್ಯ ಎಂ. ಎಂ. ಶೇಕಡ 91.80 ಕಾವ್ಯ ಬಿ. ಆರ್.89.80 ಲೋಕೇಶ್ ನಾಯಕ್. 88.80, ಕೋಮಲ ಶೇಕಡ 88.60, ಜಿ ಸಾತ್ವಿಕ್ 87.80, ಗಣೇಶ್ ಸಿ 87.6, ಚಕ್ಷುಬ ಹೆಚ್. ಎಸ್. 86.2 ತೇಜಸ್ವಿನಿ ಕೆ ಶೇಕಡ 84.8 ಮತ್ತು ಅಮೀರ್ ಸೋಹೈಲ್ ಶೇಕಡ 83 ಪಲಿತಾಂಶವನ್ನು ಪಡೆಯುವುದರ ಮೂಲಕ ಶಾಲೆಗೆ ಕೀರ್ತಿಯನ್ನು ತಂದಿದ್ದಾರೆ. ಉತ್ತಮ ಫಲಿತಾಂಶ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಇಂದು ಶಾಲೆಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು ಶುಭ ಹಾರೈಸಿರುತ್ತಾರೆ.



ನಾಲಾ ಆಧುನೀಕರಣಕ್ಕೆ ಕ್ಯಾಬಿನೆಟ್‌ನಲ್ಲಿ ಗ್ರೀನ್ ಸಿಗ್ನಲ್

• **ಯಾದಗಿರಿ:** ಗುರಮಠಕಲ್ ಕ್ಷೇತ್ರದ ಹತ್ತಿಕುಣಿ, ನಾಲಾ ಆಧುನೀಕರಣ ಕಾಮಗಾರಿಗೆ ಕೇಂದ್ರ ಜಲಶಕ್ತಿ ಇಲಾಖೆ ಮಂಜೂರು ಮಾಡಿದ್ದ 72 ಕೋಟಿ ರೂ.ಗಳ ಅನುದಾನ ಬಳಸಿಕೊಳ್ಳಲು ರಾಜ್ಯ ಸರ್ಕಾರ ಕೊನೆಗೂ ಗ್ರೀನ್ ಸಿಗ್ನಲ್ ನೀಡಿದೆ.

ಈ ಅನುದಾನ ಬಳಸಿಕೊಳ್ಳಲು ರಾಜ್ಯ ಸರ್ಕಾರ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡದೆ ವಿಳಂಬ ಮಾಡಲಾಗಿತ್ತು. ಆದರೆ, ಇತ್ತೀಚೆಗೆ ನಡೆದ ವಿಧಾನ ಮಂಡಲದ ವಿಶೇಷ ಅಧಿವೇಶನದಲ್ಲಿ ಶಾಸಕ ಶರಣಗೌಡ ಕಂದಕೂರ ಸರ್ಕಾರದ ಗಮನ ಸೆಳೆಯುವ ಮೂಲಕ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ ಹಾಗೂ ಸಂಬಂಧಿಸಿದ ಸಚಿವರು ಹಾಗೂ ಇಲಾಖೆ ಉನ್ನತ ಅಧಿಕಾರಿಗಳ ಮೇಲೆ ಒತ್ತಡ ಹೇಳಿದ್ದರು.

ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೇಂದ್ರದ ಅನುದಾನ ಬಳಸಿಕೊಂಡು ಕಾಮಗಾರಿ ನಡೆಸಲು ಸರ್ಕಾರ ಒಪ್ಪಿಗೆ ನೀಡುವ ಮೂಲಕ ಗಡಿಭಾಗದ ರೈತರಲ್ಲಿ ಹೊಸ ಆಶಾಭಾವ ಮೂಡಿಸಿದೆ.

1973ರಲ್ಲಿ ಹತ್ತಿಕುಣಿ ಕೆರೆಗೆ ಅಡ್ಡಲಾಗಿ ನಿರ್ಮಿಸಿದ ಜಲಾಶಯ ಒಟ್ಟು 0.352 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. ಅಲ್ಲದೆ ಈ ಭಾಗದ ಹತ್ತಿಕುಣಿ, ಕಟಗಿ ಶಹಾಪುರ, ಬಂದಳ್ಳಿ, ದಸಸರಬಾದ್, ಯಡ್ಡಳ್ಳಿ ಹಾಗೂ ಹೊನಗೇರಾ ಗ್ರಾಮಗಳ ಒಟ್ಟು 5300 ಎಕರೆ



ರೈತರ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಿದೆ. ಆದರೆ, ಇತ್ತೀಚಿಗೆ ಜಲಾಶಯದ ಕಾಲುವೆಗಳು ಹಾಳಾಗಿದ್ದು, ಅವುಗಳ ನವೀರಣಕ್ಕೆ ಅನುದಾನ ಬಿಡುಗಡೆಗೊಳಿಸಲು ಶಾಸಕರು ಒತ್ತಡ ಹೇರುತ್ತಲೇ ಬಂದಿದ್ದರು.

ಕೇಂದ್ರ ಸಚಿವ ವಿ.ಸೋಮಣ್ಣ ಅವರೊಡನೆ ಉತ್ತಮ ಬಾಂಧವ್ಯ ಹೊಂದಿರುವ ಶಾಸಕ ಕಂದಕೂರ ಅವರೇ ನಿರ್ವಹಿಸುವ ಜಲಶಕ್ತಿ ಇಲಾಖೆಯಿಂದ ನಾಲಾ ಆಧುನೀಕರಣಕ್ಕೆ 72 ಕೋಟಿ ರೂ. ಅನುದಾನ ಬಿಡುಗಡೆಗೊಳಿಸಿದ್ದರು. ಆದರೆ ರಾಜ್ಯ ಸರ್ಕಾರದ ಅನುಮತಿ ಪಡೆಯಬೇಕಾದ ಕಾರಣ ಇಷ್ಟು ದಿನ ಕಾಮಗಾರಿ ಆರಂಭವಾಗದೆ ವಿಳಂಬಕ್ಕೆ ಕಾರಣವಾಗಿತ್ತು. ಕೊನೆಗೂ ರಾಜ್ಯ ಸರ್ಕಾರ ಸಂಪುಟ ಸಭೆಯಲ್ಲಿ ಕಾಮಗಾರಿ ನಡೆಸಲು ಹಸಿರು ನಿಶಾನೆ ತೋರಿಸಿದೆ.